Invert and Overt Lining
for Jankal Tunnel from
Ch:58.60 Km to 61.23 Km of CBC

2nd ನೇ ವಾರ್ಷಿಕ ವರದಿ
2nd ANNUAL REPORT
2017-2018

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
Visvesvaraya Jala Nigam Limited

Bridge for Rasing main across Hemavathy River to facilitate for carrying the designed discharge of 85.00 Cumecs / 3000 Cusecs from all the 8 weirs connecting DC-3 on the other flank.

Weir-4 across Kadumanehole Stream-1 yields 3.50 cumecs / 123 cusecs

Pump House-1 near Shanthipura of UBP Package-II (Bhadra Reservoir to Ajjampura tunnel reach)

ಕಂಪನಿಯ ಮಾಹಿತಿ

www.vjnl.in

CIN: U41000KA2016SGC097260

ನೊಂದಾಯಿತ ಕಛೇರಿ
ನಂ. 148, ನೆಲ ಮಹಡಿ
ಎಂಬೆಸ್ಸಿ ಸ್ಕ್ವೇರ್
ಇನ್‌ಫೆಂಟ್ರಿ ರಸ್ತೆ
ಬೆಂಗಳೂರು– 560001

ಮುಖ್ಯ ಆಡಳಿತಾಧಿಕಾರಿಗಳ ಕಛೇರಿ
ನಂ. 148, ನೆಲ ಮಹಡಿ
ಎಂಬೆಸ್ಸಿ ಸ್ಕ್ವೇರ್
ಇನ್‌ಫೆಂಟ್ರಿ ರಸ್ತೆ
ಬೆಂಗಳೂರು– 560001

ಮುಖ್ಯ ಲೆಕ್ಕಾಧಿಕಾರಿ
ಶ್ರೀ ಬಿ. ಕುಪ್ಪುರುಲಿಂಗಯ್ಯ, ಕೆ.ಎಸ್.ಎ.ಎಸ್
ಕೇಂದ್ರ ಕಛೇರಿ, ಚಿತ್ರದುರ್ಗ.

ಮುಖ್ಯ ಇಂಜಿನಿಯರ್

ಭದ್ರಾಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ.
ಶ್ರೀ ಎಂ.ಜಿ. ಶಿವಕುಮಾರ್(1.4.2018ರಿಂದ)
ಶ್ರೀ ಆರ್. ಚೆಲುವರಾಜು(31.3.2018ರವರೆಗೆ)

ಎತ್ತಿನಹೊಳೆ ಯೋಜನಾ ವಲಯ, ತುಮಕೂರು
ಶ್ರೀ ಮಾಧವ್ (26.6.2018ರಿಂದ)
ಶ್ರೀ ಪಿ. ಚನ್ನಪ್ಪ ನಾಯ್ಕ್ (25.6.2018ರವರೆಗೆ)

ಬ್ಯಾಂಕರ್‌ಗಳು:
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
ಎಕ್ಸ್‌ಸ್ ಬ್ಯಾಂಕ್ ಲಿ.
ಐಸಿಐಸಿಐ ಬ್ಯಾಂಕ್ ಲಿ.
ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್

ಚಾರ್ಟರ್ಡ್ ಅಕೌಂಟೆಂಟ್ಸ್
ಶಾಸನಬದ್ಧ ಲೆಕ್ಕ ಪರಿಶೋಧಕರು
ಮೆ: ಚನ್ನಬಸಪ್ಪ & ಕೋ.,
ಸೌಂದರ್ಯ ಪ್ಯಾರಾಮೌಂಟ್
83/87, 2ನೇ ಮಹಡಿ, 5ನೇ ಅಡ್ಡ ರಸ್ತೆ,
ಮಲ್ಲೇಶ್ವರಂ ವೃತ್ತ,
ಬೆಂಗಳೂರು 560 003

ಕಾನೂನು ಸಲಹೆಗಾರರು
ಶ್ರೀ ಎಂ. ಆರ್. ಸಿ. ರವಿ, ವಕೀಲರು
ಮೆ: ಐಎಲ್‌ಪಿಎಂ ಕನ್ಸಲ್ಟೆಂಟ್ಸ್
'ಸ್ವಾತಿ' ನಂ.123, 6ನೇ ಮುಖ್ಯರಸ್ತೆ
ಮಲ್ಲೇಶ್ವರಂ, ಬೆಂಗಳೂರು 560 003

ನಿರ್ದೇಶಕರ ಮಂಡಳಿ

ಅಧ್ಯಕ್ಷರು
ಶ್ರೀ ಹೆಚ್.ಡಿ. ಕುಮಾರಸ್ವಾಮಿ (04/06/2018ರಿಂದ)
ಶ್ರೀ ಸಿದ್ದರಾಮಯ್ಯ (04/06/2018ರ ವರೆಗೆ)

ಉಪಾಧ್ಯಕ್ಷರು
ಶ್ರೀ ಡಿ.ಕೆ. ಶಿವಕುಮಾರ್ (03/07/2018ರಿಂದ)
ಶ್ರೀ ಎಂ.ಬಿ. ಪಾಟೀಲ್ (03/07/2018ರವರೆಗೆ)

ವ್ಯವಸ್ಥಾಪಕ ನಿರ್ದೇಶಕರು,
ಶ್ರೀ ಕೆ. ಜೈಪ್ರಕಾಶ್ ಕೆ.ಇ.ಎಸ್.

ಮಹಿಳಾ ನಿರ್ದೇಶಕರು
ಶ್ರೀಮತಿ ಡಾ॥ ಶಾಲಿನಿ ರಜನೀಶ್, ಭಾ.ಆ.ಸೇ.
(06/08/2018ರಿಂದ)

ನಿರ್ದೇಶಕರು,
ಶ್ರೀ ಟಿ.ಎಂ. ವಿಜಯ್‌ಭಾಸ್ಕರ್, ಭಾ.ಆ.ಸೇ.,
(18/07/2018ರಿಂದ)
ಶ್ರೀ ಇ.ವಿ. ರಮಣ ರೆಡ್ಡಿ, ಭಾ.ಆ.ಸೇ.,
(18/07/2018ರಿಂದ)
ಶ್ರೀ ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ,
ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ.,

ಸ್ವತಂತ್ರ ನಿರ್ದೇಶಕರು
ಶ್ರೀ ಡಿ.ಎನ್. ದೇಸಾಯಿ, (04/09/2018ರಿಂದ)
ಪ್ರೊ ಶ್ರೀ ಟಿ. ಗಂಗಾಧರಯ್ಯ, (18/08/2018ರಿಂದ)
ಶ್ರೀ ಆರ್. ಚೆಲುವರಾಜು, (18/08/2018ರಿಂದ)

ಶ್ರೀಮತಿ ಕೆ. ರತ್ನಪ್ರಭ, ಭಾ.ಆ.ಸೇ (18/07/2018ರವರೆಗೆ)
ಶ್ರೀ ಎಲ್.ಕೆ. ಅತೀಕ್, ಭಾ.ಆ.ಸೇ (04/06/2018ರವರೆಗೆ)
ಶ್ರೀ ಬಿ.ಜಿ. ಗುರುಪಾದಸ್ವಾಮಿ, ಕೆ.ಇ.ಎಸ್. (14.06.2018ರವರೆಗೆ)
ಡಾ॥ ವಿ.ಪಿ. ಹುಗ್ಗಿ (29.05.2018ರ ವರೆಗೆ)
ಶ್ರೀ ಲಕ್ಷ್ಮೀನಾರಾಯಣ ಭಾ.ಆ.ಸೇ (18/07/2018ರವರೆಗೆ)

ಕಂಪನಿ ಕಾರ್ಯದರ್ಶಿ
ಶ್ರೀ ಜಿ.ಎಸ್. ಪ್ರಕಾಶ್

ಮುಖ್ಯ ಹಣಕಾಸು ಅಧಿಕಾರಿ
ಶ್ರೀಮತಿ ಎ.ವಿ. ನಾಗವೀಣಾ

ಪರಿವಿಡಿ

ಸೂಚನಾ ಪತ್ರ	2
ನಿರ್ದೇಶಕರ ವರದಿ	3
ಲೆಕ್ಕ ಪರಿಶೋಧಕರ ವರದಿ	34
ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ವರದಿ	54
ಸಂತುಲನ ಪಟ್ಟಿ	55
ಲಾಭ ಮತ್ತು ನಷ್ಟದ ತಃಖ್ತೆ	56
ಹಣಕಾಸು ಹರಿವಿನ ತ:ಖ್ತೆ	57
ಟಿಪ್ಪಣಿಗಳು	60

ಗಮನಿಕೆ: ಇದು ಮೂಲ ಇಂಗ್ಲೀಷ್‌ನಲ್ಲಿರುವ ವಾರ್ಷಿಕ ವರದಿಯ ಕನ್ನಡ ಭಾಷಾನುವಾದ, ಇದರಲ್ಲಿ ಯಾವುದೇ ತಪ್ಪುಗಳು ಅಥವಾ ಅರ್ಥ ವ್ಯತ್ಯಾಸಗಳೇನಾದರು ಕಂಡುಬಂದಲ್ಲಿ ಇಂಗ್ಲೀಷ್ ಭಾಷೆಯ ಮೂಲ ವರದಿ ಅಧಿಕೃತವೆಂದು ತಿಳಿಯಬಹುದಾಗಿದೆ.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ನೊಂದಾಯಿತ ಕಛೇರಿ: # 148, ನೆಲ ಮಹಡಿ, ಎಂಬೆಸ್ಸಿ ಸ್ಕ್ವೇರ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು – 560 001

ಸೂಚನಾ ಪತ್ರ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಸಂಸ್ಥೆಯ ಸದಸ್ಯರುಗಳ **2ನೇ ವಾರ್ಷಿಕ ಸಭೆಯನ್ನು ಶನಿವಾರ, ದಿನಾಂಕ 29ನೇ ಸೆಪ್ಟೆಂಬರ್, 2018 ರಂದು ಸಂಜೆ 4.00 ಘಂಟೆಗೆ ಬೋರ್ಡ್ ಕೊಠಡಿ, ನೊಂದಾಯಿತ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, 4ನೇ ಮಹಡಿ, ಕಾಫೀ ಬೋರ್ಡ್ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001,** ಇಲ್ಲಿ ಈ ಕೆಳಗಿನ ವ್ಯವಹಾರಗಳನ್ನು ಚರ್ಚಿಸುವ ಮತ್ತು ಪರಿಗಣಿಸುವ ಸಲುವಾಗಿ ನಡೆಸಲಾಗುತ್ತಿದೆ ಎಂಬುದಾಗಿ ಈ ಮೂಲಕ ನೋಟೀಸನ್ನು ನೀಡಲಾಗುತ್ತಿದೆ.

ಸಾಮಾನ್ಯ ವ್ಯವಹಾರಗಳು:

1. ಲಗತ್ತಿಸಲಾದ ಅನುಸೂಚಿಗಳು ಮತ್ತು ನಿರ್ದೇಶಕರ ಹಾಗೂ ಲೆಕ್ಕ ಪರಿಶೋಧಕರ ವರದಿಗಳ ಜೊತೆಗೆ ದಿನಾಂಕ 31.03.2018 ರಂದು ಇದ್ದಂತೆ ಸಂತುಲನ ಪಟ್ಟಿಯನ್ನು ಹಾಗೂ ಅದೇ ದಿನಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ತಃಖ್ತೆಯನ್ನು ಸ್ವೀಕರಿಸುವುದು, ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು;

2. ಕಂಪನಿ ಕಾಯ್ದೆ, 2013ರ ಪರಿಚ್ಛೇದ 139 ರಂತೆ ನೇಮಕ ಮಾಡಿಕೊಂಡಿರುವ ಲೆಕ್ಕ ಪರಿಶೋಧಕರ ಸಂಭಾವನೆ ನಿಗದಿಗೊಳಿಸುವುದು (ದಯವಿಟ್ಟು ಕೆಳಗಿನ ಟಿಪ್ಪಣಿ–2ನ್ನು ನೋಡಿ).

ನಿರ್ದೇಶಕರುಗಳ ಮಂಡಳಿಯ ಆದೇಶದ ಮೇರೆಗೆ,
ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಪರವಾಗಿ

ಸಹಿ/–
(ಜಿ.ಎಸ್. ಪ್ರಕಾಶ್)
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 28/09/2018

ಟಿಪ್ಪಣಿ:

1. 2017–18 ಹಣಕಾಸು ಸಾಲಿಗೆ ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಹಣಕಾಸು ತ:ಖ್ತೆಗಳನ್ನು ನಿರ್ದೇಶಕರುಗಳ ವರದಿ ಮತ್ತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳ ಜೊತೆಯಲ್ಲಿ ಲಗತ್ತಿಸಲಾಗಿದೆ.

2. ಕಂಪನಿ ಕಾಯ್ದೆ, 2013ರ ಪರಿಚ್ಛೇದ 142ರ ಉಪಬಂಧಗಳ ಅನುಸಾರ ಲೆಕ್ಕಪರಿಶೋಧಕರಿಗೆ ಸಂದಾಯವಾಗಬೇಕಿರುವ ಸಂಭಾವನೆಯನ್ನು ಕಂಪನಿಯು ಸರ್ವಸದಸ್ಯರ ಸಭೆಯಲ್ಲಿ ನಿಗದಿಪಡಿಸಬೇಕು ಅಥವಾ ಸರ್ವಸದಸ್ಯರ ಸಭೆಯಲ್ಲಿ ನಿರ್ಧಾರವಾಗುವರೀತಿಯಲ್ಲಿ ನಿಗದಿಪಡಿಸಬೇಕು. ದಿನಾಂಕ 29.12.2017ರಂದು ನಡೆದ ಸರ್ವಸದಸ್ಯರ 1ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಂಪನಿ ಕಾಯ್ದೆ ಅಡಿಯಲ್ಲಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನೇಮಕ ಮಾಡಿದೊಡನೆಯೇ ಪ್ರತ್ಯೇಕವಾಗಿ ಪ್ರತಿವರ್ಷ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಸಂದಾಯವಾಗಬೇಕಾದ ಸಂಭಾವನೆಯನ್ನು ನಿಗದಿಪಡಿಸಲು ಸಭೆಯು ಲೆಕ್ಕ ಪರಿಶೋಧನಾ ಸಮಿತಿಗೆ ಅಧಿಕಾರವನ್ನು ನೀಡಿದೆ. ಇದಕ್ಕನುಗುಣವಾಗಿ ನಿರ್ದೇಶಕ ಮಂಡಳಿಯ ಲೆಕ್ಕಪರಿಶೋಧನಾ ಸಮಿತಿಯು 2017–18ರ ಹಣಕಾಸು ವರ್ಷಕ್ಕೆ ಶಾಸನಬದ್ಧ ಲೆಕ್ಕಪರಿಶೋಧಕರಾದ ಮೆ. ಚನ್ನಬಸಪ್ಪ & ಕಂ., ಸನದಿ ಲೆಕ್ಕಿಗರು–ಇವರಿಗೆ ರೂ. 5,50,000/– ತೆರಿಗೆ ಲೆಕ್ಕಪರಿಶೋಧನೆಯನೊಳಗೂಂಡ ಸಂಭಾವನೆಯನ್ನು ನೀಡಲು ಸಹಮತಿಸಿ ಅನುಮೋದಿಸಿರುತ್ತದೆ.

3. ಸಭೆಗೆ ಹಾಜರಾಗುವ ಮತ್ತು ಮತ ಚಲಾಯಿಸುವ ಅರ್ಹತೆಯನ್ನು ಹೊಂದಿರುವ ಓರ್ವ ಸದಸ್ಯರು, ತಾವೇ ಸ್ವತ: ಹಾಜರಾಗುವ ಹಾಗೂ ಮತ ಚಲಾಯಿಸುವ ಬದಲು ತಮ್ಮ ಪರವಾಗಿ ಸಭೆಗೆ ಹಾಜರಾಗುವ ಹಾಗೂ ಮತ ಚಲಾಯಿಸುವ ಸಲುವಾಗಿ ಮತ್ತೋರ್ವ ವ್ಯಕ್ತಿಯನ್ನು ನೇಮಕ ಮಾಡಿಕೊಳ್ಳಬಹುದು, ಅಂತಹ ವ್ಯಕ್ತಿಯು ಕಂಪನಿಯ ಓರ್ವ ಸದಸ್ಯರಾಗಿರಬೇಕಾಗಿಲ್ಲ.

2017–18 ಹಣಕಾಸು ಸಾಲಿಗೆ ನಿರ್ದೇಶಕರುಗಳ ವರದಿ

ಆತ್ಮೀಯ ಸದಸ್ಯರುಗಳಿಗೆ,

2017–18 ಸಾಲಿನ ದ್ವಿತೀಯ ವಾರ್ಷಿಕ ವರದಿಯನ್ನು 31 ಮಾರ್ಚ್ 2018ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿನ ಹಣಕಾಸು ತ:ಖ್ತೆಗಳ ಜೊತೆಯಲ್ಲಿ ಈ ಮೂಲಕ ಮಂಡಿಸುತ್ತಿರುವುದಕ್ಕೆ ನಿಮ್ಮ ನಿರ್ದೇಶಕರುಗಳ ಮಂಡಳಿಯು ಅತೀವ ಸಂತಸವನ್ನು ಪಡುತ್ತಿದೆ.

2. ನಿಮ್ಮ ಕಂಪನಿಯು ಕಾರ್ಯಗತಗೊಳಿಸುವ ಸಲುವಾಗಿ ಸರ್ಕಾರವು ವರ್ಗಾಯಿಸಿರುವ ಯೋಜನೆಗಳ ವಿವರಗಳನ್ನು ಕಂಪನಿಯ ಪ್ರಥಮ ವಾರ್ಷಿಕ ವರದಿಯಲ್ಲಿ ನೀಡಲಾಗಿದೆ. ಕಂಪನಿಯ ಅಧಿಕಾರ ವ್ಯಾಪ್ತಿಯ ಒಳಗೆ ಬರುವಂತಹ ಪ್ರದೇಶಗಳಲ್ಲಿ ಕಾರ್ಯಗತಗೊಳ್ಳುತ್ತಿರುವ ಯೋಜನೆಗಳ ಹಣಕಾಸು ವಿವರಗಳು ಮತ್ತು ನೀರಾವರಿ ಸಾಮರ್ಥ್ಯತೆಗಳು ಈ ಕೆಳಗಿನಂತಿರುತ್ತವೆ :

ಕ್ರಮ ಸಂಖ್ಯೆ	ಯೋಜನೆಗಳು	ಹಣಕಾಸಿನ ಪ್ರಗತಿ ರೂ. ಕೋಟಿಗಳಲ್ಲಿ			ನೀರಾವರಿ ಸಾಮರ್ಥ್ಯ (ಹೆಕ್ಟೇರುಗಳಲ್ಲಿ)		
		ಯೋಜನೆಯ ಮೌಲ್ಯಮಾಪನ ವೆಚ್ಚ	31.3.18 ರಲ್ಲಿದ್ದಂತೆ ಕ್ರೋಢೀಕೃತ ವೆಚ್ಚ	31.3.18 ರಲ್ಲಿದ್ದಂತೆ ಭರಿಸ ಬೇಕಿರುವ ಉಳಿಕೆ ವೆಚ್ಚ	ಅಂತಿಮ ಸಾಮರ್ಥ್ಯ	ಪ್ರಸಕ್ತ ಸಾಲಿನಲ್ಲಿ ಸೃಷ್ಟಿಸಿದ್ದು	ಸೃಷ್ಟಿಸಲಾದ ಕ್ರೋಢೀಕೃತ ಸಾಮರ್ಥ್ಯ
1	ಭದ್ರ ಮೇಲ್ದಂಡೆ	12,340.00	2,334.00	10,006.00	2,25,515	–	–
2	ವಾಣಿವಿಲಾಸ ಸಾಗರ	–	–	–	12,135	–	12,135
3	ಗಾಯತ್ರಿ ಜಲಾಶಯ	–	–	–	2,367	–	2,367
	ಉಪ–ಮೊತ್ತ	**12,340**	**2,334.00**	**10,006.00**	**2,40,017**	–	**14,502**
4	ಎತ್ತಿನಹೊಳೆ	12,912.36	3,116.00	9,796.00	ಅನ್ವಯಸುವುದಿಲ್ಲ	ಅನ್ವಯಸುವುದಿಲ್ಲ	ಅನ್ವಯಸುವುದಿಲ್ಲ
	ಯೋಜನೆಗಳ ಒಟ್ಟಾರೆ ಮೊತ್ತ	**25,252.36**	**5,450.00**	**19,802.00**	**2,40,017**	–	**14,502**

ಯೋಜನೆಗಳ ಅನುಷ್ಠಾನದ ಪ್ರಗತಿ:

ಎತ್ತಿನಹೊಳೆ ಯೋಜನೆ:

3. ಯೋಜನೆಯ ಮೊದಲನೇ ಹಂತದ ಒಟ್ಟಾರೆ ರೂ. 3716.49 ಕೋಟಿ ಮೊತ್ತದ ಏತ ಕಾಮಗಾರಿಗಳನ್ನು ಐದು ಪ್ಯಾಕೇಜುಗಳಲ್ಲಿ ಮಾರ್ಚ್ 2014ರಲ್ಲಿ ಕೈಗೆತ್ತಿಕೊಳ್ಳಲಾಯಿತು. ವಿದ್ಯುತ್ ಸ್ಥಾವರದ ಕಾಮಗಾರಿಗಳನ್ನು ಜುಲೈ 2017ರಲ್ಲಿ ರೂ. 265.95 ಕೋಟಿಗಳ ಕಾಮಗಾರಿಗಳನ್ನು ಹಾಗೂ ರೂ.132.62 ಕೋಟಿ ಮೊತ್ತದ ವಿದ್ಯುತ್ ಪ್ರಸರಣ ಮಾರ್ಗದ ಕಾಮಗಾರಿಗಳನ್ನು ಮಾರ್ಚ್ 2018ರಲ್ಲಿ ಕೈಗೆತ್ತಿಕೊಳ್ಳಲಾಯಿತು. ಏತ ಕಾಮಗರಿಗಳ ಪ್ರಗತಿಯು ವಿವಿಧ ಹಂತಗಳಲ್ಲಿರುವುದು.

4. ಏತ ಕಾಮಗಾರಿಗಳನ್ನು ಮಾರ್ಚ್ 2018ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿತ್ತು. ಆದರೆ ಭೂಸ್ವಾಧೀನ ಸಮಸ್ಯೆಗಳ ಕಾರಣ, ಏತ ಕಾಮಗಾರಿಗಳನ್ನು 2019ರ ಮಳೆಗಾಲದಲ್ಲಿ ಚಾಲನೆಗೊಳಿಸಲು ಯೋಜಿಸಲಾಗಿರುತ್ತದೆ. ಮೊದಲನೇ ಹಂತಕ್ಕೆ ಅಗತ್ಯವಿರುವ 448 ಎಕರೆಗಳು 33 ಗುಂಟೆಗಳಷ್ಟು ಭೂಮಿಯನ್ನು ಭೂ ಮಾಲೀಕರುಗಳಿಂದ ನೇರವಾಗಿ ಖರೀದಿಸುವ ಸಲುವಾಗಿ ಸರ್ಕಾರದ ಅನುಮೋದನೆಯನ್ನು ಪಡೆದುಕೊಳ್ಳಲಾಗಿದೆ. 142 ಎಕರೆಗಳಷ್ಟು ಭೂ ಪ್ರದೇಶದ ಭೂ ಮಾಲೀಕರುಗಳು ನೇರ ಖರೀದಿಗೆ ಪ್ರತಿಕ್ರಿಯೆ ನೀಡಿರುವುದಿಲ್ಲ. ಭೂ ಸ್ವಾಧೀನ ಪ್ರಕ್ರಿಯೆಯಲ್ಲಿದ್ದ ಆಗುವಂತಹ ವಿಳಂಬ ಹಿನ್ನೆಲೆಯಲ್ಲಿ ನೇರ ಖರೀದಿ ಪ್ರಸ್ತಾವನೆಯನ್ನು ಒಪ್ಪಿಕೊಳ್ಳುವಂತೆ ಮನವರಿಕೆ ಮಾಡುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಒಂದು ವೇಳೆ ಅವರುಗಳು ಈ ನೇರ ಖರೀದಿಗೆ ಒಪ್ಪಿಕೊಳ್ಳದಿದ್ದಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಅನಿವಾರ್ಯವಾಗಿರುತ್ತದೆ.

5. ಯೋಜನೆಯ ಅನುಷ್ಠಾನವನ್ನು ತ್ವರಿತಗೊಳಿಸುವ ಉದ್ದೇಶದಿಂದ, ಯೋಜನೆಯ ಎರಡನೇಯ ಹಂತದ ಕಾಮಗಾರಿ 10.83 ಉದ್ದದ ಮೇಲ್ಗಾಲುವೆಯನ್ನು (ಅಕ್ವಡಕ್ಟ್) ಒಳಗೊಂಡಂತೆ 260 ಕಿ.ಮೀ. ಉದ್ದದ ಗುರುತ್ವ ಕಾಲುವೆಯನ್ನು ಹಾಗೂ ತುಮಕೂರು ಜಿಲ್ಲೆಯ ಬೈರಗೊಂಡ್ಲು ಗ್ರಾಮದಲ್ಲಿ 5.7 ಟಿಎಂಸಿ ಸಾಮರ್ಥ್ಯದ ಸಂಗ್ರಹಣಾ ಜಲಾಶಯವು ಸೇರಿದಂತೆ ಸಹ ಕೈಗೆತಿಕೊಳ್ಳಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರ ಸಂಗ್ರಹಣಾ ಜಲಾಶಯ ಹಾಗೂ ಮೇಲ್ಗಾಲುವೆಯನ್ನು ಒಳಗೊಂಡ ಕಿಮೀ 0.002 ರಿಂದ ಕಿಮೀ 100.00 ರವರೆಗೆ ಹಾಗೂ ಕಿಮೀ 170.00 ರಿಂದ ಕಿಮೀ 222.00 ರವರೆಗಿನ ಗುರುತ್ವ ಕಾಲುವೆಯ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಮುಂದುವರೆದು, ಚಿಕ್ಕಬಳ್ಳಾಪುರವೂ ಸೇರಿದಂತೆ ಮಧುಗಿರಿ, ಗೌರಿಬಿದನೂರು, ಕೋಲಾರ, ಶ್ರೀನಿವಾಸಪುರ, ಫೀಡರ್ ಕಾಲುವೆಗಳ ಸರ್ವೆ/ಸಮೀಕ್ಷೆ ವಿನ್ಯಾಸ–ರೂಪುರೇಷೆ, ಮೌಲ್ಯಮಾಪನ ವಿವರವಾದ ಯೋಜನಾ ವರದಿಗಳ ಮತ್ತು ಭೂಸ್ವಾಧಿನ ಪ್ರಸ್ತಾವನೆಗಳ ತಯಾರಿಕೆಗಾಗಿ ಏಕಕಾಲಿನ ಕ್ರಮವನ್ನು ಕೈಗೊಳ್ಳಲಾಗಿರುತ್ತಿದೆ.

6. ಏತ ಕಾಮಗಾರಿಗಳಿಗೆ ಬೇಕಾಗಿರುವ ಸಕಲೇಶಪುರ ಅರಣ್ಯ ಪ್ರದೇಶದಲ್ಲಿ 13.93 ಹೆಕ್ಟೇರುಗಳಷ್ಟು ಅರಣ್ಯ ಭೂಮಿಯನ್ನು ಈ ಯೋಜನೆಗಾಗಿ ಉಪಯೋಗಿಸಿಕೊಳ್ಳುವ ಸಲುವಾಗಿ ಅನುಮೋದನೆ ನೀಡುವ ಸಮಯದಲ್ಲಿ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯಗಳ ಮಂತ್ರಾಲಯವು ವಿಧಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ಪರಿಸರೀಯ ಅಧ್ಯಯನಗಳ ಕೇಂದ್ರ, ಐಐಎಸ್‌ಸಿ ಮತ್ತು ಇಎಂಪಿಆರ್‌ಐ, ಸಂಸ್ಥೆಗಳು, ಪ್ರಸ್ತಾಪಿಸಲಾದ ಪರಿಹಾರಕ ಕ್ರಮಗಳ ಮೇಲೆ ಪ್ರಭಾವ ಭೀರಬಹುದಾದ ಅಂಶಗಳ ಬಗ್ಗೆ ಅವರು ಅಧ್ಯಯನಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿರುವವು. ಕಂಪನಿಯು, ಕಾಮಗಾರಿಗಳಿಗೆ ಉಪಯೋಗಿಸಲಾದ ಅರಣ್ಯ ಭೂಮಿಯ ನಿವ್ವಳ ಪ್ರಸಕ್ತ ಮೌಲ್ಯವು (ಎನ್‌ಪಿವಿ) ಸೇರಿದಂತೆ ಈವರೆಗೆ ಪರಿಹಾರಕ ಅರಣ್ಯವನ್ನು ಬೆಳೆಸುವುದಕ್ಕಾಗಿ ರೂ2.79 ಕೋಟಿ ಸೇರಿದಂತೆ ಒಟ್ಟಾರೆ ರೂ. 7.30 ಕೋಟಿ ಮೊತ್ತದಷ್ಟು ವೆಚ್ಚವನ್ನು ಭರಿಸಿರುವುದಲ್ಲದೆ ಪರಿಹಾರಕ ಅರಣ್ಯವನ್ನು ಬೆಳೆಸುವುದಕ್ಕಾಗಿ ಅರಣ್ಯ ಇಲಾಖೆಗೆ ಸಕಲೇಶಪುರದಲ್ಲಿ 61 ಎಕರೆಗಳು 31 ಗುಂಟೆಗಳಷ್ಟು ಭೂಮಿಯನ್ನು ಲಭ್ಯಗೊಳಿಸಲಾಗಿದೆ.

7. ಯೋಜನೆಗಾಗಿ ಇತ್ತೀಚಿನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರ ಮೂಲಕ ನೀರು ಹರಿವನ್ನು ಅಳೆಯುವ ದೂರಸ್ಥಮಾಪಕ (ಟೆಲಿಮೆಟ್ರಿ) ವ್ಯವಸ್ಥೆಯನ್ನು ಸ್ಥಾಪಿಸಲಾಗುವುದು. ಈ ವ್ಯವಸ್ಥೆಯ ಅಡಿಯಲ್ಲಿ ಅಳವಡಿಸಲಾಗುವ ನೀರಿನ ಹರಿವನ್ನು ದಾಖಲಿಸುವಂತಹ ಮೀಟರುಗಳು ಎಂಟು ವಿಯರ್‌ಗಳಿಂದ ವಿತರಣಾ ತೊಟ್ಟಿಗೆ ಹಾಗೂ ಮುಂದಕ್ಕೆ ಗುರುತ್ವಾಕರ್ಷಣ ನಾಲೆಯ ಮೂಲಕ ಫಲಾನುಭವಿ ಜಿಲ್ಲೆಗಳಿಗೆ ಎತ್ತಲಾದ ನೀರಿನ ಪ್ರಮಾಣವನ್ನು ವಾಸ್ತವಿಕ ಸಮಯದಲ್ಲಿ ಅಳೆಯಲು ಅನುವಾಗುತ್ತದೆ. ಇದು ಲಭ್ಯವಾಗುವ ನೀರಿನ ಇಳುವರಿ ಮೌಲ್ಯಮಾಪನವನ್ನು ಮಾಡುವ ಹಾಗೂ ಫಲಾನುಭವಿ ಜಿಲ್ಲೆಗಳಿಗೆ ಹರಿಸಲಾದ ನೀರಿನ ಪ್ರಮಾಣವನ್ನು ಅಳೆಯುವ ಎರಡು ಉದ್ದೇಶಗಳನ್ನು ಒಂದೇ ಬಾರಿಗೆ ಇದು ಈಡೇರಿಸುತ್ತದೆ. ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ವಿಧಿಸಿರುವ ಕನಿಷ್ಠ ನೀರಿನ ಹರಿವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ವಿಯರ್‌ಗಳ ಕೆಳಹರಿವನ್ನು ಸಹ ಅಳೆಯಲಾಗುವುದು. ದೂರಸ್ಥಮಾಪಕ (ಟೆಲಿಮೆಟ್ರಿ) ವ್ಯವಸ್ಥೆಯ ಭಾಗವಾಗಿ ವಿಯರ್‌ಗಳ ಅಳವಡಿಸಲಾಗಿರುವ ನೀರಿನ ಹರಿವನ್ನು ಅಳೆಯುವ ಮೀಟರುಗಳು ಪ್ರಸಕ್ತ ಮಳೆಗಾಲಕ್ಕೆ ಪೂರ್ವದಲ್ಲಿ ಅಳತೆ ಮಾಡಿದ ನೀರಿನ ಪ್ರಮಾಣವು ಎತ್ತಿನಹೊಳೆ ಯೋಜನೆಗೆ ಅಂದಾಜು ಮಾಡಲಾಗಿರುವ ನೀರಿನ ಪ್ರಮಾಣವನ್ನು ಆಗಸ್ಟ್ ತಿಂಗಳಿನ ಅಂತ್ಯದ ವೇಳೆಯಲಿಯೇ ಪೂರೈಕೆಯಾಗಿರುವುದನ್ನು ಖಚಿತಪಡಿಸಿದ್ದು ಇದರಿಂದಾಗಿ ಈ ಯೋಜನೆಗೆ ಪರಿಗಣಿಸಲಾಗಿ ನೀರಿನ ಪ್ರಮಾಣದ ಲಭ್ಯತೆಯನ್ನು ಬಲಪಡಿಸಿದೆ,

8. ಪ್ರಸಕ್ತ ಮಳೆಗಾಲದಲ್ಲಿ, ಹಿಂದಿನ ಸಾಲುಗಳಿಗೆ ಹೋಲಿಸಿದಲ್ಲಿ ಪಶ್ಚಿಮ ಘಟ್ಟಗಳಲ್ಲಿ ಮಳೆಯು ಗಮನಾರ್ಹವಾದ ಪ್ರಮಾಣದಲ್ಲಿ ಅಧಿಕವಾಗಿದ್ದು, ಇದು ಅಲ್ಲಿನ ವಸತಿ ಪ್ರದೇಶಗಳ ಮೇಲೆ ಪ್ರಭಾವವನ್ನು ಭೀರಿತ್ತು. ಆದಾಗ್ಯೂ, ಇನ್ನಿತರವುಗಳ ಜೊತೆಗೆ ನಿರ್ಮಾಣದ ಹಂತದಲ್ಲಿರುವಂತಹ 8 ವಿಯರ್‌ಗಳು ಹಾಗೂ ಸಂಬಂಧಿತ ಪಂಪಿಂಗ್ ಸ್ಟೇಷನ್ನಗಳ ಮತ್ತು ವಿತರಣಾ ತೊಟ್ಟಿಗಳ ನಿರ್ಮಾಣದಿಂದ ಸಕಲೇಶಪುರದ ಯೋಜನಾ ಪ್ರದೇಶದಲ್ಲಿ ಸುತ್ತಮುತ್ತಲಿನ ಪರಿಸರಕ್ಕೆ ಯಾವುದೇ ಹಾನಿ ಆಗದಂತೆ ಖಚಿತಪಡಿಸಿಕೊಳ್ಳಲು ಯೋಜನೆಯನ್ನು ನಿಖರವಾಗಿ ಹಾಗೂ ವೈಜ್ಞಾನಿಕವಾಗಿ ಯೋಜಿಸಿ ನಿರ್ಮಾಣಗಳ ಸ್ಥಳದಲ್ಲಿ ಯೋಜನೆಯ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಎತ್ತಿನಹೊಳೆ ಯೋಜನೆಯು, ಪರಿಸರ ಹಾಗೂ ರಾಜ್ಯದ ಬರಪೀಡಿತ ಪ್ರದೇಶಗಳಿಗೆ ಒಳ್ಳೆಯದನ್ನು ಮಾಡುವುದು, ಮಳೆಯು ಅಧಿಕವಾಗಿರುವ ಸಮಯದಲ್ಲಿ, ಅಧಿಕ ಪ್ರಮಾಣದಲ್ಲಿ ನೀರಿನ ನಿಯಂತ್ರಿತ ಹರಿವು ಇರುತ್ತದೆಯಾದ್ದರಿಂದ ಪರಿಸರಕ್ಕೆ

ಹಾಗೂ ಸುತ್ತಮುತ್ತಲ ವಸತಿಗಳಿಗೆ ಹಾನಿ ಆಗುವುದನ್ನು ತಡೆಗಟ್ಟುವುದು ಹಾಗೂ ಅದೇ ವೇಳೆಯಲ್ಲಿ ರಾಜ್ಯದಲ್ಲಿ ನೀರಿನ ಕೊರತೆಯನ್ನು ಎದುರಿಸುತ್ತಿರುವ ಪ್ರದೇಶಗಳಿಗೆ ನೀರಿನ ಅನುಕೂಲತೆಯನ್ನು ಒದಗಿಸಿದಂತಾಗುವುದು. ಇದ್ದಕ್ಕಿದ್ದಂತೆ ತಟ್ಟನೆ ಉಂಟಾಗುವ ಪ್ರವಾಹದಿಂದ ಸಂಭವಿಸುವ ಹಾನಿಗಳನ್ನು ಕನಿಷ್ಠ ಮಟ್ಟಕ್ಕೆ ತರುವಲ್ಲಿ ಈ ಯೋಜನೆಯು ಪ್ರತಿರೋಧಕವಾಗಿ ಪಾತ್ರವಹಿಸುತ್ತದೆ. ಆದ್ದರಿಂದ, ಕುಡಿಯುವ ನೀರಿನ ಮೂಲ ಅಗತ್ಯತೆ ಪೂರೈಸುವುದನ್ನು ಚಿಂತಿಸುವಂತಹ ಎತ್ತಿನಹೊಳೆ ಯೋಜನೆಯು ಪರಿಸರ–ಸ್ನೇಹಿ ಯೋಜನೆಯಾಗಿರುತ್ತದೆ.

9. ನೀರನ್ನು ಎತ್ತುವ ವ್ಯವಸ್ಥೆಯ ಸ್ಟೇಷನ್ನಗಳು ಮುಂತಾದ ಯೋಜನೆಯ ಭಾಗವನ್ನು ನಿರ್ಮಾಣ ಮಾಡಲಾಗುತ್ತಿರುವಂತಹ ಸಕಲೇಶಪುರದಲ್ಲಿನ ಸ್ಥಳೀಯ ಜನತೆಗಾಗಿ ಪರಿಹಾರಕ ಕ್ರಮಗಳ ಮೂಲಕ, ರೂ.118.76 ಕೋಟಿ ಮೌಲ್ಯದ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ವಿವಿದ ಹಂತಗಳಲ್ಲಿ ಕೈಗೊಳ್ಳಲು ಕಂಪನಿಯು ಯೋಜಿಸಿದೆ ಈ ನಿಟ್ಟಿನಲ್ಲಿ ಈ ಸಾಲಿನ ಅಂತ್ಯದ ವರಗಿನ ವರದಿಯಲ್ಲಿ ಕಂಪನಿಯು ರೂ.47.12 ಕೋಟಿ ಮೊತ್ತದಷ್ಟು ವೆಚ್ಚವನ್ನು ಭರಿಸಿರುತ್ತದೆ.

10. ಈ ಸಾಲಿನ ಅಂತ್ಯದವರಗಿನ ವರದಿಯಲ್ಲಿ ಸಾಧಿಸಲಾಗಿರುವ ಆರ್ಥಿಕ ಪ್ರಗತಿಯು ರೂ.930.94 ಕೋಟಿ ಹಾಗೂ ಕ್ರೋಡೀಕೃತ ಆರ್ಥಿಕ ಪ್ರಗತಿಯು ರೂ.3,116.00 ಕೋಟಿ ಆಗಿರುತ್ತದೆ.

11. ಈ ಯೋಜನೆಯನ್ನು ಮುಂದಿನ ಮೂರು ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಆದಾಗ್ಯೂ, ಪ್ರಾಥಮಿಕಾವಾಗಿ ಅದು ಬೈರಗೊಂಡ್ಲು ನೀರು ಸಂಗ್ರಹಣ ಜಲಾಶಯದ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಭೂಸ್ವಾಧೀನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದರ ಮೇಲೆ ಈ ಯೋಜನೆ ಪೂರ್ಣಗೊಳಿಸುವುದು ಅವಲಂಭಿಸಿರುತ್ತದೆ.

ಭದ್ರಾ ಮೇಲ್ದಂಡೆ ಯೋಜನೆ:

12. ಮೊದಲ ಹಂತದಲ್ಲಿ ಈ ಯೋಜನೆಯು ಎರಡು ಲಿಫ್ಟ್ ಕಾಮಗಾರಿಗಳನ್ನು ಹಾಗೂ 7.029 ಕಿಮೀಗಳಷ್ಟು ಉದ್ದದ ಸುರಂಗ ನಾಲಾ ಕಾಮಗಾರಿಯನ್ನು 2008–09ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಯಿತು. ಆದಾಗ್ಯೂ ಅನೇಕ ಅಡೆತಡೆಗಳ ಕಾರಣ, ಅವುಗಳಲ್ಲಿ ಪ್ರಮುಖವಾಗಿ ಸುರಂಗ ನಾಲೆಯ ನಿರ್ಮಾಣದ ಕಾರಣ ರೈತರುಗಳಿಂದ ಚಳುವಳಿ, ವನ್ಯ ಜೀವಿಗಳ ಸಮಸ್ಯೆಗಳೂ ಸೇರಿದಂತೆ ಅರಣ್ಯ ಪ್ರದೇಶದ ಭೂಮಿಗಾಗಿ ಶಾಸನಬದ್ಧ ಅನುಮತಿ, ಇತ್ಯಾದಿಗಳ ಕಾರಣದಿಂದಾಗಿ ನಿರೀಕ್ಷಿತ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಬಹುತೇಕ ಎಲ್ಲಾ ಅಡೆತಡೆಗಳನ್ನು ನಿವಾರಿಸಿ ಈ ಕಾಮಗಾರಿಗಳ ಪ್ರಗತಿಯನ್ನು ತ್ವರಿತಗೊಳಿಸಲಾಗಿದೆ.

13. ಈ ಯೋಜನೆಯ 2ನೇ ಹಂತದಲ್ಲಿ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು ಅವುಗಳು ಪ್ರಗತಿಯಲ್ಲಿವೆ

i. ಚಿತ್ರದುರ್ಗ ಶಾಖಾ ನಾಲೆ ಕಿಮೀ 1ರಿಂದ ಕಿಮೀ 104.

ii. ಸುರಂಗ ನಾಲೆಯ ನಿರ್ಮಾಣದ ವಿರುದ್ಧವಾಗಿ ಚಳುವಳಿ ನಡೆಸುತ್ತಿದ್ದ ಸ್ಥಳೀಯ ರೈತರ ಬೇಡಿಕೆಯ ಅನುಸಾರ ನೀರಿನ ಪ್ರಮಾಣದ ಇಳಿಮುಖತೆಗೆ ಪರಿಹಾರವಾಗಿ ಅಜ್ಜಂಪುರ ಸುರಂಗ ನಾಲೆಯ ಆಗಮನ ಹಾಗೂ ನಿರ್ಗಮನ ಸ್ಥಳದಲ್ಲಿ ತರೀಕೆರೆ ಏತ ನೀರಾವರಿಯೋಜನೆ.

iii. 30 ಕಿ.ಮೀ. ಉದ್ದದ ತುಮಕೂರು ಶಾಖಾ ನಾಲೆಯ ನಿರ್ಮಾಣ.

iv ಹೊಳಲ್ಕೆರೆ ಫೀಡರ್‌ನ ನಿರ್ಮಾಣ

14. ಈ ವರದಿಯು ವ್ಯಾಪಿಸಿರುವ ಸಾಲಿನಲ್ಲಿ 20,150 ಹೆಕ್ಟೇರುಗಳಷ್ಟು ಅಚ್ಚುಕಟ್ಟು ಪ್ರದೇಶದ ತರೀಕೆರೆ ಏತ ನೀರಾವರಿ ಯೋಜನೆಯಲ್ಲಿ ನೀರಿನ ಬಳಕೆಯಲ್ಲಿನ ದಕ್ಷತೆಯನ್ನು ಉತ್ತಮಗೊಳಿಸುವ ಸಲುವಾಗಿ ಹನಿ ನೀರಾವರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಮೂಲಕ ಗಮನಾರ್ಹ ಹೆಜ್ಜೆಯನ್ನು ಇಡಲಾಗಿದೆ. 2019–20ರಲ್ಲಿ ಈ ಪ್ರದೇಶವನ್ನು ಹನಿ ನೀರಾವರಿಯ ಅಡಿಯಲ್ಲಿ ತರುವುದರಿಂದ, ವೃದ್ಧಿಸಲ್ಪಟ್ಟ ಪರಿಸರೀಯ ಪ್ರಯೋಜನಗಳ ಜೊತೆಯಲ್ಲಿ ಭೂ ಮತ್ತು ಜಲ ಸಂಪನ್ಮೂಲಗಳು ಊರ್ಜಿತಗೊಳ್ಳಬಲ್ಲಂತಹ ಅಭಿವೃದ್ಧಿಯ ಕಡೆಗೆ ಕಂಪನಿಯ ಬದ್ಧತೆಯನ್ನು ಪ್ರದರ್ಶಿಸುವುದು. ಸಂಪೂರ್ಣ 2.25 ಲಕ್ಷ ಹೆಕ್ಟೇರುಗಳಷ್ಟು ಅಚ್ಚುಕಟ್ಟು ಪ್ರದೇಶವನ್ನು ಹನಿ ನೀರಾವರಿಯ ಅಡಿಯಲ್ಲಿ ಹಂತಾನುಹಂತವಾಗಿ ತರುಲು ಯೋಜಿಸಲಾಗಿದೆ.

15. ಅರಣ್ಯ ಇಲಾಖೆಯಿಂದ ಹಂತ–2ರ ಅನುಮತಿಯು ದೊರೆತ ಹಿನ್ನೆಲೆಯಲ್ಲಿ ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗ ನಾಲೆಗೆ ನೀರನ್ನು ಎತ್ತುವ ವ್ಯವಸ್ಥೆಯ ಕಾಮಗಾರಿಯ ಪ್ರಗತಿಯು ಈ ವರದಿಯು ವ್ಯಾಪಿಸಿರುವ ಪ್ರಸಕ್ತ ಸಾಲಿನಲ್ಲಿ ಗಣನೀಯ ಪ್ರಮಾಣದಲ್ಲಿ ಸಾಧಿಸಲಾಗಿದ್ದು, ಮುಂಗಾರು 2019ರಲ್ಲಿ ಚಾಲನೆ ಗೊಳಿಸಲು ಸಿದ್ದಗೊಳ್ಳುತ್ತಿರುವುದು ಚಿತ್ರದುರ್ಗ ಶಾಖಾ ನಾಲೆಗೆ ಮತ್ತು ತುಮಕೂರು ಶಾಖಾ ನಾಲೆಗೆ ನೀರನ್ನು

ಒದಗಿಸುವ ಮತ್ತೊಂದು ನಿರ್ಣಾಯಕ ಕಾಮಗಾರಿಯಾದ 7 ಕಿಮೀ ಉದ್ದದ ಅಜ್ಜಂಪುರ ಸುರಂಗ ನಾಲೆಯ ಕಾಮಗಾರಿಯು ಗಮನಾರ್ಹವಾದಂತಹ ಪ್ರಗತಿಯನ್ನು ಸಾಧಿಸಲಾಗಿದ್ದು ಜನವರಿ 2019ರಲ್ಲಿ ಆ ಕಾಮಗಾರಿಯನ್ನು ಪೂರ್ಣಗೊಳಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿರುತ್ತದೆ. ಈ ಸುರಂಗ ನಾಲೆಯನ್ನು ಪೂರ್ಣಗೊಳಿಸುವುದು ಮುಂಬರುವ ವರ್ಷಗಳಲ್ಲಿ ಯೋಜಿತ ನೀರಾವರಿ ಸಾಮರ್ಥ್ಯ ಸೃಷ್ಟಿಸುವುದನ್ನು ತ್ವರಿತಗೊಳಿಸುತ್ತದೆ.

ಈ ವರದಿಯು ವ್ಯಾಪಿಸಿರುವ ಸಾಲಿನಲ್ಲಿ ಸಾಧಿಸಲಾಗಿರುವ ಆರ್ಥಿಕ ಪ್ರಗತಿಯು ರೂ.530.10 ಕೋಟಿ ಹಾಗೂ ಕ್ರೋಢೀಕೃತ ಆರ್ಥಿಕ ಪ್ರಗತಿಯು ರೂ.2,334 ಕೋಟಿ.

16. ಈ ಯೋಜನೆಯನ್ನು 2022–23ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಪರಿಶಿಷ್ಟ ಜಾತಿ ಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪ–ಯೋಜನೆ (ಎಸ್‌ಸಿಪಿ/ಟಿಎಸ್‌ಪಿ):

17. ರಾಜ್ಯದ ಯೋಜನಾ ಆಯವ್ಯಯದ ಭಾಗವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗದ ಜನಸಂಖ್ಯೆ ಅನುಗುಣವಾಗಿ ಆ ಪಂಗಡಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮೀಸಲಿಡತಕ್ಕದ್ದು ಎಂಬುದನ್ನು ಪರಿಶಿಷ್ಟ ಜಾತಿ ಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪ–ಯೋಜನೆಗಳ ನಿಯಮಗಳು ನಿಗದಿಗೊಳಿಸಿರುತ್ತದೆ ಈ ಯೋಜನೆಗಳ ಅಡಿಯಲ್ಲಿ ಸರ್ಕಾರವು ನಿಮ್ಮ ಕಂಪನಿಗಾಗಿ ರೂ.616.16 ಕೋಟಿ ಮೊತ್ತವನ್ನು ಹಂಚಿಕೆ ಮಾಡಿರುವುದು. ಈ ವರದಿಯು ಪ್ರಸ್ತುತ ಸಾಲಿನಲ್ಲಿ, ನಿಮ್ಮ ಕಂಪನಿಯು ಪರಿಶಿಷ್ಟ ಜಾತಿ ಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪ–ಯೋಜನೆಗಳ ಕಾಮಗಾರಿಗಳ ಮೇಲೆ ಹಿಂದಿನ ಸಾಲಿನ ಕಾಮಗಾರಿಗಳೂ ಸೇರಿದಂತೆ ರೂ. 128.07 ಕೋಟಿ ಮೊತ್ತದಷ್ಟು ವೆಚ್ಚವನ್ನು ಭರಿಸಿರುವುದು ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಲುವಾಗಿ, ರೂ.274.52 ಕೋಟಿ ಮೊತ್ತವನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ ಮತ್ತು ನಿರ್ಮಿತಿ ಕೇಂದ್ರದಲ್ಲಿ ಠೇವಣಿ ಇಟ್ಟಿರುವುದು.

ಆಸ್ತಿ ಮತ್ತು ಹೊಣೆಗಾರಿಕೆ ವರ್ಗಾವಣೆ:

18. ನಮ್ಮ ಹಿಂದಿನ ವರದಿಯಲ್ಲಿ ಈಗಾಗಲೇ ತಿಳಿಸಿರುವಂತೆ, ಕರ್ನಾಟಕ ಸರ್ಕಾರದಿಂದ ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ವರ್ಗಾವಣೆಗೊಂಡಿರುವಂತಹ ಯೋಜನೆಗಳು ದಿನಾಂಕ 01–01–2017ರಿಂದ ಜಾರಿಗೆ ಬರುವಂತೆ ಕಂಪನಿಯ ಕಾರ್ಯಾಚರಣೆಯ ನಿಯಂತ್ರಣದಲ್ಲಿರುವುವು. ಕಂಪನಿಗೆ ವರ್ಗಾವಣೆಗೊಂಡಿರುವಂತಹ ಯೋಜನೆಗಳಿಗೆ ಸಂಬಂಧಿತ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಗುರುತಿಸುವ ಸಲುವಾಗಿ ಕರ್ನಾಟಕ ನೀರಾವರಿ ನಿಗಮ ನಿಯಮಿತವು ನೇಮಕ ಮಾಡಿರುವಂತಹ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ತನ್ನ ವರದಿಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ಸಲ್ಲಿಸಿರುವುದು. ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಕಂಪನಿಗೆ ಆಸ್ತಿ ಮತ್ತು ಹೊಣೆಗಾರಿಕೆಗಳ ವರ್ಗಾವಣೆಯ ಪ್ರಕ್ರಿಯೆಗೆ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದಗಳು 230–232ರ ಅಡಿಯಲ್ಲಿ ಭಾರತ ಸರ್ಕಾರದ ಅನುಮೋದನೆಯ ಅಗತ್ಯತೆ ಇರುತ್ತದೆ. ಈ ನಿಟ್ಟಿನಲ್ಲಿ ವ್ಯವಸ್ಥೆಯ ಯೋಜನೆಯು ಅಂತಿಮ ರೂಪಕ್ಕೆ ಬಂದ ಕೂಡಲೇ ನಿಮ್ಮ ಕಂಪನಿ ಹಾಗೂ ಕರ್ನಾಟಕ ನೀರಾವರಿ ನಿಗಮ ನಿಯಮಿತವು ಕೇಂದ್ರ ಸರ್ಕಾರಕ್ಕೆ ಜಂಟಿಯಾಗಿ ಅರ್ಜಿಯನ್ನು ಸಲ್ಲಿಸುವುದು.

ಯೋಜನೆಗಳ ವೆಚ್ಚ ಭರಿಸುವಿಕೆ

19. ಸರ್ಕಾರವು 2017–18 ಹಣಕಾಸು ಸಾಲಿನಲ್ಲಿ ಆಯವ್ಯಯ ಸಂಪನ್ಮೂಲಗಳಿಂದ ರೂ.1,413.59 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಿದ್ದು ಹಾಗೂ ರೂ.735.00 ಕೋಟಿ ಮೊತ್ತವನ್ನು ಕರ್ನಾಟಕ ಸರ್ಕಾರವು ಖಾತರಿಯನ್ನು ನೀಡಿರುವ ಅವಧಿ ಸಾಲಗಳ ಮೂಲಕ ಕ್ರೋಢೀಕರಿಸಲಾಗಿರುವುದು. ನಿಮ್ಮ ಕಂಪನಿಯು ಪ್ರಸಕ್ತ ಸಾಲಿನಲ್ಲಿ ಬಂಡವಾಳ ವೆಚ್ಚಗಳ ಕಡೆಗೆ ರೂ.1,341.26 ಕೋಟಿ ಮೊತ್ತದಷ್ಟು ವೆಚ್ಚಗಳನ್ನು ಭರಿಸಿರುವುದು. ಕರ್ನಾಟಕ ಸರ್ಕಾರವು ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ರೂ.2527.84 ಕೋಟಿ ಅನುದಾನದೊಂದಿಗೆ ರೂ. 735.00 ಕೋಟಿ ಮೊತ್ತದ ಮಾರುಕಟ್ಟೆ ಸಾಲವನ್ನು (ಕರ್ನಾಟಕ ಸರ್ಕಾರದ ಖಾತರಿ ಆಧಾರದ ಮೇಲೆ) ಹಂಚಿಕೆ ಮಾಡಿರುತ್ತದೆ. ನಿಮ್ಮ ಕಂಪನಿಯು ಪ್ರಸಕ್ತ ಹಣಕಾಸು ಸಾಲಿಗೆ ರೂ.2,527.84 ಕೋಟಿ ಮೊತ್ತಕ್ಕೆ ವಾರ್ಷಿಕ ಕಾಮಗಾರಿಗಳ ಕಾರ್ಯಕ್ರಮವನ್ನು ರೂಪಿಸಿಕೊಂಡಿರುವುದು.

ಲೆಕ್ಕಪತ್ರಗಳು:

20. ವಹಿಸಿಕೊಡಲಾಗಿರುವಂತಹ ಯೋಜನೆಗಳು ಅವೆಂದರೆ, ಭದ್ರಾ ಮೇಲ್ದಂಡೆ ಯೋಜನೆ, ಗಾಯತ್ರಿ ಜಲಾಶಯ ಮತ್ತು ವಾಣಿವಿಲಾಸ ಸಾಗರ ಯೋಜನೆಗಳ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ಇನ್ನೂ ವರ್ಗಾಯಿಸಬೇಕಾಗಿದೆ. ಈ ಚಟುವಟಿಕೆಯು ಸಧ್ಯದಲ್ಲಿಯೇ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಹಾಗೂ ನಿಮ್ಮ ಕಂಪನಿಯ ಪ್ರಸಕ್ತ ಹಣಕಾಸು ಸಾಲಿನ ಹಣಕಾಸು ತ:ಖ್ತೆಗಳಲ್ಲಿ ಅವುಗಳನ್ನು ತೋರಿಸಲಾಗುವುದು

ಮಾರ್ಚ್ 31, 2018ರಲ್ಲಿದ್ದಂತೆ ಕಾರ್ಯಾಚರಣೆಗಳ ಫಲಿತಾಂಶ:

ಕ್ರಮ ಸಂಖ್ಯೆ	ವಿವರಗಳು	ಮೊತ್ತ (ಕೋಟಿ ರೂ.ಗಳಲ್ಲಿ)
1	ಸವಕಳಿ ಮತ್ತು ತೆರಿಗೆಗಳಿಗೆ ಮುಂಚಿನ ಲಾಭ / ನಷ್ಟ (–)	(25.13)
2	ಸವಕಳಿ	1.25
3	ಸವಕಳಿಯ ನಂತರದ ನಷ್ಟ	(26.38)
4	ತೆರಿಗೆ ವೆಚ್ಚಗಳು (ಮುಂದೂಡಲ್ಪಟ್ಟಿರುವ ತೆರಿಗೆ ಪಾವತಿಗಳು)	(0.42)
5	ಸವಕಳಿ ಮತ್ತು ತೆರಿಗೆಗಳ ನಂತರದ ನಷ್ಟ	(25.96)

ಮಾರ್ಚ್ 31, 2018ರಲ್ಲಿದ್ದಂತೆ ಹಣಕಾಸು ಚಟುವಟಿಕೆಗಳಿಗೆ ಸಂಬಂಧಿತ ಪ್ರಮುಖ್ಯಾಂಶಗಳು:

ಕ್ರಮ ಸಂಖ್ಯೆ	ವಿವರಗಳು	ಮೊತ್ತ (ಕೋಟಿ ರೂ.ಗಳಲ್ಲಿ)
1	ನೀಡಲಾಗಿರುವ ಹಾಗೂ ಸಂಪೂರ್ಣವಾಗಿ ಪಾವತಿಸಲ್ಪಟ್ಟಿರುವ ಈಕ್ವಿಟಿ ಷೇರು ಬಂಡವಾಳ	1255.87
2	ಹಂಚಿಕೆ ಮಾಡುವುದು ಬಾಕಿಯಿರುವ ಷೇರು ಅರ್ಜಿಗಳ ಮೊತ್ತ	323.19
3	ಮೀಸಲಿರಿಸಿರುವಿಕೆಗಳು ಮತ್ತು ಮಿಗುತಾಯಗಳು	(76.43)
4	ಸಾಲಗಳ ಮೂಲಕ ಕ್ರೋಡೀಕರಿಸಲಾಗಿರುವ ಹಣಕಾಸು (ದೀರ್ಘಾವಧಿ)	497.14
5	ಚಾಲ್ತಿಯೇತರ ಇತರೆ ಹಣಕಾಸು ಸಂಬಂಧಿತ ಜವಾಬ್ದಾರಿಗಳು	495.66
6	ಚಾಲ್ತಿ – ಇತರೆ ಹಣಕಾಸು ಸಂಬಂಧಿತ ಜವಾಬ್ದಾರಿಗಳು	319.27
7	ವ್ಯಾಪಾರ ಸಂದಾಯಗಳಿಗೆ	9.54
8	ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಸೇರಿದಂತೆ ಆಸ್ತಿಗಳು ಸ್ಥಾವರಗಳು/ ಯಂತ್ರೋಪಕರಣಗಳು ಮತ್ತು ಉಪಕರಣಗಳು	1,953.19
9	ಹಣಕಾಸು ಸಂಬಂಧಿತ ಆಸ್ತಿಗಳು (ಚಾಲ್ತಿ ಹಾಗೂ ಚಾಲ್ತಿಯೇತರ)	843.69
10	ಇತರೆ ಚಾಲ್ತಿ ಹಾಗೂ ಚಾಲ್ತಿಯೇತರ ಆಸ್ತಿಗಳು	29.15
11	ಕಾರ್ಯಾಚರಣೆಗಳಿಂದ ವರಮಾನ	–
12	ಇತರೆ ವರಮಾನ	184.76
13	ಒಟ್ಟು ವರಮಾನ (ಎ)	184.76
14	ಉದ್ಯೋಗಿಗಳಿಗೆ ಸಂಬಳ ಮತ್ತು ಇತರೆ ಪ್ರಯೋಜನಗಳು (ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ) ರೂ.21.52 ಕೋಟಿ ಮೊತ್ತದಷ್ಟು ಹೊಂದಾಣಿಕೆ ಮಾಡಿದನಂತರ)	8.12
15	ಹಣಕಾಸು/ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳು	28.09
16	ಕರ್ನಾಟಕ ಸರ್ಕಾರದ ಯೋಜನೆಗಳ ಮೇಲಿನ ವೆಚ್ಚ	131.55
17	ಇತರೆ ವೆಚ್ಚಗಳು (ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ) ರೂ.6.11 ಕೋಟಿ ಮೊತ್ತದಷ್ಟು ಹೊಂದಾಣಿಕೆ ಮಾಡಿದನಂತರ)	42.12
18	ಸವಕಳಿ	1.25
19	ಮುಂದೂಡಲ್ಪಟ್ಟಿರುವ ತೆರಿಗೆ ಪಾವತಿಗಳು	(0.42)
	ಒಟ್ಟು ವೆಚ್ಚ (ಬಿ)	211.14
	ನಿವ್ವಳ ನಷ್ಟ (ಎ – ಬಿ)	**(25.96)**

ಟಿಪ್ಪಣಿ : ಮೇಲಿನ ಅಂಕಿಸಂಖ್ಯೆಗಳನ್ನು ಕಂಪನಿಯ ಹಣಕಾಸು ತ:ಖ್ತೆಗಳಿಂದ ಪಡೆಯಲಾಗಿರುವುದು.

ನಿರ್ದೇಶಕರುಗಳ ಮಂಡಳಿ:

21. ಈ ವರದಿಯ ದಿನಾಂಕದಂದು ನಿರ್ದೇಶಕರುಗಳ ಮಂಡಳಿಯಲ್ಲಿ ಈ ಕೆಳಗಿನ ಬದಲಾವಣೆಗಳು ಆಗಿರುವವು :

ಕರ್ನಾಟಕ ಸರ್ಕಾರವು ಶ್ರೀ ಸಿದ್ದರಾಮಯ್ಯನವರ ಬದಲಾಗಿ ಶ್ರೀ ಎಚ್. ಡಿ. ಕುಮಾರಸ್ವಾಮಿ, ಗೌರವಾನ್ವಿತ ಮುಖ್ಯ ಮಂತ್ರಿಯವರು, ಇವರನ್ನು ಕಂಪನಿಯ ಅಧ್ಯಕ್ಷರನ್ನಾಗಿ ದಿನಾಂಕ 04–06–2018 ರಿಂದ ಜಾರಿಗೆ ಬಂದಂತೆ ನೇಮಕ ಮಾಡಿರುವುದು. ಶ್ರೀ ಸಿದ್ದರಾಮಯ್ಯನವರು ಕಂಪನಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸಲ್ಲಿಸಿದ ಅತ್ಯಮೂಲ್ಯ ಸೇವೆಗಳನ್ನು ನಿಮ್ಮ ನಿರ್ದೇಶಕರುಗಳು ಈ ಮೂಲಕ ಸ್ಮರಿಸುತ್ತಿರುವರು.

ಕರ್ನಾಟಕ ಸರ್ಕಾರವು ಶ್ರೀ ಎಂ.ಬಿ. ಪಾಟೀಲ್, ಇವರ ಬದಲಾಗಿ ಶ್ರೀ ಡಿ. ಕೆ. ಶಿವಕುಮಾರ್, ಗೌರವಾನ್ವಿತ ಜಲಸಂಪನ್ಮೂಲ ಸಚಿವರು ಇವರನ್ನು ಕಂಪನಿಯ ಉಪಾಧ್ಯಕ್ಷರನ್ನಾಗಿ ದಿನಾಂಕ 03–07–2018ರಿಂದ ಜಾರಿಗೆ ಬಂದಂತೆ ನೇಮಕ ಮಾಡಿರುವುದು. ಶ್ರೀ ಎಂ.ಬಿ. ಪಾಟೀಲ್, ಇವರು ಕಂಪನಿಯ ಉಪಾಧ್ಯಕ್ಷರಾಗಿದ್ದ ಅವಧಿಯಲ್ಲಿ ಸಲ್ಲಿಸಿದ ಅತ್ಯಮೂಲ್ಯ ಸೇವೆಗಳನ್ನು ನಿಮ್ಮ ನಿರ್ದೇಶಕರುಗಳು ಈ ಮೂಲಕ ಸ್ಮರಿಸುತ್ತಿರುವರು.

ಕರ್ನಾಟಕ ಸರ್ಕಾರವು ಶ್ರೀ ಎಲ್.ಕೆ. ಅತೀಕ್, ಇವರ ಬದಲಾಗಿ ಶ್ರೀ ಲಕ್ಷ್ಮೀನಾರಾಯಣ, ಇವರನ್ನು ಕಂಪನಿಯ ನಿರ್ದೇಶಕರನ್ನಾಗಿ ದಿನಾಂಕ 04–06–2018ರಿಂದ ಜಾರಿಗೆ ಬಂದಂತೆ ನೇಮಕ ಮಾಡಿರುವುದು. ಶ್ರೀ ಎಲ್. ಕೆ. ಅತೀಕ್, ಇವರು ಕಂಪನಿಯ ನಿರ್ದೇಶಕರಾಗಿದ್ದ ಅವಧಿಯಲ್ಲಿ ಸಲ್ಲಿಸಿದ ಅತ್ಯಮೂಲ್ಯ ಸೇವೆಗಳನ್ನು ನಿಮ್ಮ ನಿರ್ದೇಶಕರುಗಳು ಈ ಮೂಲಕ ಸ್ಮರಿಸುತ್ತಿರುವರು.

ಕರ್ನಾಟಕ ಸರ್ಕಾರವು ಶ್ರೀಮತಿ ರತ್ನಪ್ರಭಾ ಇವರ ಬದಲಾಗಿ ಶ್ರೀ ವಿಜಯಭಾಸ್ಕರ್, ಇವರನ್ನು ಕಂಪನಿಯ ನಿರ್ದೇಶಕರನ್ನಾಗಿ ದಿನಾಂಕ 18–07–2018ರಿಂದ ಜಾರಿಗೆ ಬಂದಂತೆ ನೇಮಕ ಮಾಡಿರುವುದು. ಶ್ರೀಮತಿ ರತ್ನಪ್ರಭಾ, ಇವರು ಕಂಪನಿಯ ನಿರ್ದೇಶಕರಾಗಿದ್ದ ಅವಧಿಯಲ್ಲಿ ಸಲ್ಲಿಸಿದ ಅತ್ಯಮೂಲ್ಯ ಸೇವೆಗಳನ್ನು ನಿಮ್ಮ ನಿರ್ದೇಶಕರುಗಳು ಈ ಮೂಲಕ ಸ್ಮರಿಸುತ್ತಿರುವರು.

ಶ್ರೀ ಬಿ.ಜಿ. ಗುರುಪಾದಸ್ವಾಮಿ, ಇವರು ಜಲ ಸಂಪನ್ಮೂಲ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಹುದ್ದೆಯಿಂದ ವರ್ಗಾವಣೆಗೊಂಡಿರುವ ಪರಿಣಾಮವಾಗಿ ದಿನಾಂಕ 14–06–2018 ರಿಂದ ಜಾರಿಗೆ ಬಂದಂತೆ ಅವರು ಹೊಂದಿದ್ದ ಕಂಪನಿಯ ನಿರ್ದೇಶಕರ ಹುದ್ದೆಯು ಮುಕ್ತಾಯಗೊಂಡಿರುವುದು. ಶ್ರೀ ಬಿ.ಜಿ. ಗುರುಪಾದಸ್ವಾಮಿ, ಇವರು ಕಂಪನಿಯ ನಿರ್ದೇಶಕರಾಗಿದ್ದ ಅವಧಿಯಲ್ಲಿ ಸಲ್ಲಿಸಿದ ಅತ್ಯಮೂಲ್ಯ ಸೇವೆಗಳನ್ನು ನಿಮ್ಮ ನಿರ್ದೇಶಕರುಗಳು ಈ ಮೂಲಕ ಸ್ಮರಿಸುತ್ತಿರುವರು.

ಕರ್ನಾಟಕ ಸರ್ಕಾರವು ಶ್ರೀ ಲಕ್ಷ್ಮೀನಾರಾಯಣ ಇವರ ಬದಲಾಗಿ ಶ್ರೀ ಇ.ವಿ. ರಮಣ ರೆಡ್ಡಿ, ಇವರನ್ನು ಕಂಪನಿಯ ನಿರ್ದೇಶಕರನ್ನಾಗಿ ದಿನಾಂಕ 18–07–2018ರಿಂದ ಜಾರಿಗೆ ಬಂದಂತೆ ನೇಮಕ ಮಾಡಿರುವುದು. ಶ್ರೀ ಲಕ್ಷ್ಮೀನಾರಾಯಣ, ಇವರು ಕಂಪನಿಯ ನಿರ್ದೇಶಕರಾಗಿದ್ದ ಅವಧಿಯಲ್ಲಿ ಸಲ್ಲಿಸಿದ ಅತ್ಯಮೂಲ್ಯ ಸೇವೆಗಳನ್ನು ನಿಮ್ಮ ನಿರ್ದೇಶಕರುಗಳು ಈ ಮೂಲಕ ಸ್ಮರಿಸುತ್ತಿರುವರು.

ಕರ್ನಾಟಕ ಸರ್ಕಾರವು ಶ್ರೀಮತಿ ಶಾಲಿನಿ ರಜನೀಶ್, ಇವರನ್ನು ಕಂಪನಿಯ ಓರ್ವ ಮಹಿಳಾ ನಿರ್ದೇಶಕರನ್ನಾಗಿ ದಿನಾಂಕ 06–08–2018ರಿಂದ ಜಾರಿಗೆ ಬಂದಂತೆ ನೇಮಕ ಮಾಡಿರುವುದು.

ಕರ್ನಾಟಕ ಸರ್ಕಾರವು ಈ ಕೆಳಗಿನವರುಗಳನ್ನು ಸ್ವತಂತ್ರ ನಿರ್ದೇಶಕರುಗಳನ್ನಾಗಿ ದಿನಾಂಕ 18–08–2018ರಿಂದ ಜಾರಿಗೆ ಬಂದಂತೆ ನೇಮಕ ಮಾಡಿರುವುದು : ದಿವಂಗತ ಶ್ರೀ ಜೆ.ಆರ್. ಕೆ. ಕರಡಿ, ಇವರ ಬದಲಾಗಿ ಶ್ರೀ ಆರ್. ಚಲುವರಾಜು, ಮುಖ್ಯ ಇಂಜಿನಿಯರ್‌ರವರು (ನಿವೃತ್ತ).

ಡಾ. ವಿ.ಪಿ. ಹುಗ್ಗಿ, ಇವರ ಬದಲಾಗಿ – ಪ್ರೊ. ಟಿ. ಗಂಗಾಧರಯ್ಯ, ಪ್ರಾಧ್ಯಾಪಕರು, ಸಿದ್ದಗಂಗಾ ತಾಂತ್ರಿಕ ವಿದ್ಯಾಲಯ, ತುಮಕೂರು. ಶ್ರೀಯುತರುಗಳಾದ ಜೆ.ಆರ್.ಕೆ. ಕರಡಿ ಹಾಗೂ ವಿ.ಪಿ. ಹುಗ್ಗಿ ಇವರುಗಳು ಕಂಪನಿಯ ಸ್ವತಂತ್ರ ನಿರ್ದೇಶಕರುಗಳಾಗಿದ್ದ ಅವಧಿಯಲ್ಲಿ ಅವರು ಸಲ್ಲಿಸಿದ ಅತ್ಯಮೂಲ್ಯ ಸೇವೆಗಳನ್ನು ನಿಮ್ಮ ನಿರ್ದೇಶಕರುಗಳು ಈ ಮೂಲಕ ಸ್ಮರಿಸುತ್ತಿರುವರು.

ಪ್ರಮುಖ ವ್ಯವಸ್ಥಾಪನಾ ಸಿಬ್ಬಂದಿ:

22. ಶ್ರೀ. ಕೆ. ಜೈಪ್ರಕಾಶ್ – ವ್ಯವಸ್ಥಾಪಕ ನಿರ್ದೇಶಕರು, ಶ್ರೀ. ಜಿ.ಎಸ್. ಪ್ರಕಾಶ್ – ಕಂಪನಿ ಕಾರ್ಯದರ್ಶಿಯವರು ಹಾಗೂ ಶ್ರೀಮತಿ. ಎ.ವಿ. ನಾಗವೀಣಾ – ಮುಖ್ಯ ಹಣಕಾಸು ಅಧಿಕಾರಿಯವರು ಇವರುಗಳು ಕಂಪನಿಗಳ ಅಧಿನಿಯಮ, 2013ರ ಅನುವುಗಳು ಹಾಗೂ ಅವುಗಳ ಅಡಿಯಲ್ಲಿ ರೂಪಿಸಿರುವಂತಹ ನಿಯಮಗಳ ಅನುಸಾರ ಕಂಪನಿಯ ಪ್ರಮುಖ ವ್ಯವಸ್ಥಾಪನಾ ಸಿಬ್ಬಂದಿಯಾಗಿರುತ್ತಾರೆ.

ನಡೆಸಲಾಗಿರುವಂತಹ ನಿರ್ದೇಶಕರುಗಳ ಮಂಡಳಿಯ \ಸಭೆಯ ಸಂಖ್ಯೆ:

23. ನಿರ್ದೇಶಕರುಗಳ ಮಂಡಳಿಯು 2017–18ರ ಹಣಕಾಸು ಸಾಲಿನಲ್ಲಿ ಮೇ 10 2017, ಅಕ್ಟೋಬರ್ 28 2017, ಡಿಸೆಂಬರ್ 29 2017, ಜನವರಿ 27 2018 ಹಾಗೂ ಮಾರ್ಚ್ 02 2018, ಈ ರೀತಿಯಾಗಿ ಐದು ಬಾರಿ ಸಭೆ ಸೇರಿದ್ದಿತು.

ಲೆಕ್ಕಪರಿಶೋಧನಾ ಸಮಿತಿ:

24. ಲೆಕ್ಕಪರಿಶೋಧನಾ ಸಮಿತಿಯು ಸ್ವತಂತ್ರ ನಿರ್ದೇಶಕರುಗಳ ಬಹುಸಂಖ್ಯೆಯೊಂದಿಗೆ ಐದು ನಿರ್ದೇಶಕರುಗಳನ್ನು ಹೊಂದಿರುತ್ತದೆ. ಈ ಸಮಿತಿಯ ರಚನೆಯು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 177ರ ಅಗತ್ಯತೆಗಳನ್ನು ಪೂರೈಸುತ್ತದೆ.

25. ಸಮಿತಿಯು 2017–18 ಹಣಕಾಸು ಸಾಲಿನಲ್ಲಿ ಜೂನ್ 06, 2017 ಹಾಗೂ ಅಕ್ಟೋಬರ್ 26, 2017 ಈ ರೀತಿಯಾಗಿ ಎರಡು ಬಾರಿ ಸಭೆ ಸೇರಿದ್ದಿತು. ಸಮಿತಿಯ ವಿವರಗಳು ಈ ಕೆಳಗಿನಂತಿರುತ್ತವೆ:

ಕ್ರಮ ಸಂಖ್ಯೆ	ಹೆಸರು	ಹುದ್ದೆ
1	ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಜಲ ಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು
2	ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ	ಸದಸ್ಯರು
3	ಶ್ರೀ ಡಿ.ಎನ್. ದೇಸಾಯಿ, ಸ್ವತಂತ್ರ ನಿರ್ದೇಶಕರು	ಸದಸ್ಯರು
4	ಶ್ರೀ ಆರ್. ಚೆಲುವರಾಜು, ಸ್ವತಂತ್ರ ನಿರ್ದೇಶಕರು	ಸದಸ್ಯರು
5	ಪ್ರೊ. ಟಿ. ಗಂಗಾಧರಯ್ಯ, ಸ್ವತಂತ್ರ ನಿರ್ದೇಶಕರು	ಸದಸ್ಯರು

ನಾಮನಿರ್ದೇಶನ ಮತ್ತು ಸಂಭಾವನೆ ಕಾರ್ಯನೀತಿ:

26. ನಿರ್ದೇಶಕರುಗಳ ಮಂಡಳಿಯು, ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಶಿಫಾರಸಿನ ಆಧಾರದ ಮೇರೆಗೆ, ಹಿರಿಯ ವ್ಯವಸ್ಥಾಪನಾ ಸಿಬ್ಬಂದಿಯ ಆಯ್ಕೆ ಹಾಗೂ ನೇಮಕಾತಿಗಾಗಿ ಕಾರ್ಯನೀತಿಯನ್ನು ರೂಪಿಸುತ್ತದೆ ಹಾಗೂ ಅವರುಗಳ ಸಂಭವನೆಗಳನ್ನು ನಿಗದಿಪಡಿಸುತ್ತದೆ. ಅನುಮೋದಿತ ನಾಮನಿರ್ದೇಶನ ಮತ್ತು ಸಂಭಾವನೆ ಕಾರ್ಯನೀತಿಯನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ.

ನಿರ್ದೇಶಕರುಗಳ ಜವಾಬ್ದಾರಿ ತ:ಖ್ತೆ:

27. ನಿರ್ದೇಶಕರುಗಳ ಜವಾಬ್ದಾರಿ ತ:ಖ್ತೆಗೆ ಸಂಬಂಧಿಸಿದಂತೆ, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 134ರ ಅಡಿಯಲ್ಲಿನ ಉಪ–ಪರಿಚ್ಛೇದ (3) ಅಡಿಯಲ್ಲಿನ ಷರತ್ತು (ಸಿ)ಯ ಅನುಸರಣೆಯಂತೆ, ನಿಮ್ಮ ನಿರ್ದೇಶಕರುಗಳು ಈ ಕೆಳಗಿನಂತೆ ತಿಳಿಸುತ್ತಿರುವರು :

ಎ) ಮಾರ್ಚ್ 31, 2018ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿಗೆ ವಾರ್ಷಿಕ ಲೆಕ್ಕಪತ್ರಗಳ ತಯಾರಿಕೆಯಲ್ಲಿ, ವಿಷಾಯಕ ಅಡ್ಡ ಸರಿಕೆಗಳಿಗೆ ಸಂಬಂಧಿಸಿದಂತೆ ಸಮರ್ಪಕ ವಿವರಣೆಗಳೊಂದಿಗೆ ಅನ್ವಯಗೊಳ್ಳುವಂತಹ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡಗಳನ್ನು ಅನುಸರಿಸಲಾಗಿರುವುದು;

ಬಿ) ನಿಮ್ಮ ನಿರ್ದೇಶಕರುಗಳು, ಹಣಕಾಸು ವರ್ಷದ ಅಂತ್ಯದಲ್ಲಿ ಕಂಪನಿಯ ವ್ಯವಹಾರಗಳ ಹಾಗೂ ಆ ಅವಧಿಗೆ ಕಂಪನಿಯ ಲಾಭ ಮತ್ತು ನಷ್ಟದ ಯಾಥಾರ್ಥತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತವಾದಂತಹ ಅಭಿಪ್ರಾಯವನ್ನು ನೀಡುವಂತಹ ರೀತಿಯಲ್ಲಿ ನ್ಯಾಯಸಮ್ಮತವಾದ ಹಾಗೂ ವಿವೇಚನೆಯಿಂದ ಕೂಡಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳನ್ನು ಆಯ್ಕೆ ಮಾಡಿಕೊಂಡಿರುವರು ಹಾಗೂ ಅದನ್ನು ಏಕಪ್ರಕಾರವಾಗಿ ಅನ್ವಯಿಸಿರುವರು ಹಾಗೂ ತೀರ್ಮಾನಗಳನ್ನು ಕೈಗೊಂಡಿರುವರು ಮತ್ತು ಮೌಲ್ಯಮಾಪನಗಳನ್ನು ಮಾಡಿರುವರು.

ಸಿ) ನಿಮ್ಮ ನಿರ್ದೇಶಕರುಗಳು, ಕಂಪನಿಯ ಆಸ್ತಿಗಳ ಸಂರಕ್ಷಣೆಗಾಗಿ ಹಾಗೂ ವಂಚನೆ ಮತ್ತಿತರ ನಿಯಮಬಾಹಿರತೆಗಳನ್ನು ತಡೆಯುವ ಮತ್ತು ಪತ್ತೆಹಚ್ಚುವ ಸಲುವಾಗಿ ಕಂಪನಿಗಳ ಅಧಿನಿಯಮದ ಅನುವುಗಳ ಅನುಸಾರ ಸಮರ್ಪಕ ಲೆಕ್ಕಪತ್ರಗಳನ್ನು ನಿರ್ವಹಿಸುವ ಸಲುವಾಗಿ ಸೂಕ್ತ ಹಾಗೂ ಸಮರ್ಪಕ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿರುವರು.

ಡಿ) ನಿಮ್ಮ ನಿರ್ದೇಶಕರುಗಳು, ಕಂಪನಿಯು ನಡೆಸಿಕೊಂಡು ಹೋಗುತ್ತಿರುವ ವ್ಯವಹಾರಗಳ ಆಧಾರದ ಮೇರೆಗೆ ವಾರ್ಷಿಕ ಹಣಕಾಸು ತ:ಖ್ತೆಗಳನ್ನು ತಯಾರಿಸಿರುವರು.

ಇ) ಕಂಪನಿಗೆ ಅನ್ವಯಗೊಳ್ಳುವಂತಹ ಎಲ್ಲಾ ಕಾನೂನುಗಳ/ ಅಧಿನಿಯಮ/ನಿಯಮಗಳ ಅನುವುಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ನಿರ್ದೇಶಕರುಗಳು ಸಮರ್ಪಕ ವ್ಯವಸ್ಥೆಗಳನ್ನು ರೂಪಿಸಿರುವರು ಮತ್ತು ಅಂತಹ ವ್ಯವಸ್ಥೆಗಳು ಸಮರ್ಪಕವಾಗಿದ್ದವು ಹಾಗೂ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಲ್ಲಿದ್ದವು.

28 ಕಾರ್ಯದರ್ಶಿಯ ಮಾನದಂಡಗಳು:

ಅನ್ವಯಗೊಳ್ಳುವಂತಹ ಎಲ್ಲಾ ಕಾನೂನುಗಳ/ ಅಧಿನಿಯಮ/ನಿಯಮಗಳ ಅನುವುಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ನಿರ್ದೇಶಕರುಗಳು ಸಮರ್ಪಕ ವ್ಯವಸ್ಥೆಗಳನ್ನು ರೂಪಿಸಿರುವರು ಮತ್ತು ಅಂತಹ ವ್ಯವಸ್ಥೆಗಳು ಸಮರ್ಪಕವಾಗಿರುತ್ತವೆ ಹಾಗೂ ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುತ್ತಿರುವವು.

29. ಸ್ವತಂತ್ರ ನಿರ್ದೇಶಕರುಗಳಿಂದ ಘೋಷಣೆ:

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 149 (6) ರಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಸ್ವಾತಂತ್ರ್ಯತೆಯ ಮಾನದಂಡಗಳನ್ನು ಆತನು/ಆಕೆಯು ಪೂರೈಸುವರು ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕಂಪನಿಯು, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 149(7)ರ ಅಡಿಯಲ್ಲಿ ಸ್ವತಂತ್ರ ನಿರ್ದೇಶಕರುಗಳಿಂದ ಅಗತ್ಯ ಘೋಷಣಾ ಪತ್ರವನ್ನು ಪಡೆದುಕೊಂಡಿರುವುದು.

ವಾರ್ಷಿಕ ಸಲ್ಲಿಕೆ:

30) ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 134 (3) (ಎ) ಅನುಸಾರ ವಾರ್ಷಿಕ ಸಲ್ಲಿಕೆಯ ಪ್ರತಿಯನ್ನು ನಿಗಮದ ಅಂತರ್ಜಾಲ ಪುಟವಾದ www.vjnl.in ರಲ್ಲಿ ಪ್ರಕಟಿಸಲಾಗಿದೆ.

ಉದ್ಯೋಗಿಗಳ ವಿವರಗಳು:

31. ಕಂಪನಿಗಳ (ವ್ಯವಸ್ಥಾಪನಾ ಅಧಿಕಾರಿಗಳ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ಅಧಿನಿಯಮ 5(2) ಮತ್ತು (3) ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದಗಳು 197 ಮತ್ತು 134 (3) (ಕ್ಯೂ)ಗಳ ಅನುವುಗಳ ಅಗತ್ಯತೆಯಂತೆ ಬಹಿರಂಗಪಡಿಸಬೇಕಾಗಿರುವವುಗಳು–ಯಾವುದೂ ಇರುವುದಿಲ್ಲ.

ಸಾಲಗಳು, ಖಾತರಿಗಳು ಅಥವಾ ಹೂಡಿಕೆಗಳ ವಿವರಗಳು:

32. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 186ರ ಅಡಿಯಲ್ಲಿ ವ್ಯಾಪಿಸಿರುವಂತಹ ಸಾಲಗಳು, ಖಾತರಿಗಳು ಮತ್ತು ಹೂಡಿಕೆಗಳು – ಯಾವುದೂ ಇರುವುದಿಲ್ಲ–.

ಸಂಬಂಧಿತ ತಂಡಗಳ ಜೊತೆಯಲ್ಲಿ ಮಾಡಿಕೊಳ್ಳಲಾಗಿರುವಂತಹ ಗುತ್ತಿಗೆಗಳು ಅಥವಾ ವ್ಯವಸ್ಥೆಗಳ ವಿವರಗಳು :

33. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 188 (1)ರಲ್ಲಿ ಉಲ್ಲೇಖಿಸಿರುವಂತೆ ನಿರ್ದಿಷ್ಟ ನಮೂನೆ ಎಒಸಿ–2ರಲ್ಲಿನ ಸಂಬಂಧಿತ ತಂಡಗಳ ಜೊತೆಯಲ್ಲಿನ ಗುತ್ತಿಗೆಗಳು ಅಥವಾ ವ್ಯವಸ್ಥೆಗಳ ವಿವರಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

ಉಪ/ ಜಂಟಿ/ ಸಾಹೋದ್ಯಮ/ ಸಹಭಾಗಿ ಕಂಪನಿಗಳ ವಿವರಗಳು:

34. ಕಂಪನಿಯು ಯಾವುದೇ ಉಪ/ಜಂಟಿ–ಸಾಹಸೋದ್ಯಮ ಅಥವಾ ಸಹಭಾಗಿ ಕಂಪನಿಗಳನ್ನು ಹೊಂದಿರುವುದಿಲ್ಲ. ಆದ್ದರಿಂದ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129 ಉಪ–ಪರಿಚ್ಛೇದ (3)ರ ಅನುಸರಣೆಯಂತೆ ಈ ನಿಟ್ಟಿನಲ್ಲಿ ಬಹಿರಂಗಪಡಿಸಬೇಕಾಗಿರುವವುಗಳು – ಯಾವುದೂ ಇರುವುದಿಲ್ಲ.

ಶಾಸನಬದ್ಧ ಲೆಕ್ಕಪರಿಶೋಧಕರು ;

35. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಮೆ. ಚನ್ನಬಸಪ್ಪ ಅಂಡ್ ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು, ಇವರನ್ನು 2017–18 ಹಣಕಾಸು ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿರುವರು.

ಕಾರ್ಯದರ್ಶಿಯ ಲೆಕ್ಕಪರಿಶೋಧಕರು :

36. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 204ರ ಹಾಗೂ ಕಂಪನಿಗಳ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಬಳ/ಸಂಭಾವನೆ) ನಿಯಮಗಳು, 2014ರ ಅನುವುಗಳ ಅನುಸರಣೆಯಂತೆ, ಕಂಪನಿಯು ಶ್ರೀ. ಕೆ.ಎನ್. ನಾಗೇಶ ರಾವ್, ಕಾರ್ಯನಿರತ ಕಂಪನಿ ಕಾರ್ಯದರ್ಶಿ, ಬೆಂಗಳೂರು, ಇವರನ್ನು ಕಂಪನಿಯ ಕಾರ್ಯದರ್ಶಿಯ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಲಾಗಿದೆ. ಕಾರ್ಯದರ್ಶಿಯ ಲೆಕ್ಕಪರಿಶೋಧನಾ ವರದಿಯನ್ನು ಅನುಬಂಧ–IVರಲ್ಲಿ ಲಗತ್ತಿಸಲಾಗಿದೆ.

ಆಂತರಿಕ ಲೆಕ್ಕಪರಿಶೋಧಕರು:

37. ಪ್ರಸಕ್ತ ವರದಿಯ ಅಡಿಯಲ್ಲಿನ ಸಾಲಿನಲ್ಲಿ ಮೆ. ಮಣಿಯನ್ ಅಂಡ್ ರಾವ್, ಇವರನ್ನು ಆಂತರಿಕ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಕಂಪನಿಯು ಕಾರ್ಯಾಚರಣೆಗಳ ಮೇಲಿನ ನಿಯಂತ್ರಣಗಳನ್ನು ಉತ್ತಮಗೊಳಿಸುವುದಕ್ಕಾಗಿ ಆಂತರಿಕ ಲೆಕ್ಕಪರಿಶೋಧಕರ ಸಲಹೆಗಳನ್ನು ಮತ್ತು ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸುವುದನ್ನು ಮುಂದುವರೆಸಿಕೊಂಡು ಹೋಗಲಾಗಿದೆ. ಆಂತರಿಕ ಲೆಕ್ಕಪರಿಶೋಧನಾ ವರದಿಗಳನ್ನು ವ್ಯವಸ್ಥಾಪನೆಯು ಚರ್ಚಿಸುವುದು ಹಾಗೂ ಆಂತರಿಕ ಲೆಕ್ಕಪರಿಶೋಧಕರು ಗಮನಿಸಿರುವ ಪ್ರಮುಖ ಅಂಶಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ನಿಯತಕಾಲಿಕವಾಗಿ ವರದಿ ಮಾಡುವುದು ಮತ್ತು ಲೆಕ್ಕಪರಿಶೋಧನಾ ಸಮಿತಿಯಲ್ಲಿಯೂ ಚರ್ಚಿಸಲಾಗುವುದು.

ಲೆಕ್ಕಪರಿಶೋಧನಾ ವರದಿಯಲ್ಲಿ ಗಮನಿಸಲಾಗಿರುವ ಅಂಶಗಳಿಗೆ ಉತ್ತರಗಳು:

38. ಶಾಸನಬದ್ಧ ಲೆಕ್ಕಪರಿಶೋಧಕರು 2017–18 ಸಾಲಿನ ಲೆಕ್ಕಪತ್ರಗಳ ಮೇಲೆ ತಮ್ಮ ವರದಿಯಲ್ಲಿ ಹಾಕಿರುವ ಷರತ್ತುಗಳ/ ಟೀಕೆಟಿಪ್ಪಣಿಗಳಿಗೆ ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಹಣಕಾಸು ತ:ಖ್ತೆಗಳಿಗೆ ಅವಿಭಾಜ್ಯ ಭಾಗ ಎಂಬುದಾಗಿ ಉಲ್ಲೇಖಿಸಲ್ಪಟ್ಟಿರುವ ಸಂಬಂಧಿತ ಟಿಪ್ಪಣಿಗಳಲ್ಲಿ ಉತ್ತರಿಸಲಾಗಿದೆ. ಆದಾಗ್ಯೂ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಗಮನಾರ್ಹ ಅಂಶಗಳಿಗೆ ಸವಿವರ ಉತ್ತರಗಳನ್ನು ನಿರ್ದೇಶಕರುಗಳ ವರದಿಗೆ ಅನುಬಂಧವನ್ನಾಗಿ ಒದಗಿಸಲಾಗಿದೆ.

39. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 ಉಪ–ಪರಿಚ್ಛೇದ (12)ರ ಪ್ರಕಾರ ಲೆಕ್ಕಪರಿಶೋಧಕರು ವಂಚನೆಗಳಿಗೆ ಸಂಬಂಧಿಸಿದಂತೆ ಯಾವುದೇ ವರದಿಯನ್ನೂ ನೀಡಿರುವುದಿಲ್ಲ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ:

40. ಕಂಪನಿಗಳ ಅಧಿನಿಯಮ 2013ರ 143(6)(ಬಿ) ರ ಅಡಿಯಲ್ಲಿ, ಕಂಪನಿಯ 2017–18 ಸಾಲಿನ ಲೆಕ್ಕಪತ್ರಗಳ ಮೇಲೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯನ್ನು ಈ ವರದಿಗೆ ಅನುಬಂಧವಾಗಿ ಲಗತ್ತಿಸಲಾಗಿದೆ.

ಕಣ್ಗಾವಲು ಕಾರ್ಯವಿಧಾನ:

41. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 177 (9) ಮತ್ತು (10)ರ ಅನುವುಗಳ ಅನುಸರಣೆಯಂತೆ, ನೈಜವಾದ ಸಮಸ್ಯೆಗಳನ್ನು ವರದಿ ಮಾಡುವ ಸಲುವಾಗಿ ನಿರ್ದೇಶಕರು ಮತ್ತು ಉದ್ಯೋಗಿಗಳಿಗಾಗಿ ಕಣ್ಗಾವಲು ಕಾರ್ಯವಿಧಾನವನ್ನು ಸ್ಥಾಪಿಸಲಾಗಿದೆ. ಕಣ್ಗಾವಲು ಕಾರ್ಯವಿಧಾನ ವ್ಯವಸ್ಥೆ ಕಾರ್ಯನೀತಿಯನ್ನು ಕಂಪನಿಯ ಜಾಲತಾಣ www.vjnl.in ನಲ್ಲಿ ಹೂಡಿಕೆ ಮಾಡಲಾಗಿದೆ ಹಾಗೂ ಈ ವರದಿಯ ಅನುಬಂಧ–III ರಲ್ಲಿ ಸೇರಿಸಲಾಗಿದೆ.

ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯನೀತಿ:

42. ಕಂಪನಿಯು ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯನೀತಿಯನ್ನು ರೂಪಿಸಿರುವುದು. ಅನುಮೋದಿತ ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯನೀತಿಯನ್ನು ಅನುಬಂಧ IIರಲ್ಲಿ ಸೇರಿಸಲಾಗಿದೆ.

ಸಾಮಾಜಿಕ ಸಾಂಸ್ಥಿಕ ಜವಾಬ್ದಾರಿ:

43. ಕಂಪನಿಯು ಲಾಭ ಗಳಿಸುವ ಉದ್ದೇಶದಿಂದ ತನ್ನ ವ್ಯವಹಾರ ಚಟುವಟಿಕೆಗಳನ್ನು ನಡೆಸುತ್ತಿರುವುದಿಲ್ಲ. ಕಂಪನಿಯ ಪ್ರಮುಖ ಮೂಲ ಉದ್ದೇಶವು ಕರ್ನಾಟಕ ಸರ್ಕಾರವು ವಹಿಸಿಕೊಡುವ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವುದಾಗಿರುತ್ತದೆ.

44. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 135 (1)ರ ಅನುಸರಣೆಯಂತೆ ಕಂಪನಿಯು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ರಚಿಸಿರುವುದು. ಕಂಪನಿಯು ಕಳೆದ ಮೂರು ಹಣಕಾಸು ಸಾಲುಗಳಲ್ಲಿ ಯಾವುದೇ ನಿವ್ವಳ ಲಾಭವನ್ನು ಗಳಿಸಿರುವುದಿಲ್ಲವಾದ್ದರಿಂದ, ಕಂಪನಿಯು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ಅಡಿಯಲ್ಲಿ ಯಾವುದೇ ವೆಚ್ಚವನ್ನೂ ಭರಿಸಿರುವುದಿಲ್ಲ.

ಹಣಕಾಸಿಗೆ ಸಂಬಂಧಿತ ಸ್ಥಿತಿಗತಿಗಳ ಮೇಲೆ ಪ್ರಭಾವ ಬೀರಬಹುದಾದ ವಿಷಾಯಕ ಬದಲಾವಣೆಗಳು ಮತ್ತು ಬದ್ಧತೆಗಳು, ಯಾವುದಾದರೂ ಇದ್ದಲ್ಲಿ:

45. ಕಂಪನಿಯ ಹಣಕಾಸು ತ:ಖ್ತೆಗಳು ಸಂಬಂಧಿಸಿರುವ ಸಾಲಿನ ಅಂತ್ಯದ ದಿನಾಂಕ ಹಾಗೂ ಈ ವರದಿಯನ್ನು ಸಲ್ಲಿಸುತ್ತಿರುವ ದಿನಾಂಕಗಳ ನಡುವೆ ಕಂಪನಿಯ ಹಣಕಾಸು ತ:ಖ್ತೆಗಳ ಮೇಲೆ ಪ್ರಭಾವ ಬೀರುವಂತಹ ಯಾವುದೇ ವಿಷಾಯಕ ಬದಲಾವಣೆಗಳು ಮತ್ತು ಬದ್ಧತೆಗಳು ಇರುವುದಿಲ್ಲ.

ಕಂಪನಿಯು ನಡೆಸಿಕೊಂಡು ಹೋಗುತ್ತಿರುವ ವ್ಯವಹಾರಗಳ ಸ್ಥಿತಿಗತಿ ಹಾಗೂ ಕಂಪನಿಯ ಕಾರ್ಯಾಚರಣೆಗಳ ಮೇಲೆ ಭವಿಷ್ಯತ್ತಿನಲ್ಲಿ ಪ್ರಭಾವ ಬೀರುವಂತಹ ರೀತಿಯಲ್ಲಿ ನಿಯಂತ್ರಕರುಗಳು ಅಥವಾ ನ್ಯಾಯಾಲಯಗಳು ಜಾರಿಗೊಳಿಸಿರುವ ಗಮನಾರ್ಹವಾದಂತಹ ಹಾಗೂ ವಿಷಾಯಕ ಆದೇಶಗಳ ವಿವರಗಳು:

46. ವ್ಯಾಪಾರವ್ಯವಹಾರಗಳನ್ನು ನಡೆಸಿಕೊಂಡುಹೋಗುತ್ತಿರುವಂತಹ ಸ್ಥಾನಮಾನದ ಮೇಲೆ ಹಾಗೂ ಭವಿಷ್ಯದಲ್ಲಿ ಕಂಪನಿಯ ಕಾರ್ಯಾಚರಣೆಗಳ ಮೇಲೆ ಪ್ರಭಾವಗಳನ್ನು ಬೀರುವಂತಹ ರೀತಿಯಲ್ಲಿ ನ್ಯಾಯಾಲಯಗಳು/ನಿಯಂತ್ರಕರುಗಳು ಅಥವಾ ನ್ಯಾಯಿಕ ಪ್ರಾಧಿಕಾರಗಳು ಜಾರಿಗೊಳಿಸಿರುವಂತಹ ಗಮನಾರ್ಹ ವಿಷಾಯಕ ಆದೇಶಗಳು ಯಾವುದೂ ಇರುವುದಿಲ್ಲ.

ಹಣಕಾಸು ತ:ಖ್ತೆಗಳಿಗೆ ಸಂಬಂಧಿಸಿದಂತೆ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆಗೆ ಸಂಬಂಧಿಸಿದಂತೆ ವಿವರಗಳು:

47. ಕಂಪನಿಯು ತನ್ನ ವ್ಯವಹಾರಗಳ ಸ್ವರೂಪಕ್ಕೆ ತಕ್ಕಂತೆ ಹಾಗೂ ಅದರ ಕಾರ್ಯಾಚರಣೆಗಳ ಜಟಿಲತೆಗೆ ತಕ್ಕಂತೆ ಸಮರ್ಪಕ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ನಿರ್ವಹಿಸುತ್ತಿದೆ. ಲೆಕ್ಕಪರಿಶೋಧನಾ ಸಮಿತಿಯು ಕಂಪನಿಯ ಆಂತರಿಕ ನಿಯಂತ್ರಣ ಮತ್ತು ಮೇಲ್ವಿಚಾರಣೆಗಳ ಪರ್ಯಾಪ್ತತೆ ಮತ್ತು ಪರಿಣಾಮಕಾರಿತ್ವವನ್ನು ಸಮೀಕ್ಷಿಸುವುದು ಮತ್ತು ಲೆಕ್ಕಪರಿಶೋಧನಾ ಶಿಫಾರಸುಗಳ ಜಾರಿಗೊಳಿಸುವಿಕೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತದೆ.

ಇಂಧನದ ಉಳಿತಾಯ, ಸಂಶೋಧನೆ ಮತ್ತು ಅಭಿವೃದ್ಧಿ, ತಂತ್ರಜ್ಞಾನದ ಸೇರ್ಪಡೆ, ವಿದೇಶಿ ವಿನಿಮಯ ಗಳಿಕೆಗಳು ಹಾಗೂ ವೆಚ್ಚಗಳು

48. ಕಂಪನಿಯು ಯಾವುದೇ ತಯಾರಿಕಾ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ ಮತ್ತು ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಮಾತ್ರ ತೊಡಗಿಸಿಕೊಂಡಿರುವುದು. ಆದ್ದರಿಂದ, ಕಂಪನಿಯು ಈ ಶೀರ್ಷಿಕೆಗಳ ಅಡಿಯಲ್ಲಿ ಒದಗಿಸುವ ಸಲುವಾಗಿ ಯಾವುದೇ ಮಾಹಿತಿಯನ್ನೂ ಹೊಂದಿರುವುದಿಲ್ಲ. ಕಂಪನಿಯು ಯಾವುದೇ ವಿದೇಶಿ ವಿನಿಮಯ ಗಳಿಕೆಗಳನ್ನು ಪಡೆದಿರುವುದಿಲ್ಲ ಮತ್ತು ವಿದೇಶಿ ವಿನಿಮಯಗಳ ಮೇಲೆ ವೆಚ್ಚಗಳನ್ನು ಭರಿಸಿರುವುದಿಲ್ಲ.

ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ಅಧಿನಿಯಮ, 2013:

49. ಕಂಪನಿಯು ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಯುವಿಕೆ (ತಡೆಯುವಿಕೆ, ಪ್ರತಿಬಂಧಕ ಹಾಗೂ ಅನ್ಯಾಯದ ನಿವಾರಣೆ) ಅಧಿನಿಯಮ, 2013ರ ಅಡಿಯಲ್ಲಿನ ಅಗತ್ಯತೆಯಂತೆ ಲೈಂಗಿಕ ಕಿರುಕುಳ ಪ್ರತಿಬಂಧಕ ಕಾರ್ಯನೀತಿಯನ್ನು ಹೊಂದಿರುವುದು. ಲೈಂಗಿಕ ಕಿರುಕುಳಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬಹುದಾದ ದೂರುಗಳ ಮೇಲೆ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಆಂತರಿಕ ದೂರುಗಳ ಸಮಿತಿಯನ್ನು ಸ್ಥಾಪಿಸಲಾಗಿರುವುದು.

ಸಾಮಾನ್ಯ

50. ನಿಮ್ಮ ನಿರ್ದೇಶಕರುಗಳು ಈ ಕೆಳಗಿನಂತೆ ತಿಳಿಸುತ್ತಿರುವರು:

ಎ. ಪ್ರಸಕ್ತ ಸಾಲಿನಲ್ಲಿ ಕಂಪನಿಯು ಪ್ರತಿಯೊಂದು ಷೇರಿಗೂ ರೂ.1,000/–ದಂತೆ 1,15,58,687ರಷ್ಟು ಸಂಖ್ಯೆಯ ಷೇರುಗಳನ್ನು ನೀಡಿರುವುದು. ಈ ಬಂಡವಾಳ ಷೇರುಗಳ ನೀಡಿಕೆಯ ಹೊರತಾಗಿ, ಇತರೆ ಯಾವುದೇ ಸಾರ್ವಜನಿಕ, ಷೇರುಗಳ ಆಧ್ಯಯತೆಯ ಮೇರೆಗಿನ ಅಥವಾ ಡಿಬೆಂಚರುಗಳು ಅಥವಾ ಸ್ವೆಟ್ ಈಕ್ವಿಟಿ ಷೇರುಗಳ ನೀಡಿಕೆಗಳಿರುವುದಿಲ್ಲ.

ಬಿ. ಭದ್ರತೆಗಳ ಕೊಳ್ಳುವಿಕೆ (ರಿಡೆಂಮ್‌ಷನ್) ಅಥವಾ ಹಿಂಖರೀದಿಸುವಿಕೆಗಳ ಯಾವುದೇ ದೃಷ್ಟಾಂತಗಳೂ ಇರುವುದಿಲ್ಲ.

ಸಿ. ಒಟ್ಟು ಸೇರಿಸುವಿಕೆ, ವಿಲೀನತೆ, ಪುನರ್–ರಚನೆ, ಇತ್ಯಾದಿ ಯಾವುದೇ ನಿದರ್ಶನಗಳು ಇರುವುದಿಲ್ಲ.

ಡಿ. ಮತ ಚಲಾಯಿಸುವುದು, ಷೇರು ಲಾಭಾಂಶ ಅಥವಾ ಅನ್ಯಥಾ ರೀತಿಯಲ್ಲಿ ಹಕ್ಕುಗಳು ವ್ಯತ್ಯಯಗೊಳ್ಳುವುದರೊಂದಿಗೆ ಯಾವುದೇ ಈಕ್ವಿಟಿ ಷೇರುಗಳನ್ನೂ ನೀಡಲಾಗಿರುವುದಿಲ್ಲ.

ಇ. ಕಂಪನಿಗಳ ಅಧಿನಿಯಮ, 2013ರ ಅಧ್ಯಾಯ Vರ ಅಡಿಯಲ್ಲಿ ವ್ಯಾಪಿಸುವಂತಹ ಯಾವುದೇ ಠೇವಣಿಗಳೂ ಇರಲಿಲ್ಲ.

ಎಫ್. ತನ್ನದೇ ಸ್ವಂತ ಷೇರುಗಳನ್ನು ಉದ್ಯೋಗಿಗಳ ಲಾಭಕ್ಕಾಗಿ ಉದ್ಯೋಗಿಗಳು ಅಥವಾ ಟ್ರಸ್ಟೀಗಳು ಖರೀದಿಸುವ ಸಲುವಾಗಿ ಕಂಪನಿಯು ಯಾವುದೇ ಹಣಕಾಸನ್ನೂ ಒದಗಿಸಿರುವುದಿಲ್ಲ.

ಕೃತಜ್ಞತೆಗಳು

51. ಯೋಜನೆಗಳು ತ್ವರಿತಗತಿಯಲ್ಲಿ ಕಾರ್ಯಗತಗೊಳ್ಳುವಲ್ಲಿ ಎಲ್ಲಾ ಹಂತಗಳಲ್ಲಿಯೂ ಅಧಿಕಾರಿಗಳು ಮತ್ತು ಸಿಬ್ಬಂದಿಯು ತಮ್ಮ

ಸೇವೆಗಳ ಮೂಲಕ ನೀಡಿದ ಕೊಡುಗೆ ಮತ್ತು ಮಾಡಿದ ಪ್ರಾಮಾಣಿಕ ಪ್ರಯತ್ನಗಳಿಗಾಗಿ ನಿಮ್ಮ ನಿರ್ದೇಶಕರುಗಳು ಈ ಮೂಲಕ ತಮ್ಮ ಅತೀವವಾದಂತಹ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿರುವರು. ಕಂಪನಿಗೆ ಅವಿರತ ಸಹಕಾರ ಮತ್ತು ಬೆಂಬಲಗಳನ್ನು ನೀಡುತ್ತಾ ಬಂದಿರುವ ಭಾರತ ಸರ್ಕಾರ (ಕೇಂದ್ರ ಸರ್ಕಾರ), ಕರ್ನಾಟಕ ಸರ್ಕಾರ ಮತ್ತು ಭಾರತೀಯ ಸ್ಟೇಟ್ ಬ್ಯಾಂಕಿಗೆ ನಿಮ್ಮ ನಿರ್ದೇಶಕರುಗಳು ಈ ಮೂಲಕ ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತಿರುವರು.

ಸ್ಥಳ: ಬೆಂಗಳೂರು
ದಿನಾಂಕ: ಆಗಸ್ಟ್ 27, 2018

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ,

ಸಹಿ/–
ಹೆಚ್. ಡಿ. ಕುಮಾರಸ್ವಾಮಿ
ಅಧ್ಯಕ್ಷರು

ನಿರ್ದೇಶಕರುಗಳ ವರದಿಗೆ ಜೋಡಿಕೆ

ಶಾಸನಬದ್ಧ ಲೆಕ್ಕಪರಿಶೋಧಕರುಗಳ ವರದಿಯಲ್ಲಿ ಗಮನಿಸಲಾಗಿರುವ ಅಂಶಗಳಿಗೆ ಉತ್ತರಗಳು

ಕ್ರಮ ಸಂಖ್ಯೆ	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಟಿಪ್ಪಣಿ ಉಲ್ಲೇಖ ಸಂಖ್ಯೆ	ಲೆಕ್ಕಪರಿಶೋಧಕರುಗಳ ವರದಿಯಲ್ಲಿನ ವ್ಯತಿರಿಕ್ತ ಅಭಿಪ್ರಾಯಗಳು	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಉತ್ತರ
1	ಟಿಪ್ಪಣಿ ಸಂಖ್ಯೆ 3	ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 3.3 "ವರಮಾನ"ವನ್ನು ಪರಿಗಣಿಸುವಿಕೆ – ಇದರಲ್ಲಿ ಬಾಡಿಗೆಯ ಲೆಕ್ಕವನ್ನಿಡುವಿಕೆಯನ್ನು ನಗದು ಆಧಾರದ ಮೇರೆಗೆ ಮಾಡಲಾಗಿರುವುದು. ಇದು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 18ರ "ವರಮಾನ" ಅನುಸಾರ ಆಗಿರುವುದಿಲ್ಲ. ಇದರ ತತ್ಪರಿಣಾಮವನ್ನು ತತ್‌ಕ್ಷಣವೇ ನಿರ್ಧಾರಣೆ ಮಾಡಲು ಸಾಧ್ಯವಿರುವುದಿಲ್ಲ.	ಈ ನಿಟ್ಟಿನಲ್ಲಿ ಮೊತ್ತವು ವಿಷಾಯಕ ಅಂಶವಾಗಿರುವುದಿಲ್ಲವಾದ್ದರಿಂದ ಸ್ವೀಕರಿಸಬೇಕಿರುವ ಬಾಡಿಗೆಯ ಮೊತ್ತವನ್ನು ನಗದು ಆಧಾರದ ಮೇರೆಗೆ ಲೆಕ್ಕವನ್ನಿಟ್ಟಿರಲಾಗಿರುವುದು.
2	ಟಿಪ್ಪಣಿ ಸಂಖ್ಯೆ 4 (ಡಿ)	ಬಂಡವಾಳೀಕರಿಸಲಾದಂತಹ ಭೂಮಿಯ ಮೌಲ್ಯವು ಸಂಬಂಧಿತ ವಿಶೇಷ ಭೂ ಸ್ವಾಧೀನ ಅಧಿಕಾರಿಗಳಿಂದ ಸ್ವೀಕರಿಸಲಾದಂತಹ ಬಳಕೆ ಪ್ರಮಾಣಪತ್ರಗಳ ಆಧಾರ ಮೇರೆಗೆ ಆಗಿದ್ದಿತು ಹಾಗೂ ಭೂ ಸ್ವಾಧೀನ ಪರಿಹಾರ ತೀರ್ಪುಗಳು/ ಒಪ್ಪಿಗೆ ತೀರ್ಪುಗಳು/ಬಡ್ಡಿ, ಇತ್ಯಾದಿ ವಿವಿಧ ಕಾರ್ಯವಿಧಾನಗಳು ಅಂತಿಮರೂಪಕ್ಕೆ ಬರುವುದರ ಮೇಲೆ ಅವಲಂಭಿತವಾಗಿದ್ದಿತು ಹಾಗೂ ಇದರಿಂದಾಗಿ ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ತತ್‌ಕ್ಷಣದಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.	ಭೂಮಿಯ ಮೌಲ್ಯದ ಬಂಡವಾಳೀಕರಣವನ್ನು ವಿಶೇಷ ಭೂ ಸ್ವಾಧೀನ ಅಧಿಕಾರಿಯವರು ನೀಡುವ ಬಳಕೆ ಪ್ರಮಾಣಪತ್ರಗಳ ಆಧಾರದ ಮೇರೆಗೆ ಭೂ ಮಾಲೀಕರುಗಳಿಗೆ ಶಾಸನಬದ್ಧ ಪರಿಹಾರದ ವಿತರಣೆಯ ಆಧಾರದ ಮೇರೆಗೆ ಮಾಡಲಾಗುತ್ತಿದೆ. ನಿರ್ದಿಷ್ಟ ಶಾಸನಬದ್ಧ ಪ್ರಕ್ರಿಯೆಗಳನ್ನು ಅನುಸರಿಸಿದನಂತರ ಯಾವುದಾದರೂ ಹೆಚ್ಚಳಗಳು ಇದ್ದಲ್ಲಿ, ಕಾನೂನುಗಳ ಅನುಸಾರ ಸಕ್ಷಮ ಅಧಿಕಾರಿಯವರು ನಿರ್ಧಾರಣೆ ಮಾಡುವಂತಹ ಹೆಚ್ಚುವರಿ ಪರಿಹಾರ ಮೊತ್ತವನ್ನು ಪಾವತಿಸಿದ ನಂತರ ಅಂತಹ ಹೆಚ್ಚಳಗೊಂಡಂತಹ ಪರಿಹಾರ ಮೊತ್ತಗಳನ್ನು ಬಂಡವಾಳೀಕರಿಸಲಾಗುವುದು.
3	ಟಿಪ್ಪಣಿ ಸಂಖ್ಯೆ 4 (ಇ)	ಭೂಮಿಯ ನೇರ ಖರೀದಿಯ 40 ಎಕರೆಗಳು 35.50 ಗುಂಟೆಗಳನ್ನು ಕಂಪನಿಯ ಪರವಾಗಿ ಪರಿವರ್ತನೆಯ ನಮೂದುಗಳು ಬಾಕಿಯಿದ್ದವು. ಭೂ ಸ್ವಾಧೀನ ಪ್ರಕ್ರಿಯೆಗಳ ಮೂಲಕ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಗೆ, ಪರೀಕ್ಷಾ–ಪರಿಶೀಲನೆಯ ಆಧಾರದ ಮೇರೆಗೆ ಪರಿವರ್ತನೆಯ ನಮೂದುಗಳನ್ನು ಮಾಡಲಾಗಿದ್ದಿತು.	ಭೂಮಿಯ ನೇರ ಖರೀದಿಗೆ ಸಂಬಂಧಿಸಿದಂತೆ ಅದರ ಮೌಲ್ಯವನ್ನು ಕಂಪನಿಗೆ ಪ್ರಾಥಮಿಕ ಮಾಲಿಕತ್ವ ದಾಖಲೆಯಾಗಿರುವಂತಹ ಮಾರಾಟ ಪತ್ರವನ್ನು ಕಾರ್ಯಗತಗೊಳಿಸಿದ ಹಾಗೂ ನೋಂದಣಿ ಮಾಡಿಸಿದ ನಂತರ ಪಾವತಿಸಲಾಗುವುದು. ಉಪ–ನೋಂದಣಿ ಅಧಿಕಾರಿಗಳ ಕಛೇರಿಗಳಲ್ಲಿ ಅನುಸರಿಸುತ್ತಿರುವಂತಹ ಆನ್‌ಲೈನ್ ನೋಂದಣಿ ವ್ಯವಸ್ಥೆಯು ಖಾತೆಯನ್ನು ಕಂಪನಿಯ ಹೆಸರಿಗೆ ಸ್ವಯಂಚಾಲಿತವಾಗಿ ವರ್ಗಾಯಿಸುವ ಸಲುವಾಗಿ ಅನುವು ಮಾಡಿರುವುದು.

4	ಟಿಪ್ಪಣಿ ಸಂಖ್ಯೆ 11 (ಬಿ)	ಷೇರು ಅರ್ಜಿಗಳ ಹಣ ಎಂಬುದಾಗಿ ತಿಳಿಯಪಡಿಸಲಾಗಿದ್ದಂತಹ ಹಾಗೂ ಸ್ವೀಕರಿಸಲಾಗಿದ್ದ ಅನುದಾನಗಳ ಪ್ರತಿಯಾಗಿ ಹೊಂದಾಣಿಕೆ ಮಾಡಿಕೊಳ್ಳುವ ಸಲುವಾಗಿ ಅನುಮೋದನೆಯು ಬಾಕಿಯಿದ್ದಂತೆ, ವಿಶೇಷ ಘಟಕ ಯೋಜನೆ/ಬುಡಕಟ್ಟು ಜನಾಂಗದ ಉಪ–ಯೋಜನೆ ಕಾಮಗಾರಿಗಳ ಕಡೆಗೆ ರೂ.24.92 ಕೋಟಿ ಮೊತ್ತದಷ್ಟು ಸರ್ಕಾರಿ ಅನುದಾನವನ್ನು ಸ್ವೀಕರಿಸಬೇಕಾಗಿರುವ ಅನುದಾನ ಮೊತ್ತ ಎಂಬುದಾಗಿ ತೋರಿಸಲಾಗಿರುವುದು,	ಈ ನಿಟ್ಟಿನಲ್ಲಿ ಲೆಕ್ಕಪತ್ರಗಳ ಅವಿಭಾಜ್ಯ ಭಾಗವಾಗಿರುವಂತಹ ಟಿಪ್ಪಣಿ ಸಂಖ್ಯೆ 11 (ಬಿ) ಸ್ವಯಂ ತಾನೇ ವಿವರಿಸುತ್ತಿದೆ.
5	ಟಿಪ್ಪಣಿ 15 (ಎ)	"ಇತರೆ ಹಣಕಾಸು ಹೊಣೆಗಳು" ಶೀರ್ಷಿಕೆಯ ಅಡಿಯಲ್ಲಿ "ಗುತ್ತಿಗೆದಾರರುಗಳಿಗೆ ಪಾವತಿಗಳು – ಉಳಿಸಿಕೊಳ್ಳಲ್ಪಟ್ಟಿರುವ ಹಣಕಾಸಿಗೆ" ಸಂಬಂಧಿಸಿದಂತೆ ನ್ಯಾಯಸಮ್ಮತ ಮೌಲ್ಯಮಾಪನವನ್ನು ಮಾಡಿರುವುದಿಲ್ಲ – ಇದು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 109 "ಹಣಕಾಸು ಸಾಧನಗಳು"/ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 113 "ನ್ಯಾಯಸಮ್ಮತ ಮೌಲ್ಯ ನಿರ್ಧಾರಣೆಯ" ಅನುಸಾರ ಆಗಿರುವುದಿಲ್ಲ.	ಗುತ್ತಿಗೆದಾರರು ಗುತ್ತಿಗೆಯ ಎಲ್ಲಾ ಷರತ್ತುಗಳನ್ನು ಪೂರೈಸಿದನಂತರ, ಉಳಿಸಿಕೊಂಡಿರುವ ಮೊತ್ತವನ್ನು ಅವರಿಗೆ ಪಾವತಿಸಬೇಕಿರುವುದರಿಂದ, ಆ ರೀತಿ ಉಳಿಸಿಕೊಳ್ಳಲಾಗಿರುವ ಮೊತ್ತದ ನ್ಯಾಯಸಮ್ಮತ ಮೌಲ್ಯವನ್ನು ನಿರ್ಧಾರಣೆ ಮಾಡುವ ಅಗತ್ಯತೆಯು ಇರುವುದಿಲ್ಲ.
6	ಟಿಪ್ಪಣಿ ಸಂಖ್ಯೆ 17 (ಎ)	ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006ರ ಅಡಿಯಲ್ಲಿ ಮಾರಾಟಗಾರರುಗಳಿಗೆ ಮಾಹಿತಿಯನ್ನು ತಿಳಿಯಪಡಿಸಿರುವುದಕ್ಕೆ ಸಂಬಂಧಿತ ವಿವರಗಳ ಅನುಪಸ್ಥಿತಿಯಲ್ಲಿ, ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.	ಕಂಪನಿಯು ನೀರಾವರಿ ಮತ್ತು ಕುಡಿಯುವ ನೀರು ಯೋಜನೆಗಳಿಗಾಗಿ ಮೂಲಸೌಕರ್ಯ ಗಳ ನಿರ್ಮಾಣಗಳಲ್ಲಿ ತೊಡಗಿಸಿಕೊಂಡಿರುವುದು ಹಾಗೂ ಈ ನಿಟ್ಟಿನಲ್ಲಿ ಕಾಮಗಾರಿಗಳನ್ನು ಕಂಪನಿಯಲ್ಲಿ ನೋಂದಾಯಿಸಿ ಕೊಂಡಿರುವಂತಹ ಗುತ್ತಿಗೆದಾರರುಗಳಿಂದ ಟೆಂಡರುಗಳನ್ನು ಆಹ್ವಾನಿಸಿ ಕಾರ್ಯಗತಗೊಳಿಸುವ ಸಲುವಾಗಿ ಅವರುಗಳಿಗೆ ವಹಿಸಲಾಗುವುದು. ಆ ರೀತಿ ನೋಂದಾಯಿಸಿಕೊಂಡಿರುವಂತಹ ಯಾವುದೇ ಓರ್ವ ಗುತ್ತಿಗೆದಾರರು, ತಾವು ಎಂಎಸ್‌ಎಂಇ, ಅಧಿನಿಯಮ, 2016ರ ಅಡಿಯಲ್ಲಿ ನೋಂದಾಯಿಸಿಕೊಂಡಿರುವುದಾಗಿ ತಿಳಿಸಿರುವುದಿಲ್ಲ. ಆದ್ದರಿಂದ ಎಂಎಸ್‌ಎಂಇಗೆ ಸಂಬಂಧಿಸಿದಂತೆ ಯಾವುದೇ ಬಹಿರಂಗ ಪಡಿಸುವಿಕೆಗಳನ್ನು ಮಾಡಿರುವುದಿಲ್ಲ.

7	ಟಿಪ್ಪಣಿ ಸಂಖ್ಯೆ 25 (ಸಿ)	ದಿನಾಂಕ 01.07.2017ರಿಂದ ಜಾರಿಗೆ ಬಂದಂತೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಧಿನಿಯಮವನ್ನು (ಜಿಎಸ್‌ಟಿ)ಕಾರ್ಯಗತಗೊಳಿಸುವುದರೊಂದಿಗೆ, ಕಂಪನಿಯು, ದಿನಾಂಕ 01.07.2017ರಲ್ಲಿದ್ದಂತೆ ತನ್ನ ಪ್ರಗತಿಯಲ್ಲಿರುವ ಕಾಮಗಾರಿಗಳ ಉಳಿಕೆ ಮೊತ್ತಗಳ ಮೇಲೆ ಜಿಎಸ್‌ಟಿಯ ಪ್ರಭಾವವನ್ನು ಖಚಿತಪಡಿಸಿ ಕೊಂಡಿರುವುದಿಲ್ಲ. ಅದೇ ರೀತಿಯಲ್ಲಿ, ಹೊಸ ಕಾಮಗಾರಿಗಳನ್ನೂ ಸಹ ಜಿಎಸ್‌ಟಿಯನ್ನು ಪರಿಗಣಿಸದೆಯೇ ನೀಡಲಾಗಿರುವುದು, ಆದರೆ ಆ ಕಾಮಗಾರಿಗಳನ್ನು ಜಿಎಸ್‌ಟಿ ಜಾರಿಗೆ ಬರುವುದಕ್ಕೆ ಮುಂಚಿನ ಅವಧಿಯಲ್ಲಿ ಇದ್ದಂತಹ ತೆರಿಗೆಗಳನ್ನು ಪರಿಗಣಿಸಿದಂತೆ ನಿಗದಿಪಡಿಸಲಾಗಿದ್ದಂತಹ ಜಲ ಸಂಪನ್ಮೂಲ ಇಲಾಖೆಯ (ಡಬ್ಲ್ಯೂಆರ್‌ಡಿ) ಆಧಾರದಲ್ಲಿ ನೀಡಲಾಗಿದ್ದಿತು. ತೆರಿಗೆ ದರಗಳಲ್ಲಿನ ಬದಲಾವಣೆಯ ಪ್ರಭಾವವನ್ನು ಕಂಪನಿಯು ಖಚಿತಪಡಿಸಿಕೊಂಡಿರಲೂ ಇಲ್ಲ ಅಥವಾ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಅನುವನ್ನೂ ಮಾಡಿರಲಿಲ್ಲ. ಇದರಿಂದಾಗಿ, ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.	ದಿನಾಂಕ 01.07.2017ರಿಂದ ಜಾರಿಗೆ ಬಂದಿರುವ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸುವ ಕಾರಣ ಮಾಡಬೇಕಾದ ಹೊಂದಾಣಿಕೆಗಳು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಗೆ ಮುಂಚಿನ ಅವಧಿಯ ಕರ್ನಾಟಕ ಸರ್ಕಾರದ ಜಲ ಸಂಪನ್ಮೂಲ ಇಲಾಖೆಯ ದರಪಟ್ಟಿ ಪರಿಷ್ಕರಿಸುವ ಅಗತ್ಯತೆಯನ್ನು ಹೊಂದಿರುತ್ತವೆ. ಪರಿಷ್ಕರಣೆಯು ದರಪಟ್ಟಿ ಸೇರಿಸಲಾಗಿರುವ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಗೆ ಮುಂಚಿನ ತೆರಿಗೆಯ ಅಂಶವನ್ನು ತೆಗೆದು, ಮೂಲ ದರಗಳನ್ನು ಲೆಕ್ಕ ಹಾಕುವ ಅಗತ್ಯತೆಯಿರುತ್ತದೆ ಹಾಗೂ ಅಗತ್ಯತೆಯಿರುವಂತೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಹಾಗೂ ಐಟಿಸಿಯನ್ನು ಖರೀದಿಗಳ ಮೇಲೆ ಸೇರಿಸುವ ಅಗತ್ಯತೆಯಿರುತ್ತದೆ. ಕಂಪನಿಯು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಜಾರಿಗೆ ತಂದ ಕೂಡಲೆಯೇ ಸರ್ಕಾರವನ್ನು ಸಂಪರ್ಕಿಸಿತು. ಸರ್ಕಾರವು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಗೆ ಮುಂಚಿನ ಅವಧಿಯ ಜಲ ಸಂಪನ್ಮೂಲ ಇಲಾಖೆಯ ದರಪಟ್ಟಿ ಪರಿಷ್ಕರಿಸುವುದು ಬಾಕಿಯಿದ್ದಂತೆ, ಕಂಪನಿಯು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸಿದ್ದರ ಕಾರಣ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಮಾಡಲು ಅಗತ್ಯತೆಯಿರುವ ಹೊಂದಾಣಿಕೆಗಳನ್ನು ಮಾಡುವ ಸಲುವಾಗಿ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಗೆ ಮುಂಚಿನ ಅವಧಿಯ ಮೂಲ ದರಗಳನ್ನು ಲೆಕ್ಕ ಹಾಕಲು ಪ್ರಕ್ರಿಯೆಗಳನ್ನು ಪ್ರಾರಂಭಿಸಿರುವುದು.
8	ಅನುಬಂಧ ಎ (1)	ಪ್ರಸಕ್ತ ಸಾಲಿನಲ್ಲಿ ಆಸ್ತಿಗಳ ಭೌತಿಕ ತಪಾಸಣೆಯನ್ನು ಆಡಳಿತವು ನಡೆಸಿರುವುದಿಲ್ಲ.	ಪ್ರಸಕ್ತ ಹಣಕಾಸು ಸಾಲು ಮುಕ್ತಾಯಗೊಳ್ಳುವ ಮೊದಲು ಸ್ಥಿರಾಸ್ತಿಗಳ ಭೌತಿಕ ತಪಾಸಣೆಯನ್ನು ನಡೆಸುವಂತೆ ಕಂಪನಿಯ ಅಡಿಯಲ್ಲಿನ ಎಲಾ ಕಛೇರಿಗಳಿಗೆ ನಿರ್ದೇಶನಗಳನ್ನು ನೀಡಲಾಗಿದೆ.

9	ಅನುಬಂಧ ಸಿ (ಎ)	ಕಂಪನಿಯು ವಿವಿಧ ಸಾಲಗಾರರುಗಳಿಗೆ / ಸಂಬಂಧಿಸಿದಂತೆ ಅವರುಗಳಿಗೆ ಪಾವತಿಸಬೇಕಿರುವ ಉಳಿಕೆ ಮೊತ್ತ ಸರ್ಕಾರದಿಂದ ಬರಬೇಕಿರುವ ಬಾಕಿಗಳು / ಸರ್ಕಾರಕ್ಕೆ ಪಾವತಿಸಬೇಕಿರುವ ಬಾಕಿಗಳು, ವಿಶೇಷ ಭೂ ಸ್ವಾಧೀನ ಅಧಿಕಾರಿಗಳಿಗೆ /ಇತರೆ ತಂಡಗಳಿಗೆ ಪಾವತಿಸಬೇಕಿರುವ ಬರಬೇಕಿರುವ ಬಾಕಿಗಳು, ಇವುಗಳ ಬಗ್ಗೆ ಖಚಿತಪಡಿಸಿಕೊಂಡಿರುವುದಿಲ್ಲ ಹಾಗೂ ಸಮನ್ವಯಗೊಳಿಸಿರುವುದಿಲ್ಲ. ಇದು, ಕಂಪನಿಯು ವಿವಿಧ ಸಾಲಗಾರರು ಮತ್ತು ಇತರೆ ತಂಡಗಳನ್ನು ವಿಷಾಯಕವಾಗಿ ತಪ್ಪಾಗಿ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಾಧ್ಯತೆಯಿರುತ್ತದೆ.	ವಿವಿಧ ಸಾಲಗಾರರುಗಳಿಗೆ ಮತ್ತು ಇತರೆ ತಂಡಗಳಿಗೆ ಸಂಬಂಧಿಸಿದಂತೆ ಅವರುಗಳಿಗೆ ಪಾವತಿಸಬೇಕಿರುವ ಉಳಿಕೆ ಮೊತ್ತಕ್ಕೆ ಸಂಬಂಧಿಸಿದಂತೆ ಖಚಿತಪಡಿಸಿಕೊಂಡಿಲ್ಲವಾದರೂ, ಇವುಗಳಿಗೆ ಸಂಬಂಧಿಸಿದಂತೆ ವರ್ಷದ ಕೊನೆಯಲ್ಲಿ ಸಮನ್ವಯಗೊಳಿಸುವಿಕೆ ಕಾರ್ಯವನ್ನು ಮಾಡಲಾಗಿರುವುದು ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಪಾವತಿಗಳನ್ನೂ ಸಹ ಮಾಡಲಾಗಿದೆ. ಸರ್ಕಾರದಿಂದ ಬರಬೇಕಿರುವ ಬಾಕಿಗಳು/ಸರ್ಕಾರಕ್ಕೆ ಪಾವತಿಸಬೇಕಿರುವ ಬಾಕಿಗಳು. ಸರ್ಕಾರದಿಂದ ವಿಶೇಷ ಭೂ ಸ್ವಾಧೀನ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಬರಬೇಕಿರುವ ಬಾಕಿಗಳು ಆಗಿರುತ್ತವೆ. ಆದ್ದರಿಂದ, ವಿವಿಧ ಸಾಲಗಾರರುಗಳಿಗೆ ಸಂಬಂಧಿಸಿದಂತೆ ಯಾವುದೇ ವಿಷಾಯಕ ತಪ್ಪು ಹೇಳಿಕೆಗಳನ್ನು ಮಾಡಿರುವುದಿಲ್ಲ.
10	ಅನುಬಂಧ ಸಿ (ಬಿ)	ಕಂಪನಿಯು ಸರಕುಗಳು ಮತ್ತು ಸೇವಾ ತೆರಿಗೆಗೆ (ಜಿಎಸ್‌ಟಿ) ಸಂಬಂಧಿತ ವ್ಯವಹಾರಗಳ ಲೆಕ್ಕವನ್ನಿಡುವ ಸಲುವಾಗಿ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಉತ್ತಮಗೊಳಿಸುವ ಅಗತ್ಯತೆಯಿರುತ್ತದೆ. ಇದು, ಸ್ಥಿರಾಸ್ತಿಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಮತ್ತು ಶಾಸನಬದ್ಧ ಬಾಕಿಗಳನ್ನು ವಿಷಾಯಕ ತಪ್ಪುಗಳಿಂದ ಕೂಡಿದಂತೆ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಂಭಾವ್ಯತೆ ಇರುತ್ತದೆ.	ಮುಂದೆ ಅನುಸರಿಸುವ ಸಲುವಾಗಿ ಈ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ.
11	ಅನುಬಂಧ ಸಿ (ಸಿ)	ಕಲ್ಲು–ಮಣ್ಣು (ರಬ್ಬಲ್ಸ್) ಇತ್ಯಾದಿಗಳಿಗೆ ಸಂಬಂಧಿಸಿದಂತೆ ಮೌಲ್ಯವನ್ನು ಲೆಕ್ಕ ಹಾಕುವಲ್ಲಿ ಕಂಪನಿಯ ಕಾರ್ಯವಿಧಾನ ಮತ್ತು ಆಂತರಿಕ ನಿಯಂತ್ರಣವು ಪರಿಣಾಮಕಾರಿತ್ವದಿಂದ ಕಾರ್ಯನಿರ್ವಹಿಸುತ್ತಿರಲಿಲ್ಲ. ಇದು ಅಷ್ಟರಮಟ್ಟಿಗೆ ಮೊತ್ತವನ್ನು ಗುತ್ತಿಗೆದಾರರುಗಳಿಂದ ವಸೂಲಾತಿ ಮಾಡದಿರುವಲ್ಲಿ ಹಾಗೂ ಇತರೆ ವರಮಾನಗಳಿಗೆ ಕಾರಣವಾಗಬಹುದು.	ಕಂಪನಿಯು, ಯೋಜನೆಗಳ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯ ಸಮಯದಲ್ಲಿ ಕಂಡುಬರುವ ಹಾಗೂ ಗುತ್ತಿಗೆದಾರರುಗಳಿಗೆ ಮಾರಾಟ ಮಾಡಲಾಗುವ ಕಲ್ಲುಮಣ್ಣಿಗೆ (ರಬ್ಬಲ್ಸ್) ಸಂಬಂಧಿಸಿದಂತೆ ಅವುಗಳ ಮೌಲ್ಯವನ್ನು ಗುತ್ತಿಗೆದಾರರುಗಳಿಗೆ ಮಾಡಬೇಕಾಗಿರುವ ಪಾವತಿಗಳಿಂದ ಹೊಂದಾಣಿಕೆ ಮಾಡಿಕೊಳ್ಳುವುದು. ಗುತ್ತಿಗೆದಾರರುಗಳಿಗೆ ನೀಡಲಾಗುವ ಈ ಸರಕುಗಳ ಪರಿಮಾಣವನ್ನು ಕಾಮಗಾರಿ ನಿವೇಶನದಲ್ಲಿರುವ ಇಂಜಿನಿಯರುಗಳು ಅಳತೆ ಮಾಡುವರು. ಆದ್ದರಿಂದ, ಗುತ್ತಿಗೆದಾರರುಗಳಿಂದ ವಸೂಲಾತಿ ಮಾಡದಿರುವ ಯಾವುದೇ ಮೊತ್ತವೂ ಇರುವುದಿಲ್ಲ ಹಾಗೂ ಇತರೆ ವರಮಾನವನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸಿರುವುದಿಲ್ಲ.

12	ಅನುಬಂಧ ಸಿ (ಡಿ)	ಮೌಲ್ಯಮಾಪನಗಳ ಅನುಮೋದನೆ ಮತ್ತು ಟೆಂಡರುಗಳ ಮೌಲ್ಯಮಾಪನವು ಮುಖ್ಯ ಇಂಜಿನಿಯರ್‌ಗಳು/ ಮೌಲ್ಯಮಾಪನ ಸಮೀಕ್ಷಾ ಸಮಿತಿ/ಟೆಂಡರು ಪರಿಶೀಲನಾ ಸಮಿತಿ, ಈ ರೀತಿಯಾಗಿ ಅಧಿಕಾರದತ್ತವಾಗಿರುವ ಸಂಬಂಧಿತ ಅಧಿಕಾರಿಗಳ ಮೂಲಕ ನಡೆಯುತ್ತವೆ. ಆದಾಗ್ಯೂ, ಹಣಕಾಸು ವಿಭಾಗಕ್ಕೆ ಸಂಬಂಧಿತ ವ್ಯಕ್ತಿಗಳು ಯಾವುದೇ ಸಮಿತಿಗಳಲ್ಲಿ ಭಾಗಿಗಳಾಗಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಇದು ತೆರಿಗೆಗಳು, ಇತ್ಯಾದಿ ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಮೌಲ್ಯಮಾಪನವನ್ನು ಸಮರ್ಪಕವಾಗಿ ಮಾಡದಿರುವಲ್ಲಿ ಪರಿಣಮಿಸಬಹುದು.	ಟೆಂಡರು ಮೌಲ್ಯಮಾಪನ ಪ್ರಕ್ರಿಯೆಯಲ್ಲಿ, ವಿಭಾಗೀಯ ಮಟ್ಟದಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸುವ ಸಿಬ್ಬಂದಿಯನ್ನೂ ಸಹ ತೊಡಗಿಸಲಾಗುವುದು. ಆದಾಗ್ಯೂ, ಈ ನಿಟ್ಟಿನಲ್ಲಿ ಅಗತ್ಯತೆಯು ಕಂಡುಬಂದಲ್ಲಿ ಆಂತರಿಕ ನಿಯಂತ್ರಣವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ಅಗತ್ಯತೆಯಿರುವುದಾಗಿ ಕಂಡು ಬಂದಲ್ಲಿ ಈ ವಿಷಯದ ಬಗ್ಗೆ ಪರಿಶೀಲಿಸಲಾಗುವುದು.
13	ಅನುಬಂಧ ಸಿ (ಇ)	ವಿಶೇಷ ಘಟಕ ಯೋಜನೆ/ಬುಡಕಟ್ಟು ಜನಾಂಗದ ಉಪ–ಯೋಜನೆ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) ಮತ್ತು ನಿರ್ಮಿತಿ ಕೇಂದ್ರಗಳು ಕಾರ್ಯಗತಗೊಳಿಸುತ್ತಿರುವುದಕ್ಕೆ ಸಂಬಂಧಿಸಿದಂತೆ ಕಂಪನಿಯ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಉತ್ತಮಗೊಳಿಸುವ ಅಗತ್ಯತೆಯಿರುತ್ತದೆ. ಮೇಲೆ ತಿಳಿಸಲಾದಂತಹ ಸಂಸ್ಥೆಗಳು ಕಾಮಗಾರಿಗಳು ಪೂರ್ಣಗೊಂಡನಂತರ ಕೇವಲ ಸ್ವಯಂ ಬಳಕೆ ಪ್ರಮಾಣಪತ್ರದ ಮೂಲಕ ಹಾಗೂ ಪೂರ್ಣಗೊಂಡಿರುವಿಕೆಯ ಸ್ಥಿತಿಗತಿಯನ್ನು ಯಾವುದೇ ,ಸಮರ್ಪಕ ವಿವರಗಳನ್ನು ಲಗತ್ತಿಸದೆಯೇ ಕಂಪನಿಗೆ ತಿಳಿಸುತ್ತವೆ. ಮುಂದುವರೆದು, ಬಳಕೆ ಪ್ರಮಾಣಪತ್ರಗಳನ್ನು ಸೂಕ್ತ ಮಟ್ಟದಲ್ಲಿ ಕಂಪನಿಯು ಸಮೀಕ್ಷಿಸತಕ್ಕದ್ದು / ಅನುಮೋದಿಸತಕ್ಕದ್ದು ಎಂಬುದಾಗಿ ನಾವು ಅಭಿಪ್ರಾಯವನ್ನು ಹೊಂದಿರುವೆವು. ಇದು ವೆಚ್ಚಗಳು ಮತ್ತು ಮುಂಗಡಗಳನ್ನು ತಪ್ಪುಗಳಿಂದ ಕೂಡಿದಂತೆ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಂಭಾವ್ಯತೆ ಇರುತ್ತದೆ.	ಕಾಮಗಾರಿಯು ಪೂರ್ಣಗೊಂಡ ದಿನಾಂಕ, ಹಣಕಾಸಿನ ಬಳಕೆಯ ವಿವರ ಇತ್ಯಾದಿಗಳನ್ನು ಒಳಗೊಂಡಂತೆ ಹಣ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸುವಂತೆ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ ಮತ್ತು ನಿರ್ಮಿತಿ ಕೇಂದ್ರಗಳಿಗೆ ನಿರ್ದೇಶನಗಳನ್ನು ನೀಡಲಾಗಿದೆ. ಲೆಕ್ಕಪರಿಶೋದಕರು ಸಲಹೆಗಳನ್ನು ಮುಂದೆ ಅನುಸರಿಸಲು ಗಮನಿಸಲಾಗಿದೆ.
14	ಅನುಬಂಧ ಸಿ (ಎಫ್)	ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ಪಾವತಿಗಾಗಿ ಬರುವ ಕೋರಿಗಳಿಗೆ ಸಂಬಂಧಿಸಿದಂತೆ, ಅನ್ವಯಗೊಳ್ಳುವ ಗುತ್ತಿಗೆಗಳಿಗೆ ಅಗತ್ಯತೆ ಇರುವಂತೆ ಅವುಗಳನ್ನು ತ್ರೈಮಾಸಿಕವಾಗಿ ಲೆಕ್ಕವನ್ನಿಟ್ಟಿರಲಿಲ್ಲವಾದ್ದರಿಂದ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳನ್ನು ನಿಯತ ಅಂತರಗಳಲ್ಲಿ ಮೇಲ್ವಿಚಾರಣೆ ಮಾಡುವ ಅಗತ್ಯತೆಯಿರುತ್ತದೆ.	ಮುಂದೆ ಅನುಸರಿಸುವ ಸಲುವಾಗಿ ಈ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ.

15	ಅನುಬಂಧ ಸಿ (ಜಿ)	ಕಂಪನಿಯು ಮುನ್ನೆಚ್ಚರಿಕೆ ಹಣದ ಭದ್ರತಾ ಠೇವಣಿ, ಭದ್ರತಾ ಠೇವಣಿ ಮತ್ತು ಇತರೆ ಠೇವಣಿಗಳ ಬಗ್ಗೆ ಖಚಿತಪಡಿಸಿಕೊಳ್ಳುವಿಕೆಗಾಗಿ ಸೂಕ್ತ ಆಂತರಿಕ ನಿಯಂತ್ರಣಗಳನ್ನು ಹೊಂದಿರುವುದಿಲ್ಲ, ಇದರಿಂದಾಗಿ ಕಂಪನಿಯು ಚಾಲ್ತಿ ಆಸ್ತಿಗಳು ಮತ್ತು ಚಾಲ್ತಿ ಜವಾಬ್ದಾರಿಗಳನ್ನು ವಿಷಾಯಕವಾಗಿ ತಪ್ಪಾಗಿ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಾಧ್ಯತೆಯಿರುತ್ತದೆ.	ಕಂಪನಿಯು ಮುನ್ನೆಚ್ಚರಿಕೆ ಭದ್ರತಾ ಠೇವಣಿ, ಭದ್ರತಾ ಠೇವಣಿ ಹಾಗೂ ಇತರೆ ಅನ್ಯ ಠೇವಣಿಗಳಿಗಾಗಿ ಕೈಯಿಂದ ನಿರ್ವಹಿಸಲಾಗುವ ವಹಿಯನ್ನು ಹಾಗೂ ಗಣಕೀಕೃತ ವಹಿಯನ್ನು ನಿರ್ವಹಿಸುತ್ತಿರುವುದು ಹಾಗೂ ನಿಯತಕಾಲಿಕವಾಗಿ ಅವುಗಳನ್ನು ಸಮನ್ವಯಗೊಳಿಸುತ್ತಿರುವುದು. ಆದ್ದರಿಂದ ಚಾಲ್ತಿ ಆಸ್ತಿಗಳು ಮತ್ತು ಚಾಲ್ತಿ ಜವಾಬ್ದಾರಿಗಳಿಗೆ ಸಂಬಂಧಿಸಿದಂತೆ ಯಾವುದೇ ವಿಷಾಯಕ ತಪ್ಪು ಹೇಳಿಕೆಗಳು ಸಂಭವಿಸಿರುವುದಿಲ್ಲ.
16	ಅನುಬಂಧ ಸಿ (ಹೆಚ್)	ಓಚರು ನಮೂದುಗಳು ಆಡಳಿತ ವ್ಯವಸ್ಥೆಯ ವರ್ಗಶ್ರೇಣಿಯ ಮಟ್ಟದಲ್ಲಿ ಹಾದುಹೋಗುವ ಅಗತ್ಯತೆಯಿರುತ್ತದೆ, ಆ ರೀತಿ ಮಾಡಿದಲ್ಲಿ, ಅವುಗಳನ್ನು ಅಂತಿಮವಾಗಿ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಲೆಕ್ಕವನ್ನಿಡುವ ಮೊದಲು ಅವುಗಳನ್ನು ಸೂಕ್ತ ಮಟ್ಟಗಳಲ್ಲಿ ಪರಿಶೀಲಿಸಬೇಕಾಗುವುದು ಹಾಗೂ ಅನುಮೋದಿಸಬೇಕಾಗುವುದು.	ಲೋಕೋಪಯೋಗಿ ಲೆಕ್ಕಪತ್ರಗಳ ಸಂಹಿತೆಯ ಅನುಸಾರ, ಓಚರುಗಳನ್ನು ಮಾಸಿಕವಾರು ಕ್ರಮಸಂಖ್ಯೆಯ ಅನುಸಾರ ನಿರ್ವಹಿಸಲಾಗುವುದು, ಪರಿಶೀಲಿಸಲಾಗುವುದು ಹಾಗೂ ಸಕ್ಷಮ ಅಧಿಕಾರಿಯವರಿಂದ ಅನುಮೋದನೆಗೊಳ್ಳುವುದು. ಮೂಲ ಬಿಲ್ಲುಗಳನ್ನು ಓಚರುಗಳಿಗೆ ಲಗತ್ತಿಸಲಾಗುವುದು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶವು ಗಣಕೀಕೃತ ನಮೂದುಗಳಿಗೆ ಸಂಬಂಧಿಸಿರುವುದು. ಬಿಲ್ಲುಗಳು/ ಓಚರುಗಳನ್ನು ಜೋಡಿ ನಮೂದು ಲೆಕ್ಕವನ್ನಿಡುವಿಕೆ ಪದ್ಧತಿಗೆ ಪರಿವರ್ತಿಸಲಾಗುವುದು. ಈ ಜರ್ನಲು ಓಚರುಗಳು/ಪಾವತಿ ಓಚರುಗಳು ಟ್ಯಾಲಿ ತಂತ್ರಾಂಶ ಅನ್ವಯದಲ್ಲಿರುವವು ಹಾಗೂ ಲೋಕೋಪಯೋಗಿ ಇಲಾಖೆಯ ಲೆಕ್ಕಪತ್ರಗಳ ಸಂಹಿತೆಯ ಅನುವುಗಳ ಅಡಿಯಲ್ಲಿ ನಿರ್ವಹಿಸಲಾಗುವ ಓಚರುಗಳನ್ನು ಪರಿಶೀಲಿಸಿದನಂತರ ತಂತ್ರಾಂಶ ಅನ್ವಯದಲ್ಲಿ ಊಡಿಕೆ ಮಾಡಲಾಗುವುದು. ಈ ನಮೂದುಗಳನ್ನು ಲೋಕೋಪಯೋಗಿ ಇಲಾಖೆಯ ಪದ್ಧತಿಯಲ್ಲಿ ನಿರ್ವಹಿಸಲಾಗಿರುವ ಓಚರುಗಳನ್ನು ಆಂತರಿಕ ಲೆಕ್ಕಪರಿಶೋಧಕರುಗಳು ಓಚರುಗಳ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಹಾಗೂ ಲೆಕ್ಕಪತ್ರಗಳ ವಿಭಾಗದ ಸಿಬ್ಬಂದಿಯು ನಿಯತಕಾಲಿಕವಾಗಿ ಪರಿಶೀಲಿಸುವರು. ಟ್ಯಾಲಿ ಓಚರುಗಳು ಲೋಕೋಪಯೋಗಿ ಇಲಾಖೆಯ ಪದ್ಧತಿಯಲ್ಲಿ ನಿರ್ವಹಿಸಲಾಗುವ ಓಚರುಗಳ ಜೊತೆಯಲ್ಲಿ ಹೊಂದಿಕೊಳ್ಳುವುದರಿಂದ ಟ್ಯಾಲಿ ಓಚರುಗಳನ್ನು ವ್ಯವಸ್ಥಾಪನೆಯ ಶ್ರೇಣಿ ವ್ಯವಸ್ಥೆಯ ಮೂಲಕ ತೆಗೆದುಕೊಂಡು ಹೋಗುವ ಪ್ರಶ್ನೆಯು ಉದ್ಭವಿಸುವುದಿಲ್ಲ.

2017–18 ಹಣಕಾಸು ಸಾಲಿಗೆ ಕಾರ್ಯದರ್ಶಿಯ ಲೆಕ್ಕಪರಿಶೋಧಕರುಗಳ ವರದಿಯಲ್ಲಿರುವ ಷರತ್ತುಬದ್ಧ ಅಂಶಗಳಿಗೆ ಸಂಬಂಧಿಸಿದಂತೆ ಉತ್ತರ;

ಕ್ರಮ ಸಂಖ್ಯೆ	ಕಾರ್ಯದರ್ಶಿಯ ಲೆಕ್ಕಪರಿಶೋಧಕರುಗಳ ವರದಿಯ ಕಂಡಿಕೆ ಸಂಖ್ಯೆ	ಲೆಕ್ಕಪರಿಶೋಧಕರುಗಳ ವರದಿಯಲ್ಲಿನ ಪರಿಶೀಲನೆಗಳು	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಉತ್ತರಗಳು
1	8.1	*ಕಂಪನಿಯು, ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 173ರ ಅನುವುಗಳನ್ನು ಹಾಗೂ ಅಲ್ಲದೆಯೇ ಕಾರ್ಯದರ್ಶಿಯ ಮಾನದಂಡ–1ರ ಅನುವುಗಳನ್ನು ಅನುಸರಿಸಿರುವುದಿಲ್ಲ – ಪ್ರಸಕ್ತ ಹಣಕಾಸು ಸಾಲಿನಲ್ಲಿ ನಡೆಸಲಾದ ನಿರ್ದೇಶಕರುಗಳ ಮಂಡಳಿಯ ಎರಡು ಸಭೆಗಳ ನಡುವೆ ನೂರ ಇಪ್ಪತ್ತು ದಿನಗಳಿಗೂ ಮೀರಿದಂತೆ ಅಂತರವಿದ್ದಿತು.*	*ಪ್ರಸಕ್ತ ಹಣಕಾಸು ಸಾಲಿನಲ್ಲಿ ನಿರ್ದೇಶಕರುಗಳ ಮಂಡಳಿಯು ನಾಲ್ಕು ಸಭೆಗಳನ್ನು ನಡೆಸಿತು, ಅದರ ಪೈಕಿ ಸಭೆಯು ಅಕ್ಟೋಬರ್ 28, 2017ರಂದು ನಡೆಯಿತಾದ್ದರಿಂದ ಇದರ ಹಿಂದಿನ ಸಭೆಯು ಮೇ 10, 2017 ರಿಂದ ನೂರ ಇಪ್ಪತ್ತು ದಿನಗಳಿಗೂ ಮೀರಿದಂತೆ ಅಂತರವಿದ್ದಿತು. ಮಂಡಳಿಯ ಅನುಮೋದನೆಯ ಅಗತ್ಯತೆಯಿರುವಂತಹ ಯಾವುದೇ ವಿಷಯಗಳೂ ಇರದಿದ್ದುದೂ ಸೇರಿದಂತೆ ಕೆಲವು ಆಡಳಿತಾತ್ಮಕ ಕಾರಣಗಳಿಂದ ಇದು ಸಂಭವಿಸಿದ್ದುತು.*
2	8.2	*ಕಂಪನಿಯು, ಕರ್ನಾಟಕ ರಾಜ್ಯದ ಉದ್ದಗಲಕ್ಕೂ ವಿವಿಧ ಸ್ಥಳಗಳಲ್ಲಿ ಇರುವಂತಹ ನೀರಾವರಿ ಮತ್ತು ನಿರ್ಮಾಣ ಯೋಜನೆಗಳು, ನಿವೇಶನಗಳು ಮತ್ತು ಅಣೆಕಟ್ಟೆಗಳನ್ನು ಪೂರ್ಣಗೊಳಿಸುವ ಸಲುವಾಗಿ ಅನೇಕ ಸಂಖ್ಯೆಯ ಗುತ್ತಿಗೆದಾರರುಗಳನ್ನು ನೇಮಕ ಮಾಡಿದ್ದಿತು. ಗುತ್ತಿಗೆದಾರರುಗಳು, ನಿರ್ಮಾಣಗಳನ್ನು, ಕಾರ್ಯಗತಗೊಳಿಸುವ ಸಲುವಾಗಿ ಸಿವಿಲ್ ಮತ್ತು ಇತರೆ ಕೂಲಿ ಗುತ್ತಿಗೆಯ ಅಡಿಯಲ್ಲಿ ತಮ್ಮ ವೇತನ ಪಟ್ಟಿಯ ಅಡಿಯಲ್ಲಿ ಕೆಲಸಗಾರರನ್ನು ನೇಮಕ ಮಾಡಿಕೊಳ್ಳುವರು. ಕಂಪನಿಯು ಕೂಡ ತನ್ನ ನೊಂದಾಯಿತ ಕಛೇರಿಯಲ್ಲಿ ಕೂಲಿ ಗುತ್ತೆಗೆದಾರರುಗಳನ್ನು ನೇಮಕ ಮಾಡಿಕೊಂಡಿದ್ದಿತು. ಕಂಪನಿಯು, ಓರ್ವ ಪ್ರಧಾನ ಉದ್ಯೋಗದಾತರಾಗಿ ಗುತ್ತಿಗೆ ಕೂಲಿ (ನಿಯಂತ್ರಣ ಮತ್ತು ತೊಡೆದುಹಾಕುವಿಕೆ) ಅಧಿನಿಯಮ, 1970 ಮತ್ತು ಅದಕ್ಕೆ ಅನುಗುಣವಾಗಿ ಕರ್ನಾಟಕ ನಿಯಮಗಳು, 1974ರ ಅನುವುಗಳನ್ನು ವಿಶೇಷವಾಗಿ ನಿರ್ಮಾಣ ಯೋಜನೆಗಳು, ನಿವೇಶನಗಳು ಮತ್ತು ಅಣೆಕಟ್ಟೆಗಳಲ್ಲಿ ಅನುಸರಿಸಿರಲಿಲ್ಲ.*	*ಗುತ್ತಿಗೆ ಕೂಲಿ (ನಿಯಂತ್ರಣ ಮತ್ತು ತೊಡೆದುಹಾಕುವಿಕೆ) ನಿಯಮಗಳು, 1974ರ ಅನುವುಗಳನ್ನು ಮತ್ತು ಅವುಗಳಿಗೆ ಅನುಗುಣವಾಗಿರುವ ಕರ್ನಾಟಕ ನಿಯಮಗಳು, 1974ರ ಅನುವುಗಳನ್ನು ಅನುಸರಿಸುವ ಸಲುವಾಗಿ ಸವಿವರ ಸುತ್ತೋಲೆಗಳ ಮೂಲಕ ಕಂಪನಿಯ ಕ್ಷೇತ್ರ ಕಛೇರಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ.*

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ,

ಸಹಿ/–
ಹೆಚ್.ಡಿ. ಕುಮಾರಸ್ವಾಮಿ
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: ಆಗಸ್ಟ್ 27, 2018

2017–18ರ ಸಾಲಿನ ನಿರ್ದೇಶಕರ ವರದಿಗೆ ಅನುಬಂಧ – I

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ

1. ಪೀಠಿಕೆ:

1.1. ಕಂಪನಿ ಕಾಯ್ದೆ, 2013, ಪರಿಚ್ಛೇದ 178ರ ಉಪಪರಿಚ್ಛೇದ (3) ತಿಳಿಸುವಂತೆ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯು ಅರ್ಹತೆಗಳ, ಸಕಾರಾತ್ಮಕವಾದ ಗುಣಧರ್ಮಗಳ ನಿರ್ಧಾರಣಕ್ಕೆ ಮಾನದಂಡಗಳನ್ನು ರೂಪಿಸಿ ಸರ್ಕಾರದ ಮಾತೃ ಇಲಾಖೆಯ ವ್ಯಾಪ್ತಿಗೆ ಬರುವ ಮತ್ತು ಸರ್ಕಾರ ಹಾಗೂ ಆಡಳಿತಾತ್ಮಕ ಇಲಾಖೆ (ಜಲ ಸಂಪನ್ಮೂಲ ಇಲಾಖೆ) ನಿಯೋಜಿಸುವ ಹಿರಿಯ ಅಧಿಕಾರಿಗಳನ್ನು ಹೊರತುಪಡಿಸಿ ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ ಮತ್ತು ಇತರೇ ನೌಕರರ ಸಂಭಾವನೆಗೆ ಸಂಬಂಧಿಸಿದಂತೆ ಮಂಡಳಿಗೆ ಕಾರ್ಯನೀತಿಯೊಂದನ್ನು ಶಿಫಾರಸ್ಸು ಮಾಡುತ್ತದೆ.

1.2. ನಾಮನಿರ್ದೇಶನ ಮತ್ತು ಸಂಭಾವನೆ ಕಾರ್ಯನೀತಿಯನ್ನು (“ಕಾರ್ಯನೀತಿ”) ಕಾಯ್ದೆಯ ಪರಿಚ್ಛೇದ 178(3)ರ ಉಪಬಂಧಗಳು ಹಾಗೂ ಅದರ ಅಡಿ ನಿಗದಿಪಡಿಸಲಾದ ನಿಯಮಗಳ ಅನುಸಾರ ರೂಪಿಸಲಾಗಿದೆ.

1.3. ಕಾರ್ಯನೀತಿಯು ಕಂಪನಿಯ ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ (“ಕೆಎಂಪಿ”) ಮತ್ತು ಹಿರಿಯ ವ್ಯವಸ್ಥಾಪನಾ ಸಿಬ್ಬಂದಿಯ (ಎಸ್‌ಎಂಪಿ) (ಒಟ್ಟಾಗಿ “ಕಾರ್ಯನಿರ್ವಾಹಕರು” ಎಂದು ಸಂಬೋಧಿತರು) ಸಂಭಾವನೆಯ ಚೌಕಟ್ಟನ್ನು ಒದಗಿಸುತ್ತದೆ.

ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ ವಿತ್ತಾಧಿಕಾರಿ, ಇವರುಗಳು ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ (“ಕೆಎಂಪಿ”) ಎಂದು ಕರೆಸಿಕೊಳ್ಳುತ್ತಾರೆ. “ಹಿರಿಯ ವ್ಯವಸ್ಥಾಪನಾ ಸಿಬ್ಬಂದಿ” ಎಂದರೆ ನಿರ್ದೇಶಕರುಗಳನ್ನು ಹೊರತುಪಡಿಸಿ ಕೇಂದ್ರ ವ್ಯವಸ್ಥಾಪನಾ ತಂಡದಲ್ಲಿನ ಕಂಪನಿಯ ನೌಕರರು ಕಾರ್ಯಕಾರಿ ನಿರ್ದೇಶಕರಿಗಿಂತ ಹಂತ ಕೆಳಗಿನ ಆಡಳಿತ ಮಂಡಳಿಯ ಎಲ್ಲಾ ಸದಸ್ಯರೂ ಹಾಗೂ ಕಾರ್ಯಕಾರಿ ಮುಖ್ಯಸ್ಥರೂ ಇದರಲ್ಲಿ ಸೇರುತ್ತಾರೆ.

1.4. ಈ ಕಾರ್ಯನೀತಿಯನ್ನು “ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ” ಎಂದು ಕರೆಯಲಾಗುವುದು ಹಾಗೂ ಇದನ್ನು “ಕಾರ್ಯನೀತಿ” ಎಂದು ಉಲ್ಲೇಖಿಸಲಾಗುವುದು

1.5. ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ ಯೋಗ್ಯವೆಂದು ಪರಿಗಣಿಸುವ ಅಂತರಗಳಲ್ಲಿ ಕಾರ್ಯನೀತಿಯನ್ನು ಪರಿಶೀಲಿಸಲಾಗುವುದು.

2. ಉದ್ದೇಶಗಳು

2.1 ಕಾರ್ಯನೀತಿಯ ಉದ್ದೇಶಗಳು ಕೆಳಗಿನಂತಿವೆ:

2.1.1 ಕಾರ್ಯನಿರ್ವಾಹಕ ಅಧಿಕಾರಿಗಳ ಅರ್ಹತೆಗಳು, ಸಕಾರಾತ್ಮಕ ಗುಣಧರ್ಮಗಳು ಮತ್ತು ಸಂಭಾವನೆಯ ನಿರ್ಧಾರಣೆಗೆ ಮಾನದಂಡಗಳನ್ನು ನಿಗದಿಪಡಿಸುವುದು.

2.1.2 ಕಂಪನಿಯನ್ನು ಯಶಸ್ವಿಯಾಗಿ ನಡೆಸುವಂತೆ ಕಂಪನಿಯ ಅತ್ಯಂತ ಅರ್ಹರಾದ ಕಾರ್ಯಕಾರಿ ಅಧಿಕಾರಿಗಳನ್ನು ಕಂಪನಿ ಆಕರ್ಷಿಸಿ, ಉಳಿಸಿಕೊಂಡು ಉತ್ತೇಜಿಸಲು ಸಾಧ್ಯವಾಗುವಂತೆ ಮಾಡುವುದು.

2.1.3 ಕೈಗಾರಿಕಾ ಪ್ರಮಾಣಗಳು ಮತ್ತು ಸೂಕ್ತ ಭಾರತೀಯ ಕಾರ್ಪೊರೇಟ್ ನಿಬಂಧನೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಕಂಪನಿ ಉತ್ತಮವಾದ ಸಮತೋಲನ ಹೊಂದಿರುವ ಹಾಗೂ ಸಾಧನೆ–ಆಧಾರಿತ ಪರಿಹಾರ ಪ್ಯಾಕೇಜ್ ಒದಗಿಸಲು ಸಾಧ್ಯವಾಗುಂತೆ ಮಾಡುವುದು.

2.1.4 ಹಿರಿಯ ಕಾರ್ಯನಿವಾಹಕ ಅಧಿಕಾರಿಗಳ ಹಿತಾಸಕ್ತಿಗಳು ಕಂಪನಿಯ ವ್ಯಾಪಾರ ಕಾರ್ಯತಂತ್ರ ಮತ್ತು ಅಪಾಯ ಸಹಿಷ್ಣುತೆ, ಉದ್ದೇಶಗಳು, ಮೌಲ್ಯಗಳು ಮತ್ತು ದೀರ್ಘಕಾಲೀನ ಹಿತಾಸಕ್ತಿಗಳೊಂದಿಗೆ ಹೊಂದುವುದನ್ನು ಖಚಿತಗೊಳಿಸಿಕೊಳ್ಳುವುದು.

3. ಸಂಭಾವನೆ ಸಿದ್ಧಾಂತಗಳು:

3.1 **ಕಾರ್ಯತಂತ್ರದ ಉದ್ದೇಶಗಳಿಗೆ ಬೆಂಬಲ:** ಸಂಭಾವನೆ ಮತ್ತು ಪುರಸ್ಕಾರ ಚೌಕಟ್ಟುಗಳು ಹಾಗೂ ನಿರ್ಧಾರಗಳನ್ನು ಕಂಪನಿಯ ದೃಷ್ಟಿ ಮತ್ತು ಕಾರ್ಯತಂತ್ರದ ಸಾಧನೆಗೆ ಪೂರಕವಾಗಿ, ಬೆಂಬಲವಾಗಿ ಮತ್ತು ಅವನ್ನು ಬಲಪಡಿಸುವಂತೆ ಅಭಿವೃದ್ಧಿಪಡಿಸುವುದು.

3.2 **ಪಾರದರ್ಶಕತೆ:** ಸಂಭಾವನೆ ನಿರ್ವಹಣೆಯ ಪ್ರಕ್ರಿಯೆ ಪಾರದರ್ಶಕವಾಗಿ, ಉತ್ತಮವಾದ ವಿಶ್ವಾಸಾರ್ಹತೆಯಲ್ಲಿ ಹಾಗೂ ಗೌಪ್ಯತೆಯ ಸೂಕ್ತ ಶ್ರೇಣಿಗಳಿಗೆ ಅನುಸಾರವಾಗಿ ಇರಬೇಕಾಗುತ್ತದೆ.

3.3 **ಆಂತರಿಕ ಸಮಾನತೆ:** ಕಂಪನಿಯು ನಿರ್ವಾಹಕರುಗಳ ಸಂಭಾವನೆಯನ್ನು ಸಂಸ್ಥೆಯಲ್ಲಿ ಅವರ ಕಾರ್ಯತತ್ಪರತೆಗೆ ಅನುಗುಣವಾಗಿ ನೀಡುವುದು. ಸದರಿಯವರ ಸ್ಥಾನಮಾನವನ್ನು ಸಾಮಾನ್ಯವಾಗಿ ಕಂಪನಿಯಲ್ಲಿನ ಇತರೇ ಅಧಿಕಾರಿಗಳೊಂದಿಗೆ ನಿರ್ಧರಿಸುವುದು.

3.4 **ಒದಗುವಿಕೆ ಮತ್ತು ಊರ್ಜಿತ ಸಾಧ್ಯತೆ:** ಸಂಭಾವನೆ ಊರ್ಜಿತ ಸಾಧ್ಯತೆಯ ನೆಲೆಯಲ್ಲಿ ತನಗೆ ಕಾರ್ಯ ಸಾಧ್ಯವೇ ಎನ್ನುವುದನ್ನು ಕಂಪನಿ ಖಚಿತಪಡಿಸಿಕೊಳ್ಳಬೇಕು.

4. ಸಮಿತಿಯ ಉಲ್ಲೇಖಾ ನಿಬಂಧನೆಗಳು ಮತ್ತು ಪಾತ್ರ

4.1 ನಿರ್ದೇಶಕ ಮಂಡಳಿ ನಿಗದಿಪಡಿಸಿರುವಂತೆ ಸಮಿತಿಯ ಉಲ್ಲೇಖಾ ನಿಬಂಧನೆಗಳು ಮತ್ತು ಪಾತ್ರ ಕೆಳಗಿನಂತಿವೆ:

4.1.1 ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ (ಕೆಎಂಪಿ) ಮತ್ತು ಕಂಪನಿಯ ಇತರ ನೌಕರರ ಸಂಭಾವನೆಗೆ ಸಂಬಂಧಿಸಿದಂತೆ ಅರ್ಹತೆಗಳು, ಸಕಾರಾತ್ಮಕವಾದ ಗುಣಧರ್ಮಗಳ ನಿರ್ಧಾರಣಕ್ಕೆ ಮಾನದಂಡಗಳನ್ನು ರೂಪಿಸಿ ಮಂಡಳಿಗೆ ಕಾರ್ಯನೀತಿಯೊಂದನ್ನು ಶಿಫಾರಸ್ಸು ಮಾಡುವುದು.

4.1.2 ಕಾಲದಿಂದ ಕಾಲಕ್ಕೆ ನಿರ್ದೇಶಕ ಮಂಡಳಿಯು ಉಲ್ಲೇಖಿಸುವ ವಿಷಯಗಳನ್ನು ಪರಿಗಣಿಸುವುದು.

4.1.3 ಕಂಪನಿ ಕಾಯ್ದೆ, 2013, ಪರಿಚ್ಛೇದ 178ರಲ್ಲಿ ಉಲ್ಲೇಖಿಸಿರುವ ಮತ್ತೇನಾದರೂ ಅಗತ್ಯವಿರುವ ವಿಷಯವಿದ್ದಲ್ಲಿ ಪರಿಗಣಿಸುವುದು.

4.2 ಸಮಿತಿಯು

4.2.1 ಪಿಂಚಣಿ, ರಜೆ ನಗದೀಕರಣ, ಗ್ರಾಚ್ಯುಯಿಟಿ ಮುಂತಾದವು ಸೇರಿದಂತೆ ಸಂಭಾವನೆಯ ಪ್ರಕಟಣೆಗೆ ಸಂಬಂಧಿಸಿದಂತೆ ಎಲ್ಲ ಉಪಬಂಧಗಳ ಅನುಸರಣೆಯನ್ನು ಖಚಿತಪಡಿಸುವುದು.

4.2.2 ಯಾವ ಕಾರ್ಯನಿರ್ವಾಹಕ ಅಧಿಕಾರಿಯೂ ತಮ್ಮದೇ ಆದ ಸಂಭಾವನೆಗೆ ಸಂಬಂಧಿಸಿದ ನಿರ್ಧಾರ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದಿರುವುದನ್ನು ಖಚಿತಪಡಿಸುವುದು.

5. ಕೆಎಂಪಿ ಮತ್ತು ಎಸ್‌ಎಂಪಿ ಗಳ ಆಯ್ಕೆ ಹಾಗೂ ನಾಮನಿರ್ದೇಶನ ಪ್ರಕ್ರಿಯೆ

ಶೈಕ್ಷಣಿಕ, ವೃತ್ತಿಪರ ಅರ್ಹತೆಗಳು, ವೃತ್ತಿ ಅನುಭವ, ಕೌಶಲ್ಯ ಮತ್ತು ಇತರ ಸಾಮರ್ಥ್ಯಗಳ ಆಧಾರದ ಮೇಲೆ ಕೆಎಂಪಿ ಮತ್ತು ಎಸ್‌ಎಂಪಿಗಳ ಸ್ಥಾನಕ್ಕೆ ಸೂಕ್ತವಾಗುವ ಅಭ್ಯರ್ಥಿಗಳನ್ನು ಸಮಿತಿಯ ಅಧ್ಯಕ್ಷರು ಹಾಗೂ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಗುರುತಿಸಿ ಅವರನ್ನು ಆ ಸ್ಥಾನಗಳಿಗೆ ನೇಮಿಸಬೇಕು.

ಮುಂದುವರೆದು, ಕೆಎಂಪಿ ನೇಮಕಾತಿಗೆ ಸಂಬಂಧಿಸಿದಂತೆ, ನೇಮಕಾತಿಯ ದಿನಾಂಕದಂದು ಇದ್ದಂತೆ ಪ್ರಸ್ತುತ ಕಾಯ್ದೆ, ಶಾಸನ, ನಿಬಂಧನೆ ಮುಂತಾದವುಗಳ ಉಪಬಂಧಗಳ ಅನುಸಾರ ನಿರ್ದೇಶಕ ಮಂಡಳಿ/ ಸಂಬಂಧಪಟ್ಟ ಸಮಿತಿಯ ಅಂಗೀಕಾರವನ್ನು ಪಡೆಯಬೇಕು. ಕೆಎಂಪಿ ನೇಮಕಾತಿ ಮತ್ತು/ ಅಥವಾ ಸ್ಥಾನದಿಂದ ತೆಗೆಯುವಿಕೆಯನ್ನು ಎನ್‌ಆರ್‌ಸಿ ಮತ್ತು/ ಅಥವಾ ನಿರ್ದೇಶಕ ಮಂಡಳಿಯ ಮುಂದೆ ಕಾಲಕಾಲಕ್ಕೆ ಇರಿಸಬೇಕು.

ಜೊತೆಗೆ ಎಸ್‌ಎಂಪಿಗಳ ನೇಮಕಾತಿಯನ್ನು (ಕೆಎಂಪಿ ಹೊರತುಪಡಿಸಿ) ಕಂಪನಿಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಅಂಗೀಕರಿಸಬೇಕು ಹಾಗೂ ಈ ವಿಷಯವನ್ನು ಎನ್‌ಆರ್‌ಸಿ ಮುಂದೆ ಕಾಲಕಾಲಕ್ಕೆ ಇರಿಸಬೇಕು.

6. ಪರಿಹಾರ ರಚನೆ:

6.1 ಕಾರ್ಯಕಾರಿಯಲ್ಲದ ನಿರ್ದೇಶಕರಿಗೆ ಸಂಭಾವನೆ:

ಕಂಪನಿಯ ಕಾರ್ಯಕಾರಿಯಲ್ಲದ ನಿರ್ದೇಶಕರಿಗೆ ನಿರ್ದೇಶಕ ಮಂಡಳಿಯ ಹಾಗೂ ಸಮಿತಿಗಳ ಸಭೆಯಲ್ಲಿ ಹಾಜರಿರುವುದಕ್ಕೆ ಸಭಾ ಭತ್ಯೆಯ ಮೂಲಕ ಮಾತ್ರ ಸಂಭಾವನೆಯನ್ನು ಪಾವತಿಸಲಾಗುತ್ತದೆ.

6.2 ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ (ಕೆಎಂಪಿ) ಮತ್ತು ಹಿರಿಯ ವ್ಯವಸ್ಥಾಪನಾ ಸಿಬ್ಬಂದಿಯ (ಎಸ್‌ಎಂಪಿ) ಸಂಭಾವನೆ:

ಕಂಪನಿಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ (ಕೆಎಂಪಿ) ಮತ್ತು ಹಿರಿಯ ವ್ಯವಸ್ಥಾಪನಾ ಸಿಬ್ಬಂದಿಯ (ಎಸ್‌ಎಂಪಿ) ಸಂಭಾವನೆಯನ್ನು ನಿರ್ಧರಿಸಿ ಲೆಕ್ಕಕ್ಕೆ ತೆಗೆದುಕೊಳ್ಳಲು ಕಂಪನಿಯು ವಿಶ್ವಾಸಾರ್ಹವಾದ ಮತ್ತು ಪಾರದರ್ಶಕವಾದ ಕಾರ್ಯಚೌಕಟ್ಟನ್ನು ಹೊಂದಿದೆ.

7. ಸಮಿತಿಯ ಅಧಿಕಾರಗಳು ಹಾಗೂ ಸಮಿತಿ ಸಭೆಗಳು:

ಸಮಿತಿಯು ಇತರೆ ಅಧಿಕಾರಗಳೊಂದಿಗೆ ಕೆಳಗಿನ ಅಧಿಕಾರಗಳನ್ನೂ ಹೊಂದಿರುತ್ತದೆ:

7.1 ಕಂಪನಿಯ ಎಲ್ಲಾ ಪುಸ್ತಕಗಳು, ದಾಖಲೆಗಳು, ಸೌಲಭ್ಯಗಳು ಮತ್ತು ಸಿಬ್ಬಂದಿಯ ಪೂರ್ಣ ಲಭ್ಯಾವಕಾಶವನ್ನು ಹೊಂದಿರುತ್ತದೆ. ಸಮಿತಿಯ ವ್ಯಾಪ್ತಿಗೆ ಬರುವ ವಿಷಯಗಳ ಅಧ್ಯಯನ ನಡೆಸುವುದು ಅಥವಾ ಅಧ್ಯಯನದ ಆಧಿಕಾರವನ್ನು ವಹಿಸುವುದು;

7.2 ಸದರಿ ಕಾರ್ಯನೀತಿಯ ಅಡಿ ತಮ್ಮ ಪಾತ್ರನಿರ್ವಹಣೆಗೆ ಸಂಬಂಧಿಸಿದಂತೆ ಸಮಾಲೋಚಕರ ಸಲಹೆಯನ್ನು ಉಳಿಸಿಕೊಳ್ಳುವುದು ಅಥವಾ ಪಡೆದುಕೊಳ್ಳುವುದು ಮತ್ತು ಈ ಸಂಬಂಧದ ವೆಚ್ಚಗಳನ್ನು ಕಂಪನಿ ಭರಿಸಬೇಕಾಗುತ್ತದೆ.

7.3 ಸದರಿ ಕಾರ್ಯನೀತಿಯ ಅಡಿಯಲ್ಲಿನ ಯಾವುದೇ ಕಾರ್ಯ ಅಥವಾ ಪಾತ್ರವನ್ನು ನಿರ್ವಹಿಸಲು ಸಮಿತಿಯ ಯಾವುದೇ ಸದಸ್ಯರಿಗೆ ಅಥವಾ ಕಂಪನಿಯ ಯಾವುದೇ ಕೆಎಂಪಿಗೆ ಅಥವಾ ಉಪ–ಸಮಿತಿಗಳಿಗೆ ಅಧಿಕಾರವನ್ನು ವರ್ಗಾಯಿಸುವುದು,

ಸಮಿತಿಯು ಅಗತ್ಯಕ್ಕೆ ತಕ್ಕಂತೆ ಸಭೆ ಸೇರುತ್ತದೆ.

8. ಅನುಮೋದನೆ ಮತ್ತು ಪ್ರಕಾಶನ

8.1 ಸಮಿತಿಯು ರೂಪಿಸಿದ ಕಾರ್ಯನೀತಿಯನ್ನು ಅಂಗೀಕಾರಕ್ಕಾಗಿ ನಿರ್ದೇಶಕ ಮಂಡಳಿಗೆ ಶಿಫಾರಸ್ಸು ಮಾಡಲಾಗುತ್ತದೆ.

8.2 ಕಾರ್ಯನೀತಿಯು ಕಂಪನಿ ಕಾಯ್ದೆ 2013, ಪರಿಚ್ಛೇದ 178 (4)ರ ಅಡಿ ಅಗತ್ಯವಿರುವಂತೆ ನಿರ್ದೇಶಕರ ವರದಿಯ ಭಾಗವಾಗಿರುತ್ತದೆ.

9. ಪೂರಕ ಉಪಬಂಧಗಳು:

9.1 ನಿರ್ದೇಶಕ ಮಂಡಳಿಯ ಗೊತ್ತುವಳಿಯಂತೆ ಕಾರ್ಯನೀತಿಯನ್ನು ಅಳವಡಿಸಿಕೊಂಡ ದಿನಾಂಕದಿಂದ ಅದು ಔಪಚಾರಿಕವಾಗಿ ಜಾರಿಗೊಳ್ಳುತ್ತದೆ.

9.2 ಈ ಕಾರ್ಯನೀತಿಯ ಭಾಗವಾಗದ ಯಾವುದೇ ವಿಷಯವನ್ನು ಸಂಬಂಧಿತ ಕಾನೂನುಗಳು ಮತ್ತು ನಿಬಂಧನೆಗಳ ಪ್ರಕಾರ ಹಾಗೂ ಕಂಪನಿಯ ಸಂಘ ನಿಯಮಾವಳಿಯ ಪ್ರಕಾರ ನಿರ್ವಹಿಸಲಾಗುವುದು.

9.3 ಈ ಕಾರ್ಯನೀತಿಯನ್ನು ಅರ್ಥೈಸುವ ಹಕ್ಕನ್ನು ಕಂಪನಿಯ ನಿರ್ದೇಶಕ ಮಂಡಳಿಯು ಮಾತ್ರ ಹೊಂದಿರುತ್ತದೆ.

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ,

ಸಹಿ/–
ಹೆಚ್.ಡಿ. ಕುಮಾರಸ್ವಾಮಿ
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: ಆಗಸ್ಟ್ 27, 2018

2017–18 ಸಾಲಿನ ನಿರ್ದೇಶಕರ ವರದಿಗೆ ಅನುಬಂಧ – II
ಆಪತ್ತು ನಿರ್ವಹಣಾ ಕಾರ್ಯತಂತ್ರ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಪೀಠಿಕೆ:

ಕಂಪನಿ ಕಾಯ್ದೆ 2013 ಪರಿಚ್ಛೇದ 134(3) ನಿಗದಿಪಡಿಸುವಂತೆ ಸರ್ವ ಸದಸ್ಯರ ಸಭೆಯಲ್ಲಿ ಕಂಪನಿಯ ಮುಂದೆ ಇರಿಸಲಾದ (ಹಣಕಾಸು) ತಃಖ್ತೆಗಳಿಗೆ ನಿರ್ದೇಶಕ ಮಂಡಳಿಯು ಕಂಪನಿಗಾಗಿ ಆಪತ್ತು ನಿರ್ವಹಣಾ ಕಾರ್ಯತಂತ್ರದ ಅಭಿವೃದ್ಧಿ ಮತ್ತು ಅನುಷ್ಠಾನವನ್ನು ಸೂಚಿಸುವ ವರದಿಯೊಂದನ್ನು ಲಗತ್ತಿಸಬೇಕಾಗುತ್ತದೆ. ಈ ವರದಿಯು ಕಂಪನಿಯ ಅಸ್ತಿತ್ವಕ್ಕೆ ಮುಳುವಾಗುವ ಸಾಧ್ಯತೆ ಇರುವ ಆಪತ್ತಿನ ಅಂಶಗಳನ್ನು, ಅವು ಇದ್ದ ಪಕ್ಷದಲ್ಲಿ, ಗುರುತಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಕಂಪನಿಯ ಆಪತ್ತು ನಿರ್ವಹಣಾ ಕಾರ್ಯತಂತ್ರವನ್ನು ರೂಪಿಸುವುದು ಕಂಪನಿಗೆ ಯುಕ್ತವಾದ ವಿಷಯವಾಗಿದೆ.

1.1 ನಿರ್ವಚನಗಳು:

1.1.1 ಅಪಾಯ:

ಸಂಸ್ಥೆಯ ವ್ಯಾಪಾರಿ ಉದ್ದೇಶಗಳನ್ನು ನಕಾರಾತ್ಮಕವಾಗಿ ಪ್ರಭಾವಿಸುವ ಘಟನೆಗಳು ಅಥವಾ ಸ್ಥಿತಿಗಳನ್ನು ಆಪತ್ತುಗಳೆಂದು ನಿರ್ವಹಿಸಲಾಗುತ್ತದೆ. ಇಂತಹ ಘಟನೆಗಳಿಂದ ಉದ್ಭವಿಸುವ ಅನಿಶ್ಚಿತತೆಯ ಪರಿಣಾಮಗಳಿಗೆ ಕಂಪನಿ ತೆರೆದುಕೊಳ್ಳುವುದೇ ಆಪತ್ತು ಎನ್ನುವುದಾಗಿದೆ. ಕಂಪನಿಯ ಅಸ್ತಿತ್ವಕ್ಕೆ ಮುಳುವಾಗುವ ಸಾಧ್ಯತೆ ಇರುವ ಆಪತ್ತಿನ ಅಂಶಗಳು ನಿರ್ದೇಶಕರ ಮಂಡಳಿಯ ದೃಷ್ಟಿಯಲ್ಲಿ ಅಪಾಯಗಳಾಗಿವೆ.

1.1.2 ಆಪತ್ತು ನಿರ್ವಹಣೆ:

ಅಪಾಯದ ಆಪತ್ತಿನ ಅಂಶಗಳನ್ನು ವ್ಯವಸ್ಥಿತವಾಗಿ ಗುರುತಿಸುವುದು, ಕಂಪನಿಯನ್ನು ಯಾವ ಉದ್ದೇಶಗಳೊಂದಿಗೆ ಆರಂಭಿಸಲಾಗಿದೆಯೋ ಅದರ ಮೇಲಿನ ಆಪತ್ತಿನ ಅಂಶಗಳ ಪ್ರಭಾವ ಮತ್ತು ಕಂಪನಿಯ ಅಸ್ತಿತ್ವಕ್ಕೆ ಮುಳುವಾಗಬಲ್ಲ ಅಂಶಗಳನ್ನು ಮೌಲ್ಯಮಾಪನ ಮಾಡುವ ಪ್ರಕ್ರಿಯೆಯೇ ಆಪತ್ತು ನಿರ್ವಹಣೆ.

1.1.3 ಆಪತ್ತಿನ ಮೌಲ್ಯಮಾಪನ

ಆಪತ್ತಿನ ವಿಶ್ಲೇಷಣೆ ಮತ್ತು ಗ್ರಹಿಸಲಾದ ಆಪತ್ತುಗಳ ಮೌಲ್ಯಮಾಪನದ ಒಟ್ಟಾರೆ ಪ್ರಕ್ರಿಯೆಯೇ ಅಪಾಯದ ಮೌಲ್ಯಮಾಪನ.

1.2 ಕಾರ್ಯನೀತಿಯ ಉದ್ದೇಶಗಳು

ಕಂಪನಿಯನ್ನು ಯಾವ ಮುಖ್ಯ ಉದ್ದೇಶಗಳೊಂದಿಗೆ ಆರಂಭಿಸಲಾಗಿದೆಯೊ ಅದರ ಮೇಲಿನ ಆಪತ್ತಿನ ಅಂಶಗಳನ್ನು ಗುರಿತಿಸುವ, ಮೌಲ್ಯಮಾಪನಮಾಡುವ ಮತ್ತು ಪರಿಹರಿಸುವ ಮೂಲಕ ಕಂಪನಿಯ ಕಾರ್ಯಸಾಧ್ಯ ಮುಂದುವರಿಕೆಯನ್ನು ಖಚಿತಗೊಳಿಸುವುದು ಕಾರ್ಯನೀತಿಯ ಪ್ರಧಾನ ಉದ್ದೇಶವಾಗಿದೆ. ಕಾರ್ಯನೀತಿಯು ಈ ಮುಂದಿನ ಕಾರ್ಯಗಳಿಗೆ ಅಗತ್ಯ ಕಾರ್ಯತಂತ್ರವನ್ನು ಸ್ಥಾಪಿಸಲು ಉದ್ದೇಶಿಸುತ್ತದೆ.

1.2.1 ಕಂಪನಿಯ ಎಲ್ಲಾ ಸದ್ಯದ ಮತ್ತು ಮುಂದೆ ಒದಗಬಹುದೆಂದು ಮೌಲ್ಯಮಾಪನ ಮಾಡಿರುವ ಅಪಾಯಗಳನ್ನು ಗುರುತಿಸಿ ಆ ಆಪತ್ತುಗಳನ್ನು ತಗ್ಗಿಸುವ ಕಾರ್ಯತಂತ್ರಗಳನ್ನು ಸ್ಥಾಪಿಸುವುದು.

1.2.2 ಅನ್ವಯವಾಗುವ ನಿಬಂಧನೆಗಳ ಅನುಸರಣೆ ಆಗದಿರುವ ಸಂದರ್ಭಗಳನ್ನು ನಿರಂತರವಾಗಿ ಪರಿಶೀಲಿಸಿ ಗುರುತಿಸುವುದು ಹಾಗೂ ಅನುಸರಣೆ ಇಲ್ಲದಿರುವ ಅಪಾಯವನ್ನು ತಗ್ಗಿಸುವುದು.

1.3 ಕಂಪನಿ ಎಂದರೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ)

2. ಅಪಾಯ ನಿರ್ವಹಣಾ ಕಾರ್ಯನೀತಿ:

ಸಂಘ ನಿಯಮಾವಳಿಯಲ್ಲಿ ಗುರುತು ಮಾಡಲಾದ ಕಂಪನಿಯ ಉದ್ದೇಶಗಳನ್ನು ಸಾಧಿಸುವ ಕಂಪನಿಯ ಪ್ರಯತ್ನಗಳ ಹಿನ್ನೆಲೆಯಲ್ಲಿ ಕಾರ್ಯನೀತಿಯನ್ನು ರೂಪಿಸಲಾಗುತ್ತದೆ ಹಾಗೂ ಅದು ಆಪತ್ತು ನಿರ್ವಹಣೆಯ ಕೆಳಗಿನ ಮಾರ್ಗದರ್ಶಿ ಸಿದ್ಧಾಂತಗಳನ್ನು ಒಳಗೊಳ್ಳುತ್ತದೆ:

2.1 ಆಪತ್ತು ನಿರ್ವಹಣೆಯ ತತ್ವಗಳು:

2.1.1 ಕಂಪನಿಯ ಗುರಿಗಳನ್ನು ಸಾಧಿಸುವ ಉದ್ದೇಶದಿಂದ ತೆಗೆದುಕೊಳ್ಳುವ ಎಲ್ಲ ನಿರ್ಧಾರಗಳನ್ನೂ ಆ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಇರುವ ಆಪತ್ತುಗಳ ಗ್ರಹಿಕೆಯೊಂದಿಗೆ ತೆಗೆದುಕೊಳ್ಳಬೇಕು.

2.1.2 ಆಪತ್ತುಗಳನ್ನು ನಿಯತವಾಗಿ ಪರಿಶೀಲಿಸಬೇಕಾಗುತ್ತದೆ ಮತ್ತು ಅಪಾಯ ತಗ್ಗಿಸುವಿಕೆ ಪ್ರಕ್ರಿಯೆಗಳನ್ನು ಅಭಿವೃದ್ಧಿಪಡಿಸಿ ಅನುಷ್ಠಾನ ಗೊಳಿಸಲು ಮಾರ್ಗ ನಕ್ಷೆಗಳನ್ನು ಸಾಧ್ಯವಾದಷ್ಟು ಬೇಗ ಕಾರ್ಯಪ್ರವೃತ್ತ ಗೊಳಿಸಬೇಕು.

2.1.3 ಗುರುತಿಸಲಾದ ಆಪತ್ತುಗಳ ಸ್ಥಿತಿಗತಿ, ಇಂತಹ ಆಪತ್ತುಗಳ ತಗ್ಗಿಸುವಿಕೆಯ ಸ್ಥಿತಿಗತಿಯ ಬಗ್ಗೆ ವರ್ಷಕ್ಕೆ ಒಮ್ಮೆಯಾದರೂ ತಪ್ಪದೇ ಮಂಡಳಿಗೆ ವರದಿ ಮಾಡಬೇಕು.

3. ಆಪತ್ತು ಗುರುತಿಸುವಿಕೆ, ನಿರ್ಧರಿಸುವಿಕೆ ಮತ್ತು ಆಪತ್ತುಗಳ ವರ್ಗೀಕರಣ:

3.1 ಆಪತ್ತು ಮೌಲ್ಯಮಾಪನ ಪ್ರಕ್ರಿಯೆಯ ವ್ಯಾಪ್ತಿ:

3.1.1 ಆಪತ್ತು ಗುರುತಿಸುವಿಕೆ: ಇವು ಅಸ್ತಿತ್ವದಲ್ಲಿರುವ ಅಥವಾ ಘಟಿಸುವ ಸಂಗತಿಗಳು ಅಥವಾ ಆಗುವಿಕೆಗಳಾಗಿದ್ದು, ಇವು ಘಟಿಸಿದ ಸಂದರ್ಭದಲ್ಲಿ ತನ್ನ ಗುರಿಗಳನ್ನು ಸಾಧಿಸುವಲ್ಲಿನ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಸಾಮರ್ಥ್ಯದ ಮೇಲೆ ಅಥವಾ ಅದರ ಅಸ್ತಿತ್ವದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ.

3.1.2 ಆಪತ್ತಿನ ಮೌಲ್ಯಮಾಪನ: ತನ್ನ ಗುರಿಗಳನ್ನು ಸಾಧಿಸುವಲ್ಲಿನ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಸಾಮರ್ಥ್ಯದ ಮೇಲೆ ಅಥವಾ ಅದರ ಅಸ್ತಿತ್ವದ ಮೇಲೆ ಗುರುತಿಸಲಾದ ಆಪತ್ತುಗಳು ಎಷ್ಟರ ಮಟ್ಟಿಗೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ ಎನ್ನುವುದನ್ನು ತಿಳಿದುಕೊಳ್ಳುವ ಪ್ರಕ್ರಿಯೆಯೇ ಆಪತ್ತಿನ ಮೌಲ್ಯಮಾಪನ ಪ್ರಕ್ರಿಯೆ.

3.1.3 ಆಪತ್ತುಗಳ ವರ್ಗೀಕರಣ: ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಗೆ ಎದುರಾಗಬಹುದಾದ ಆಪತ್ತುಗಳನ್ನು ಕೆಳಗಿನಂತೆ ವರ್ಗೀಕರಿಸಬಹುದಾಗಿದೆ:

3.1.4 ಕಾರ್ಯತಂತ್ರದ ಅಪಾಯ ಆಪತ್ತುಗಳು: ಸರ್ಕಾರದ ಕಾರ್ಯನೀತಿಗಳು, ನ್ಯಾಯಾಲಯದ ಆದೇಶಗಳು, ಅಂತರ ರಾಜ್ಯ ಜಲ ವಿವಾದ, ನ್ಯಾಯಾಧಿಕರಣದ ಐ–ತೀರ್ಪುಗಳು ಮುಂತಾದವು.

3.1.5 ಹಣಕಾಸಿನ ಅಪಾಯಗಳು: ಯೋಜನೆಗಳ ಅನುಷ್ಠಾನಕ್ಕಾಗಿ ಹಣಕಾಸು ಸಂಪನ್ಮೂಲಗಳ ಕ್ರೋಢೀಕರಣ ಹಾಗೂ ಸಾಲ ಸೇವೆಯಲ್ಲಿನ ಅಸಾಮರ್ಥ್ಯ.

3.1.6 ಅನುಷ್ಠಾನದ ಆಪತ್ತುಗಳು: ಯೋಜನೆಗಳಿಗೆ ಅಗತ್ಯವಾದ ಅರಣ್ಯ ತೀರುವಳಿ, ಪರಿಸರ ತೀರುವಳಿ ಮತ್ತು ಸಿಡಬ್ಲ್ಯೂಸಿ ತೀರುವಳಿ ಮುಂತಾದ ಶಾಸನಬದ್ಧ ತೀರುವಳಿಗಳ ಹಿನ್ನೆಲೆಯಲ್ಲಿ ಕಾಲದಿಂದ ಕಾಲಕ್ಕೆ ಸರ್ಕಾರವು ವಹಿಸುವ ನೀರಾವರಿ ಯೋಜನೆಗಳನ್ನು ಜಾರಿಗೊಳಿಸುವಲ್ಲಿನ ಕಂಪನಿಯ ಸಾಮರ್ಥ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುವ ಮತ್ತು ಕಂಪನಿಗೆ ನಿರ್ದಿಷ್ಟವಾಗಿ ಸಂಬಂಧಿಸಿರುವ ಆಪತ್ತುಗಳು.

3.1.7 ಕಾರ್ಯಾಚರಣೆಯ ಆಪತ್ತುಗಳು: ಅಣೆಕಟ್ಟು ಒಡೆಯುವಿಕೆ, ಕಾಲುವೆ ಬಿರುಕು, ಯಂತ್ರೋಪಕರಣಗಳ ಕೆಟ್ಟುಹೋಗುವಿಕೆ ಮುಂತಾದ ಕಾರ್ಯಾಚರಣೆ ಅನಿಶ್ಚಿತತೆಗಳೊಂದಿಗೆ ಸಂಬಂಧ ಹೊಂದಿರುವ ಆಪತ್ತುಗಳು.

4. ಆಪತ್ತು ಮಾತೃಕೆ:

4.1 ಕೆಳಗಿನ ವಿವರಗಳನ್ನು ಒಳಗೊಳ್ಳುವ ಆಪತ್ತು ಮಾತೃಕೆಯೊಂದನ್ನು ಅಭಿವೃದ್ಧಿಪಡಿಸಲಾಗುವುದು:

4.1.1 ಆಪತ್ತಿನ ಹೆಸರು ಹಾಗೂ ಆಪತ್ತನ್ನು ಹೇಗೆ ಉಲ್ಲೇಖಿಸಬಹುದೆಂಬ ಬಗ್ಗೆ ಸಂಕ್ಷಿಪ್ತ ವಿವರಣೆ

4.1.2 ಆಪತ್ತು ಸ್ವರೂಪ: ಕಾರ್ಯತಂತ್ರದ ನೆಲೆ/ ಹಣಕಾಸಿನ ನೆಲೆ/ ಅನಷ್ಠಾನದ ನೆಲೆ/ ಕಾರ್ಯಾಚರಣೆಯ ನೆಲೆ

4.1.3 ಬಾಧಿತ ಹಿತಾಸಕ್ತಿಯುಳ್ಳವರ ಪಟ್ಟಿ ಮತ್ತು ಹಿತಾಸಕ್ತಿಯುಳ್ಳವರ ನಿರೀಕ್ಷೆಗಳ ಮೇಲೆ ಆಪತ್ತಿನ ಪರಿಣಾಮಗಳು.

4.1.4 ಆಪತ್ತು ವಾಸ್ತವವಾದರೆ ಆಪತ್ತು ಪರಿಮಾಣೀಕರಣ, ಪರಿಣಾಮದ ವೆಚ್ಚ.

5. ಆಪತ್ತು ತಗ್ಗಿಸುವಿಕೆಯಲ್ಲಿ ಪ್ರಧಾನ ಅನುಷ್ಠಾನ ಕ್ಷೇತ್ರಗಳು:

5.1 ಆಪತ್ತು ತಗ್ಗಿಸುವಿಕೆ ಕ್ರಮಗಳನ್ನು ಅನುಷ್ಠಾನಗೊಳಿಸಬೇಕಿರುವ ಪ್ರಧಾನ ಕ್ಷೇತ್ರಗಳು ಕೆಳಗಿನಂತಿವೆ:

5.1.1 ನಿಬಂಧನಾ ಅಗತ್ಯಗಳ ಪೂರೈಕೆ ಅಗತ್ಯವಿರುವ ಯೋಜನೆಗಳನ್ನು ಗುರುತಿಸಲು ಸರ್ಕಾರದೊಂದಿಗೆ ಸಕ್ರಿಯವಾಗಿ ಮಾತುಕತೆ ನಡೆಸುವುದು ಹಾಗೂ ನಿಬಂಧನಾ ಅಗತ್ಯಗಳು/ತೀರುವಳಿಗಳ ಅನುಸರಣೆಗಾಗಿ ತ್ವರಿತವಾಗಿ ಕ್ರಮಗಳನ್ನು ಕೈಗೊಳ್ಳುವುದು.

5.1.2 ನಿಬಂಧನಾ ತೀರುವಳಿಗಳ ಅಗತ್ಯವಿರುವ ಯೋಜನೆಗಳನ್ನು ಗುರುತಿಸಿ ಅಗತ್ಯ ತೀರುವಳಿ ದೊರೆಯದ ಹೊರತು ಹೊಸ ಯೋಜನೆಗಳ ಜಾರಿಗೆ ಕ್ರಮಗಳನ್ನು ಪ್ರಾರಂಭಿಸದಿರುವುದು.

5.1.3 ವ್ಯಾಜ್ಯಗಳನ್ನು ನಿವಾರಿಸುವ ದೃಷ್ಟಿಯಿಂದ ಸರ್ಕಾರ ರೂಪಿಸಿರುವ ಪ್ರಮಾಣಿತ ಬಿಡ್ಡಿಂಗ್ ದಸ್ತಾವೇಜನ್ನು ಅಳವಡಿಸಿಕೊಳ್ಳುವುದು ಮತ್ತು ಬಿಡ್ಡಿಂಗ್ ಪ್ರಕ್ರಿಯೆಯನ್ನು ಪ್ರಮಾಣಿತಗೊಳಿಸುವುದು.

5.1.4 ಪ್ರಮಾಣಿತ ಗುಣಮಟ್ಟ ನಿಯಂತ್ರಣ ಪ್ರಕ್ರಿಯೆಯನ್ನು ಸ್ಥಾಪಿಸುವುದು ಹಾಗೂ ಕಳಪೆ ಗುಣಮಟ್ಟದ ಕಾಮಗಾರಿಗಳು ಆಗದಂತೆ ತಡೆಯಲು ಗುಣಮಟ್ಟ ನಿಯಂತ್ರಣ ವಿಭಾಗವನ್ನು ಪರ್ಯಾಪ್ತ ಸಿಬ್ಬಂದಿ ಮತ್ತು ಸಾಧನ, ಸಲಕರಣೆಗಳಿಂದ ಶಕ್ತಗೊಳಿಸುವುದು.

5.1.5 ಆಂತರಿಕ ಪ್ರಕ್ರಿಯೆಗಳನ್ನು ಬಲಪಡಿಸುವುದು:

ಎ) **ಆಂತರಿಕ ನಿಯಂತ್ರಣಗಳು:** ಅಕ್ರಮಗಳನ್ನು ಕನಿಷ್ಠಗೊಳಿಸುವ ಸಲುವಾಗಿ ಆಂತರಿಕ ಪ್ರಕ್ರಿಯೆಗಳನ್ನು ಬಲಪಡಿಸಲು ಆಂತರಿಕ ನಿಯಂತ್ರಣ ಕೈಪಿಡಿಯನ್ನು ಜಾರಿಗೊಳಿಸುವುದು.

ಬಿ) **ಪರಿಣಾಮಕಾರಿ ಆಯವ್ಯಯ ನಿಯಂತ್ರಣ:** ಅನುಷ್ಠಾನ ಅನುಸೂಚಿಯನ್ನು ಪ್ರಭಾವಿಸುವ ನಗದು–ರಾಹಿತ್ಯ ಸ್ಥಿತಿಯನ್ನು ನಿವಾರಿಸಲು ಯೋಜನೆಯ ಉಳಿಕೆ ವೆಚ್ಚಕ್ಕಾಗಿ ನಿಧಿಕೂಡಿಸುವಿಕೆ ಯೋಜನೆಯನ್ನು ಪರಿಣಾಮಕಾರಿ ಆಯವ್ಯಯ ನಿಯಂತ್ರಣದೊಂದಿಗೆ ಜೊತೆಯಾಗಿಸುವುದು.

ಸಿ) **ಯೋಜನೆ ಮೇಲ್ವಿಚಾರಣೆ ವ್ಯವಸ್ಥೆ:** ತ್ವರಿತ ಪ್ರತಿಸ್ಪಂದನೆ ಮತ್ತು ತತ್‌ಕ್ಷಣದ ನಿರ್ಧಾರ ತೆಗೆದುಕೊಳ್ಳುವಿಕೆ ಮಾತ್ರವಲ್ಲದೆ ಕೊರತೆಯ ಕ್ಷೇತ್ರಗಳನ್ನು ಗಮನಕ್ಕೆ ತರುವ ಮತ್ತು ವಿಳಂಬಗಳನ್ನು ಪತ್ತೆಹಚ್ಚುವ ದೃಷ್ಟಿಯಿಂದ ಸೀಮಾತೀತವಾದ ತಾಕ್ಷಣಿಕ ಯೋಜನಾ ಮೇಲ್ವಿಚಾರಣೆ ವ್ಯವಸ್ಥೆಯ ಅಗತ್ಯವಿರುತ್ತದೆ.

6. ಆಪತ್ತು ನಿರ್ವಹಣೆಯ ಸಾಂಸ್ಥಿಕ ರಚನೆ:



ಅಪಾಯ ನಿರ್ವಹಣೆ ಕಾರ್ಯತಂತ್ರವನ್ನು ಆಪತ್ತು ನಿರ್ವಹಣೆಯ ಸಾಂಸ್ಥಿಕ ರಚನೆಯ ಮೂಲಕ ಅನುಷ್ಠಾನ– ಗೊಳಿಸಲಾಗುವುದು. ಪ್ರತಿ ವಲಯದಲ್ಲೂ ಅಪಾಯ ನಿರ್ವಹಣಾ ಘಟಕವನ್ನು ರಚಿಸಿ ಅದಕ್ಕೆ ಮುಖ್ಯ ಆಪತ್ತು ನಿರ್ವಹಣಾ ಅಧಿಕಾರಿಯನ್ನು (ಸಿಆರ್‌ಓ) ಮುಖ್ಯಸ್ಥರನ್ನಾಗಿಸಬೇಕು. ಮುಖ್ಯ ಅಭಿಯಂತರರು ಆ ವಲಯದ ಸಿಆರ್‌ಓ ಆಗಿರುತ್ತಾರೆ.

ಅನುಕ್ರಮವಾದ ವಲಯಗಳ ಅಧೀಕ್ಷಕ ಅಭಿಯಂತರರು ಆ ವಲಯದ ಆಪತ್ತು ನಿರ್ವಹಣೆ ವ್ಯವಸ್ಥಾಪಕರಾಗಿರುತ್ತಾರೆ. ಪ್ರತಿ ವಿಭಾಗದಲ್ಲಿ ಕಾರ್ಯನಿರ್ವಹಿಸುವ ಮತ್ತು ಲೈನ್ ಅಧೀಕ್ಷಕ ಇಂಜಿನಿಯರ್‌ಗಳಿಗೆ ವರದಿ ಮಾಡಿಕೊಳ್ಳುವ ಕಾರ್ಯಕಾರಿ ಅಭಿಯಂತರರು ಆಪತ್ತು ನಿರ್ವಹಣಾಧಿಕಾರಿಯಾಗಿರುತ್ತಾರೆ. ಮೇಲಿನ ಎಲ್ಲರೂ ತಮಗೆ ವಹಿಸಲಾದ ವೈಯಕ್ತಿಕ ಲೈನ್ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜೊತೆಗೆ ಆಪತ್ತು ನಿರ್ವಹಣಾ ಘಟಕದ ಕಾರ್ಯದಲ್ಲೂ ನೆರವಾಗುತ್ತಾರೆ. ಆರ್‌ಎಂ ಗಳು ಮತ್ತು ಆರ್‌ಓ ಗಳು ಹಾಗಾಗಿ ತಮ್ಮ ಲೈನ್ ಕರ್ತವ್ಯಗಳ ಜೊತೆಗೆ ಹೆಚ್ಚುವರಿ ಜವಾಬ್ದಾರಿಗಳನ್ನು ಹೊಂದಿರುತ್ತಾರೆ. ಪ್ರತಿ ವಲಯದಲ್ಲಿನ ಆಪತ್ತು ನಿರ್ವಹಣಾ ಘಟಕದ ಒಟ್ಟಾರೆ ಕಾರ್ಯಾಚರಣೆಯ ಮೇಲ್ವಿಚಾರಣೆಯನ್ನು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತನ ನೊಂದಾಯಿತ ಕಛೇರಿ, ಬೆಂಗಳೂರು, ಇಲ್ಲಿನ ಅಧೀಕ್ಷಕ ಇಂಜಿನಿಯರ್ (ತಾಂತ್ರಿಕ) ನೋಡಿಕೊಳ್ಳುತ್ತಾರೆ ಮತ್ತು ಆಪತ್ತು ತಗ್ಗಿಸುವಿಕೆಯ ಪ್ರಧಾನ ಅನುಷ್ಠಾನ ಕ್ಷೇತ್ರಗಳಾದ 5.1.1. ಮತ್ತು 5.1.2 ಗಳಿಗೆ ಸಂಬಂಧಿಸಿದ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ.

7. ಪಾತ್ರಗಳು ಮತ್ತು ಜವಾಬ್ದಾರಿಗಳು:

7.1 ಮಂಡಳಿಯು ಆಪತ್ತು ನಿರ್ವಹಣೆ ಕಾರ್ಯತಂತ್ರಗಳು ಮತ್ತು ವ್ಯವಸ್ಥೆಗಳನ್ನು ವಾರ್ಷಿಕವಾಗಿ ಪರಿಶೀಲಿಸುತ್ತದೆ.

7.2 ಈ ಕಾರ್ಯನೀತಿಗೆ ಅನುಸಾರವಾಗಿ ಆಪತ್ತು ನಿರ್ವಹಣೆ ವ್ಯವಸ್ಥೆಯು ಸ್ಥಾಪನೆಗೊಂಡು, ಜಾರಿಯಾಗಿ, ನಿರ್ವಹಣೆ ಗೊಳ್ಳುತ್ತಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು, ಮುಖ್ಯ ಆಪತ್ತು ನಿರ್ವಹಣಾ ಅಧಿಕಾರಿಗಳ ಮೂಲಕ ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

7.3 ಆಪತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಜವಬ್ದಾರಿ ಗಳನ್ನು ನಿಗದಿಪಡಿಸುವುದು ಮುಖ್ಯ ಆಪತ್ತು ನಿರ್ವಹಣಾ ಅಧಿಕಾರಿಗಳ ಅಧಿಕಾರವಾಗಿದೆ.

7.4 ಆಪತ್ತು ನಿರ್ವಹಣೆ ವ್ಯವಸ್ಥಾಪಕರು (ಆರ್‌ಎಂ) ತಮ್ಮ ಜವಾಬ್ದಾರಿಗಳ ಅನುಕ್ರಮ ಕ್ಷೇತ್ರಗಳಲ್ಲಿ ಈ ಕಾರ್ಯನೀತಿಯ ಜಾರಿಯ ಬಗ್ಗೆ ಸಿಆರ್‌ಓಗೆ ವರದಿ ಮಾಡುತ್ತಾರೆ.

7.5 ಆಪತ್ತು ನಿರ್ವಹಣಾ ಅಧಿಕಾರಿಗಳು (ಆರ್‌ಓ) ತಮ್ಮ ವೈಯಕ್ತಿಕ ಯೋಜನೆಗಳಿಗೆ ಸಂಬಂಧಿಸಿದ ಆಪತ್ತುಗಳ ಗುರುತಿಸುವಿಕೆ, ಪ್ರಾರಂಭಿಕ ಮೌಲ್ಯಮಾಪನ, ವರದಿ ಮಾಡುವಿಕೆ ಮತ್ತು ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ.

7.6 ಪ್ರತಿಯೊಬ್ಬ ಆಪತ್ತು ನಿರ್ವಹಣೆ ಪ್ರಬಂಧಕರೂ ತಮ್ಮ ನಿಯಂತ್ರಣದ ವ್ಯಾಪ್ತಿಯಲ್ಲಿನ ಎಲ್ಲಾ ಆಪತ್ತು ನಿರ್ವಹಣಾ ಅಧಿಕಾರಿಗಳ ಆಪತ್ತಿನ ರಿಜಿಸ್ಟರುಗಳ ಲಭ್ಯತೆಯನ್ನು ಹೊಂದಿರುತ್ತಾರೆ ಹಾಗೂ ಅವುಗಳ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಸಿಆರ್‌ಓ ಆಪತ್ತು ನಿರ್ವಹಣಾ ಪ್ರಬಂಧಕರ ಹಂತದಲ್ಲಿ ಎಲ್ಲ ಆಪತ್ತುಗಳ ಮೇಲ್ವಿಚಾರಣೆಯ ಜವಾಬ್ದಾರಿ ಹೊಂದಿರುತ್ತಾರೆ.

7.6.1 'ಆಪತ್ತಿನ ರಿಜಿಸ್ಟರ್' ಕೆಳಗಿನ ಮಾಹಿತಿಯನ್ನು ಹೊಂದಿರಬೇಕಾಗುತ್ತದೆ:

i. ಆಪತ್ತಿನ ವಿವರಣೆ

ii. ವೇಳೆ ಆಪತ್ತಿನ ಘಟನೆ ನಡೆದರೆ ಅದರ ಪರಿಣಾಮ

iii. ವೇಳೆ ಆಪತ್ತಿನ ಘಟನೆ ನಡೆದರೆ ಅದಕ್ಕೆ ಯೋಜಿತ ಪ್ರತಿಕ್ರಿಯೆಯ ಸಾರ

iv. ಆಪತ್ತಿನ ತಗ್ಗಿಸುವಿಕೆ ಯೋಜನೆಯ ಸಾರ (ಅರ್ಥಾತ್ ಆಪತ್ತಿ ಘಟನೆಯ ಸಂಭಾವ್ಯತೆ ಮತ್ತು/ಅಥವಾ ಪರಿಣಾಮವನ್ನು ತಗ್ಗಿಸಲು ಮುಂಚಿತವಾಗಿಯೇ ತೆಗೆದುಕೊಳ್ಳಲಾದ ಕ್ರಮಗಳು)

v. ಹೊಂದಿರುವ ನಿಯೋಗ/ ವ್ಯಕ್ತಿ

8. ಆಪತ್ತು ನಿರ್ವಹಣೆಯ ಕಾರ್ಯವಿಧಾನ:

8.1 ಮುಂದುವರೆಯುವ ಸಂಸ್ಥೆಯಾಗಿ ಕಂಪನಿಯ ಅಸ್ತಿತ್ವಕ್ಕೆ ಧಕ್ಕೆತರಬಹುದಾದ ಸಂಭಾವ್ಯ ಆಪತ್ತುಗಳು, ನಿಬಂಧನಾ ಅಗತ್ಯಗಳಿಗೆ ಸಂಬಂಧಿಸಿದ ಆಪತ್ತುಗಳು, ಕಂಪನಿಯ ಸಾಧನೆಗಳು ಮತ್ತು ಉದ್ದೇಶಗಳನ್ನು ಪ್ರಭಾವಿಸಬಹುದಾದ ಆಪತ್ತುಗಳು, ಕಾರ್ಯಾಚರಣೆಯಿಂದ ಆದಾಯ ನಷ್ಟದ ಆಪತ್ತುಗಳು, ಕಂಪನಿಯ ಆಸ್ತಿಗಳು ಮತ್ತು ಸ್ವತ್ತುಗಳಿಗೆ ತಗಲುವ ಆಪತ್ತುಗಳನ್ನು ಆಂತರಿಕ ಲೆಕ್ಕಪರಿಶೋಧನಾ ಕೈಪಿಡಿಯಲ್ಲಿ ನಿಗದಿಪಡಿಸಲಾಗಿರುವಂತೆ ಅಪಾಯ ಸೂಚಕಗಳ ಆಧಾರದ ಮೇಲೆ ಅಂಕಗಳನ್ನು ನೀಡುವ ಮೂಲಕ ವಿಶ್ಲೇಷಿಸಲಾಗುವುದು ಹಾಗೂ ತನ್ಮೂಲಕ ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳಲಾಗುವುದು.

8.2 ಪ್ರತಿ ವಲಯದಲ್ಲಿನ ಆಪತ್ತು ನಿರ್ವಹಣಾ ಘಟಕಗಳು ಕಂಪನಿಯ ಆಪತ್ತುಗಳನ್ನು ತಗ್ಗಿಸುವ ಸಲುವಾಗಿ ಈ ಕಾರ್ಯನೀತಿಯ ಚೌಕಟ್ಟಿನಲ್ಲಿ ಬರುವ ಆಪತ್ತುಗಳ ಆಧಾರದ ಮೇಲೆ ನಿರಂತರ ನೆಲೆಯಲ್ಲಿ ಕಾರ್ಯನಿರ್ವಹಿಸುವ ಪ್ರಧಾನ ಗುಂಪುಗಳಾಗಿವೆ.

9. ಆಪತ್ತುಗಳ ಗುರುತಿಸುವಿಕೆ ಮತ್ತು ಮೌಲ್ಯಮಾಪನ:

ನಿರ್ದಿಷ್ಟ ಆಪತ್ತುಗಳನ್ನು ಗುರುತಿಸುವ ಮತ್ತು ಆಪತ್ತುಗಳು ಘಟಿಸಿದಲ್ಲಿ ಪರಿಣಾಮಗಳ ನೆಲೆಯಲ್ಲಿ ಆಪತ್ತುಗಳನ್ನು ವಿಶ್ಲೇಷಿಸುವ ಉದ್ದೇಶದಿಂದ ಆಪತ್ತು ನಿರ್ವಹಣಾ ಘಟಕಗಳು ಮುಖ್ಯ ಆಪತ್ತು ನಿರ್ವಹಣಾ ಆಧಿಕಾರಿಯ (ಸಿಆರ್‌ಓ) ಮಾರ್ಗದರ್ಶನದಲ್ಲಿ ಆಪತ್ತು ನಿರ್ವಹಣಾ ಪ್ರಬಂಧಕರು (ಆರ್‌ಎಂ) ಮತ್ತು ಆಪತ್ತು ನಿರ್ವಹಣಾ ಅಧಿಕಾರಿಗಳನ್ನು (ಆರ್‌ಓ) ಕಾಲಕಾಲಕ್ಕೆ ಸಂಧಿಸಿ ಸಭೆ ನಡೆಸುತ್ತಾರೆ.

10. ಆಪತ್ತುಗಳ ನಿರ್ವಹಣೆಯಲ್ಲಿ ಆದ್ಯತೆ:

ಗುರುತಿಸಲಾದ ಎಲ್ಲ ಆಪತ್ತುಗಳಲ್ಲಿ ಅಪಾಯ ನಿರ್ವಹಣಾ ಘಟಕವು ಪ್ರಧಾನ ಆಪತ್ತುಗಳ ಮೇಲೆ ಗಮನವನ್ನು ಕೇಂದ್ರೀಕರಿಸಿ ಅವುಗಳನ್ನು ತಗ್ಗಿಸುವ ಕ್ರಮಗಳಿಗೆ ಆದ್ಯತೆಯನ್ನು ನೀಡುತ್ತದೆ.

11. ಮೌಲ್ಯಮಾಪನ ಮತ್ತು ನಿಯಂತ್ರಣ:

11.1 ಗುರುತಿಸಲಾದ ಅಪಾಯಗಳನ್ನು, ಅವು ವಾಸ್ತವವಾದ ಪಕ್ಷದಲ್ಲಿ, ಗ್ರಹಿಸಬಹುದಾದ ಪರಿಣಾಮಗಳ ಹಾಗೂ ಆರ್ಥಿಕ ಪರಿಣಾಮಗಳ ನೆಲೆಯಲ್ಲಿ ನಿರ್ಧರಣೆ ಮಾಡಲಾಗುತ್ತದೆ.

11.2 ಆಪತ್ತುಗಳ ಸ್ಥಾನವನ್ನು ಅವು ಯೋಜನೆಗಳ ಮೇಲೆ ಬೀರಲು ಸಾಧ್ಯವಿರುವ ಪರಿಣಾಮಗಳ ಅನುಸಾರವಾಗಿ ನಿಗದಿಮಾಡಲಾಗುತ್ತದೆ.

11.3 ಪ್ರತಿಯೊಂದು ವಾಸ್ತವಿಕ ಅಪಾಯವನ್ನು ತೊಡೆದುಹಾಕಲು, ತಗ್ಗಿಸಲು ಅಥವಾ ನಿರ್ವಹಿಸಲು ಕಾರ್ಯ ಯೋಜನೆಗಳನ್ನು ಪರಿಗಣಿಸಿ ಅಂತಿಮಗೊಳಿಸಲಾಗುವುದು.

11.4 ಪ್ರತಿ ಆಪತ್ತಿನ ನಿರ್ವಹಣೆಯ ಜವಾಬ್ದಾರಿಗಳನ್ನು ಸೂಕ್ತ ಲೈನ್ ವ್ಯವಸ್ಥಾಪಕರಿಗೆ ವಹಿಸಲಾಗುವುದು.

12. ಮೇಲ್ವಿಚಾರಣೆ:

12.1 ಸರ್ಕಾರದ ಮತ್ತು ಇತರೆ ಕಾರ್ಯನೀತಿಗಳಲ್ಲಿನ ಬದಲಾವಣೆಗಳ ಫಲವಾಗಿ ವ್ಯಾಪಾರದ ವಾತಾವರಣದಲ್ಲಿ ಉಂಟಾಗುವ ಬದಲಾವಣೆ ಹಾಗೂ ಅದರ ಕಾರಣದಿಂದಾಗಿ ಆಪತ್ತಿಗೆ ತೆರೆದುಕೊಳ್ಳುವ ಬಗೆಯಲ್ಲಿನ

ಬದಲಾವಣೆಯನ್ನು ದೃಷ್ಟಿಯಲ್ಲಿರಿಸಿ ಆಪತ್ತು ಮಾತೃಕೆಯನ್ನು ಪರಿಷ್ಕರಿಸಬೇಕಾಗುತ್ತದೆ. ಹಾಗಾಗಿ ಆಪತ್ತು ಮಾತೃಕೆಯನ್ನು ನಿಯತವಾಗಿ ಪರಿಷ್ಕರಿಸಲಾಗುವುದು. ಪರಿಶೀಲನೆ ಮತ್ತು ಪರಿಷ್ಕರಣೆಯ ಎಷ್ಟು ಅಂತರಗಳಲ್ಲಿ ಆಗಬೇಕೆನ್ನುವುದನ್ನು ಕೆಳಗಿನಂತೆ ನಿರ್ಧರಿಸಲಾಗುವುದು:

12.1.1 ಮಾಸಿಕ ಎಂಎಂಆರ್ ಸಭೆಗಳಲ್ಲಿ ನಿಯತವಾದ ಕಾರ್ಯಸೂಚಿ ವಿಷಯವಾಗಿ ಅಪಾಯ ನಿರ್ವಹಣಾ ಘಟಕದ ವರದಿಯು ಚರ್ಚೆಗೆ ಬರುತ್ತದೆ. ಆಪತ್ತು ನಿರ್ವಹಣಾ ಪ್ರಬಂಧಕರು ಇಲಾಖಾ ಮುಖ್ಯಸ್ಥರೊಂದಿಗೆ ತಮ್ಮ ಅನುಕ್ರಮವಾದ ಕ್ಷೇತ್ರಗಳಲ್ಲಿನ ಆಪತ್ತುಗಳ ಸ್ಥಿತಿಗತಿ ಹಾಗೂ ತೆಗೆದುಕೊಳ್ಳಲಾದ ಕ್ರಮಗಳನ್ನು ಪರಿಶೀಲಿಸುತ್ತಾರೆ.

12.1.2 ಯಾವುದೇ ಹೊಸದಾದ ಅಥವಾ ಬದಲಾವಣೆಗೊಂಡ ಆಪತ್ತನ್ನು ಗುರುತಿಸಿ ಆ ಬಗೆಗಿನ ವಿವರಗಳನ್ನು ಮುಖ್ಯ ಆಪತ್ತು ನಿರ್ವಹಣಾ ಅಧಿಕಾರಿಗೆ ಹಾಗೂ ಸಿಆರ್‌ಓ ಲೆಕ್ಕಪರಿಶೋಧನಾ ಸಮಿತಿಗೆ, ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚಿಸಿದ ನಂತರ ತಲುಪಿಸಲಾಗುವುದು.

12.1.3 ಅತಿ ಹೆಚ್ಚಿನ ಆಪತ್ತಿನ ಅಂಕಗಳನ್ನು ಹೊಂದಿರುವ ಆಪತ್ತುಗಳು ಮತ್ತು ಅವುಗಳಿಗೆ ಸಂಬಂಧಿಸಿದ ಸರಿಪಡಿಸುವಿಕೆ ಕಾರ್ಯಗಳನ್ನು ಅವುಗಳ ಗ್ರಹಿಕೆಯ ನಂತರ ಒಡನೆಯೇ ಲೆಕ್ಕಪರಿಶೋಧನಾ ಸಮಿತಿಗೆ ವರದಿ ಮಾಡಬೇಕಾಗುತ್ತದೆ.

12.1.4 ಆಪತ್ತು ನಿರ್ವಹಣಾ ಪ್ರಕ್ರಿಯೆಯನ್ನು ಅದರ ಸಾಮರ್ಥ್ಯ ಮತ್ತು ಪರಿಣಾಮಕಾರಿ ಗುಣದ ನೆಲೆಯಲ್ಲಿ ಮಂಡಳಿಯು ಕಾಲಕಾಲಕ್ಕೆ ಪರಿಶೀಲಿಸುತ್ತದೆ.

13. ಸಾಮೂಹಿಕ ಜವಾಬ್ದಾರಿ:

13.1 ಆಪತ್ತಿನ ಪರಿಣಾಮಕಾರಿ ನಿರ್ವಹಣೆಗೆ ಕಂಪನಿಯ ಪ್ರತಿಯೊಬ್ಬರೂ ಜವಾಬ್ದಾರರಾಗಿರುತ್ತಾರೆ.

13.2 ಪ್ರತಿಯೋರ್ವ ಸಿಬ್ಬಂದಿಯೂ ತಮ್ಮ ಕಾರ್ಯಕ್ಷೇತ್ರದಲ್ಲಿನ ಸಂಭಾವ್ಯ ಆಪತ್ತುಗಳನ್ನು ಗುರುತಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಆಪತ್ತು ತಗ್ಗಿಸುವಿಕೆ ಯೋಜನೆಗಳನ್ನು ಅಭಿವೃದ್ಧಿಪಡಿಸಿ ಆಪತ್ತು ತಗ್ಗಿಸುವಿಕೆ ಕಾರ್ಯತಂತ್ರಗಳನ್ನು ಜಾರಿಗೊಳಿಸುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ.

13.3 ಆಪತ್ತು ನಿರ್ವಹಣಾ ಪ್ರಕ್ರಿಯೆಯನ್ನು ಇತರೆ ಯೋಜನಾ ಪ್ರಕ್ರಿಯೆಗಳು ಮತ್ತು ನಿರ್ವಹಣಾ ಚಟುವಟಿಕೆಗಳೊಂದಿಗೆ ಸಮಗ್ರಗೊಳಿಸಲಾಗುವುದು.

14. ಕಾರ್ಯನೀತಿಗೆ ಅನುಮೋದನೆ:

14.1 ಕಂಪನಿಯ ಒಟ್ಟಾರೆ ಆಪತ್ತು ನಿರ್ವಹಣಾ ವ್ಯವಸ್ಥೆಯನ್ನು ಅನುಮೋದಿಸುವ ಪ್ರಾಧಿಕಾರ ಮಂಡಳಿಯಾಗಿರುತ್ತದೆ. ಮಂಡಳಿಯು ಅನುಸರಣೆಯ ಮೇಲ್ವಿಚಾರಣೆ ನಡೆಸಿ ಆಪತ್ತು ನಿರ್ವಹಣಾ ವ್ಯವಸ್ಥೆಯನ್ನು ಹಾಗೂ ಕಾಲದಿಂದ ಕಾಲಕ್ಕೆ ಮಾಡಲಾಗುವ ತಿದ್ದುಪಡಿಗಳನ್ನು ಅನುಮೋದಿಸುತ್ತದೆ.

15. ಕಾರ್ಯನೀತಿಯ ಪರಿಶೀಲನೆ:

ಈ ಕಾರ್ಯನೀತಿಯು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದಲ್ಲಿ ಆಪತ್ತು ನಿರ್ವಹಣೆಗೆ ಮಾರ್ಗಸೂಚಿಗಳನ್ನು ರೂಪಿಸುತ್ತದೆ. ಆಪತ್ತು ನಿರ್ವಹಣೆ ನಿಬಂಧನೆಗಳು/ ಪ್ರಮಾಣಗಳು/ ಅತ್ಯುತ್ತಮ ಆಚರಣೆಗಳಲ್ಲಿ ಬದಲಾವಣೆಗಳು ಘಟಿಸಿದಾಗ ತತ್ಕಾರಣದ ಬದಲಾವಣೆಗಳು ಅಗತ್ಯವೆನಿಸಿದಂತೆ ಕಾರ್ಯನೀತಿಯನ್ನು ಪುನರ್‌ಪರಿಶೀಲಿಸಲಾಗುವುದು.

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ

ಸಹಿ/–
ಹೆಚ್.ಡಿ. ಕುಮಾರಸ್ವಾಮಿ
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: ಆಗಸ್ಟ್ 27, 2018

2017–18ರ ನಿರ್ದೇಶಕರ ವರದಿಗೆ ಅನುಬಂಧ III

ಕಣ್ಗಾವಲು ಕಾರ್ಯನೀತಿ

ಪೀಠಿಕೆ	ನೈಜ/ಯಥಾರ್ಥತೆಯಿಂದ ಕೂಡಿದ ವಿಷಯಗಳನ್ನು/ಸಮಸ್ಯೆಗಳನ್ನು ನಿರ್ದಿಷ್ಟ ನಮೂನೆಯಲ್ಲಿ ವರದಿ ಮಾಡುವ ಸಲುವಾಗಿ ನಿರ್ದೇಶಕರುಗಳು ಮತ್ತು ಉದ್ಯೋಗಿಗಳಿಗಾಗಿ ಕಣ್ಗಾವಲು ವ್ಯವಸ್ಥೆಯ ಸ್ಥಾಪನೆಗೆ ಕಂಪನಿಗಳ ಅಧಿನಿಯಮ, 2013 ಅನುವು ಮಾಡಿರುತ್ತದೆ. ಕಣ್ಗಾವಲು ವ್ಯವಸ್ಥೆಯು, ಈ ಶಿಳ್ಳೆ ಊದುವವರ (Whistle Blower) ಕಾರ್ಯನೀತಿಯ ಮೂಲಕ ವಿಷಯಗಳನ್ನು/ಸಮಸ್ಯೆಗಳನ್ನು ಕಡೆಕಣಿಸುವ ಅಥವಾ ಅವುಗಳನ್ನು ಬಾಹ್ಯವಾಗಿ ವ್ಯವಹರಿಸುವ ಬದಲು ಸಂಸ್ಥೆಯ ಒಳಗೇ ನೈಜ/ಯಥಾರ್ಥತೆಯಿಂದ ಕೂಡಿದ ವಿಷಯ/ಸಮಸ್ಯೆಗಳನ್ನು ಎತ್ತಿ ತೋರಿಸುವ ಸಲುವಾಗಿ ಉದ್ಯೋಗಿಗಳಿಗೆ ಮತ್ತು ನಿರ್ದೇಶಕರುಗಳಿಗೆ ಪ್ರೋತ್ಸಾಹಿಸುವ ಮತ್ತು ಅನುಕೂಲ ಕಲ್ಪಿಸುವ ಉದ್ದೇಶವನ್ನು ಹೊಂದಿರುತ್ತದೆ.
ಅನ್ವಯಗೊಳ್ಳುವಿಕೆ	ಈ ಕಾರ್ಯನೀತಿಯು ಕಂಪನಿಯ ಎಲ್ಲಾ ಖಾಯಂ ಉದ್ಯೋಗಿಗಳಿಗೆ ಮತ್ತು ನಿರ್ದೇಶಕರುಗಳಿಗೆ ಅನ್ವಯಗೊಳ್ಳುತ್ತದೆ (ಇಲ್ಲಿಂದ ಮುಂದಕ್ಕೆ 'ಶಿಳ್ಳೆ ಊದುವವರು' ಎಂಬುದಾಗಿ ಉಲ್ಲೇಖಿಸಲ್ಪಡುವ).
ಕಾರ್ಯನೀತಿಯ ವ್ಯಾಪ್ತಿ	ಈ ಕಾರ್ಯನೀತಿಯು, ಅನುಮಾನಾಸ್ಪದ ಅನೈತಿಕ ವರ್ತನೆ ಅಥವಾ ಅನುಚಿತ ಅಭ್ಯಾಸಗಳು ಅಥವಾ ತಪ್ಪುಗಳಿಂದ ಕೂಡಿದ ನಡೆ, ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿಯನ್ನು ಕಂಪನಿಯ ಗಮನಕ್ಕೆ ತರುವ ಸಲುವಾಗಿ ಉದ್ಯೋಗಿಗಳಿಗೆ ಮತ್ತು ನಿರ್ದೇಶಕರುಗಳಿಗೆ ಮಾರ್ಗಗಳನ್ನು ಒದಗಿಸುವ ಗುರಿಯನ್ನು ಹೊಂದಿರುತ್ತದೆ. ಅಂತಹ ವಿಷಯಗಳು ಈ ಕೆಳಗಿನ ಸ್ವರೂಪದ್ದಾಗಿರಬಹುದು: ಎ) ಭೌತಿಕವಾಗಿ ಅಥವಾ ವಿದ್ಯುನ್ಮಾನೀಯವಾಗಿ ನಿರ್ವಹಿಸಲಾಗಿರುವ ಕಂಪನಿಯ ಮಾಹಿತಿ/ದಾಖಲೆಗಳನ್ನು ನಿಯಮಬಾಹಿರವಾಗಿ ತಿದ್ದುವುದು ಬಿ) ಸಾರ್ವಜನಿಕರ ಆರೋಗ್ಯ ಮತ್ತು ಭದ್ರತೆಗೆ ಗಮನಾರ್ಹ ಮತ್ತು ನಿರ್ದಿಷ್ಟ ಅಪಾಯ ಕಂಡುಬಂದಿರುವುದು ಸಿ) ಅಧಿಕಾರಿಗಳನ್ನು ನಿಂದಿಸುವುದು ಡಿ) ಗೌಪ್ಯತೆಯ/ಸ್ವಂತಸ್ವಾಮ್ಯತೆಯ ಮಾಹಿತಿಯನ್ನು ಸೋರಿಕೆ ಮಾಡುವುದು ಇ) ನಿಯಮ ಅಥವಾ ನಿಯಂತ್ರಣಗಳ ಉಲ್ಲಂಘನೆ ಎಫ್) ಕಂಪನಿಯ ಸಂಪನ್ಮೂಲಗಳನ್ನು ಒಟ್ಟಾರೆಯಾಗಿ ವ್ಯರ್ಥ ಮಾಡುವುದು ಅಥವಾ ದುರುಪಯೋಗಪಡಿಸಿಕೊಳ್ಳುವುದು ಜಿ) ನೀತಿ ಸಂಹಿತೆಯೂ ಸೇರಿದಂತೆ ಕಾರ್ಯನೀತಿಯನ್ನು ಉಲ್ಲಂಘಿಸುವಂತಹ ಚಟುವಟಿಕೆಗಳು ಎಚ್) ನಕಲಿ ಸಹಿ ಅಥವಾ ಕಾನೂನುಬಾಹಿರವಾಗಿ ದಾಖಲೆಗಳನ್ನು ತಿದ್ದುವುದು ಐ) ಭ್ರಷ್ಟಾಚಾರ/ಲಂಚ ಜೆ) ಹಣಕಾಸು/ಆಸ್ತಿಗಳ ದುರುಪಯೋಗ ಕೆ) ಹಣಕಾಸು ತ:ಖ್ತೆಗಳಲ್ಲಿ ವಂಚನೆ ಎಲ್) ವಾಸ್ತವಿಕ ಅಥವಾ ಅನುಮಾನಾಸ್ಪದ ವಂಚನೆ (ಮೇಲಿನ ಪಟ್ಟಿಯು ಕೇವಲ ದೃಷ್ಟಾಂತ ಘಟನೆಗಳಾಗಿರುತ್ತವೆಯೇ ಹೊರತು ಸಂಭವಿಸಬಹುದಾದ ಪರಿಪೂರ್ಣ ಘಟನೆಗಳನ್ನು ಒಳಗೊಂಡಿರುವ ಪಟ್ಟಿ ಎಂಬುದಾಗಿ ಭಾವಿಸಬಾರದು).

ವಿವರಣೆಗಳು	ಈ ಕಾರ್ಯನೀತಿಯಲ್ಲಿ, ಈ ಕೆಳಗಿನ ಪದಗಳು ಮತ್ತು ಅಭಿವ್ಯಕ್ತಪಡಿಸಿರುವಿಕೆಗಳು, ಅನ್ಯಥಾ ರೀತಿಯಲ್ಲಿ ಅಗತ್ಯತೆಯನ್ನು ಹೊಂದಿರದ ಹೊರತು, ಅವುಗಳಿಗೆ ಸಂಬಂಧಿಸಿದಂತೆ ತಿಳಿಸಿರುವ ರೀತಿಯಲ್ಲಿ ಅರ್ಥವನ್ನು ಹೊಂದಿರುತ್ತವೆ. *"ಲೆಕ್ಕಪರಿಶೋಧನಾ ಸಮಿತಿ" ಎಂದರೆ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 177 ಹಾಗೂ ಅದರ ಅಡಿಯಲ್ಲಿ ರೂಪಿಸಿರುವ ನಿಯಮಗಳ ಅನುಸಾರ ರಚಿಸಲಾಗಿರುವ ಕಂಪನಿಯ ನಿರ್ದೇಶಕರುಗಳ ಮಂಡಳಿಯ ಲೆಕ್ಕಪರಿಶೋಧನಾ ಸಮಿತಿ.* *ಮಂಡಳಿ ಅಥವಾ ನಿರ್ದೇಶಕರುಗಳ ಮಂಡಳಿ ಎಂದರೆ ಕಂಪನಿಯ ನಿರ್ದೇಶಕರುಗಳ ಮಂಡಳಿ.* *ಕಂಪನಿ ಎಂದರೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ.* *ದೂರು ಎಂದರೆ ವಂಚನೆ, ಭ್ರಷ್ಟಾಚಾರ, ಕಳ್ಳತನ, ಹಣಕಾಸಿನ ದುರುಪಯೋಗ, ಅಥವಾ ನೀತಿ ಭ್ರಷ್ಟತೆ, ಇವುಗಳನ್ನು ಒಳಗೊಂಡಂತೆ ಆದರೆ ಇವುಗಳಿಗಷ್ಟೇ ಸೀಮಿತಗೊಳ್ಳದ ವಿಷಯಗಳ ಬಗ್ಗೆ ಲಿಖಿತ ದೂರು.* *ದೂರುದಾರರು ಎಂದರೆ ಉದ್ಯೋಗದಾತ ಲೆಕ್ಕಪರಿಶೋಧನಾ ಸಮಿತಿಗೆ ಕಂಪನಿಯ ಒಳಗೆ ನಡೆಯುತ್ತಿರುವ ಅನೈತಿಕ ಅಥವಾ ಅನುಚಿತ ಚಟುವಟಿಕೆಗಳ ಬಗ್ಗೆ ವರದಿ ಮಾಡುವ ಕಂಪನಿಯ ಓರ್ವ ಉದ್ಯೋಗಿ ಅಥವಾ ನಿರ್ದೇಶಕರು.* *ಅನುಪಾಲನಾ ಅಧಿಕಾರಿ ಎಂದರೆ ಕಂಪನಿಯ ಕಂಪನಿ ಕಾರ್ಯದರ್ಶಿ* *ಶಿಸ್ತು ಕ್ರಮ ಎಂದರೆ, ವೇತನವನ್ನು ಹಿಡಿದಿಟ್ಟುಕೊಳ್ಳುವುದು, ಸೇವೆಯಿಂದ ಅಮಾನತ್ತಿನಲ್ಲಿಡುವುದು ಕಂಪನಿಯ ಸೇವೆಯಿಂದ ತೆಗೆದುಹಾಕುವುದನ್ನು ಒಳಗೊಂಡಂತೆ, ಆದರೆ ಇವುಗಳಿಗಷ್ಟೇ ಸೀಮಿತಗೊಳ್ಳದಂತೆ ಕಂಪನಿಯ ಕಂಪನಿ ಕಾರ್ಯದರ್ಶಿಯವರು ಯಾವುದೇ ದಂಡನಾ ಕ್ರಮ.* *ಉದ್ಯೋಗಿ ಎಂದರೆ ಅರೆಕಾಲಿಕ ಅಥವಾ ಪೂರ್ಣಕಾಲಿಕ ಆಧಾರದ ಮೇರೆಗೆ ಕಂಪನಿಯ ಉದ್ಯೋಗದಲ್ಲಿರುವ ಯಾವುದೇ ವ್ಯಕ್ತಿ.* *ತನಿಖೆ ಎಂದರೆ ದೂರಿಗೆ ಸಂಬಂಧಿಸಿದಂತೆ ತನಿಖಾ ಅಧಿಕಾರಿಯವರು ಸಮಗ್ರ ಮತ್ತು ವ್ಯವಸ್ಥಿತ ರೀತಿಯಲ್ಲಿ ನಡೆಸುವ ತನಿಖೆ.* *ತನಿಖಾ ಅಧಿಕಾರಿ ಎಂದರೆ ದೂರು ಪ್ರಕ್ರಿಯೆಯಲ್ಲಿ ವಿವರಿಸಿರುವ ರೀತಿಯಲ್ಲಿ ದೂರಿನ ಬಗ್ಗೆ ತನಿಖೆ ನಡೆಸುವ ವ್ಯಕ್ತಿ.*
ಅರ್ಥ ವ್ಯಾಖ್ಯಾನ	ಕಾರ್ಯನೀತಿಯನ್ನು ಈ ಕೆಳಗಿನಂತೆ ಅರ್ಥೈಸಿಕೊಳ್ಳುವುದು: ಎ) ಈ ಮೂಲಕ ವಿವರಿಸಲ್ಪಟ್ಟಿರದ ಪದಗಳು ಕಂಪನಿಗಳ ಅಧಿನಿಯಮ, 2013 ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅಡಿಯಲ್ಲಿ ಕಾಲಾನುಕಾಲಕ್ಕೆ ತಿದ್ದುಪಡಿ ಮಾಡಲಾಗಿರುವಂತಹ ಅರ್ಥವನ್ನೇ ಹೊಂದಿರುತ್ತವೆ ಬಿ) ಕಾರ್ಯನೀತಿಯನ್ನು ಕಂಪನಿಯ ನಿರ್ದೇಶಕರುಗಳ ಮಂಡಳಿಯು ಮಾತ್ರ ಮಾರ್ಪಾಡು ಮಾಡಬಹುದು ಹಾಗೂ ಸಿ) ಸಂದರ್ಭವು ಅನ್ಯಥಾ ರೀತಿಯಲ್ಲಿ ಅಗತ್ಯತೆಯನ್ನು ಹೊಂದಿರದ ಹೊರತು, ಎಲ್ಲಾ ಪದಗಳೂ (ಲಿಂಗ–ನಿರ್ದಿಷ್ಟವಾಗಿರಲಿ ಅಥವಾ ಲಿಂಗ ತಟಸ್ಥವಾಗಿರಲಿ), ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗ ಮತ್ತು ಏಕವಚನವನ್ನು ಆಮದು ಮಾಡಿಕೊಳ್ಳುವ ಪದಗಳು ಬಹುವಚನವನ್ನು ಮತ್ತು ವಿಪರ್ಯಯಗಳನ್ನು ಒಳಗೊಂಡಿರುತ್ತವೆ ಎಂಬುದಾಗಿ ಭಾವಿಸತಕ್ಕದ್ದು.

ದೂರಿನ ಸಂಸ್ಕರಣೆ	ಎ) ಕಂಪನಿಯ ಓರ್ವ ನಿರ್ದೇಶಕರು ಅಥವಾ ಓರ್ವ ಉದ್ಯೋಗಿಯು ಯಾವುದೇ ವಿಷಯದ ಬಗ್ಗೆ ದೂರನ್ನು ಸಲ್ಲಿಸಬಹುದು. ಬಿ) ದೂರು ಲಿಖಿತ ನಮೂನೆಯಲ್ಲಿರತಕ್ಕದ್ದು ಮತ್ತು ಈ ಕೆಳಗಿನ ಅಂಶಗಳನ್ನು ಒಳಗೊಂಡಿರತಕ್ಕದ್ದು: i. ದೂರಿನಲ್ಲಿ ಎತ್ತಲಾಗಿರುವ ಕಳವಳಿ/ಚಿಂತನೆಯ ಹಿನ್ನೆಲೆ ಮತ್ತು ವೃತ್ತಾಂತ; ii. ದಿನಾಂಕಗಳು, ಸ್ಥಳಗಳು ಮತ್ತು ಹೆಸರುಗಳನ್ನು ಒಳಗೊಂಡಂತೆ ನಿರ್ದಿಷ್ಟ ದೃಷ್ಟಾಂತಗಳು; iii. ಓರ್ವ ನಿರ್ದಿಷ್ಟ ಉದ್ಯೋಗಿ/ನಿರ್ದೇಶಕರ ಹೆಸರನ್ನು ತಿಳಿಸುವುದಕ್ಕೆ ಕಾರಣ; ಹಾಗೂ iv. ದೂರಿನ ವಿಷಯದಲ್ಲಿ ಸಮರ್ಪಕ ಕಾರಣಗಳು ಮತ್ತು ಸಾಕ್ಷ್ಯಾಧಾರಗಳು. ಸಿ) ದೂರನ್ನು ಈ ಕೆಳಗಿನ ರೀತಿಯಲ್ಲಿ ನಿರ್ವಹಿಸಬಹುದು: i. ದೂರು ಪ್ರಧಾನ ವ್ಯವಸ್ಥಾಪಕರು ಅಥವಾ ನಿರ್ದೇಶಕರುಗಳವರೆಗೆ ಸಂಬಂಧಿಸಿದ್ದಲ್ಲಿ ಲೆಕ್ಕಪರಿಶೋಧನಾ ಸಮಿತಿಯ ಅಧ್ಯಕ್ಷರು ನಾಮನಿರ್ದೇಶನ ಮಾಡುವ ವ್ಯಕ್ತಿಯಿಂದ ತನಿಖೆ. ii. ದೂರು ಪ್ರಧಾನ ವ್ಯವಸ್ಥಾಪಕರವರೆಗಿನ ಶ್ರೇಣಿಯ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಆಗಿದ್ದಲ್ಲಿ, ಅನುಪಾಲನಾ ಅಧಿಕಾರಿಯವರಿಂದ ಅಥವಾ ಲೆಕ್ಕಪರಿಶೋಧನಾ ಸಮಿತಿಯು ನಾಮನಿರ್ದೇಶನ ಮಾಡುವ ಓರ್ವ ವ್ಯಕ್ತಿಯಿಂದ ತನಿಖೆ. ಆದಾಗ್ಯೂ, ಸಂದರ್ಭಗಳು ಅಂತಹ ಅಗತ್ಯತೆಯನ್ನು ಹೊಂದಿದ್ದಲ್ಲಿ, ಉದ್ಯೋಗಿಯು ನೇರವಾಗಿ ಲೆಕ್ಕಪರಿಶೋಧನಾಸಮಿತಿಯ ಅಧ್ಯಕ್ಷರಿಗೆ ದೂರನ್ನು ಸಲ್ಲಿಸಬಹುದು. ಡಿ) ಅಗತ್ಯ ಬಿದ್ದಲ್ಲಿ ತನಿಖಾ ಅಧಿಕಾರಿಯವರು ದೂರಿನ ಬಗ್ಗೆ ಸರ್ಕಾರಿ ಅಧಿಕಾರಿಯವರಿಗೆ ಸೂಚಿಸಬಹುದು. ಇ) ದೂರನ್ನು ಯಾರ ಬಗ್ಗೆ ಕೊಡಲಾಗಿದೆ ಎಂಬುದನ್ನು ಅವಲಂಭಿಸಿದಂತೆ ದೂರುದಾರರು ದೂರನ್ನು ಮೇಲೆ ತಿಳಿಸಿದ ಯಾವುದೇ ವ್ಯಕ್ತಿಗಳಿಗೆ ಸಲ್ಲಿಸಬಹುದು, ನಿರ್ದಿಷ್ಟ ದೂರಿನ ಬಗ್ಗೆ ಯಾವುದೇ ತನಿಖಾ ಅಧಿಕಾರಿಯವರು ಯಾವುದೇ ಹಿತಾಸಕ್ತಿಯ ಸಂಘರ್ಷವನ್ನು ಎದುರಿಸುತ್ತಿದ್ದಲ್ಲಿ, ಅವರು ಅಂತಹ ತನಿಖೆಯಲ್ಲಿ ಭಾಗವಹಿಸಕೂಡದು.

	ಎಫ್) ದೂರನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿನಗಳ ಒಳಗೆ ತನಿಖಾ ಅಧಿಕಾರಿಯವರು ದೂರುದಾರರಿಗೆ ಪತ್ರ ಬರೆಯತಕ್ಕದ್ದು: i. ದೂರನ್ನು ಸ್ವೀಕರಿಸಲಾಗಿದೆ ಎಂಬುದಾಗಿ ಸ್ವೀಕೃತಿಯನ್ನು ನೀಡತಕ್ಕದ್ದು; ii. ದೂರಿನ ಬಗ್ಗೆ ಪರಿಶೀಲಿಸುವ ಸಲುವಾಗಿ ಅಗತ್ಯವಿರುವ ಮೌಲ್ಯಮಾಪನ ಕಾಲವಧಿಯನ್ನು ಸೂಚಿಸಿದಂತೆ ಮತ್ತು iii. ಅಂತಿಮ ಪ್ರತಿಕ್ರಿಯೆಗೆ ಅಗತ್ಯವಿರುವ ಕಾಲಮಿತಿಯ ಅಂದಾಜನ್ನು ನೀಡತಕ್ಕದ್ದು. ಜಿ) ತನಿಖಾ ಅಧಿಕಾರಿಯವರು, ಸಾಕ್ಷಾಧಾರಗಳು ಮತ್ತು ಮಾಹಿತಿಯ ಸಂಗ್ರಹಣೆಗಾಗಿ ದೂರುದಾರರೊಂದಿಗೆ ಭೇಟಿಯನ್ನು ವ್ಯವಸ್ಥೆ ಮಾಡಬಹುದು. ಎಚ್) ತನಿಖಾ ಅಧಿಕಾರಿಯವರು ಈ ಕೆಳಗಿನ ಕರ್ತವ್ಯಗಳನ್ನು ಹೊಂದಿರುವರು: i. ಸೂಕ್ತ ತನಿಖೆಯನ್ನು ನಡೆಸುವುದು; ii. ದೂರಿಗೆ ಸಂಬಂಧಿಸಿದಂತೆ ಸಾಕ್ಷಾಧಾರಗಳನ್ನು ಸಂಗ್ರಹಿಸುವುದು; iii. ಅಗತ್ಯ ತನಿಖೆಯನ್ನು ನಡೆಸಿದನಂತರ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವುದು; iv. ಕಾನೂನಾತ್ಮಕ ಅಡಚಣೆಗಳ ಷರತ್ತಿಗೆ ಒಳಪಟ್ಟಂತೆ, ನಡೆಸಲಾದ ತನಿಖೆಯ ಫಲಿತಾಂಶವನ್ನು ತಿಳಿಸುವುದು. v. ಅಗತ್ಯಬಿದ್ದಲ್ಲಿ, ದೂರನ್ನು ಯಾರಾದರೊಬ್ಬರು ತಮಗಿಂತ ಉನ್ನತ ಅಧಿಕಾರಿಯವರಿಗೆ ವಹಿಸುವುದು.
ರಕ್ಷಣೆ	ದೂರುದಾರರ ವಿರುದ್ಧವಾಗಿ ಯಾವುದೇ ತಾರತಮ್ಯ, ಕಿರುಕುಳ, ಬಲಿಪಶು ಮಾಡುವಂತಿಲ್ಲ/ತೊಂದರೆಗೆ ಸಿಲುಕಿಸುವಂತಿಲ್ಲ, ಉದ್ಯೋಗಿಗಳಿಗೆ ಸಂಬಂಧಿಸಿದಂತೆ, ಸೇಡು ತೀರಿಸಿಕೊಳ್ಳುವುದು, ಹೆದರಿಸುವುದು ಅಥವಾ ಬೆದರಿಸುವುದು ಅಥವಾ ಸೇವೆಯಿಂದ ತೆಗೆದುಹಾಕುವುದು/ಅಮಾನತ್ತಿನಲ್ಲಿಡುವುದು, ಶಿಸ್ತು ಕ್ರಮ, ವರ್ಗಾವಣೆ, ಹಿಂಬಡ್ತಿ ನೀಡುವುದು, ಮುಂಬಡ್ತಿಯನ್ನು ನಿರಾಕರಿಸುವುದು ಅಥವಾ ಆ ರೀತಿಯ ಯಾವುದೇ ಅನುಚಿತವಾದಂತಹ ಉದ್ಯೋಗ ಪರಿಪಾಠಗಳನ್ನು ಮಾಡುವಂತಿಲ್ಲ. ತನಿಖೆಯ ಅಥವಾ ನಿಯಮನಿಬಂಧನೆಗಳ ಅಗತ್ಯತೆಯ ಷರತ್ತಿಗೆ ಒಳಪಟ್ಟಂತೆ ದೂರುದಾರರ ಗುರುತುಗಳನ್ನು ಮತ್ತು ವಿಷಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಗೋಪ್ಯತೆಯಿಂದ ಇಡತಕ್ಕದ್ದು, ತನಿಖಾ ಅಧಿಕಾರಿಯವರು, ಎತ್ತಲಾಗಿರುವ ವಿಷಯದ ಬಗ್ಗೆ ತನಿಖೆಯನ್ನು ನಡೆಸತಕ್ಕದ್ದು ಹಾಗೂ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ಇನ್ನಿತರ ವಿಷಯಗಳ ಜೊತೆಗೆ ಈ ಕೆಳಗಿನ ಅಂಶಗಳನ್ನು ಒಳಗೊಂಡಂತೆ ಸೂಕ್ತ ಕ್ರಮವನ್ನು ವ್ಯವಸ್ಥಾಪನೆಗೆ ಶಿಫಾರಸು ಮಾಡತಕ್ಕದ್ದು: i. ಉದ್ಯೋಗಿಯು ಯಾವ ಹುದ್ದೆಯಲ್ಲಿದ್ದರೋ ಅದೇ ಹುದ್ದೆಗೆ ಅಥವಾ ಅದಕ್ಕೆ ಸಮನಾದ ಹುದ್ದೆಗೆ ಪುನರ್–ನೇಮಕ ಮಾಡುವುದು ಅಥವಾ ii. ಕಳೆದುಕೊಂಡಿರುವ ಸಂಬಳ, ಸಂಭಾವನೆ ಅಥವಾ ಯಾವುದೇ ಇನ್ನಿತರ ಪ್ರಯೋಜನಗಳು, ಇತ್ಯಾದಿಗಳ ಪರಿಹಾರಕ್ಕಾಗಿ ಆದೇಶ.
ಅಪಾದನೆ	ಸಮರ್ಪಕ ತನಿಖೆಗೆ ಅನುಕೂಲ ಕಲ್ಪಿಸುವ ಸಲುವಾಗಿ ಅಪಾದನೆಗಳನ್ನು ಮಾಡುವ ಓರ್ವ ವ್ಯಕ್ತಿಯು ಆತನ/ಆಕೆಯ ಗುರುತನ್ನು ಬಹಿರಂಗಪಡಿಸುವ ಅಗತ್ಯತೆಯನ್ನು ಈ ಕಾರ್ಯನೀತಿಯು ಹೊಂದಿರುತ್ತದೆ.

ಗೋಪ್ಯತೆ	ಈ ಕಾರ್ಯನೀತಿಯ ಅಡಿಯಲ್ಲಿನ ಎಲ್ಲಾ ಬಹಿರಂಗಪಡಿಸಿರುವಿಕೆಗಳನ್ನೂ ಕಂಪನಿಯು ಸೂಕ್ಷ್ಮ ರೀತಿಯಲ್ಲಿ ಪರಿಗಣಿಸುತ್ತದೆ ಮತ್ತು ದೂರುದಾರರ ಗುರುತನ್ನು ಗೋಪ್ಯವಾಗಿಡುವ ಪ್ರಯತ್ನಗಳನ್ನು ಮಾಡುತ್ತದೆ. ಆದಾಗ್ಯೂ, ತನಿಖಾ ಪ್ರಕ್ರಿಯೆಯು ಮಾಹಿತಿಯ ಮೂಲವನ್ನು ಅನಿವಾರ್ಯವಾಗಿ ಬಹಿರಂಗಪಡಿಸಬಹುದು ಹಾಗೂ ಕಾನೂನು ಪ್ರಕ್ರಿಯೆಯನ್ನು ನಡೆಸುವ ಅಗತ್ಯತೆಯು ಬಿದ್ದಲ್ಲಿ ಗೋಪ್ಯತೆಯನ್ನು ಕಾಪಾಡಲು ಸಾಧ್ಯವಾಗದಂತಹ ಸಂದರ್ಭದಲ್ಲಿ ದೂರುದಾರರು ಹೇಳಿಕೆಯನ್ನು ನೀಡುವ ಅಗತ್ಯತೆಯು ಉಂಟಾಗಬಹುದು
ಸುಳ್ಳು / ದುರುದ್ದೇಶದಿಂದ ಕಿರುಕುಳ ಕೊಡುವ ಉದ್ದೇಶದ ಅಪಾದನೆಗಳು	ಈ ಕಾರ್ಯನೀತಿಯ ಅಡಿಯಲ್ಲಿ ರಕ್ಷಣೆ ಎಂದರೆ, ದೂರುದಾರರು ತಾವು ಮಾಡುತ್ತಿರುವ ಅಪಾದನೆಯು ಸುಳ್ಳು ಎಂಬುದನ್ನು ಅರಿತೂ ದುರುದ್ದೇಶದಿಂದಲೇ ಕಿರುಕುಳ ಕೊಡುವ ಉದ್ದೇಶದಿಂದ ನೀಡುವ ಸುಳ್ಳು ಅಥವಾ ನಕಲಿ ಅಪಾದನೆಗಳಿಂದ ಉದ್ಭವಿಸುವ ಶಿಸ್ತು ಕ್ರಮಗಳಿಂದ ರಕ್ಷಣೆ ಎಂಬುದಾಗಿ ಅರ್ಥೈಸುವುದಿಲ್ಲ. ಓರ್ವ ನಿರ್ದೇಶಕರು ಅಥವಾ ಓರ್ವ ಉದ್ಯೋಗಿಯು ವಿವೇಚನಾರಹಿತ ನಿಷ್ಪ್ರಯೋಜಕ ದೂರುಗಳನ್ನು ಪುನ:ಪುನ: ನೀಡಿದಲ್ಲಿ, ಲೆಕ್ಕಪರಿಶೋಧನಾ ಸಮಿತಿಯು ಸಂಬಂಧಿತ ನಿರ್ದೇಶಕರು ಅಥವಾ ಉದ್ಯೋಗಿಯ ವಿರುದ್ಧವಾಗಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬಹುದು.
ಕಾರ್ಯನೀತಿಯ ಅಡಿಯಲ್ಲಿ ವ್ಯಾಪಿಸಿರದ ವಿಷಯಗಳು/ ಸಮಸ್ಯೆಗಳು	ಉದ್ಯೋಗ ಸಂಬಂಧಿತ ಅಥವಾ ಇತರೆ ವೈಯಕ್ತಿಕ ಕುಂದುಕೊರತೆಗಳನ್ನು ಈ ಕಾರ್ಯನೀತಿಯಿಂದ ಹೊರಗಿಡಲಾಗಿದೆ. ಈಗಾಗಲೇ ಚರ್ಚಿಸಲಾಗಿರುವ ಅಥವಾ ಯಾವುದೇ ಶಿಸ್ತು ಕ್ರಮ ಅಥವಾ ಕಂಪನಿಯ ಇತರೆ ಕಾರ್ಯವಿಧಾನಗಳಿಗೆ ಸಂಬಂಧಿತ ಯಾವುದೇ ವಿಷಯಗಳು ಈ ಕಾರ್ಯನೀತಿಯ ಅಡಿಯಲ್ಲಿ ಬರುವುದಿಲ್ಲ.
ಕಾರ್ಯನೀರ್ತಿಯನ್ನು ತಿದ್ದುಪಡಿ ಮಾಡುವ ಅಧಿಕಾರ	ಕಂಪನಿಯ ನಿರ್ದೇಶಕರುಗಳ ಮಂಡಳಿಯು ಕಾರ್ಯನೀತಿಯನ್ನು ಕಾಲಾನುಕಾಲಕ್ಕೆ ತಿದ್ದುಪಡಿ ಮಾಡಬಹುದು.

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ,

ಸಹಿ/–
ಹೆಚ್.ಡಿ. ಕುಮಾರಸ್ವಾಮಿ
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: ಆಗಸ್ಟ್ 27, 2018

ಅನುಬಂಧ–IV

ಕಾರ್ಯದರ್ಶಿಯ ಲೆಕ್ಕಪರಿಶೋಧನಾ ವರದಿ

31 ಮಾರ್ಚ್ 2018ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿಗೆ

{ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 204(1) ಹಾಗೂ ಕಂಪನಿಗಳ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಬಳ/ಸಂಭಾವನೆ ನಿಯಮಗಳು, 2014ರ ನಿಯಮ ಸಂಖ್ಯೆ 9ರ ಅನುಸರಣೆಯಂತೆ.}

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಸದಸ್ಯರಿಗೆ

1. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದಿಂದ ಅನ್ವಯಗೊಳ್ಳುವ ಶಾಸನಬದ್ಧ ಅನುವುಗಳ ಅನುಪಾಲನೆ ಮತ್ತು ಸಾಂಸ್ಥಿಕ ಉತ್ತಮ ಪರಿಪಾಠಗಳಿಗೆ ಬದ್ಧವಾಗಿರುವುದಕ್ಕೆ ಸಂಬಂಧಿಸಿದಂತೆ ಕಾರ್ಯದರ್ಶಿಯ ಲೆಕ್ಕಪರಿಶೋಧನೆಯನ್ನು ನಾವು ನಡೆಸಿರುವೆವು. ಸಾಂಸ್ಥಿಕ ನಡವಳಿಕೆಗಳು/ಶಾಸನಬದ್ಧ ಅನುಪಾಲನಾ ಕ್ರಮಗಳ ಮೌಲ್ಯಮಾಪನ ಮಾಡುವ ಸಲುವಾಗಿ ನನಗೆ ನ್ಯಾಯಸಮ್ಮತ ಆಧಾರವನ್ನು ನೀಡುವ ರೀತಿಯಲ್ಲಿ ಹಾಗೂ ಅದರ ಮೇಲೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ರೀತಿಯಲ್ಲಿ ನಾವು ಕಾರ್ಯದರ್ಶಿಯ ಲೆಕ್ಕಪರಿಶೋಧನೆಯನ್ನು ನಡೆಸಿರುವೆನು.

2. ಕಂಪನಿಯ ಲೆಕ್ಕಪುಸ್ತಕಗಳು, ಕಾಗದಪತ್ರಗಳು ನಡೆವಳಿಗಳ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಲಾಗಿದ್ದ ಸಲ್ಲಿಕೆಗಳು ಹಾಗೂ ಕಂಪನಿಯು ನಿರ್ವಹಿಸಿದ್ದಂತಹ ಇನ್ನಿತರೆ ದಾಖಲೆಗಳನ್ನು ನಾವು ಪರಿಶೀಲನೆ ಮಾಡಲಾದ ಆಧಾರದ ಮೇರೆಗೆ ಹಾಗೂ ಅಲ್ಲದೆಯೇ, ಕಾರ್ಯದರ್ಶಿಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಕಂಪನಿ, ಅದರ ಅಧಿಕಾರಿಗಳು, ಪ್ರತಿನಿಧಿಗಳು, ಅಧಿಕೃತ ಪ್ರತಿನಿಧಿಗಳು ಒದಗಿಸಿದಂತಹ ಮಾಹಿತಿಯ ಆಧಾರದ ಮೇರೆಗೆ ಹಾಗೂ ಅನುಬಂಧವಾಗಿ ಈ ವರದಿಗೆ ಲಗತ್ತಿಸಲಾಗಿರುವ ನಮ್ಮ ಪ್ರತ್ಯೇಕ ಪತ್ರದ ಷರತ್ತಿಗೆ ಒಳಪಟ್ಟಂತೆ, ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು 31 ಮಾರ್ಚ್ 2018ಕ್ಕೆ ಅಂತ್ಯಗೊಂಡಂತಹ ಹಣಕಾಸು ಸಾಲನ್ನು ವ್ಯಾಪಿಸಿದ್ದಂತಹ ಲೆಕ್ಕಪರಿಶೋಧನಾ ಅವಧಿಯಲ್ಲಿ ಈ ಕೆಳಗೆ ಪಟ್ಟಿ ಮಾಡಲಾಗಿರುವ ಶಾಸನಬದ್ಧ ಅನುವುಗಳ ಜೊತೆಯಲ್ಲಿ ಅನುಪಾಲನಾ ಕ್ರಮಗಳನ್ನು ತೆಗೆದುಕೊಂಡಿರುವುದು ಹಾಗೂ ಇಲ್ಲಿಂದ ಮುಂದಕ್ಕೆ ಮಾಡಲಾಗಿರುವ ವರದಿಯಲ್ಲಿ ತಿಳಿಸಲಾಗಿರುವ ರೀತಿಯಲ್ಲಿ ಹಾಗೂ ಅಷ್ಟರ ಮಟ್ಟಿಗೆ ಕಂಪನಿಯು ಸಮರ್ಪಕ ಮಂಡಳಿ–ಪ್ರಕ್ರಿಯೆಗಳನ್ನು ಹಾಗೂ ಅನುಸರಣಾ/ಅನುಪಾಲನಾ ವ್ಯವಸ್ಥೆಯನ್ನು ಹೊಂದಿರುವುದು ಎಂಬುದಾಗಿ ನಾವು ಈ ಮೂಲಕ ವರದಿಯನ್ನು ಮಾಡುತ್ತಿರುವೆವು.

3. 31 ಮಾರ್ಚ್ 2018ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿಗೆ ಕಂಪನಿಯು ನಿರ್ವಹಿಸಿದ್ದ ಲೆಕ್ಕಪತ್ರ ಪುಸ್ತಕಗಳು, ಕಾಗದ ಪತ್ರಗಳು, ನಡೆವಳಿಗಳ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಲಾಗಿದ್ದ ಸಲ್ಲಿಕೆಗಳನ್ನು ಈ ಕೆಳಗಿನ ಅನುವುಗಳ ಅನುಸಾರ ನಾನು ಪರಿಶೀಲಿಸಿರುವೆನು:

(ಎ) ಕಂಪನಿಗಳ ಅಧಿನಿಯಮ, 2013 (ಅಧಿನಿಯಮ) ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು;

(ಬಿ) ಭದ್ರತೆಗಳ ಗುತ್ತಿಗೆಗಳು (ನಿಯಂತ್ರಣ) ಅಧಿನಿಯಮ, 1956 ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು;

(ಸಿ) ಉಗ್ರಾಣ/ಭಂಡಾರಗಳ (ಡಿಪಾಸಿಟರೀಸ್) ಅಧಿನಿಯಮ, 1996 ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಂತ್ರಣಗಳು ಮತ್ತು ಉಪ–ನಿಯಮಗಳು;

(ಡಿ) ವಿದೇಶಿ ನೇರ ಹೂಡಿಕೆ, ಕಡಲಾಚೆಯ ನೇರ ಹೂಡಿಕೆ ಮತ್ತು ವಿನಿಮಯ ವಾಣಿಜ್ಯೀಯ ಸಾಲಗಳು, ಇವುಗಳಷ್ಟರ ಮಟ್ಟಿಗೆ ವಿದೇಶಿ ವಿನಿಮಯ ನಿರ್ವಹಣಾ ಅಧಿನಿಯಮ, 1999 ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು ಮತ್ತು ನಿಯಂತ್ರಣಗಳು;

(ಇ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ (ಖರೀದಿಗಳು ಮತ್ತು ಸೇವೆಗಳು) ಪಾರದರ್ಶಕತೆ ಅಧಿನಿಯಮ, 1999 ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು;

4. ನಿರ್ದೇಶಕರುಗಳ ಮಂಡಳಿಯ ಮತ್ತು ಸರ್ವಸದಸ್ಯರುಗಳ ಸಭೆಯನ್ನು ನಡೆಸಬೇಕಾಗಿರುವ ಅಗತ್ಯತೆಗಳ ಬಗ್ಗೆ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯು ನೀಡಿರುವ ಕಾರ್ಯದರ್ಶಿಯ ಮಾನದಂಡಗಳ ಷರತ್ತುಗಳ ಅನ್ವಯಗೊಳ್ಳುವ ಷರತ್ತುಗಳನ್ನು ಪಾಲಿಸಿರುವ ಬಗ್ಗೆಯೂ ಕೂಡ ನಾನು ಪರಿಶೀಲಿಸಿದ್ದೇನೆ.

5. ಪ್ರತ್ಯಕ್ಷ/ನೇರ ತೆರಿಗೆ ಪರೋಕ್ಷ/ಅಪ್ರತ್ಯಕ್ಷ ತೆರಿಗೆ ನಿಯಮಗಳು ಮುಂತಾದ ಅನ್ವಯಗೊಳ್ಳುವ ಹಣಕಾಸು ಸಂಬಂಧಿತ ನಿಯಮಗಳ ಅನುವುಗಳನ್ನು ಕಂಪನಿಯು ಅನುಸರಿಸಿರುವುದರ

ಬಗ್ಗೆ ಅವುಗಳು ಶಾಸನಬದ್ಧ ಹಣಕಾಸು ಲೆಕ್ಕಪರಿಶೋಧನೆಯ ಮತ್ತು ಅದಕ್ಕಾಗಿ ನೇಮಕಗೊಳಿಸಲ್ಪಡುವ ವೃತ್ತಿಪರರ ಸಮೀಕ್ಷೆಗೆ ಒಳಪಡುವುದರಿಂದ ನಾನು ಪರಿಶೀಲಿಸಿರುವುದಿಲ್ಲ.

6. ಸಮೀಕ್ಷೆಯ ಅಡಿಯಲ್ಲಿನ ಅವಧಿಯಲ್ಲಿ ಕಂಪನಿಯು ಮೇಲೆ ತಿಳಿಸಲಾದ ಅಧಿನಿಯಮಗಳು, ನಿಯಮಗಳು, ನಿಯಂತ್ರಣಗಳು, ಮಾರ್ಗಸೂಚಿಗಳು, ಇತ್ಯಾದಿಗಳ ಅನುವುಗಳನ್ನು ಕಂಪನಿಯು ಈ ಕೆಳಗಿನ ಕಂಡಿಕೆ 8ರಲ್ಲಿ ತಿಳಿಸಲಾಗಿರುವ ಷರತ್ತು/ಸೀಮಿತಗಳಿಗೆ ಒಳಪಟ್ಟಂತೆ ಅನುಸರಿಸಿರುವುದು.

7. 8ರಲ್ಲಿ ತಿಳಿಸಲಾಗಿರುವ ಷರತ್ತು/ಪರಿಮಿತಿಗಳಿಗೆ ಒಳಪಟ್ಟಂತೆ ನಾವು ಈ ಕೆಳಗಿನಂತೆ ವರದಿ ಮಾಡುತ್ತಿರುವೆವು.

7.1 (ಎ) ಪ್ರಸಕ್ತ ಸಾಲಿನಲ್ಲಿ ನಿರ್ದೇಶಕರುಗಳ ಮತ್ತು ಸಮಿತಿ ಸಭೆಗಳಿಗಾಗಿ ನೋಟೀಸುಗಳನ್ನು ಸಮರ್ಪಕ ಮುಂಚಿತವಾಗಿ ನೀಡಲಾಗಿರುವುದು; ಅಂತಹ ನೋಟೀಸುಗಳು ವಿಷಯಸೂಚಿ ಬಾಬ್ತುಗಳ ಮೇಲೆ ಸವಿವರ ಟಿಪ್ಪಣಿಗಳು ಮತ್ತು ಸಂಬಂಧಿತ ಸಭೆಗಳ ಕರಡು ನಡೆವಳಿಗಳನ್ನು ಲಗತಿಸಲ್ಪಟ್ಟಿದ್ದವು, ಕಂಪನಿಯು ಸಭೆಯ ಮುಂಚಿತವಾಗಿ ವಿಷಯಸೂಚಿಯಲ್ಲಿರುವ ಬಾಬ್ತುಗಳ ಮೇಲೆ ಅಗತ್ಯವಿರುವ ಮಾಹಿತಿ ಮತ್ತು ಸ್ಪಷ್ಟನೆಗಳನ್ನು ಕೋರಲು ಮತ್ತು ಅವುಗಳನ್ನು ಪಡೆದುಕೊಳ್ಳಲು ಹಾಗೂ ಸಭೆಯಲ್ಲಿ ಅರ್ಥಪೂರ್ಣ ಭಾಗವಹಿಸುವಿಕೆಯು ಸಾಧ್ಯವಾಗುವಂತಹ ವ್ಯವಸ್ಥೆಯನ್ನು ಕಂಪನಿಯು ಹೊಂದಿರುವುದು. ಅಸಮ್ಮತಿ ಸೂಚಿಸುವ ಸದಸ್ಯರುಗಳ ಅಭಿಪ್ರಾಯಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ನಡೆವಳಿಗಳ ಭಾಗವಾಗಿ ದಾಖಲಿಸುವುದರ ಜೊತೆಗೆ ಬಹುಮತದ ಅಭಿಪ್ರಾಯಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಮುಂದಕ್ಕೆ ತೆಗೆದುಕೊಂಡು ಹೋಗಲಾಗಿದ್ದಿತು.

(ಬಿ) ಕಂಪನಿಯು, ಸದಸ್ಯರುಗಳ ಮತ್ತು ನಿರ್ದೇಶಕರುಗಳ ಸಭೆಗಳನ್ನು ಕರೆಯುವಲ್ಲಿ ಮತ್ತು ನಡೆಸುವಲ್ಲಿ ಸಮರ್ಪಕ ಮಂಡಳಿ ಪ್ರಕ್ರಿಯೆಗಳನ್ನು ಅನುಸರಿಸಿದ್ದಿತು; ಕಂಪನಿಯು ಸದಸ್ಯರುಗಳ ಸಾಮಾನ್ಯ ಸಭೆಗಳ ನಡೆವಳಿಗಳನ್ನು ದಾಖಲಿಸುವ ಸಲುವಾಗಿ ಸಮರ್ಪಕ ಪುಸ್ತಕಗಳನ್ನು ನಿರ್ವಹಿಸಿರುವುದು, ನಿರ್ದೇಶಕರುಗಳ ಮಂಡಳಿ ಮತ್ತು ನಿರ್ದೇಶಕರುಗಳ ಸಮಿತಿಯ ಸಭೆಗಳ ನಡೆವಳಿಗಳನ್ನು, ಇ–ಮತ ಚಲಾವಣೆಯ ಮೂಲಕ ಅನುಮೋದಿಸಲಾದ ನಿರ್ಣಯಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಸಾಮಾನ್ಯ ಸಭೆಗಳ ನಡೆವಳಿಗಳ ಪುಸ್ತಕದಲ್ಲಿ ದಾಖಲಿಸಲಾಗಿದ್ದಿತು.

7.2 ಸಮೀಕ್ಷೆಯ ಅಡಿಯಲ್ಲಿನ ಅವಧಿಯಲ್ಲಿ ನಡೆಯಲಾದ ನಿರ್ದೇಶಕರುಗಳ ಮಂಡಳಿಯ ಸಂಯೋಜನೆಯಲ್ಲಿನ ಬದಲಾವಣೆಗಳು ಅಧಿನಿಯಮದ ಅನುವುಗಳ ಅನುಸಾರವೇ ಆಗಿರುವುದು.

7.3 (i) ಪ್ರಸಕ್ತ ಸಾಲಿನಲ್ಲಿ ಕಂಪನಿಯು ಪ್ರತಿಯೊಂದು ಷೇರಿಗೂ ರೂ.1,000/–ದಂತೆ 1,15,58,687ರಷ್ಟು ಸಂಖ್ಯೆಯ ಷೇರುಗಳನ್ನು ನೀಡಿರುವುದು. ಈ ಬಂಡವಾಳ ಷೇರುಗಳ ನೀಡಿಕೆಯ ಹೊರತಾಗಿ, ಷೇರುಗಳ ಯಾವುದೇ ಸಾರ್ವಜನಿಕ, ಆದ್ಯತೆಯ ನೀಡಿಕೆಗಳು ಅಥವಾ ಡಿಬೆಂಚರುಗಳು ಅಥವಾ ಸ್ವೆಟ್ ಈಕ್ವಿಟಿಗಳು ಇರಲಿಲ್ಲ;

(ii) ಭದ್ರತೆಗಳನ್ನು ಹಿಂಖರೀದಿಸುವ ಆಧಾರದ ಮೇರೆಗೆ ಖರೀದಿಸಿದ ದೃಷ್ಟಾಂತಗಳು ಇರಲಿಲ್ಲ.

(iii) ವಿಲೀನ, ವಿಕೀಕರಣ, ಪುನರ್–ನಿರ್ಮಾಣ, ಇತ್ಯಾದಿಗಳ ನಿದರ್ಶನಗಳು ಇರಲಿಲ್ಲ;

(iv) ಕಂಪನಿಯು ಯಾವುದೇ ವಿದೇಶಿ ತಂತ್ರಜ್ಞಾನ ಸಹಯೋಗದೊಂದಿಗೆ ಯಾವುದೇ ಒಡಂಬಡಿಕೆಯನ್ನೂ ಮಾಡಿಕೊಂಡಿರುವುದಿಲ್ಲ.

8. ಪರಿಮಿತಿಗಳು :

8.1 ಪ್ರಸಕ್ತ ಹಣಕಾಸು ಸಾಲಿನಲ್ಲಿ ನಡೆಸಿದ ಎರಡು ಮಂಡಳಿ ಸಭೆಗಳಿಗೆ ಸಂಬಂಧಿಸಿದಂತೆ ಅಂತರವು ನೂರ ಇಪ್ಪತ್ತು ದಿನಗಳನ್ನು ಮೀರಿದ್ದಿತಾದ್ದರಿಂದ ಕಂಪನಿಯು, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 173 ಮತ್ತು ಕಾರ್ಯದರ್ಶಿಯ ಮಾನದಂಡ ಎಸ್ಎಸ್ –1ರ ಅನುವುಗಳನ್ನು ಅನುಸರಿಸಿರಲಿಲ್ಲ.

8.2 ಕಂಪನಿಯು ಕರ್ನಾಟಕದ ಉದ್ದಗಲಕ್ಕೂ ವಿವಿಧ ಸ್ಥಳಗಳು ಮತ್ತು ಕಛೇರಿಗಳಲ್ಲಿ ನೀರಾವರಿ ಮತ್ತು ನಿರ್ಮಾಣ ಯೋಜನೆಗಳು, ನಿವೇಶನಗಳು ಮತ್ತು ಅಣೆಕಟ್ಟುಗಳನ್ನು ಪೂರ್ಣಗೊಳಿಸುವ ಸಲುವಾಗಿ ಅನೇಕ ಸಂಖ್ಯೆಯ ಗುತ್ತಿಗೆದಾರರುಗಳನ್ನು ನೇಮಕ ಮಾಡಿಕೊಂಡಿರುವುದು. ಗುತ್ತಿಗೆದಾರರುಗಳು ನಿರ್ಮಾಣ, ಸಿವಿಲ್ ಮತ್ತು ಇತರೆ ಕೂಲಿ ಗುತ್ತಿಗೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ತಮ್ಮ ಹಾಜರಾತಿ ಪಟ್ಟಿಯಲ್ಲಿ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವರು. ಕಂಪನಿಯೂ ಕೂಡ ತನ್ನ ನೊಂದಾಯಿತ ಕಛೇರಿಯಲ್ಲಿ ಕೂಲಿ ಗುತ್ತಿಗೆದಾರರುಗಳನ್ನು ನೇಮಕ ಮಾಡಿಕೊಂಡಿರುವುದು. ಕಂಪನಿಯು ಪ್ರಧಾನ ಉದ್ಯೋಗದಾತನಾಗಿ, ಗುತ್ತಿಗೆ ಕೂಲಿ (ನಿಯಂತ್ರಣ ಮತ್ತು ತೊಡೆದುಹಾಕುವಿಕೆ) ಅಧಿನಿಯಮ, 1970 ಮತ್ತು ಅದಕ್ಕೆ ಅನುಗುಣವಾದ ಕರ್ನಾಟಕ ನಿಯಮಗಳು, 1974ರ ಅನುವುಗಳನ್ನು ಅದರಲ್ಲೂ ವಿಶೇಷವಾಗಿ ತನ್ನ ನಿರ್ಮಾಣ ಯೋಜನೆಗಳಲ್ಲಿ, ನಿವೇಶನಗಳಲ್ಲಿ ಮತ್ತು ಅಣೆಕಟ್ಟುಗಳಲ್ಲಿ ಪಾಲಿಸಿರಲಿಲ್ಲ.

ಸಹಿ/–
ಕೆ.ಎನ್. ನಾಗೇಶ ರಾವ್
ಕಾರ್ಯನಿರತ ಕಂಪನಿ ಕಾರ್ಯದರ್ಶಿ
ಎಫ್‌ಸಿಎಸ್ 3000 ಸಿಪಿ 12861

ಬೆಂಗಳೂರು
06 ಸೆಪ್ಟೆಂಬರ್, 2018

ಸ್ವತಂತ್ರ ಲೆಕ್ಕಪರಿಶೋಧಕರ ವರದಿ

ಸದಸ್ಯರುಗಳಿಗೆ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

31 ಮಾರ್ಚ್ 2018ರಲ್ಲಿದ್ದಂತೆ ಸಂತುಲ ಪಟ್ಟಿ ಆ ದಿನಾಂಕಕ್ಕೆ ಅಂತ್ಯಗೊಂಡ ಪ್ರಸಕ್ತ ಸಾಲಿನ ಲಾಭ ಮತ್ತು ನಷ್ಟ ತ:ಖ್ತೆ (ಇತರೇ ಸಮಾಗ್ರ ಆದಾಯ ಸೇರಿದಂತೆ) ಹಣಕಾಸು ಹರಿವಿನ ತ:ಖ್ತೆ, ವರ್ಷದ ಅಂತ್ಯಕ್ಕೆ ಈಕ್ವಿಟಿಯಲ್ಲಿನ ಬದಲಾವಣೆ ತಃಖ್ತೆ ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು ಹಾಗೂ ಅದಕ್ಕೆ ಲಗತ್ತಿಸಲಾಗಿರುವ ವಿವರಣಾತ್ಮಕ ಮಾಹಿತಿಯ ಸಂಕ್ಷಿಪ್ತ ವರದಿಯನ್ನು ಒಳಗೊಂಡಂತೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ (ಕಂಪನಿ) ಜೊತೆಯಲ್ಲಿ ಲಗತ್ತಿಸಲಾಗಿರುವ Ind AS ಹಣಕಾಸು ತ:ಖ್ತೆಗಳನ್ನು ನಾವು ಲೆಕ್ಕಪರಿಶೋಧನೆ ಮಾಡಿರುವೆವು.

ಹಣಕಾಸು ತ:ಖ್ತೆಗಳ ಆಡಳಿತ ಮಂಡಳಿಯ ಜವಾಬ್ದಾರಿ

ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಹಾಗೂ ಕಂಪನಿಗಳ (ಭಾರತದ ಲೆಕ್ಕ ಮಾನದಂಡಗಳು) 2015ರ ನಿಯಮದ ಜೊತೆಯಲ್ಲಿ ಓದಲ್ಪಡುವ ಅಧಿನಿಯಮ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ Ind AS ಮಾನದಂಡಗಳನ್ನು ಅನುಸರಿಸಿದಂತೆ ಕಂಪನಿಯ ಹಣಕಾಸಿನ ಸ್ಥಿತಿಗತಿ, ಇತರೆ ಸಮಗ್ರ ಆದಾಯ ಸೇರಿದಂತೆ ಹಣಕಾಸಿಗೆ ಸಂಬಂಧಿತ ಕಾರ್ಯನಿರ್ವಹಣೆ ಹಣಕಾಸಿನ ಹರಿವು ಮತ್ತು ಈಕ್ವಿಟಿಯಲ್ಲಿನ ಬದಲಾವಣೆ ಹರಿವಿನ ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಅಭಿಪ್ರಾಯವನ್ನು ನೀಡುವ ರೀತಿಯಲ್ಲಿ ಈ Ind AS ಹಣಕಾಸು ತ:ಖ್ತೆಗಳನ್ನು ತಯಾರಿಸುವುದಕ್ಕೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 2013ರ (ಅಧಿನಿಯಮ) ಪರಿಚ್ಛೇದ 134(5) ರಲ್ಲಿ ತಿಳಿಸಲಾಗಿರುವ ವಿಷಯಗಳಿಗೆ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ. ಈ ಜವಾಬ್ದಾರಿಯು ಸತ್ಯಾಸತ್ಯತೆಯಿಂದ ಮತ್ತು ನ್ಯಾಯಸಮ್ಮತತೆಯಿಂದ ಕೂಡಿದ ಮತ್ತು ವಂಚನೆಗಳು ಅಥವಾ ತಪ್ಪುಗಳನ್ನು ಎಸಗುವುದರ ಕಾರಣ ವಿಷಾಯಕ ತಪ್ಪು ಹೇಳಿಕೆಗಳಿಂದ ಹೊರತಾದ Ind AS ಹಣಕಾಸಿನ ತ:ಖ್ತೆಗಳನ್ನು ತಯಾರಿಸುವ ಮತ್ತು ಮಂಡಿಸುವುದಕ್ಕೆ ಸೂಕ್ತವಾದಂತಹ ನಿಗಮದ ಆಸ್ತಿಗಳ ಸಂರಕ್ಷಣೆಗಾಗಿ ಅಧಿನಿಯಮದ ಅನುವುಗಳ ಅನುಸಾರ ಸಮರ್ಪಕವಾದಂತಹ ರೀತಿಯಲ್ಲಿ ಲೆಕ್ಕಪತ್ರಗಳ ನಿರ್ವಹಣೆಗಾಗಿ ಮತ್ತು ವಂಚನೆಗಳನ್ನು ತಡೆಯುವುದು ಮತ್ತು ಪತ್ತೆಹಚ್ಚುವುದು, ಸೂಕ್ತ ಲೆಕ್ಕವನ್ನಿಡುವಿಕೆಯ ಕಾರ್ಯನೀತಿಯ ಆಯ್ಕೆ ಮತ್ತು ಅದನ್ನು ಅನ್ವಯಗೊಳಿಸುವುದು, ನ್ಯಾಯಸಮ್ಮತತೆಯಿಂದ ಮತ್ತು ವಿವೇಚನೆಯಿಂದ ಕೂಡಿದ ತೀರ್ಮಾನಗಳನ್ನು ಕೈಗೊಳ್ಳುವುದು ಮತ್ತು ಮೌಲ್ಯಮಾಪನಗಳನ್ನು ಮಾಡುವುದು ಹಾಗೂ ಸಮರ್ಪಕವಾದ ರೀತಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಹಾಗೂ ನಿರ್ವಹಣೆ, ಇವುಗಳನ್ನೂ ಸಹ ಒಳಗೊಂಡಿರುತ್ತದೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ, ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸಿನ ತ:ಖ್ತೆಗಳ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಲೆಕ್ಕಪರಿಶೋಧನೆಯನ್ನು ನಡೆಸುವ ವೇಳೆಯಲ್ಲಿ, ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸುವ ಅಗತ್ಯತೆಯನ್ನು ಹೊಂದಿರುವ ಅಧಿನಿಯಮದ ಅನುವುಗಳು, ಲೆಕ್ಕವನ್ನಿಡುವಿಕೆಯ ಮತ್ತು ಲೆಕ್ಕಪರಿಶೋಧನೆಯ ಮಾನದಂಡಗಳು ಮತ್ತು ಅಧಿನಿಯಮ ಹಾಗೂ ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅನುವುಗಳ ಅನುಸಾರ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲು ಅಗತ್ಯವಿರುವ ವಿಷಯಗಳನ್ನು ನಾವು ಪರಿಗಣಿಸಿರುವೆವು.

ಅಧಿನಿಯಮದ ಪರಿಚ್ಛೇದ 143 (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸಿನ ತ:ಖ್ತೆಗಳನ್ನು ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸು ತ:ಖ್ತೆಗಳು ವಿಷಾಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವ ಸಲುವಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಅಗತ್ಯತೆಯನ್ನು ಆ ಮಾನದಂಡಗಳು ಹೊಂದಿರುತ್ತವೆ.

ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸು ತ:ಖ್ತೆಗಳಲ್ಲಿ ತೋರಿಸಿರುವ ಮೊತ್ತಗಳು ಮತ್ತು ಬಹಿರಂಗಪಡಿಸುವಿಕೆಗಳ ಬಗ್ಗೆ ಲೆಕ್ಕಪರಿಶೋಧನೆಗೆ ಅಗತ್ಯವಿರುವ ದಾಖಲೆಗಳ ಸಾಕ್ಷಾಧಾರಗಳನ್ನು ಪಡೆದುಕೊಳ್ಳುವ ಸಲುವಾಗಿ ಕಾರ್ಯವಿಧಾನಗಳನ್ನು ನಡೆಸುವುದನ್ನು ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ಆಯ್ಕೆ ಮಾಡಿಕೊಳ್ಳಲಾದ ಕಾರ್ಯವಿಧಾನವು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸು ತ:ಖ್ತೆಗಳಲ್ಲಿನ ವಂಚನೆಗಳ ಕಾರಣವಾಗಿರಲ್ಲೀ ಅಥವಾ ತಪ್ಪುಗಳನ್ನು ಎಸಗುವ ಕಾರಣದಿಂದಾಗಲ್ಲೀ ವಿಷಾಯಕ ತಪ್ಪು ಹೇಳಿಕೆಗಳ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ.

ಅಂತಹ ಸಂಭಾವ್ಯ ಅಪಾಯಗಳ ನಿರ್ಧಾರಣೆ ಮಾಡುವಲ್ಲಿ, ಪ್ರಸ್ತುತ ಸಂದರ್ಭದಲ್ಲಿ ಸೂಕ್ತವಾಗಬಹುದಾದಂತಹ ಲೆಕ್ಕಪರಿಶೋಧನಾ ಕಾರ್ಯನೀತಿಯನ್ನು ರೂಪಿಸುವ ಉದ್ದೇಶದಿಂದ, ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ Ind AS ಹಣಕಾಸು ತ:ಖ್ತೆಗಳ ನ್ಯಾಯಸಮ್ಮತ ಮಂಡಿಸುವಿಕೆಗೆ ಕಂಪನಿಯ ಸಿದ್ಧತೆಗೆ ಸೂಕ್ತವೆನಿಸುವ ಆಂತರಿಕ ನಿಯಂತ್ರಣವನ್ನು ಲೆಕ್ಕಪರಿಶೋಧಕರು ಪರಿಗಣಿಸುತ್ತಾರೆ.

ಲೆಕ್ಕಪರಿಶೋಧನೆಯು ಬಳಸಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳ ಸೂಕ್ತತೆಯನ್ನು ಮೌಲ್ಯಮಾಪನ ಮಾಡುವುದನ್ನು ಮತ್ತು ಕಂಪನಿಯ ನಿರ್ದೇಶಕರುಗಳು ಮಾಡಿದಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮೌಲ್ಯಮಾಪನಗಳ ನ್ಯಾಯಸಮ್ಮತತೆಯನ್ನು ಹಾಗೂ ಅಲ್ಲದೆಯೇ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸು ತ:ಖ್ತೆಗಳ ಒಟ್ಟಾರೆ ಮಂಡನೆಯನ್ನು ಮೌಲ್ಯಮಾಪನ ಮಾಡುವುದನ್ನೂ ಕೂಡ ಒಳಗೊಂಡಿರುತ್ತದೆ.

ನಾವು ಪಡೆದುಕೊಂಡಿರುವಂತಹ ಲೆಕ್ಕಪರಿಶೋಧನಾ ಸಾಕ್ಷಾಧಾರಗಳು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸು ತ:ಖ್ತೆಗಳ ಮೇಲೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ಆಧಾರವನ್ನು ಒದಗಿಸುವುದಕ್ಕಾಗಿ ಸಮರ್ಪಕವಾಗಿರುತ್ತವೆ ಹಾಗೂ ಸೂಕ್ತವಾಗಿರುತ್ತವೆ ಎಂಬ ವಿಶ್ವಾಸವು ನಮಗಿರುವುದು.

ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರಗಳು:

i) ಟಿಪ್ಪಣಿ ಸಂಖ್ಯೆ 3 – ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 3.3 "ವರಮಾನದ ಪರಿಗಣನೆ" ಇದರ ಅಡಿಯಲ್ಲಿ ಬಾಡಿಗೆಯನ್ನು ನಗದು ಆಧಾರದ ಮೇರೆಗೆ / ವಾಸ್ತವಿಕವಾಗಿ ಸ್ವೀಕರಿಸಿದಂದು ಮಾಡಲಾಗಿದ್ದಿತು. ಇದು ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ 18 "ವರಮಾನ"ದ ಅನುಸಾರ ಆಗಿರಲಿಲ್ಲ ಹಾಗೂ ಇದರಿಂದ ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ii) ಟಿಪ್ಪಣಿ ಸಂಖ್ಯೆ 4ಡಿ – ಬಂಡವಾಳೀಕರಿಸಲಾದಂತಹ ಭೂಮಿಯ ಮೌಲ್ಯವು ಸಂಬಂಧಿತ ವಿಶೇಷ ಭೂ ಸ್ವಾಧೀನ ಅಧಿಕಾರಿಗಳಿಂದ ಸ್ವೀಕರಿಸಲಾದಂತಹ ಬಳಕೆ ಪ್ರಮಾಣಪತ್ರಗಳ ಆಧಾರ ಮೇರೆಗೆ ಆಗಿದ್ದಿತು ಹಾಗೂ ಭೂ ಸ್ವಾಧೀನ ಪರಿಹಾರ ತೀರ್ಪುಗಳು/ ಒಪ್ಪಿಗೆ ತೀರ್ಪುಗಳು/ಬಡ್ಡಿ, ಇತ್ಯಾದಿ ವಿವಿಧ ಕಾರ್ಯವಿಧಾನಗಳು ಅಂತಿಮರೂಪಕ್ಕೆ ಬರುವುದರ ಮೇಲೆ ಅವಲಂಭಿತವಾಗಿದ್ದಿತು ಹಾಗೂ ಇದರಿಂದಾಗಿ ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

iii) ಟಿಪ್ಪಣಿ ಸಂಖ್ಯೆ 4 (ಇ) – ಭೂಮಿಯ ನೇರ ಖರೀದಿಗಾಗಿ 40 ಎಕರೆಗಳು 35.50 ಗುಂಟೆಗಳನ್ನು ಕಂಪನಿಯ ಪರವಾಗಿ ಪರಿವರ್ತನೆಯ ನಮೂದುಗಳು ಬಾಕಿಯಿದ್ದವು. ಭೂ ಸ್ವಾಧೀನ ಪ್ರಕ್ರಿಯೆಗಳ ಮೂಲಕ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಗೆ, ಪರೀಕ್ಷಾ–ಪರಿಶೀಲನೆಯ ಆಧಾರದ ಮೇರೆಗೆ, ನಾವು ಪರಿವರ್ತನೆಯ ನಮೂದುಗಳನ್ನು ಮಾಡಲಾಗಿದ್ದಿತು.

iv) ಟಿಪ್ಪಣಿ ಸಂಖ್ಯೆ 11 (ಬಿ) – ಷೇರು ಅರ್ಜಿಗಳ ಹಣಕಾಸು ಎಂಬುದಾಗಿ ತಿಳಿಯಪಡಿಸಲಾಗಿದ್ದಂತಹ ಹಾಗೂ ಸ್ವೀಕರಿಸಲಾಗಿದ್ದ ಅನುದಾನಗಳ ಪ್ರತಿಯಾಗಿ ಹೊಂದಾಣಿಕೆ ಮಾಡಿಕೊಳ್ಳುವ ಸಲುವಾಗಿ ಅನುಮೋದನೆಯು ಬಾಕಿಯಿದ್ದಂತೆ, ವಿಶೇಷ ಘಟಕ ಯೋಜನೆ (ಎಸ್.ಸಿ.ಪಿ) / ಬುಡಕಟ್ಟು ಜನಾಂಗದ ಉಪ–ಯೋಜನೆ (ಟಿ.ಎಸ್.ಪಿ) ಕಾಮಗಾರಿಗಳ ಕಡೆಗೆ ರೂ.24.92 ಕೋಟಿ ಮೊತ್ತದಷ್ಟು ಸರ್ಕಾರಿ ಅನುದಾನವನ್ನು ಸ್ವೀಕರಿಸಬೇಕಾಗಿರುವ ಅನುದಾನ ಮೊತ್ತ ಎಂಬುದಾಗಿ ತೋರಿಸಲಾಗಿರುವುದು ಆದರಿಂದ ಚಲ್ತಿ ಆಸ್ತಿ ಮತ್ತು ಇತರೇ ಈಕ್ವಿಟಿಯಡಿ ಈ ಸಂಬಂಧವಾಗಿ ಹೆಚ್ಚಾಗಿರುತ್ತದೆ.

v) ಟಿಪ್ಪಣಿ ಸಂಖ್ಯೆ 15 (ಎ) – "ಇತರೆ ಹಣಕಾಸು ಹೊಣೆಗಳು " ಅಡಿಯಲ್ಲಿ "ಗುತ್ತಿಗೆದಾರರುಗಳಿಗೆ ಪಾವತಿಗಳು – ಉಳಿಸಿಕೊಳ್ಳಲ್ಪಟ್ಟಿರುವ ಹಣಕಾಸಿಗೆ" ಸಂಬಂಧಿಸಿದಂತೆ ನ್ಯಾಯಸಮ್ಮತ ಮೌಲ್ಯಮಾಪನವನ್ನು ಮಾಡಿರುವುದಿಲ್ಲ – ಇದು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 109 "ಹಣಕಾಸು ಸಾಧನಗಳು" / ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 113 " ನ್ಯಾಯಸಮ್ಮತ ಮೌಲ್ಯ ನಿರ್ಧಾರಣೆಯ" ಅನುಸಾರ ಆಗಿರುವುದಿಲ್ಲ.

vi) ಟಿಪ್ಪಣಿ ಸಂಖ್ಯೆ 17 (ಎ) – ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006ರ ಅಡಿಯಲ್ಲಿ ಮಾರಾಟಗಾರರುಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ತಿಳಿಯಪಡಿಸಿರುವುದಕ್ಕೆ ಸಂಬಂಧಿಸಿದಂತೆ. ಸಂಬಂಧಿತ ವಿವರಗಳ ಅನುಪಸ್ಥಿತಿಯಲ್ಲಿ, ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

vii) ಟಿಪ್ಪಣಿ ಸಂಖ್ಯೆ 25 (ಸಿ) ದಿನಾಂಕ 01.07.2017ರಿಂದ ಜಾರಿಗೆ ಬಂದಂತೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಧಿನಿಯಮವನ್ನು (ಜಿಎಸ್‌ಟಿ) ಕಾರ್ಯಗತಗೊಳಿಸುವುದ ರೊಂದಿಗೆ, ಕಂಪನಿಯು, ದಿನಾಂಕ 01.07.2017ರಲ್ಲಿದ್ದಂತೆ ತನ್ನ ಪ್ರಗತಿಯಲ್ಲಿರುವ ಕಾಮಗಾರಿಗಳ ಉಳಿಕೆ ಮೊತ್ತಗಳ ಮೇಲೆ ಜಿಎಸ್‌ಟಿಯ ಪ್ರಭಾವವನ್ನು ಖಚಿತಪಡಿಸಿಕೊಂಡಿರುವುದಿಲ್ಲ. ಅದೇ ರೀತಿಯಲ್ಲಿ, ಹೊಸ ಕಾಮಗಾರಿಗಳನ್ನೂ ಸಹ ಜಿಎಸ್‌ಟಿಯನ್ನು ಪರಿಗಣಿಸದೆಯೇ ನೀಡಲಾಗಿರುವುದು, ಆದರೆ ಆ ಕಾಮಗಾರಿಗಳನ್ನು ಜಿಎಸ್‌ಟಿ ಜಾರಿಗೆ ಬರುವುದಕ್ಕೆ ಮುಂಚಿನ ಅವಧಿಯಲ್ಲಿ ಇದ್ದಂತಹ ತೆರಿಗೆಗಳನ್ನು ಪರಿಗಣಿಸಿದಂತೆ ನಿಗದಿಪಡಿಸಲಾಗಿದ್ದಂತಹ ಜಲ ಸಂಪನ್ಮೂಲ ಇಲಾಖೆಯ (ಡಬ್ಲ್ಯೂಆರ್‌ಡಿ) ದರ ಪಟ್ಟಿ ಆಧಾರದಲ್ಲಿ ನೀಡಲಾಗಿದ್ದಿತು. ತೆರಿಗೆ ದರಗಳಲ್ಲಿನ ಬದಲಾವಣೆಯ ಪ್ರಭಾವವನ್ನು ಕಂಪನಿಯು ಖಚಿತಪಡಿಸಿಕೊಂಡಿರುವುದಿಲ್ಲ ಅಥವಾ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಅನುವನ್ನೂ ಮಾಡಿರಲಿಲ್ಲ. ಇದರಿಂದಾಗಿ, ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ನಮ್ಮ ಷರತ್ತುಬದ್ಧ ಅಭಿಪ್ರಾಯ

ಈ ಮೇಲಿನ ಕಂಡಿಕೆಗಳಲ್ಲಿ ನೀಡಲಾಗಿರುವ ನಮ್ಮ ಟೀಕೆಟಿಪ್ಪಣಿಗಳ ಷರತ್ತಿಗೆ ಒಳಪಟ್ಟಂತೆ, ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ದೊರೆತಿರುವ ಅತ್ಯುತ್ತಮ ಮಾಹಿತಿಯ ಪ್ರಕಾರ ಹಾಗೂ ನಮಗೆ ನೀಡಲಾಗಿರುವ ವಿವರಣೆಗಳ ಪ್ರಕಾರ, ಮೇಲೆ ತಿಳಿಸಲಾಗಿರುವ Ind AS ಹಣಕಾಸು ತ:ಖ್ತೆಗಳು Ind AS ಸೇರಿದಂತೆ ಅಧಿನಿಯಮದ ಅಗತ್ಯತೆಗಳ ಪ್ರಕಾರ, 31 ಮಾರ್ಚ್ 2018ರಲ್ಲಿದ್ದಂತೆ ಕಂಪನಿಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಹಾಗೂ ಅದೇ ದಿನಾಂಕದಂದು ಅಂತ್ಯಗೊಂಡ ಸಾಲಿಗೆ ಇತರೆ ಸಮಗ್ರ ಆದಾಯ ಒಳಗೊಂಡಂತೆ ಹಣಕಾಸಿನ ನಿರ್ವಹಣೆ, ಹಣಕಾಸಿನ ಹರಿವು ಮತ್ತು ಈಕ್ವಿಯಲ್ಲಿನ ಬದಾಲವಣೆಯ ಮೇಲೆ ಭಾರತದಲ್ಲಿ ಸರ್ವೇಸಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಸತ್ಯಾಸತ್ಯತೆಯಿಂದ ಹಾಗೂ ನ್ಯಾಯಸಮ್ಮತತೆಯಿಂದ ಕೂಡಿದ ಅಭಿಪ್ರಾಯವನ್ನು ನೀಡುತ್ತವೆ.

ಮಹತ್ವಪೂರ್ಣ ವಿಷಯಗಳು

ನಮ್ಮ ಅಭಿಪ್ರಾಯಗಳನ್ನು ಷರತ್ತುಬದ್ಧಗೊಳಿಸದೆಯೇ, ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ Ind AS ಹಣಕಾಸು ತ:ಖ್ತೆಗಳ ಈ ಕೆಳಗಿನ ಟಿಪ್ಪಣಿಗಳ ಕಡೆಗೆ ಗಮನವನ್ನು ಸೆಳೆಯುತ್ತಿದ್ದೇವೆ:

ಎ) ಕರ್ನಾಟಕ ನೀರಾವರಿ ನಿಗಮ ನಿಯಮಿತ (ಕನೀನಿನಿ) ಆಸ್ತಿಗಳು ಮತ್ತು ಜವಾಬ್ದಾರಿಗಳ ವರ್ಗಾವಣೆ

i) ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ (ಭಮೇಯೋ), ನೀರಾವರಿ, ಗಾಯತ್ರಿ ಜಲಾಶಯ ಮತ್ತು ವಾಣಿ ವಿಲಾಸ ಸಾಗರ ಯೋಜನೆಗಳು, ಇವೇ ಮುಂತಾದ ಯೋಜನೆಗಳು, ಈವರೆಗೆ ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಕಾರ್ಯಗತಗೊಳಿಸಲ್ಪಡುತ್ತಿದ್ದವು, ಕರ್ನಾಟಕ ಸರ್ಕಾರದ ಆದೇಶದನ್ವಯ ಈ ಯೋಜನೆಗಳ ಕಾರ್ಯಗತಗೊಳಿಸುವಿಕೆಯನ್ನು ದಿನಾಂಕ 01.01.2017ರಿಂದ ಜಾರಿಗೆ ಬಂದಂತೆ ಕಂಪನಿಗೆ ವಹಿಸಲಾಗಿರುವುದು. ಕರ್ನಾಟಕ ನೀರಾವರಿ ನಿಗಮ ನಿಯಮಿತವು ಈ ಯೋಜನೆಗಳಿಗೆ ಸಂಬಂಧಿತ ರೂ.4,276 ಕೋಟಿ ಮೊತ್ತದಷ್ಟು ಆಸ್ತಿಗಳು ಮತ್ತು ರೂ.528 ಕೋಟಿ ಮೊತ್ತದಷ್ಟು ಜವಾಬ್ದಾರಿಗಳನ್ನು ದಿನಾಂಕ 31.03.2017ರಂದು ಗುರುತಿಸಿದ್ದು ಮತ್ತು ಪ್ರತ್ಯೇಕವಾಗಿ ಇರಿಸಿದ್ದು ಕರ್ನಾಟಕ ಸರ್ಕಾರದ ಅನುಮೋದನೆಯು ಬಾಕಿಯಿದ್ದು, ಇವುಗಳನ್ನು ಕಂಪನಿಗೆ ಇನ್ನೂ ವರ್ಗಾಯಿಸಬೇಕಿದೆ. ಆದಾಗ್ಯೂ, ವಾಸ್ತವಿಕ ವರ್ಗಾವಣೆಯ ಸಮಯದಲ್ಲಿ ಅಗತ್ಯ ಉಂಟಾಗಬಹುದಾದ ಇನ್ನೂ ಹೆಚ್ಚಿನ ಬದಲಾವಣೆಗಳ ಷರತ್ತಿಗೆ ಒಳಪಟ್ಟಿರುತ್ತದೆ.

ii) ಬಾಕಿಯಿರುವಂತಹ ವರ್ಗಾವಣೆಯು ಕೇವಲ ಔಪಚಾರಿಕ ಕಾರ್ಯವಾಗಿರುತ್ತದೆ ಎಂಬುದಾಗಿ ಪರಿಗಣಿಸಿದಂತೆ, ವರ್ಗಾವಣೆಗೊಂಡಿರುವ ಎಲ್ಲಾ ಆಸ್ತಿಗಳು ಮತ್ತು ಜವಾಬ್ದಾರಿಗಳು ಕಂಪನಿಯ ಸುಪರ್ದಿನಲ್ಲಿರುತ್ತವೆ. ಆದ್ದರಿಂದ, ಕಂಪನಿಯ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಪರಿಪೂರ್ಣ/ ಒಟ್ಟಾರೆ ಎಂಬುದಾಗಿ ಅರ್ಥೈಸಿಕೊಳ್ಳಬೇಕು.

ಬಿ) ಟಿಪ್ಪಣಿ ಸಂಖ್ಯೆ 14 ಕರ್ನಾಟಕ ಸರ್ಕಾರವು ಆಸ್ತಿಗಳನ್ನು ಇನ್ನೂ ವರ್ಗಾಯಿಸಬೇಕಿರುವುದರಿಂದ, ಬಳಸಿಕೊಳ್ಳಲಾಗಿರುವ ಅವಧಿ ಸಾಲಗಳಿಗೆ ಸಂಬಂಧಿಸಿದಂತೆ ಅಡಮಾನ ಪತ್ರಗಳನ್ನು ಮಾಡಿಕೊಳ್ಳುವುದು ಬಾಕಿಯಿರುತ್ತದೆ.

ಸಿ) ಟಿಪ್ಪಣಿ ಸಂಖ್ಯೆ 6, 9, 11, 15 ಮತ್ತು 17 ಗುತ್ತಿಗೆದಾರರುಗಳಿಗೆ ಸಜ್ಜುಗೊಳ್ಳುವ ಸಲುವಾಗಿ ನೀಡಲಾಗಿರುವ ಮುಂಗಡಗಳು, ಕರ್ನಾಟಕ ಸರ್ಕಾರದಿಂದ, ಸರ್ಕಾರಿ ಕಂಪನಿಗಳಿಂದ/ ಸಂಸ್ಥೆಗಳಿಂದ ಬರಬೇಕಿರುವ ಬಾಕಿಗಳು, ಸರಬರಾಜುದಾರರು / ಸೇವೆಗಳು, ವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾಗಿರುವವುಗಳು ಹಾಗೂ ಇತರೆ ಜವಾಬ್ದಾರಿಗಳ ಅಡಿಯಲ್ಲಿ ತಿಳಿಯಪಡಿಸಲಾಗಿರುವಂತಹ ಮೊತ್ತಗಳು, ಖಚಿತಪಡಿಸಿಕೊಳ್ಳುವಿಕೆ ಮತ್ತು ಯಾವುದಾದರೂ ಅಗತ್ಯವಿದ್ದಲ್ಲಿ ಸಮನ್ವಯಗೊಳಿಸುವಿಕೆಯ ಷರತ್ತಿಗೆ ಒಳಪಟ್ಟಿರುತ್ತವೆ.

ಡಿ) ಟಿಪ್ಪಣಿ ಸಂಖ್ಯೆ 15 (ಬಿ) ಮುನ್ನೆಚ್ಚರಿಕೆ ಭದ್ರತಾ ಹಣ ಠೇವಣಿಗಳು (ಇಎಂಡಿಗಳು) ಮತ್ತು ಹೆಚ್ಚುವರಿ ಭದ್ರತಾ ಠೇವಣಿಗಳನ್ನು (ಎಫ್‌ಎಸ್‌ಡಿಗಳು) ಗುತ್ತಿಗೆದಾರರುಗಳ ಲಿಖಿತ ಕೋರಿಕೆಯ ಆಧಾರದ ಮೇರೆಗೆ ಅವುಗಳು ಬಡ್ಡಿಯನ್ನು ಹೊಂದಿರುವ ಭದ್ರತೆಗಳನ್ನಾಗಿ ಪರಿವರ್ತಿಸಬಹುದಾದ್ದರಿಂದ ಚಾಲ್ತಿ ಹಣಕಾಸು ಜವಾಬ್ದಾರಿಗಳು ಎಂಬುದಾಗಿ ವರ್ಗೀಕರಿಸಲಾಗಿದೆ.

ಇ) ಟಿಪ್ಪಣಿ ಸಂಖ್ಯೆ 15 (ಸಿ) ಭದ್ರತಾ ಠೇವಣಿಗಳ ಅಡಿಯಲ್ಲಿ ತಿಳಿಯಪಡಿಸಲಾಗಿರುವ ಹಾಗೂ ಕರ್ನಾಟಕ ಸರ್ಕಾರದ ಇ–ಸರಕುಸೇವೆಗಳ ಸಂಗ್ರಹಣಾ ಇಲಾಖೆಯು ಹೊಂದಿರುವಂತಹ ರೂ.31.50 ಕೋಟಿ ಮೊತ್ತದಷ್ಟು ಮುನ್ನೆಚ್ಚರಿಕೆ ಭದ್ರತಾ ಹಣ ಠೇವಣಿಗಳು ಕಂಪನಿಗೆ ವರ್ಗಾವಣೆಗೊಳ್ಳುವುದು ಬಾಕಿಯಿರುತ್ತದೆ.

ಇತರೆ ವಿಷಯಗಳು

ಎ) ಕಂಪನಿಯು ನೀರಾವರಿ ಅನುಕೂಲತೆಗಳು ಮತ್ತು ಕರ್ನಾಟಕ ಸರ್ಕಾರವು ಕಾಲಾನುಕಾಲಕ್ಕೆ ವಹಿಸಬಹುದಾದಂತಹ ಸಮಗ್ರ ಕುಡಿಯುವ ನೀರು ಯೋಜನೆಗಳನ್ನು ಕಾರ್ಯಗತಗೊಳಿಸುವ ನಿರ್ದಿಷ್ಟ ಉದ್ದೇಶದೊಂದಿಗಿನ ವಿಶೇಷ ಉದ್ದೇಶದ ವಾಹಕವಾಗಿರುತ್ತದೆ. ಕಂಪನಿಯ ಕಾರ್ಯಾಚರಣೆ ಮತ್ತು ನಿರ್ವಹಣೆಯ ವೆಚ್ಚಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕಾರ್ಯಸಾಧ್ಯವಾದಂತಹ ರೀತಿಯಲ್ಲಿ ಭರಿಸಲಾಗಿರುವುದು, ಕಂಪನಿಯ ಹಣಕಾಸಿನ ಅಗತ್ಯತೆಗೆ ನೀರು ಸರಬರಾಜಿನಿಂದ ಗಳಿಸಬಹುದಾದ ಮೂಲಕ ಭರಿಸುತ್ತದೆಯಾದರೂ, ಅದು ಕಂಪನಿಯ ಹಣಕಾಸಿನ ಅಗತ್ಯತೆಗೆ ಸಮರ್ಪಕವಾಗಿರುವುದಿಲ್ಲ ಮತ್ತು ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಈಕ್ವಿಟಿ ಹಾಗೂ ಅನುದಾನಗಳ ರೂಪದಲ್ಲಿ ಉಳಿಕೆ ಮೊತ್ತವನ್ನು ಕರ್ನಾಟಕ ಸರ್ಕಾರದಿಂದ ಸ್ವೀಕರಿಸುತ್ತದೆ. ಅವಧಿ ಸಾಲಗಳು ಮತ್ತು ಬಾಂಡುಗಳು, ಅವುಗಳ ಮೇಲಿನ ಬಡ್ಡಿಯೂ ಸೇರಿದಂತೆ ಮರುಪಾವತಿಯು ಕರ್ನಾಟಕ ಸರ್ಕಾರದಿಂದ ಖಾತರಿಯನ್ನು ಹೊಂದಿವೆ ಹಾಗೂ ಅಗತ್ಯ ಬಿದ್ದಾಗಲೆಲ್ಲಾ ಅದು ಹಣಕಾಸನ್ನು ಒದಗಿಸುತ್ತಿದೆ.

ಬಿ) ಟಿಪ್ಪಣಿ 20 – ಪ್ರಕೃತತೆ ಪರಿಕಲ್ಪನೆಯ ಆಧಾರದ ಮೇರೆಗೆ, ಕಂಪನಿಯು ಪೂರ್ವಾವಧಿಗೆ ತುಲನಾತ್ಮಕ ಮೊತ್ತಗಳನ್ನು ಪುನರ್–ತಿಳಿಯಪಡಿಸುವುದರ ಮೂಲಕ ರೂ.79.60 ಲಕ್ಷ ಮೊತ್ತದಷ್ಟು ಪೂರ್ವಾವಧಿ ವೆಚ್ಚಗಳನ್ನು ಸರಿಪಡಿಸಿರುವುದಿಲ್ಲ.

ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ ನಾವು ನಮ್ಮ ಅಭಿಪ್ರಾಯವನ್ನು ಬದಲಾವಣೆಗೊಳಿಸಿರುವುದಿಲ್ಲ.

ಇತರೆ ಕಾನೂನಾತ್ಮಕ ಹಾಗೂ ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ

ಎ) ಅಧಿನಿಯಮದ ಪರಿಚ್ಛೇದ 143 (11)ರ ಅನುಗುಣವಾಗಿ ಭಾರತ ಸರ್ಕಾರವು ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ (ಆದೇಶ) ಅಗತ್ಯತೆಯಂತೆ ನೀಡಿರುವ ಆದೇಶದ ಅಗತ್ಯತೆಯಂತೆ ಮೇಲೆ ತಿಳಿಸಲಾಗಿರುವ ಆದೇಶದ ಕಂಡಿಕೆ 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ವಿಷಯಗಳ ಮೇಲೆ ತ:ಖ್ತೆಯನ್ನು 'ಅನುಬಂಧ ಎ' ನಲ್ಲಿ ನೀಡಿರುವೆವು.

ಬಿ) ಅಧಿನಿಯಮದ ಪರಿಚ್ಛೇದ 143 (5) ರ ಅಡಿಯಲ್ಲಿ ಅಗತ್ಯತೆಯಿರುವಂತೆ, ಕಂಪನಿಯ ಲೆಕ್ಕಪುಸ್ತಕಗಳು ಮತ್ತು ದಾಖಲೆಗಳ ಪರಿಶೀಲನೆಗಳ ಆಧಾರದ ಮೇರೆಗೆ, ನಾವು ಸೂಕ್ತವಾಗಿರುವುದಾಗಿ ಪರಿಗಣಿಸಿದಂತೆ ಹಾಗೂ ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದಂತಹ ವಿವರಗಣೆಗಳಂತೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವಂತಹ ನಿರ್ದೇಶನಗಳ ಮೇಲಿನ ತ:ಖ್ತೆಯನ್ನು 'ಅನುಬಂಧ ಬಿ' ಯಲ್ಲಿ ನಾವು ನೀಡಿರುವೆವು.

ಸಿ) ಅಧಿನಿಯಮದ ಪರಿಚ್ಛೇದ 143(3)ರ ಅನುಸಾರ ಅಗತ್ಯತೆಯಿರುವಂತೆ, ನಾವು ಈ ಕೆಳಕಂಡಂತೆ ವರದಿ ಮಾಡುತ್ತಿರುವೆವು:

i) ಮೇಲಿನ ಕಂಡಿಕೆ "ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ" ದಲ್ಲಿ ವಿವರಿಸಲಾಗಿರುವಂತಹ ವಿಷಯಗಳ ಮೇಲೆ ಪ್ರಭಾವಗಳನ್ನು ಭೀರುವ ಮಾಹಿತಿಗಳನ್ನು ಹೊರತುಪಡಿಸಿದಂತೆ, ನಮ್ಮ ಅತ್ಯುತ್ತಮ ಅರಿವು ಹಾಗೂ ನಂಬಿಕೆಯ ಪ್ರಕಾರ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಅಗತ್ಯವಿದ್ದಂತಹ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನೂ ನಾವು ಪಡೆದುಕೊಂಡಿರುವೆವು;

ii) ಮೇಲಿನ ಕಂಡಿಕೆ "ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ"ದಲ್ಲಿ ವಿವರಿಸಲಾಗಿರುವಂತಹ ವಿಷಯಗಳ ಮೇಲೆ ಪ್ರಭಾವಗಳನ್ನು ಭೀರುವ ಮಾಹಿತಿಗಳನ್ನು ಹೊರತುಪಡಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ, ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿ ಅಗತ್ಯವಿರುವ ರೀತಿಯಲ್ಲಿ ಕಂಪನಿಯು ಲೆಕ್ಕಪತ್ರಗಳ ಪುಸ್ತಕಗಳನ್ನು, ಅಂತಹ ಪುಸ್ತಕಗಳ ನಮ್ಮ ಪರಿಶೀಲನೆಯಿಂದ ಕಂಡು ಬಂದಂತೆ ಸಮರ್ಪಕವಾಗಿ ನಿರ್ವಹಿಸಿರುವುದು.

iii) ಈ ವರದಿಯು ವ್ಯವಹರಿಸಿರುವಂತಹ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆ, ಲಾಭ ಮತ್ತು ನಷ್ಟದ ತ:ಖ್ತೆ (ಇತರೆ ಸಮಗ್ರ ಆದಾಯ ಸೇರಿದಂತೆ) ಹಾಗೂ ಹಣಕಾಸು ಹರಿವಿನ ತ:ಖ್ತೆಗಳು ಲೆಕ್ಕಪತ್ರಗಳು ಹಾಗೂ ಈಕ್ವಿಟಿಯಲ್ಲಿನ ಬದಲಾವಣೆಗಳ ತ:ಖ್ತೆಗಳು ಲೆಕ್ಕಪುಸ್ತಕಗಳ ಜೊತೆ ತಾಳೆ ಹೊಂದುತ್ತವೆ.

iv) ಮೇಲಿನ ಕಂಡಿಕೆ "ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ" ದಲ್ಲಿ ವಿವರಿಸಲಾಗಿರುವಂತಹ ವಿಷಯಗಳ ಮೇಲೆ ಪ್ರಭಾವಗಳನ್ನು ಭೀರುವ ಮಾಹಿತಿಗಳನ್ನು ಹೊರತುಪಡಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ, ಈ ವರದಿಯು ವ್ಯವಹರಿಸಿರುವಂತಹ ಮೇಲೆ ತಿಳಿಸಲಾಗಿರುವಂತಹ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವ Ind AS ಹಣಕಾಸು ತ:ಖ್ತೆಗಳು ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು) ನಿಯಮಗಳು, 2015ರ ಜೊತೆಯಲ್ಲಿ ಓದಲ್ಪಡುವ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ ಅನುವುಗಳನ್ನು ಅನುಸರಿಸಿರುತ್ತವೆ.

v) ಕಂಪನಿಯು ಸರ್ಕಾರಿ ಕಂಪನಿಯಾಗಿದ್ದು, ನಿರ್ದೇಶಕರುಗಳನ್ನು ಅನರ್ಹಗೊಳಿಸುವುದಕ್ಕೆ ಸಂಬಂಧಿತ ಅಧಿನಿಯಮದ ಪರಿಚ್ಛೇದ 164(2)ರ ಅನುವು ಅಧಿಸೂಚನೆ ಜಿ.ಎಸ್.ಆರ್ 463(ಇ) ದಿನಾಂಕ 5 ಜೂನ್ 2015ರ ಪ್ರಕಾರ ಅನ್ವಯಗೊಳ್ಳುವುದಿಲ್ಲ.

vi) ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಅವುಗಳಿಗೆ ಸಂಬಂಧಿತ ವಿಷಯಗಳಿಗೆ ಸಂಬಂಧಿತ ಷರತ್ತುಗಳನ್ನು ಮೇಲಿನ ಕಂಡಿಕೆ "ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ" ದಲ್ಲಿ ತಿಳಿಸಲಾಗಿದೆ.

vii) ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ (IFCoFR) ಸಮರ್ಪಕತೆಗೆ ಸಂಬಂಧಿಸಿದಂತೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಗಳ ಮೇಲಿನ ಪರಿಣಾಮಕಾರಿತ್ವದ ಬಗ್ಗೆ **'ಅನುಬಂಧ ಸಿ'** ಯಲ್ಲಿ ನೀಡಲಾಗಿರುವ ನಮ್ಮ ವರದಿಯನ್ನು ಉಲ್ಲೇಖಿಸುವುದು. ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ (IFCoFR) ಸಮರ್ಪಕತೆಯ ಬಗ್ಗೆ ನಮ್ಮ ವರದಿಯು ಷರತ್ತುಬದ್ಧ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತದೆ.

ಡಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರುಗಳು) ತಿದ್ದುಪಡಿ ನಿಯಮಗಳು, 2017ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಿರುವ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ಅರಿವು ಹಾಗೂ ನಂಬಿಕೆಯ ಪ್ರಕಾರ ಹಾಗೂ ನಮಗೆ ಒದಗಿಸಲಾದ ಮಾಹಿತಿ ಮತ್ತು ನೀಡಲಾದ ವಿವರಣೆಗಳಂತೆ:

i) ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಅವುಗಳಿಗೆ ಸಂಬಂಧಿತ ವಿಷಯಗಳಿಗೆ ಸಂಬಂಧಿಸಿದಂತೆ ಷರತ್ತುಗಳು ಮೇಲಿನ ಕಂಡಿಕೆ "ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ" ದಲ್ಲಿ ತಿಳಿಸಿರುವಂತೆ ಆಗಿರುತ್ತವೆ.

ii) ಕಂಪನಿಯು ಬಾಕಿಯಿರುವಂತಹ ವಿವಾದಗಳು ತನ್ನ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವ Ind AS ಹಣಕಾಸು ತ:ಖ್ತೆಗಳ ಮೇಲೆ ಬೀರಬಹುದಾದ ಪರಿಣಾಮಗಳನ್ನು ತಿಳಿಯಪಡಿಸಿರುತ್ತದೆ.

iii) ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ, ದೀರ್ಘಾವಧಿ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಕಂಪನಿಯು ನಿರ್ಧಾರಣೆ ಮಾಡಿರುವ ಯಾವುದೇ ನಷ್ಟಗಳೂ ಇರುವುದಿಲ್ಲ.

iv) ಲೆಕ್ಕಪತ್ರಗಳ ಪುಸ್ತಕಗಳ ಅನುಸಾರ ಹಾಗೂ ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳ ಅನುಸಾರ, ಕಂಪನಿಯು ಹೂಡಿಕೆದಾರರ ಶೈಕ್ಷಣಿಕ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸಲು ಅಗತ್ಯವಿರುವಂತಹ ಯಾವುದೇ ಮೊತ್ತಗಳೂ ಇರಲಿಲ್ಲ ಮತ್ತು ಆದ್ದರಿಂದ ಹೂಡಿಕೆದಾರರ ಶೈಕ್ಷಣಿಕ ಮತ್ತು ಸಂರಕ್ಷಣಾ ನಿಧಿಗೆ ಮೊತ್ತಗಳನ್ನು ವರ್ಗಾಯಿಸುವಲ್ಲಿನ ವಿಳಂಬಗಳ ಬಗ್ಗೆ ಟೀಕೆಟಿಪ್ಪಣಿ ಮಾಡುವ ಪ್ರಶ್ನೆಯು ಉದ್ಭವಿಸುವುದಿಲ್ಲ.

v) ಕಂಪನಿಯು 2017–18 ಮತ್ತು ತದನಂತರದ ಸಾಲುಗಳಿಗೆ ಎಸ್‌ಬಿಎನ್‌ಗಳಿಗೆ ಸಂಬಂಧಿತ ಅಗತ್ಯತೆಗಳನ್ನು ತಿಳಿಯಪಡಿಸುವಿಕೆಯು ಅನ್ವಯಗೊಳ್ಳದಿರುವ ಬಗ್ಗೆ ತನ್ನ ಹಣಕಾಸು ತ:ಖ್ತೆಗಳಲ್ಲಿ ತಿಳಿಯಪಡಿಸಿರುವುದು.

ಸ್ಥಳ : ಬೆಂಗಳೂರು

ದಿನಾಂಕ : 27–08–2018

ಕೆ. ಚನ್ನಬಸಪ್ಪ ಅಂಡ್ ಕಂಪನಿ ಪರವಾಗಿ

ಚಾರ್ಟರ್ಡ್ ಅಕೌಂಟೆಂಟ್‌ಗಳು

ಸಂಸ್ಥೆಯ ನೋಂದಣಿ ಸಂಖ್ಯೆ 000597ಎಸ್

ಸಹಿ/–

ಕೆ. ಚನ್ನಬಸಪ್ಪ

ಮಾಲೀಕರು

(ಎಂ ಸಂಖ್ಯೆ. 081335)

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ – ಎ

ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016

31 ಮಾರ್ಚ್ 2018ಕ್ಕೆ ಅಂತ್ಯಗೊಂಡಂತಹ ಸಾಲಿಗೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ (ಕಂಪನಿ) ಸದಸ್ಯರುಗಳಿಗೆ ನಾವು ನೀಡಿರುವ ನಮ್ಮ ಅದೇ ದಿನಾಂಕದ ವರದಿಯ 'ಇತರೆ ಕಾನೂನಾತ್ಮಕ ಹಾಗೂ ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ', ಈ ಶೀರ್ಷಿಕೆಯ ಅಡಿಯಲ್ಲಿನ ಕಂಡಿಕೆಯಲ್ಲಿ (ಎ)ರಲ್ಲಿ ಉಲ್ಲೇಖಿಸಿರುವಂತೆ.

ನಾವು ಈ ಕೆಳಗಿನಂತೆ ವರದಿ ಮಾಡುತ್ತಿರುವೆವು:

1) ಕಂಪನಿಯ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ:

ಎ) ಕಂಪನಿಯು ಪರಿಮಾಣಾತ್ಮಕ ವಿವರಗಳು, ಚಲಿಸಬಹುದಾದ ಸ್ಥಿರಾಸ್ತಿಗಳು ಯಾವ ಸ್ಥಿತಿಯಲ್ಲಿರುತ್ತವೆ ಹಾಗೂ ತನ್ನ ವಿವಿಧ ವಿಭಾಗಗಳ ಉದ್ದಗಲಕ್ಕೂ ಇರುವಂತಹ ನೀರಾವರಿ ಮೂಲಭೂತ ಸೌಕರ್ಯಗಳು ಒಳಗೊಂಡಂತೆ ಸಂಪೂರ್ಣ ವಿವರಗಳನ್ನು ತೋರಿಸಿದಂತೆ ಸಮರ್ಪಕ ದಾಖಲೆಗಳನ್ನು ನಿರ್ವಹಿಸಿರುವುದು.

ಬಿ) ಕಂಪನಿಯು ಚಲಿಸುವ ಸ್ಥಿರಾಸ್ತಿಗಳ ಭೌತಿಕ ತಪಾಸಣೆ/ಪರೀಕ್ಷಣೆಗಾಗಿ ನಿಯತವಾಗಿ ಅರ್ಧ ವಾರ್ಷಿಕ ಕಾರ್ಯಕ್ರಮವನ್ನು ಹೊಂದಿರುವುದು. ನಮ್ಮ ಅಭಿಪ್ರಾಯದಲ್ಲಿ, ಕಂಪನಿಯ ಗಾತ್ರ ಹಾಗೂ ಅದರ ಆಸ್ತಿಗಳ ಸ್ವರೂಪವನ್ನು ಪರಿಗಣಿಸಿದಂತೆ, ಅಂತಹ ಆಸ್ತಿಗಳ ಭೌತಿಕ ತಪಾಸಣೆ/ಪರೀಕ್ಷಣೆಗಳ ಕಾಲಾವಧಿಯು ಸಮರ್ಪಕವಾಗಿರುತ್ತದೆ / ನ್ಯಾಯಸಮ್ಮತವಾಗಿರುತ್ತದೆ. **ಆದಾಗ್ಯೂ, ಕಂಪನಿಯು ಪ್ರಸಕ್ತ ಸಾಲಿನಲ್ಲಿ ಸ್ಥಿರಾಸ್ತಿಗಳ ಭೌತಿಕ ತಪಾಸಣೆಯನ್ನು ಕೈಗೊಂಡಿರುವುದಿಲ್ಲ.**

ಸಿ) ನಮಗೆ ಒದಗಿಸಲಾದ ಮಾಹಿತಿಯಂತೆ, ಕಂಪನಿಯು ಈ ಕೆಳಗಿನವುಗಳನ್ನು ಹೊರತುಪಡಿಸಿದಂತೆ, ಸ್ಥಿರಾಸ್ತಿಗಳ ಹಕ್ಕು ಪತ್ರಗಳನ್ನು ಕಂಪನಿಯ ಹೆಸರಿನಲ್ಲಿ ಹೊಂದಿರುತ್ತದೆ–

ಅ) ಅರಸೀಕೆರೆಯಲ್ಲಿ ಎತ್ತಿನಹೊಳೆ ಯೋಜನಾ ಕಟ್ಟಡ– ಕಾರ್ಯಪಾಲಕ ಇಂಜಿನೀಯರ್ ಎತ್ತಿನಹೊಳೆ ಯೋಜನಾ ವಿಭಾಗ –3 ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ಭೂಮಿಯ ಮೇಲೆ ಆ ಇಲಾಖೆಯ ಅನುಮೋದನೆಯೊಂದಿಗೆ ಹಾಗೂ ಕಂಪನಿಯ ಯೋಜನೆಗಳು ಪೂರ್ಣಗೊಂಡನಂತರ ಆ ಭೂಮಿಯನ್ನು ಲೋಕೋಪಯೋಗಿ ಇಲಾಖೆಗೆ ಹಿಂತಿರುಗಿಸತಕ್ಕದ್ದು ಎಂಬುದನ್ನು ಒಳಗೊಂಡಂತಹ ಷರತ್ತುಗಳು ಮತ್ತು ನಿಬಂಧನೆಗಳ ಆಧಾರದ ಮೇರೆಗೆ ನಿರ್ಮಾಣಗೊಂಡಿರುತ್ತದೆ.

ಆ) ತುಮಕೂರಿನಲ್ಲಿ ಭೂಮಿ ಮತ್ತು ಕಛೇರಿ ಕಟ್ಟಡ, ಹೇಮಾವತಿ ಕಾಲೋನಿ: ಕಾವೇರಿ ನೀರಾವರಿ ನಿಗಮವು ಪ್ರಸಕ್ತ ಆ ಭೂಮಿಯ ಹಕ್ಕನ್ನು ಹೊಂದಿರುತ್ತದೆ, ಅದನ್ನು ಕಂಪನಿಗೆ ಇನ್ನೂ ವರ್ಗಾಯಿಸಬೇಕಿರುತ್ತದೆ. ಆ ಭೂಮಿಯಲ್ಲಿ ಕಂಪನಿಯು ಕಟ್ಟಡದ ನಿರ್ಮಾಣವನ್ನು ಮಾಡಿರುತ್ತದೆ.

ಇ) ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಭೂಮಿ ಮತ್ತು ಕಟ್ಟಡ

- ❖ ಹೊಸದುರ್ಗದಲ್ಲಿ ಭದ್ರಾ ಮೇಲ್ದಂಡೆ ಯೋಜನೆ.
- ❖ ಚಿತ್ರದುರ್ಗದಲ್ಲಿ ಕೇಂದ್ರ ಕಛೇರಿ
- ❖ ಬೆಂಗಳೂರಿನ ಇನ್‌ಫೆಂಟ್ರಿ ರಸ್ತೆಯ ಎಂಬೆಸ್ಸಿ ಸ್ಕ್ವೇರ್‌ನಲ್ಲಿ ನೊಂದಾಯಿತ ಕಛೇರಿ.

ಕರ್ನಾಟಕ ಸರ್ಕಾರದಿಂದ ಅನುಮೋದನೆಯು ಬಾಕಿಯಿರುವಂತೆ ಯೋಜನೆಗಳ ಆಸ್ತಿಗಳು ಮತ್ತು ಜವಾಬ್ದಾರಿಗಳ ವರ್ಗಾವಣೆಯ ಭಾಗವಾಗಿ ಮೇಲಿನ ಹಕ್ಕು ಪತ್ರಗಳನ್ನು ಕರ್ನಾಟಕ ನೀರಾವರಿ ನಿಗಮದಿಂದ (ಕನೀನಿನಿ) ವರ್ಗಾಯಿಸಬೇಕು.

2) ಕಂಪನಿಯ ಸರಕು ಸಾಮಗ್ರಿಗಳಿಗೆ ಸಂಬಂಧಿಸಿದಂತೆ:

ಕಂಪನಿಯು, ಕಟ್ಟಡ ಅವಶೇಷಗಳು ಹಾಗೂ ಯೋಜನೆಗಳ ಕಾರ್ಯಗತಗೊಳಿಸುವ ವೇಳೆಯಲ್ಲಿ ಭೂ ಅಗೆತದ ಸಮಯದಲ್ಲಿ ಸಿಗುವಂತಹ ಇತರೆ ಸಾಮಗ್ರಿಗಳನ್ನು ಹೊರತುಪಡಿಸಿದಂತೆ ಯಾವುದೇ ಸರಕುಸಾಮಗ್ರಿಗಳನ್ನು ಹೊಂದಿರುವುದಿಲ್ಲ.

3) ಸಾಲಗಳು ಮತ್ತು ಮುಂಗಡಗಳು:

ಕಂಪನಿಯು, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 189ರ ಅಡಿಯಲ್ಲಿ ನಿರ್ವಹಿಸಿರುವ ವಹಿಯಲ್ಲಿ ವ್ಯಾಪಿಸಿರುವ ಭದ್ರತೆಯಿಂದ ಕೂಡಿದ ಅಥವಾ ಭದ್ರತೆಯಿಂದ ಕೂಡಿರದ ಸಾಲಗಳನ್ನು ಕಂಪನಿಗಳಿಗೆ, ಸಂಸ್ಥೆಗಳಿಗೆ ನಿಯಮಿತ ಜವಾಬ್ದಾರಿಯನ್ನು ಹೊಂದಿರುವ ಪಾಲುದಾರಿಕೆ ಸಂಸ್ಥೆಗಳಿಗೆ ಅಥವಾ ಇತರೆ ತಂಡಗಳಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ. ಅದರಂತೆಯೇ, ಮೇಲೆ ತಿಳಿಸಲಾದಂತಹ ಆದೇಶದ ಷರತ್ತುಗಳು 3 (iii) (ಎ) ಯಿಂದ (ಸಿ) ವರೆಗಿನ ಷರತ್ತುಗಳ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

4) ಸಾಲಗಳು, ಹೂಡಿಕೆಗಳು ಮತ್ತು ಖಾತರಿಗಳು:

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ಅರಿವು ಹಾಗೂ ನಂಬಿಕೆಯ ಪ್ರಕಾರ ಹಾಗೂ ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ, ಕಂಪನಿಯು, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದಗಳು 185 ಮತ್ತು 186ರ ಅಡಿಯಲ್ಲಿ ವ್ಯಾಪಿಸಿರುವಂತಹ ತಂಡಗಳಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ ಅಥವಾ ಹೂಡಿಕೆಗಳನ್ನು ಮಾಡಿರುವುದಿಲ್ಲ ಅಥವಾ ಖಾತರಿಗಳು ಅಥವಾ ಭದ್ರತೆಗಳನ್ನು ನೀಡಿರುವುದಿಲ್ಲ. ಆದ್ದರಿಂದ, ಮೇಲೆ ತಿಳಿಸಲಾದಂತಹ ಆದೇಶದ ಷರತ್ತು ಸಂಖ್ಯೆ 3 (iv) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

5) ಠೇವಣಿಗಳ ಸ್ವೀಕೃತಿ:

ಕಂಪನಿಯು ಪರಿಚ್ಛೇದ 73ರಿಂದ 76ರ ಅನುವುಗಳು ಅಥವಾ ಕಂಪನಿಗಳ ಅಧಿನಿಯಮ 2013ರ ಇತರೆ ಸಂಬಂಧಿತ ಅನುವುಗಳ ಅಡಿಯಲ್ಲಿ ಅರ್ಥೈಸುವ ರೀತಿಯಲ್ಲಿ ಯಾವುದೇ ಠೇವಣಿಗಳನ್ನು ಸ್ವೀಕರಿಸಿರುವುದಿಲ್ಲ. ಆದ್ದರಿಂದ, ಮೇಲೆ ತಿಳಿಸಲಾದಂತಹ ಆದೇಶದ ಷರತ್ತು ಸಂಖ್ಯೆ 3 (v) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

6) ಖರ್ಚುವೆಚ್ಚಗಳ (Cost) ದಾಖಲೆಗಳ ನಿರ್ವಹಣೆ

ನಮಗೆ ನೀಡಿರುವ ಮಾಹಿತಿಯಂತೆ, ಕಂಪನಿಗಳ (ವಾಸ್ತವಿಕ ಖರ್ಚುವೆಚ್ಚಗಳ ದಾಖಲೆಗಳು ಮತ್ತು ಲೆಕ್ಕಪರಿಶೋಧನೆ) ನಿಯಮಗಳು, 2014ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 148 (1)ರ ಅಡಿಯಲ್ಲಿ ಕೇಂದ್ರ ಸರ್ಕಾರವು ವಾಸ್ತವಿಕ ಖರ್ಚುವೆಚ್ಚಗಳ (Cost) ದಾಖಲೆಗಳ ನಿರ್ವಹಣೆಯನ್ನು ನಿರ್ದಿಷ್ಟಪಡಿಸಿರುವುದಿಲ್ಲ.

7) ಶಾಸನಬದ್ಧ ಬಾಕಿಗಳಿಗೆ ಸಂಬಂಧಿಸಿದಂತೆ :

ಎ) ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ಹಾಗೂ ಲೆಕ್ಕಪತ್ರಗಳು ಮತ್ತು ದಾಖಲೆಗಳನ್ನು ನಾವು ಮಾಡಿದ ಪರಿಶೀಲನೆಗಳ ಆಧಾರದ ಮೇರೆಗೆ, ಪಾವತಿಸಲು ಬಾಕಿಯಾದಂತಹ ದಿನಾಂಕದಿಂದ 6 ತಿಂಗಳುಗಳಿಗೂ ಮೀರಿದಂತೆ ಪಾವತಿಸಲು ಬಾಕಿಯಿರುವಂತಹ ಈ ಕೆಳಗಿನ ಅವಿವಾಧಿತ ಬಾಕಿಗಳನ್ನು ಹೊರತುಪಡಿಸಿದಂತೆ, ಕಂಪನಿಯು ಆದಾಯ ತೆರಿಗೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ, ಮಾರಾಟಗಳ ಮೇಲಿನ ತೆರಿಗೆ, ಸೇವಾ ತೆರಿಗೆ, ಮೌಲ್ಯ ವರ್ಧಿತ ತೆರಿಗೆ, ಕಾರ್ಮಿಕರ ಕ್ಷೇಮಾಭಿವೃದ್ಧಿ ಕರ ರಾಜಧನ, ಭವಿಷ್ಯ ನಿಧಿ, ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ಹಾಗೂ ಇತರೆ ಯಾವುದಾದರೂ ಬಾಕಿಗಳು ಇದ್ದಲ್ಲಿ ಅವುಗಳನ್ನು ಒಳಗೊಂಡಂತೆ ಅವಿವಾಧಿತ ಶಾಸನಬದ್ಧ ಬಾಕಿಗಳನ್ನು ಸಂಬಂಧಿತ ಇಲಾಖೆಗಳಿಗೆ ಪಾವತಿಸುವಲ್ಲಿ ಕಂಪನಿಯು ಸಾಮಾನ್ಯವಾಗಿ ನಿಯತವಾಗಿರುತ್ತದೆ. ಅಲ್ಲದೆಯೇ, ಕೆಲವು ಪ್ರಕರಣಗಳಲ್ಲಿ ಸಂಬಂಧಿತ ಇಲಾಖೆಗಳಿಗೆ ಪಾವತಿಸುವಲ್ಲಿ ವಿಳಂಬಗಳನ್ನೂ ಸಹ ಗಮನಿಸಲಾಯಿತು.

ಶಾಸನಬದ್ಧ ಬಾಕಿಗಳು	ಭಾರತೀಯ (ರೂಪಾಯಿಗಳು ಲಕ್ಷಗಳಲ್ಲಿ)
ಸೇವಾ ತೆರಿಗೆ	00.54
ಪಾವತಿಸಬೇಕಾಗಿರುವ ಹೊಸ ಪಿಂಚಣಿ ಯೋಜನೆ(ಉದ್ಯೋಗದಾತರ ಕಾಣಿಕೆ)	72.00

ಬಿ) ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ಯಾವುದೇ ವಿವಾದದ ಕಾರಣ ಭವಿಷ್ಯ ನಿಧಿ, ಆದಾಯ ತೆರಿಗೆ, ಸೇವಾ ತೆರಿಗೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ, ಮಾರಾಟಗಳ ಮೇಲಿನ ತೆರಿಗೆ, ಮೌಲ್ಯ ವರ್ಧಿತ ತೆರಿಗೆ ಪಾವತಿಗಳ ಬಾಕಿಗಳು ಇರಲಿಲ್ಲ.

8) ಸಾಲಗಳು /ಋಣಗಳ ಮರುಪಾವತಿ :

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ಕಂಪನಿಯು ಹಣಕಾಸು ಸಂಸ್ಥೆಗಳಿಗೆ / ಸರ್ಕಾರಕ್ಕೆ / ಬ್ಯಾಂಕ್‌ಗಳಿಗೆ ಸಾಲಗಳು ಅಥವಾ ಋಣಗಳ ಮರುಪಾವತಿಯಲ್ಲಿ ತಪ್ಪಿತಸ್ತಗೊಂಡಿರಲಿಲ್ಲ.

9) ನಮಗೆ ನೀಡಲಾದ ವಿವರಣೆಗಳು ಹಾಗೂ ಒದಗಿಸಲಾದ ಮಾಹಿತಿಯಂತೆ, ಕಂಪನಿಯು, ಸಾಲ ಸಾಧನಗಳೂ ಒಳಗೊಂಡಂತೆ ಪ್ರಾರಂಭಿಕ ಸಾರ್ವಜನಿಕ ನೀಡಿಕೆ ಅಥವಾ ಹೆಚ್ಚುವರಿ ಸಾರ್ವಜನಿಕ ನೀಡಿಕೆಗಳ ಮೂಲಕ ಯಾವುದೇ ಹಣಕಾಸನ್ನು ಸಂಗ್ರಹಿಸಿರಲಿಲ್ಲ. ಮುಂದುವರೆದು, ಕಂಪನಿಯು ಯಾವ ಉದ್ದೇಶಕ್ಕಾಗಿ ಅವಧಿ ಸಾಲಗಳನ್ನು ಪಡೆದುಕೊಂಡಿದ್ದಿತೋ ಅಂತಹ ಉದ್ದೇಶಗಳಿಗಾಗಿಯೇ ಅವುಗಳನ್ನು ಬಳಸಿಕೊಂಡಿದ್ದಿತು.

10) ಕಂಪನಿಯ ಲೆಕ್ಕಪುಸ್ತಕಗಳು ಮತ್ತು ದಾಖಲೆಗಳನ್ನು ಭಾರತದಲ್ಲಿ ಸರ್ವೇ ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಪರಿಪಾಠಗಳ ಅನುಸಾರ ಹಾಗೂ ನಾವು ಪರಿಶೀಲನೆ ಮಾಡುವ ವೇಳೆಯಲ್ಲಿ ಹಾಗೂ ಅಲ್ಲದೆಯೇ ನಮಗೆ ಒದಗಿಸಲಾದಂತಹ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ಪ್ರಸಕ್ತ ಸಾಲಿನಲ್ಲಿ ಕಂಪನಿಯು ಅಥವಾ ಅದರ ಅಧಿಕಾರಿಗಳು ಅಥವಾ

ಸಿಬ್ಬಂದಿಯು ಯಾವುದೇ ವಿಷಾಯಕ ವಂಚನೆಗಳನ್ನೂ ಎಸಗಿರುವಂತಹ ಯಾವುದೇ ದೃಷ್ಟಾಂತಗಳು ನಮ್ಮ ಗಮನಕ್ಕೆ ಬರಲಿಲ್ಲ ಅಥವಾ ಆ ರೀತಿಯಾಗಿ ವರದಿಯಾಗಿರಲಿಲ್ಲ.

11) ಕಂಪನಿಯು ಸರ್ಕಾರಿ ಕಂಪನಿಯಾಗಿದ್ದು, ವ್ಯವಸ್ಥಾಪಕ ಅಧಿಕಾರಿಗಳ ಸಂಭಾವನೆಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ ಎಫ್ ಸಂಖ್ಯೆ 1/2/2014–ಸಿಎಲ್.ವಿ ದಿನಾಂಕ 05 ಜೂನ್ 2015ರ ಅನುಸಾರ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 197ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

12) ಕಂಪನಿಯು ನಿಧಿ ಕಂಪನಿ ಆಗಿರುವುದಿಲ್ಲ. ಆದ್ದರಿಂದ ಆದೇಶದ ಷರತ್ತು 4 (xii) ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

13) ನಮಗೆ ನೀಡಲಾದ ವಿವರಣೆಗಳು ಹಾಗೂ ಒದಗಿಸಲಾದ ಮಾಹಿತಿಯಂತೆ, ಸಂಬಂಧಿತ ತಂಡಗಳೊಂದಿಗೆ ಯಾವುದೇ ವ್ಯವಹಾರಗಳನ್ನು ಮಾಡಿರುವುದಿಲ್ಲ ಮತ್ತು ಆದ್ದರಿಂದ ಆದೇಶದ ಷರತ್ತು 3 (xiii) ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

14) ಪ್ರಸಕ್ತ ಸಾಲಿನಲ್ಲಿ, ಕಂಪನಿಯು ರೂ.1,155 ಕೋಟಿ ಮೊತ್ತದಷ್ಟು ಈಕ್ವಿಟಿ ಷೇರುಗಳನ್ನು ಕರ್ನಾಟಕ ಸರ್ಕಾರಕ್ಕೆ ಹಂಚಿಕೆ ಮಾಡಿತು. ಕಂಪನಿಯು ಶೇಕಡಾ 100ರಷ್ಟು ಕರ್ನಾಟಕ ಸರ್ಕಾರದ ಒಡೆತನದಲ್ಲಿರುವುದರಿಂದ, ಆದೇಶದ ಷರತ್ತು 3 (xiii) ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ. ಮುಂದುವರೆದು, ಕಂಪನಿಯು, ಷೇರು ಬಂಡವಾಳಕ್ಕಾಗಿ ಸ್ವೀಕರಿಸಿದ್ದಂತಹ ಮುಂಗಡ ಮೊತ್ತ ರೂ.103.15 ಕೋಟಿಯನ್ನು ಪ್ರಸಕ್ತ ಸಾಲಿನಲ್ಲಿ ವಿಶೇಷ ಘಟಕ ಯೋಜನೆ/ ಬುಡಕಟ್ಟು ಜನಾಂಗಕ್ಕೆ ಸಂಬಂಧಿತ ಉಪ–ಯೋಜನೆ ಕಾಮಗಾರಿಗಳ ಕಡೆಗೆ ಅನುದಾನಗಳನ್ನಾಗಿ ಪರಿವರ್ತಿಸಿದ್ದಿತು, ಇದಕ್ಕೆ ಸರ್ಕಾರದಿಂದ ಅಗತ್ಯವಿದ್ದಂತಹ ಅನುಮೋದನೆಯನ್ನು ಪಡೆದಿರುವುದು.

15) ಅನುಸರಿಸಲಾದಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನಗಳು ಹಾಗೂ ಆಡಳಿತ ಮಂಡಳಿಯು ನಮಗೆ ಒದಗಿಸಲಾದಂತಹ ಮಾಹಿತಿಗಳು ಮತ್ತು ನೀಡಲಾದ ವಿವರಣೆಗಳ ಅನುಸಾರ, ಕಂಪನಿಯು ನಿರ್ದೇಶಕರುಗಳೊಂದಿಗೆ ಅಥವಾ ಅವರುಗಳೊಂದಿಗೆ ಸಂಬಂಧ ಹೊಂದಿರುವ ವ್ಯಕ್ತಿಗಳೊಂದಿಗೆ ಕಂಪನಿಯು ಯಾವುದೇ ನಗದೇತರ ವ್ಯವಹಾರಗಳನ್ನು ಮಾಡಿರುವುದಿಲ್ಲ. ಅದರಂತೆಯೇ, ಆದೇಶದ ಷರತ್ತು 3 (XIV) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

16) ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ಪರಿಚ್ಛೇದ 45 ಐಎ ಅಡಿಯಲ್ಲಿ ನೋಂದಣಿ ಮಾಡಿಸುವ ಅಗತ್ಯತೆಯಿರುವುದಿಲ್ಲ, ಆದ್ದರಿಂದ ಆದೇಶದ ಷರತ್ತು 3(XVI) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

ಕೆ. ಚನ್ನಬಸಪ್ಪ ಅಂಡ್ ಕಂಪನಿ ಪರವಾಗಿ

ಚಾರ್ಟರ್ಡ್ ಅಕೌಂಟೆಂಟ್‌ಗಳು

ಸಂಸ್ಥೆಯ ನೋಂದಣಿ ಸಂಖ್ಯೆ 000597ಎಸ್

ಸಹಿ/–

ಕೆ. ಚನ್ನಬಸಪ್ಪ

ಮಾಲೀಕರು

(ಎಂ ಸಂಖ್ಯೆ 018335)

ಸ್ಥಳ : ಬೆಂಗಳೂರು

ದಿನಾಂಕ : 27–08–2018

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ – ಬಿ

31 ಮಾರ್ಚ್ 2018ಕ್ಕೆ ಅಂತ್ಯಗೊಂಡತಹ ಸಾಲಿಗೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ (ಕಂಪನಿ) ಸದಸ್ಯರುಗಳಿಗೆ ನಾವು ನೀಡಿರುವ ನಮ್ಮ ಅದೇ ದಿನಾಂಕದ ವರದಿಯ 'ಇತರೆ ಕಾನೂನಾತ್ಮಕ ಹಾಗೂ ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ', ಈ ಶೀರ್ಷಿಕೆಯ ಅಡಿಯಲ್ಲಿನ ಕಂಡಿಕೆ (ಬಿ)ಯಲ್ಲಿ ಉಲ್ಲೇಖಿಸಿರುವಂತೆ.

ಎ. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143 (5)ರ ಅಡಿಯಲ್ಲಿ ನಿರ್ದೇಶನಗಳು

ಕ್ರಮ ಸಂಖ್ಯೆ	ನಿರ್ದೇಶನಗಳು	ಅನುಸಾರ ಕ್ರಮಗಳು
1	ಕಂಪನಿಯು ಅನುಕ್ರಮವಾಗಿ ನಿರುಪಾಧಿಕ ಹಿಡುವಳಿ ಮತ್ತು ಗುತ್ತಿಗೆ ಹಿಡುವಳಿ ಭೂಮಿಗೆ ಸಂಬಂಧಿಸಿದಂತೆ ಸ್ಪಷ್ಟ ಹಕ್ಕುಪತ್ರಗಳನ್ನು / ಗುತ್ತಿಗೆ ಕರಾರುಪತ್ರಗಳನ್ನು ಹೊಂದಿರುವುದೆ? ಇಲ್ಲವಾದಲ್ಲಿ ಸ್ಪಷ್ಟ ಹಕ್ಕುಪತ್ರ / ಗುತ್ತಿಗೆ ಕರಾರುಪತ್ರಗಳು ಲಭ್ಯವಿರದ ನಿರುಪಾಧಿಕ ಹಿಡುವಳಿ ಮತ್ತು ಗುತ್ತಿಗೆ ಹಿಡುವಳಿ ಕ್ಷೇತ್ರಗಳನ್ನು ದಯವಿಟ್ಟು ತಿಳಿಸುವುದು.	ನಮಗೆ ನೀಡಲಾಗಿರುವ ಮಾಹಿತಿಯಂತೆ, ಕಂಪನಿಯು ನೇರ ಖರೀದಿಯ ಮೂಲಕ ಸ್ವಾಧೀನಪಡಿಸಿಕೊಳ್ಳಲಾದಂತಹ ಹಾಗೂ ಯೋಜನೆಗಳಿಗಾಗಿ ಭೂ ಸ್ವಾಧೀನ ಪ್ರಕ್ರಿಯೆಗಳ ಮೂಲಕ ಸ್ವಾಧೀನಪಡಿಸಿಕೊಳ್ಳಲಾದ ನಿರುಪಾಧಿಕ ಹಿಡುವಳಿಯ ಸ್ಪಷ್ಟ ಹಕ್ಕುಪತ್ರಗಳನ್ನು ಹೊಂದಿರುತ್ತದೆ. ಆದಾಗ್ಯೂ, ಕಂಪನಿಯು ಈ ಕೆಳಗಿನ ಆಸ್ತಿಗಳಿಗೆ ಸ್ಪಷ್ಟ ಹಕ್ಕುಪತ್ರಗಳನ್ನು ಹೊಂದಿರುವುದಿಲ್ಲ: i) **ಅರಸೀಕೆರೆಯಲ್ಲಿ ಕಟ್ಟಡ – ಕಾರ್ಯಪಾಲಕ ಇಂಜಿನಿಯರ್ ಎತ್ತಿನಹೊಳೆ ಯೋಜನಾ ವಿಭಾಗ ನಂ3.;** ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ಭೂಮಿಯ ಮೇಲೆ ಆ ಇಲಾಖೆಯ ಅನುಮೋದನೆಯೊಂದಿಗೆ ಹಾಗೂ ಕಂಪನಿಯ ಯೋಜನೆಗಳು ಪೂರ್ಣಗೊಂಡನಂತರ ಆ ಭೂಮಿಯನ್ನು ಲೋಕೋಪಯೋಗಿ ಇಲಾಖೆಗೆ ಹಿಂತಿರುಗಿಸತಕ್ಕದ್ದು ಎಂಬುದನ್ನು ಒಳಗೊಂಡಂತಹ ಷರತ್ತುಗಳು ಮತ್ತು ನಿಬಂಧನೆಗಳ ಆಧಾರದ ಮೇರೆಗೆ ನಿರ್ಮಾಣಗೊಂಡಿರುತ್ತದೆ. ii) **ತುಮಕೂರಿನಲ್ಲಿ ಭೂಮಿ ಮತ್ತು ಕಛೇರಿ ಕಟ್ಟಡ, ಹೇಮಾವತಿ ಕಾಲೋನಿ:** ಕಾವೇರಿ ನೀರಾವರಿ ನಿಗಮವು ಪ್ರಸಕ್ತ ಆ ಭೂಮಿಯ ಹಕ್ಕನ್ನು ಹೊಂದಿರುತ್ತದೆ, ಅದನ್ನು ಕಂಪನಿಗೆ ಇನ್ನೂ ವರ್ಗಾಯಿಸಬೇಕಿರುತ್ತದೆ. ಆ ಭೂಮಿಯಲ್ಲಿ ಕಂಪನಿಯು ಕಟ್ಟಡದ ನಿರ್ಮಾಣವನ್ನು ಮಾಡಿರುತ್ತದೆ. iii) **ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಭೂಮಿ ಮತ್ತು ಕಟ್ಟಡ** ➢ ಹೊಸದುರ್ಗದಲ್ಲಿ ಭದ್ರಾ ಮೇಲ್ದಂಡೆ ಯೋಜನೆ. ➢ ಚಿತ್ರದುರ್ಗದಲ್ಲಿ ಕೇಂದ್ರ ಕಛೇರಿ ➢ ಬೆಂಗಳೂರಿನ ಇನ್‌ಫೆಂಟ್ರಿ ರಸ್ತೆಯ ಎಂಬೆಸ್ಸಿ ಸ್ಕ್ವೇರ್‌ನಲ್ಲಿ ನೊಂದಾಯಿತ ಕಛೇರಿ. **ಕರ್ನಾಟಕ ಸರ್ಕಾರದಿಂದ ಅನುಮೋದನೆಯು ಬಾಕಿಯಿರುವಂತೆ ಯೋಜನೆಗಳ ಆಸ್ತಿಗಳು ಮತ್ತು ಜವಾಬ್ದಾರಿಗಳ ವರ್ಗಾವಣೆಯ ಭಾಗವಾಗಿ ಮೇಲಿನ ಹಕ್ಕು ಪತ್ರಗಳನ್ನು ಕರ್ನಾಟಕ ನೀರಾವರಿ ನಿಗಮದಿಂದ (ಕನೀನಿನಿ) ವರ್ಗಾಯಿಸಬೇಕು.**

2	ಸಾಲ/ ಋಣಗಳು/ ಬಡ್ಡಿಯ ಮೊತ್ತಗಳನ್ನು ಮನ್ನಾ ಮಾಡಿರುವ/ದಾಖಲೆಗಳಿಂದ ತೆಗೆದುಹಾಕಿರುವ (ರೈಟ್‌ಆಫ್), ಇತ್ಯಾದಿ ಪ್ರಕರಣಗಳು ಇರುವವೆ, ಹೊದಾದಲ್ಲಿ, ಅವುಗಳಲ್ಲಿ ಒಳಗೊಂಡಿರುವ ಮೊತ್ತಗಳೊಂದಿಗೆ ಅವುಗಳಿಗೆ ಕಾರಣಗಳನ್ನು ತಿಳಿಸುವುದು.	ಆಡಳಿತ ಮಂಡಳಿಯು ನಮಗೆ ಒದಗಿಸಿದ ಮಾಹಿತಿಯ ಅನುಸಾರ ಹಾಗೂ ನಾವು ದಾಖಲೆಗಳನ್ನು ಪರಿಶೀಲಿಸಿದಂತೆ, ಸಾಲಗಳು/ ಋಣಗಳು/ಬಡ್ಡಿಯ ಮೊತ್ತಗಳನ್ನು ಮನ್ನಾ ಮಾಡಲಾಗಿರುವ/ ದಾಖಲೆಗಳಿಂದ ತೆಗೆದುಹಾಕಿರುವ, ಇತ್ಯಾದಿ ಯಾವುದೇ ಪ್ರಕರಣಗಳು ಇರುವುದಿಲ್ಲ.
3	ಮೂರನೇ ತಂಡಗಳ ಜೊತೆಯಲ್ಲಿರುವ ಸರಕುಸಾಮಗ್ರಿಗಳಿಗೆ ಹಾಗೂ ಸರ್ಕಾರ ಅಥವಾ ಇತರೆ ಪ್ರಾಧಿಕಾರಗಳಿಂದ ಉಡುಗೊರೆ / ಅನುದಾನ (ಗಳು) ರೂಪದಲ್ಲಿ ಸ್ವೀಕರಿಸಲಾಗಿರುವ ಆಸ್ತಿಗಳಿಗೆ ಸಮರ್ಪಕ ದಾಖಲೆಗಳನ್ನು ನಿರ್ವಹಿಸಲಾಗಿದೆಯೆ?	ಮೂರನೇ ತಂಡಗಳ ಜೊತೆ ಯಾವುದೇ ಸರಕುಸಾಮಗ್ರಿಗಳು ಇರುವುದಿಲ್ಲ ಹಾಗೂ ಪ್ರಸಕ್ತ ಸಾಲಿನಲ್ಲಿ ಸರ್ಕಾರದಿಂದ ಅಥವಾ ಇತರೆ ಪ್ರಾಧಿಕಾರಗಳಿಂದ ಉಡುಗೊರೆಯ ರೂಪದಲ್ಲಿ ಯಾವುದೇ ಆಸ್ತಿಗಳ ಸ್ವೀಕೃತಿಯೂ ಬಂದಿರುವುದಿಲ್ಲ.

ಬಿ. ಕಂಪನಿ ನಿರ್ದಿಷ್ಟ ಹೆಚ್ಚುವರಿ ನಿರ್ದೇಶನಗಳು:

ಕ್ರಮ ಸಂಖ್ಯೆ	ನಿರ್ದೇಶನಗಳು	ಅನುಸರಣಾ ಕ್ರಮಗಳು
(ಎ)	ಕಂಪನಿಯು ತಾನು ಮಾಲಿಕತ್ವ ಹೊಂದಿರುವ ಉಪಯೋಗವಾಗದೇ ಉಳಿದಿರುವ ಭೂಮಿಯ ಒತ್ತುವರಿಯನ್ನು ತಡೆಯುವ ಸಲುವಾಗಿ ಸಮರ್ಪಕ ಕ್ರಮಗಳನ್ನು ತೆಗೆದುಕೊಂಡಿರುವುದೆ. ಕಂಪನಿಯ ಯಾವುದಾದರೂ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆಯೆ, ವಿವಾದದ ಅಡಿಯಲ್ಲಿದ್ದು ಬಳಸಿಕೊಳ್ಳುತ್ತಿಲ್ಲವೆ ಅಥವಾ ಅಗತ್ಯಕ್ಕಿಂತ ಹೆಚ್ಚಾಗಿರುವುದಾಗಿ ಘೋಷಿಸಲಾಗಿದೆಯೆ? ವಿವರಗಳನ್ನು ಒದಗಿಸುವುದು.	**ಒತ್ತುವರಿ:** i) ಕಂಪನಿಯು ತಾನು ಹೊಂದಿರುವ ಮತ್ತು ಉಪಯೋಗಿಸದೇ ಇರುವಂತಹ ಭೂಮಿಯ ಒತ್ತುವರಿಗಳನ್ನು ತಡೆಯುವ ಸಲುವಾಗಿ ಸಮರ್ಪಕ ಕ್ರಮಗಳನ್ನು ತೆಗೆದುಕೊಂಡಿರುವುದಾಗಿ ಹಾಗೂ ಕಂಪನಿಯ ಯಾವುದೇ ಭೂಮಿಯು ಒತ್ತುವರಿಯಾಗಿರುವ, ವಿವಾದದ ಅಡಿಯಲ್ಲಿರುವ ಯಾವುದೇ ಪ್ರಕರಣವೂ ಇರುವುದಿಲ್ಲ ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಗಿದೆ. ಆದರೆ, ಉಪಯೋಗಿಸದೇ ಇರುವಂತಹ ಭೂಮಿಯ ಒತ್ತುವರಿಗಳನ್ನು ತಡೆಯುವ ಸಲುವಾಗಿ ಯಾವುದಾದರೂ ಕ್ರಮಗಳನ್ನು ತೆಗೆದುಕೊಂಡಿದ್ದಲ್ಲಿ ಅಂತಹ ಕ್ರಮಗಳ ಬೆಂಬಲವಾಗಿ ಕಂಪನಿಯು ಯಾವುದೇ ದಾಖಲೆಗಳನ್ನೂ ಒದಗಿಸಲಿಲ್ಲ. ii) ಯಾವುದೇ ಭೂಮಿಯನ್ನೂ ಹೆಚ್ಚುವರಿಯಾಗಿರುವುದಾಗಿ ಘೋಷಿಸಿರುವುದಿಲ್ಲ ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಯಿತು ಹಾಗೂ ನಮಗೆ ಮಾಹಿತಿಯನ್ನು ನೀಡಲಾದಂತೆ, ಯೋಜನೆಗಳನ್ನು / ಸ್ಕೀಮುಗಳನ್ನು ಪೂರ್ಣವಾಗಿ ಕಾರ್ಯಗತಗೊಳಿಸಿದನಂತರವಷ್ಟೇ ಹೆಚ್ಚುವರಿ ಭೂಮಿಯು ಯಾವುದಾದರೂ ಇದ್ದಲ್ಲಿ, ಅದನ್ನು ನಿರ್ಧಾರಣೆ ಮಾಡಬಹುದು.

(ಬಿ)	ಕಾಮಗಾರಿಗಳನ್ನು ಕಾರ್ಯಗತಗೊಳಿಸುವಿಕೆ ಮತ್ತು ಅವುಗಳಿಗೆ ಪರಸ್ಪರ ಅಭಿಮುಖವಾಗಿ ಚಾಲ್ತಿಯಲ್ಲಿರುವ ಒಡಂಬಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಗತಿಯ ಮೈಲುಗಲ್ಲುಗಳನ್ನು ಮತ್ತು ದರ ಹೆಚ್ಚಳದ ಪ್ರಭಾವಗಳನ್ನು ಮೇಲ್ವಿಚಾರಣೆ ಮಾಡುವಂತಹ ವ್ಯವಸ್ಥೆಯು ಇರುವುದೆ. ಬ್ಯಾಂಕ್ ಖಾತರಿಗಳನ್ನು ಸಮಯೋಚಿತವಾಗಿ ಪುನರ್–ಸ್ಥಿರೀಕರಿಸಲಾಗಿರುವುದೆ?	i) ಕಾಮಗಾರಿಗಳನ್ನು ಕಾರ್ಯಗತಗೊಳಿಸುವಿಕೆ ಮತ್ತು ಅವುಗಳಿಗೆ ಪರಸ್ಪರ ಅಭಿಮುಖವಾಗಿ ಚಾಲ್ತಿಯಲ್ಲಿರುವ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಟೆಂಡರ್ ಒಡಂಬಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಗತಿಯ ಮೈಲುಗಲ್ಲುಗಳನ್ನು ಮತ್ತು ದರ ಹೆಚ್ಚಳದ ಪ್ರಭಾವಗಳನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ವ್ಯವಸ್ಥೆಯು ಇರುವುದು, ಅದು ಕಾಮಗಾರಿಯು ಪ್ರಾರಂಭಗೊಳ್ಳುವಿಕೆ, ಕಾರ್ಯಗತಗೊಳಿಸುವಿಕೆಯ ಕಾರ್ಯಕ್ರಮ, ಪ್ರಗತಿಯ ಸಮೀಕ್ಷೆ, ವಿಳಂಬಗಳಿಗೆ ದಂಡ, ಇತ್ಯಾದಿಗಳನ್ನು ವ್ಯವಹರಿಸುತ್ತದೆ. ii) ಸಂಬಂಧಿತ ಅಧಿಕಾರಿಗಳು ಕಾರ್ಯಪಾಲಕ ಇಂಜಿನಿಯರ್ ರವರು / ಅಧೀಕ್ಷಕ ಇಂಜಿನಿಯರ್‌ರವರು/ ಮುಖ್ಯ ಇಂಜಿನಿಯರ್‌ರವರ ಮಟ್ಟದಲ್ಲಿ ನಡೆಯುವಂತಹ ಸಮೀಕ್ಷಾ ಸಭೆಗಳಲ್ಲಿ ಟೆಂಡರು ಒಡಂಬಡಿಕೆಗಳಲ್ಲಿ ನಿರ್ಧಿಷ್ಟಪಡಿಸಲಾಗಿರುವಂತೆ ಕಾರ್ಯಕ್ರಮಗಳನ್ನು ಸಮೀಕ್ಷಿಸುವರು, ಸಮೀಕ್ಷೆಯ ಆಧಾರದ ಮೇರೆಗೆ ಯಾವುದಾದರೂ ಅಡೆತಡೆಗಳು, ಇತ್ಯಾದಿಗಳು ಇದ್ದಲ್ಲಿ ಅವುಗಳನ್ನು ಬಗೆಹರಿಸುವ ಹಾಗೂ ಗುತ್ತಿಗೆ ಅವಧಿಯ ವಿಸ್ತರಣೆ, ವಿಳಂಬಗಳಿಗೆ ದಂಡ, ಗುತ್ತಿಗೆಯನ್ನು ಮುಕ್ತಾಯಗೊಳಿಸುವಿಕೆ, ಇತ್ಯಾದಿ ಗುತ್ತಿಗೆ ಷರತ್ತುಗಳ ಅನುಸಾರ ಅಪೇಕ್ಷಿತ ಪ್ರಗತಿಯನ್ನು ಸಾಧಿಸುವ ಸಲುವಾಗಿ ಪರಿಹಾರಕ ಕ್ರಮಗಳನ್ನು ದೃಷ್ಟಿಯಿಂದ ಕೈಗೊಳ್ಳಲಾಗುವುದು. iii) ದರ/ ವೆಚ್ಚಗಳ ಹೆಚ್ಚಳದ ಪ್ರಭಾವಕ್ಕೆ ಸಂಬಂಧಿಸಿದಂತೆ, ಮುಂದುವರೆದು ಕೊಂಡುಹೋಗುತ್ತಿರುವ / ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಅನ್ವಯಗೊಳ್ಳುವ ಒಡಂಬಡಿಕೆಗಳಲ್ಲಿ ಅಂತಹ ನಿರ್ದಿಷ್ಟ ದರ ಹೆಚ್ಚಳ ಷರತ್ತು ಇರುತ್ತದೆ. ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯಲ್ಲಿ ವಿಳಂಬಗಳು ಉಂಟಾದಾಗಲೆಲ್ಲಾ, ಯೋಜನಾ ಅಧಿಕಾರಿಗಳು ವಿಳಂಬಗಳಿಗೆ ಕಾರಣಗಳನ್ನು ಸಮರ್ಪಕವಾಗಿ ವಿಶ್ಲೇಷಿಸುವರು ಹಾಗೂ ದಂಡದೊಂದಿಗೆ ಅಥವಾ ದಂಡವಿಲ್ಲದೆಯೇ ಅವಧಿ ವಿಸ್ತರಣೆಯ ಬಗ್ಗೆ ನಿರ್ಣಯವನ್ನು ಕೈಗೊಳ್ಳುವರು. iv) ಸಾಮಾನ್ಯವಾಗಿ ಬ್ಯಾಂಕ್ ಖಾತರಿಗಳನ್ನು ನವೀಕರಿಸುವಲ್ಲಿ ವಿಳಂಬಗಳಾಗಿರುತ್ತವೆ. 31 ಆಗಸ್ಟ್ 2018ರಲ್ಲಿದ್ದಂತೆ, ರೂ.62.10 ಕೋಟಿ ಮೌಲ್ಯದ 82 ಬ್ಯಾಂಕ್ ಖಾತರಿಗಳ ಅವಧಿ ಮುಕ್ತಾಯಗೊಂಡಿದ್ದಿತು.

(ಸಿ)	ಕೈಬಿಡಲಾದ ಯೋಜನೆಗಳ ಭರಿಸಲಾಗಿರುವ ವೆಚ್ಚವನ್ನು ಪರಿಮಾಣೀಕರಿಸುವುದು ಹಾಗೂ ಈ ನಿಟ್ಟಿನಲ್ಲಿ ದಾಖಲೆಗಳಿಂದ ತೆಗೆದುಹಾಕಲಾದ ವಾಸ್ತವಿಕ ಮೊತ್ತವನ್ನು ತಿಳಿಸುವುದು	ನಮಗೆ ಒದಗಿಸಲಾದ ಮಾಹಿತಿಯಂತೆ, ಕಂಪನಿಯ ಯಾವುದೇ ಯೋಜನೆಗಳನ್ನು ಕೈಬಿಟ್ಟಿರುವುದಿಲ್ಲ.
(ಡಿ)	ರಾಜ್ಯ ಸರ್ಕಾರದ ಪುನರ್‌ವಸತಿ ಮತ್ತು ಪುನರ್–ವ್ಯವಸ್ಥೆ ಅಡಿಯಲ್ಲಿ ಪರಿಹಾರವೂ ಸೇರಿದಂತೆ ಭೂ ಸ್ವಾಧೀನಕ್ಕಾಗಿ ಪಾವತಿಯ ವ್ಯವಸ್ಥೆಯಿಂದ ಆಗಿರಬಹುದಾದ ಮಾರ್ಗಾಂತರಣಗಳನ್ನು ವಿವರಿಸಿರಿ. ಭೂ ವಿವಾದಗಳಿಗೆ ಕಾರಣಗಳನ್ನು ತಿಳಿಸುವುದು.	i) ಆಡಳಿತ ಮಂಡಳಿಯು ನಮಗೆ ಒದಗಿಸಿದ ಮಾಹಿತಿಯಂತೆ, ಭೂ ಸ್ವಾಧೀನಕ್ಕಾಗಿ ಪಾವತಿಗಳನ್ನು ಹಾಗೂ ಪುನರ್ವಸತಿ ಮತ್ತು ಪುನರ್–ವ್ಯವಸ್ಥೆಯ ಕಡೆಗೆ ಪರಿಹಾರಗಳನ್ನು ವಿಶೇಷ ಭೂ ಸ್ವಾಧೀನ ಅಧಿಕಾರಿಗಳು/ಸಹಾಯಕ ಆಯುಕ್ತರುಗಳು ಮಾಡುತ್ತಾರೆ, ಈ ವ್ಯವಸ್ಥೆಯು ರಾಜ್ಯ ಸರ್ಕಾರದ ಕಾರ್ಯನೀತಿಯ ಅನುಸಾರ ಆಗಿರುತ್ತದೆ. ii) ಸಾಮಾನ್ಯವಾಗಿ, ಭೂ ವಿವಾದಗಳಿಗೆ ಕಾರಣಗಳೆಂದರೆ ಭೂಮಿಯನ್ನು ಕಳೆದುಕೊಂಡವರು ಪರಿಹಾರದ ಮೊತ್ತವನ್ನು ಹೆಚ್ಚಳಗೊಳಿಸುವಂತೆ ಮುಂದಿಡುವ ಹಕ್ಕೊತ್ತಾಯಗಳು.
(ಇ)	ಸಾಲಗಳು / ಅನುದಾನಗಳು / ಸಹಾಯಧನಗಳ ಪರಿಣಾಮಕಾರಿತ್ವದಿಂದ ಕೂಡಿದ ಬಳಕೆಯ ವ್ಯವಸ್ಥೆಯನ್ನು ಪರಿಶೀಲಿಸುವುದು. ಹಣಕಾಸನ್ನು ಮಾರ್ಗಾಂತರಣ ಮಾಡಿರುವ ಪ್ರಕರಣಗಳನ್ನು ಪಟ್ಟಿ ಮಾಡುವುದು.	ನಾವು ನಡೆಸಿದ ಪರಿಶೀಲನೆಗಳಂತೆ, ಕಂಪನಿಯು ಅನುದಾನಗಳು/ ಸಾಲಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುವ ಸಲುವಾಗಿ ಸಮರ್ಪಕ ವ್ಯವಸ್ಥೆಯನ್ನು ಹೊಂದಿರುತ್ತದೆ. ಕಂಪನಿಯು ಪ್ರಸಕ್ತ ಸಾಲಿನಲ್ಲಿ ಯಾವುದೇ ಸಹಾಯಧನವನ್ನೂ ಸ್ವೀಕರಿಸಿರುವುದಿಲ್ಲ. ಬಂಡವಾಳ ವೆಚ್ಚಗಳು, ವಿಶೇಷ ಘಟಕ ಯೋಜನೆ, ಬುಡಕಟ್ಟು ಜನಾಂಗದ ಉಪ–ಯೋಜನೆ ಕಾಮಗಾರಿಗಳ ಕಡೆಗೆ ಸ್ವೀಕರಿಸಲಾಗುವ ಮೊತ್ತ ಹಾಗೂ ಅವಧಿ ಸಾಲದ ಮರುಪಾವತಿಗಳನ್ನು ಪ್ರಾರಂಭಿಕವಾಗಿ ಈಕ್ವಿಟಿಯ ಕಡೆಗೆ ಮುಂಗಡ ಎಂಬುದಾಗಿ ಅನುವು ಮಾಡಲಾಗುವುದು. ತದನಂತರ, ವಿಶೇಷ ಘಟಕ ಯೋಜನೆ, ಬುಡಕಟ್ಟು ಜನಾಂಗದ ಉಪ–ಯೋಜನೆ ಕಾಮಗಾರಿಗಳ ವೆಚ್ಚಗಳನ್ನು ಕರ್ನಾಟಕ ಸರ್ಕಾರದ ಆದೇಶದ ಮೂಲಕ ವರಮಾನ ಅನುದಾನಗಳಾಗಿ ಪರಿವರ್ತಿಸಲಾಗುವುದು ಹಾಗೂ ವರಮಾನ ಅನುದಾನ ಎಂಬುದಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಅವಧಿ ಸಾಲಗಳ ಮೇಲಿನ ಬಡ್ಡಿ ಪಾವತಿಗಾಗಿ ಹಾಗೂ ನಿರ್ವಹಣಾ ಕಾಮಗಾರಿಗಳು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ವರಮಾನ ಅನುದಾನವನ್ನು ಅನುವು ಮಾಡಲಾಗುವುದು. ಮುಂದುವರೆದು, ಸ್ವೀಕರಿಸಲಾದಂತಹ ಎಲ್ಲಾ ಅನುದಾನಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಬ್ಯಾಂಕ್ ಖಾತೆಯನ್ನು ನಿರ್ವಹಿಸಲಾಗುವುದರಿಂದ, ನಿರ್ದಿಷ್ಟ ಯೋಜನೆಗೆ/ಕಾಮಗಾರಿಗೆ ನೀಡಲಾಗಿದ್ದ ಅನುದಾನವನ್ನು ಮತ್ತೊಂದಕ್ಕೆ ಬಳಸಿಕೊಳ್ಳಲಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

(ಎಫ್)	ಎಐಬಿಪಿ ಯೋಜನೆಯ ಮೂಲಕ ಸ್ವೀಕರಿಸಲಾದ ಹಣಕಾಸನ್ನು ಅದೇ ಯೋಜನೆಗಾಗಿ ಬಳಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕಂಪನಿಯು ಮೇಲ್ವಿಚಾರಣಾ ವ್ಯವಸ್ಥೆಯನ್ನು ಹೊಂದಿರುವುದೆ?	ಕಂಪನಿಯು ಕಾರ್ಯಗತಗೊಳಿಸುತ್ತಿರುವ ಯೋಜನೆಗಳು ಎಐಬಿಪಿ ಯೋಜನೆಯ ಅಡಿಯಲ್ಲಿ ಬರುವುದಿಲ್ಲವಾದ್ದರಿಂದ ಇದು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.
(ಜಿ)	ಪ್ರಸಕ್ತ ಹಣಕಾಸು ಸಾಲಿನಲ್ಲಿ ಎಐಬಿಪಿ ಯೋಜನೆಯ ಮೂಲಕ ಸ್ವೀಕರಿಸಲಾದ ಮೊತ್ತವನ್ನು ಖಚಿತಪಡಿಸಿಕೊಳ್ಳುವುದು. ಮೊತ್ತವನ್ನು/ವೆಚ್ಚಗಳನ್ನು ಇತರೆ ಯೋಜನೆಗಳಿಗೆ ಮಾರ್ಗಾಂತರಣಗಳು ಇದ್ದಲ್ಲಿ ಅವುಗಳ ಬಗ್ಗೆ ವರದಿ ಸಲ್ಲಿಸುವುದು.	
(ಹೆಚ್)	ಎಐಬಿಪಿ ಯೋಜನೆಗಳನ್ನು ಜಲಸಂಪನ್ಮೂಲ ಇಲಾಖೆಯ ಮರ್ಗಸೂಚಿಗಳ ಅನ್ವಯ ಕಂಪನಿಯು ಅನುಸರಿಸುತ್ತಿದೆಯೋ? ಮಾರ್ಗಂತದ ಉದಾಹರಣೆಗಳು ಇದ್ದರೆ ಅದನ್ನು ತಿಳಿಸುವುದು	

ಕೆ. ಚನ್ನಬಸಪ್ಪ ಅಂಡ್ ಕಂಪನಿ ಪರವಾಗಿ

ಚಾರ್ಟರ್ಡ್ ಅಕೌಂಟೆಂಟ್‌ಗಳು

ಸಂಸ್ಥೆಯ ನೋಂದಣಿ ಸಂಖ್ಯೆ 000597ಎಸ್

ಸಹಿ/-

ಕೆ. ಚನ್ನಬಸಪ್ಪ

ಮಾಲೀಕರು

(ಎಂ ಸಂಖ್ಯೆ 018335)

ಸ್ಥಳ : ಬೆಂಗಳೂರು

ದಿನಾಂಕ : 27–08–2018

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ – ಸಿ

31 ಮಾರ್ಚ್ 2018ಕ್ಕೆ ಅಂತ್ಯಗೊಂಡಂತಹ ಸಾಲಿಗೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ (ಕಂಪನಿ) ಸದಸ್ಯರುಗಳಿಗೆ ನಾವು ನೀಡಿರುವ ನಮ್ಮ ಅದೇ ದಿನಾಂಕದ ವರದಿಯ 'ಇತರೆ ಕಾನೂನಾತ್ಮಕ ಹಾಗೂ ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ', ಈ ಶೀರ್ಷಿಕೆಯ ಅಡಿಯಲ್ಲಿನ ಕಂಡಿಕೆ(ಸಿ) (VII)ರಲ್ಲಿ ಉಲ್ಲೇಖಿಸಿರುವಂತೆ.

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (3) (i)ರ ಅಡಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿ:

31 ಮಾರ್ಚ್ 2018ರಲ್ಲಿದ್ದಂತೆ ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳನ್ನು (IFCoFR) ಆ ದಿನಾಂಕದಂದು ಮುಕ್ತಾಯಗೊಂಡಂತಹ ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯೊಂದಿಗೆ ಜೊತೆಗೂಡಿದಂತೆ ನಾವು ಲೆಕ್ಕಪರಿಶೋಧನೆ ಮಾಡಿದೆವು.

ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿ

ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ನಿಗಮದಿಂದ ಸ್ಥಾಪಿಸಲಾಗಿರುವ ಹಣಕಾಸು ವರದಿಯ ಮಾನದಂಡದ ಮೇಲೆ ಆಂತರಿಕ ನಿಯಂತ್ರಣವನ್ನು ಆಧರಿಸಿದಂತೆ ಆಂತರಿಕ ನಿಯಂತ್ರಣವನ್ನು ಸ್ಥಾಪಿಸುವುದು ಮತ್ತು ನಿರ್ವಹಿಸಿಕೊಂಡು ಹೋಗುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳು, ಕಂಪನಿಯ ಕಾರ್ಯನೀತಿಗಳಿಗೆ ಬದ್ಧತೆಯಿಂದ ಕೂಡಿರುವುದನ್ನೂ ಒಳಗೊಂಡಂತೆ ತನ್ನ ವ್ಯಾಪಾರ ವ್ಯವಹಾರವನ್ನು ನಿಯಮಗಳ ಅನುಸಾರ ಮತ್ತು ದಕ್ಷತೆಯಿಂದ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪರಿಣಾಮಕಾರಿತ್ವದಿಂದ ಕಾರ್ಯಚರಣೆಗೊಳ್ಳುತ್ತಿದ್ದ ಸಮರ್ಪಕವಾದಂತಹ ಆಂತರಿಕ ಹಣಕಾಸು ನಿಯಂತ್ರಣದ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆ, ತನ್ನ ಆಸ್ತಿಗಳನ್ನು ಸಂರಕ್ಷಿಸಿಕೊಳ್ಳುವುದು, ವಂಚನೆಗಳು ಮತ್ತು ತಪ್ಪುಗಳು ಸಂಭವಿಸುವುದನ್ನು ತಡೆಯುವುದು ಮತ್ತು ಅಂತಹ ಪ್ರಕರಣಗಳನ್ನು ಪತ್ತೆಹಚ್ಚುವುದು, ಲೆಕ್ಕವನ್ನಿಡುವಿಕೆಯ ದಾಖಲೆಗಳ ಯಥಾರ್ಥತೆ ಮತ್ತು ಪರಿಪೂರ್ಣತೆ ಹಾಗೂ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಅಗತ್ಯತೆಯಿರುವಂತೆ ವಿಶ್ವಸನೀಯತೆಯಿಂದ ಕೂಡಿದ ಹಣಕಾಸಿಗೆ ಸಂಬಂಧಿತ ಮಾಹಿತಿಯನ್ನು ಸಮಯೋಚಿತವಾಗಿ ತಯಾರಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಕಂಪನಿಯ ಆಂತರಿಕ ಹಣಾಕಾಸು ನಿಯಂತ್ರಣಗಳ ಹಣಾಕಾಸು ವರದಿಗಳ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮದ ಪರಿಚ್ಛೇದ 143 (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ ಎಂಬುದಾಗಿ ಭಾವಿಸಲಾಗಿರುವ ಹಾಗೂ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಅನ್ವಯಗೊಳ್ಳುವ ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯಿಂದ ನೀಡಲ್ಪಟ್ಟಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಗೊಳ್ಳುವಷ್ಟರ ಮಟ್ಟಿಗೆ, ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಆಂತರಿಕ ನಿಯಂತ್ರಣಗಳ ಹಣಾಕಾಸು ವರದಿಗಳ ಮೆಲೆ ವಿಷಾಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಅಗತ್ಯತೆಯನ್ನು ಆ ಮಾನದಂಡಗಳು ಹೊಂದಿರುತ್ತವೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯ ಸಮರ್ಪಕತೆ ಹಾಗೂ ಅವುಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷಾಧಾರಗಳನ್ನು ಪಡೆದುಕೊಳ್ಳುವುದಕ್ಕಾಗಿ ಕಾರ್ಯಾಚರಣೆಗಳನ್ನು ನಡೆಸುವುದನ್ನು ನಮ್ಮ ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ನಮ್ಮ ಲೆಕ್ಕಪರಿಶೋಧನೆಯು, ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣಗಳನ್ನು ಅರ್ಥ ಮಾಡಿಕೊಳ್ಳುವುದು, ಇರಬಹುದಾದ ವಿಷಾಯಕ ದುರ್ಬಲತೆಯ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದು ಹಾಗೂ ನಿರ್ಧಾರಣೆ ಮಾಡಲಾದ ಸಂಭಾವ್ಯ ಅಪಾಯದ ಆಧಾರದ ಮೇರೆಗೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದನ್ನು ಒಳಗೊಂಡಿರುತ್ತದೆ.

ಆಯ್ಕೆ ಮಾಡಿಕೊಳ್ಳಲಾದ ಕಾರ್ಯವಿಧಾನವು ಹಣಕಾಸು ತ:ಖ್ತೆಗಳಲ್ಲಿನ ವಂಚನೆಗಳ ಕಾರಣವಾಗಿರಲೀ ಅಥವಾ ತಪ್ಪುಗಳನ್ನು ಎಸಗುವ

ಕಾರಣಗಳಿಂದಾಗಿರಲೀ ವಿಷಾಯಕ ತಪ್ಪು ಹೇಳಿಕೆಗಳ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ.

ನಾವು ಪಡೆದುಕೊಂಡಂತಹ ಲೆಕ್ಕಪರಿಶೋಧನಾ ಸಾಕ್ಷಾಧಾರಗಳು ನಿಗಮದ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯ ಮೇಲೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ಆಧಾರವನ್ನು ಒದಗಿಸುವ ಸಲುವಾಗಿ ಸಮರ್ಪಕವಾಗಿರುತ್ತವೆ ಹಾಗೂ ಸೂಕ್ತವಾಗಿರುತ್ತವೆ ಎಂಬ ವಿಶ್ವಾಸವು ನಮಗಿದೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ತಾತ್ಪರ್ಯ

ಹಣಕಾಸು ವರದಿಯ ಮೇಲೆ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣವು, ಹಣಕಾಸು ವರದಿಯ ವಿಶ್ವಸನೀಯತೆಯನ್ನು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದಕ್ಕಾಗಿ ವಿನ್ಯಾಸಗೊಳಿಸುವ ಹಾಗೂ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವ ಪ್ರಕ್ರಿಯೆಯಾಗಿರುತ್ತದೆ. ಹಣಕಾಸು ವರದಿಯ ಮೇಲೆ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣವು ನಿಯಮಗಳು ಮತ್ತು ವಿಧಾನಗಳ ಒಳಗೊಂಡಂತೆ:

(1) ಕಂಪನಿಯ ಆಸ್ತಿಗಳ ವ್ಯವಹಾರಗಳು ಮತ್ತು ವಿನ್ಯಾಸ / ವ್ಯವಸ್ಥೆ ಅಥವಾ ಅಣಿಗೂಡಿಸುವಿಕೆಗಳನ್ನು ನ್ಯಾಯಸಮ್ಮತವಾದಂತಹ ಮತ್ತು ಯಥಾರ್ಥತೆಯಿಂದ ಕೂಡಿದ ರೀತಿಯಲ್ಲಿ ಪ್ರತಿಬಿಂಭಿಸುವುದು;

(2) ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ ಅನುಮತಿ ನೀಡುವ ಸಲುವಾಗಿ ಅಗತ್ಯವಿರುವಂತೆ ವ್ಯವಹಾರಗಳನ್ನು ದಾಖಲಿಸಲಾಗಿದೆ ಹಾಗೂ ನಿಗಮದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ನಿಗಮದ ವ್ಯವಸ್ಥಾಪನೆ / ಆಡಳಿತ ಮಂಡಳಿಯ ಮತ್ತು ನಿರ್ದೇಶಕರುಗಳ ಅನುಮತಿಯ ಅನುಸಾರವೇ ಮಾಡಲಾಗಿದೆ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದು;

(3) ಕಂಪನಿಯ ಹಣಕಾಸು ತ:ಖ್ತೆಗಳ ಮೇಲೆ ವಿಷಾಯಕ ಪ್ರಭಾವವನ್ನು ಬೀರುವಂತಹ ಕಂಪನಿಯ ಆಸ್ತಿಗಳ ಅನಧಿಕೃತ ಸ್ವಾಧೀನತೆ, ಬಳಕೆ ಅಥವಾ ವಿಲೆವಾರಿಗಳನ್ನು ತಡೆಯುವುದು ಅಥವಾ ಸಮಯೋಚಿತವಾಗಿ ಪತ್ತೆಹಚ್ಚುವುದು, ಇತ್ಯಾದಿಗಳ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದು.

ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣಗಳ ಅಂತರ್ಗತ ಇತಿಮಿತಿಗಳು

ವಂಚನೆ/ಒಳಸಂಚಿನ ಸಂಭಾವ್ಯತೆ ಅಥವಾ ಸಮರ್ಪಕ ಆಡಳಿತ ನಿಯಂತ್ರಣಗಳನ್ನು ಕಡೆಗಣಿಸುವುದು, ಇವುಗಳನ್ನೂ ಒಳಗೊಂಡಂತೆ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳ ಕಾರಣ ವಿಷಾಯಕ ತಪ್ಪು ಹೇಳಿಕೆಗಳು ಅಥವಾ ವಂಚನೆಗಳು ಸಂಭವಿಸಬಹುದು ಹಾಗೂ ಅವುಗಳನ್ನು ಪತ್ತೆಹಚ್ಚಲು ಸಾಧ್ಯವಾಗದಿರಬಹುದು ಅಲ್ಲದೆಯೇ, ಭವಿಷ್ಯದ ಅವಧಿಗಳಿಗೆ ಸಂಬಂಧಿತ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಪ್ರಕ್ಷೇಪಿಸುವುದು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವು ಸ್ಥಿತಿಗತಿಗಳಲ್ಲಿನ ಬದಲಾವಣೆ ಅಥವಾ ಕಾರ್ಯನೀತಿಗಳು ಅಥವಾ ಕಾರ್ಯವಿಧಾನಗಳು ಹಾಳಾಗುವುದರಕಾರಣ ಅಸಮರ್ಪಕಗೊಳ್ಳುವ ಸಂಭಾವ್ಯ ಅಪಾಯದ ಷರತ್ತಿಗೆ ಒಳಪಟ್ಟಿರುತ್ತದೆ.

ಷರತ್ತುಬದ್ಧ ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಮತ್ತು ನೀಡಲಾಗಿರುವ ವಿವರಣೆಗಳಂತೆ ಹಾಗೂ ನಾವು ಕೈಗೊಂಡಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನಗಳ ಅನುಸಾರ, ಕಂಪನಿಯ ಹಣಕಾಸು ವರದಿಯ ಮೇಲೆ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆ ಮತ್ತು ಕಾರ್ಯಾಚರಣೆಗಳ ಪರಿಣಾಮಕಾರಿತ್ವಗಳಲ್ಲಿ 31 ಮಾರ್ಚ್ 2018ರಲ್ಲಿದ್ದಂತೆ ಈ ಕೆಳಗಿನ ವಿಷಾಯಕ ದುರ್ಬಲತೆಗಳನ್ನು ಗುರುತಿಸಲಾಯಿತು:

ಎ) ಕಂಪನಿಯು ವಿವಿಧ ಸಾಲಗಾರರುಗಳಿಗೆ / ಸಾಲದಾತರುಗಳಿಗೆ ಸಂಬಂಧಿಸಿದಂತೆ ಅವರುಗಳಿಗೆ ಪಾವತಿಸಬೇಕಿರುವ ಉಳಿಕೆ ಮೊತ್ತ ಸರ್ಕಾರದಿಂದ ಬರಬೇಕಿರುವ ಬಾಕಿಗಳು / ಸರ್ಕಾರಕ್ಕೆ ಪಾವತಿಸಬೇಕಿರುವ ಬಾಕಿಗಳು, ವಿಶೇಷ ಭೂ ಸ್ವಾಧೀನ ಅಧಿಕಾರಿಗಳಿಗೆ / ಇತರೆ ತಂಡಗಳಿಗೆ ಪಾವತಿಸಬೇಕಿರುವ / ಬಾಕಿಗಳು, ಇವುಗಳ ಬಗ್ಗೆ ಖಚಿತಪಡಿಸಿಕೊಂಡಿರುವುದಿಲ್ಲ ಹಾಗೂ ಸಮನ್ವಯಗೊಳಿಸಿರುವುದಿಲ್ಲ. ಇದು, ಕಂಪನಿಯು ವಿವಿಧ ಸಾಲಗಾರರು/ ಸಾಲದಾತರುಗಳು ಮತ್ತು ಇತರೆ ತಂಡಗಳನ್ನು ವಿಷಾಯಕವಾಗಿ ತಪ್ಪಾಗಿ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಾಧ್ಯತೆಯಿರುತ್ತದೆ.

ಬಿ) ಕಂಪನಿಯು ಸರಕುಗಳು ಮತ್ತು ಸೇವಾ ತೆರಿಗೆಗೆ (ಜಿಎಸ್‌ಟಿ) ಸಂಬಂಧಿತ ವ್ಯವಹಾರಗಳ ಲೆಕ್ಕವನ್ನಿಡುವ ಸಲುವಾಗಿ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಉತ್ತಮಗೊಳಿಸುವ

ಅಗತ್ಯತೆಯಿರುತ್ತದೆ. ಇದು, ಸ್ಥಿರಾಸ್ತಿಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಮತ್ತು ಶಾಸನಬದ್ಧ ಬಾಕಿಗಳನ್ನು ವಿಷಾಯಕ ತಪ್ಪುಗಳಿಂದ ಕೂಡಿದಂತೆ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಂಭಾವ್ಯತೆ ಇರುತ್ತದೆ.

ಸಿ) ಕಲ್ಲು–ಮಣ್ಣು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಮೌಲ್ಯವನ್ನು ಲೆಕ್ಕ ಹಾಕುವಲ್ಲಿ ಕಂಪನಿಯ ಕಾರ್ಯವಿಧಾನ ಮತ್ತು ಆಂತರಿಕ ನಿಯಂತ್ರಣವು ಪರಿಣಾಮಕಾರಿತ್ವದಿಂದ ಕಾರ್ಯನಿರ್ವಹಿಸುತ್ತಿರಲಿಲ್ಲ. ಇದು ಅಷ್ಟರಮಟ್ಟಿಗೆ ಮೊತ್ತವನ್ನು ಗುತ್ತಿಗೆದಾರರುಗಳಿಂದ ವಸೂಲಾತಿ ಮಾಡದಿರುವಲ್ಲಿ ಹಾಗೂ ಇತರೆ ವರಮಾನಗಳಲ್ಲಿ ತಗ್ಗಿಸುವಿಕೆ ವಿಷಾಯಕ ಕೂಡಿದಂತೆ ತಿಳಿಯಪಡಿಸುವಲ್ಲಿ ಪರಿಣಾಮಿಸುವ ಸಂಭಾವ್ಯತೆ ಇರುತ್ತದೆ.

ಡಿ) ಮೌಲ್ಯಮಾಪನಗಳ ಅನುಮೋದನೆ ಮತ್ತು ಟೆಂಡರುಗಳ ಮೌಲ್ಯಮಾಪನವು ಮುಖ್ಯ ಇಂಜಿನಿಯರ್‌ಗಳು/ ಮೌಲ್ಯಮಾಪನ ಸಮೀಕ್ಷಾ ಸಮಿತಿ/ಟೆಂಡರು ಪರಿಶೀಲನಾ ಸಮಿತಿ, ಈ ರೀತಿಯಾಗಿ ಅಧಿಕಾರದತ್ತವಾಗಿರುವ ಸಂಬಂಧಿತ ಅಧಿಕಾರಿಗಳ ಮೂಲಕ ನಡೆಯುತ್ತವೆ. ಆದಾಗ್ಯೂ, ಹಣಕಾಸು ವಿಭಾಗಕ್ಕೆ ಸಂಬಂಧಿತ ವ್ಯಕ್ತಿಗಳು ಯಾವುದೇ ಸಮಿತಿಗಳಲ್ಲಿ ಭಾಗಿಗಳಾಗಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಇದು ತೆರಿಗೆಗಳು, ಇತ್ಯಾದಿ ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಮೌಲ್ಯಮಾಪನವನ್ನು ಸಮರ್ಪಕವಾಗಿ ಮಾಡದಿರುವಲ್ಲಿ ಪರಿಣಮಿಸಬಹುದು.

ಇ) ವಿಶೇಷ ಘಟಕ ಯೋಜನೆ/ಬುಡಕಟ್ಟು ಜನಾಂಗದ ಉಪ–ಯೋಜನೆ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) ಮತ್ತು ನಿರ್ಮಿತಿ ಕೇಂದ್ರಗಳು ಕಾರ್ಯಗತಗೊಳಿಸುತ್ತಿರುವುದಕ್ಕೆ ಸಂಬಂಧಿಸಿದಂತೆ ಕಂಪನಿಯ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಉತ್ತಮಗೊಳಿಸುವ ಅಗತ್ಯತೆಯಿರುತ್ತದೆ. ಮೇಲೆ ತಿಳಿಸಲಾದಂತಹ ಸಂಸ್ಥೆಗಳು ಕಾಮಗಾರಿಗಳು ಪೂರ್ಣಗೊಂಡನಂತರ ಕೇವಲ ಸ್ವಯಂ ಪ್ರಮಾಣಪತ್ರದ ಮೂಲಕ ಹಾಗೂ ಪೂರ್ಣಗೊಂಡಿರುವಿಕೆಯ ಸ್ಥಿತಿಗತಿಯನ್ನು ಯಾವುದೇ ಸಮರ್ಪಕ ವಿವರಗಳನ್ನು ಲಗತ್ತಿಸದೆಯೇ ಕಂಪನಿಗೆ ತಿಳಿಸುತ್ತವೆ. ಮುಂದುವರೆದು, ಬಳಕೆ ಪ್ರಮಾಣಪತ್ರಗಳನ್ನು ಸೂಕ್ತ ಮಟ್ಟದಲ್ಲಿ ಕಂಪನಿಯು ಸಮೀಕ್ಷಿಸತಕ್ಕದ್ದು/ಅನುಮೋದಿಸತಕ್ಕದ್ದು ಎಂಬುದಾಗಿ ನಾವು ಅಭಿಪ್ರಾಯವನ್ನು ಹೊಂದಿರುವೆವು. ಇದು ವೆಚ್ಚಗಳು ಮತ್ತು ಮುಂಗಡಗಳನ್ನು ವಿಷಾಯಕ ತಪ್ಪುಗಳಿಂದ ಕೂಡಿದಂತೆ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಂಭಾವ್ಯತೆ ಇರುತ್ತದೆ.

ಎಫ್) ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ಪಾವತಿಗಾಗಿ ಬರುವ ಕೋರಿಕೆಗಳಿಗೆ ಸಂಬಂಧಿಸಿದಂತೆ, ಅನ್ವಯಗೊಳ್ಳುವ ಗುತ್ತಿಗೆಗಳಿಗೆ ಅಗತ್ಯತೆ ಇರುವಂತೆ ಅವುಗಳನ್ನು ತ್ರೈಮಾಸಿಕವಾಗಿ ಲೆಕ್ಕವನ್ನಿಟ್ಟಿರಲಿಲ್ಲವಾದ್ದರಿಂದ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳನ್ನು ನಿಯತ ಅಂತರಗಳಲ್ಲಿ ಮೇಲ್ವಿಚಾರಣೆ ಮಾಡುವ ಅಗತ್ಯತೆಯಿರುತ್ತದೆ.

ಜಿ) ಕಂಪನಿಯು ಮುನ್ನೆಚ್ಚರಿಕೆ ಹಣದ ಭದ್ರತಾ ಠೇವಣಿ, ಭದ್ರತಾ ಠೇವಣಿ ಮತ್ತು ಇತರೆ ಠೇವಣಿಗಳ ಬಗ್ಗೆ ಖಚಿತಪಡಿಸಿಕೊಳ್ಳುವಿಕೆಗಾಗಿ ಸೂಕ್ತ ಆಂತರಿಕ ನಿಯಂತ್ರಣಗಳನ್ನು ಹೊಂದಿರುವುದಿಲ್ಲ ಇದರಿಂದಾಗಿ ಕಂಪನಿಯು ಚಾಲ್ತಿ ಆಸ್ತಿಗಳು ಮತ್ತು ಚಾಲ್ತಿ ಜವಾಬ್ದಾರಿಗಳನ್ನು ವಿಷಾಯಕವಾಗಿ ತಪ್ಪಾಗಿ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಾಧ್ಯತೆಯಿರುತ್ತದೆ.

ಎಚ್) ಓಚರು ನಮೂದುಗಳು ಆಡಳಿತ ವ್ಯವಸ್ಥೆಯ ವರ್ಗಶ್ರೇಣಿಯ ಮಟ್ಟದಲ್ಲಿ ಹಾದುಹೋಗುವ ಅಗತ್ಯತೆಯಿರುತ್ತದೆ, ಆ ರೀತಿ ಮಾಡಿದಲ್ಲಿ, ಅವುಗಳನ್ನು ಅಂತಿಮವಾಗಿ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಲೆಕ್ಕವನ್ನಿಡುವ ಮೊದಲು ಅವುಗಳನ್ನು ಸೂಕ್ತ ಮಟ್ಟಗಳಲ್ಲಿ ಪರಿಶೀಲಿಸಲಾಗುವುದು ಹಾಗೂ ಅನುಮೋದಿಸಲಾಗುವುದು.

ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳಲ್ಲಿ (IFCoFR) ವಿಷಾಯಕ ದುರ್ಬಲತೆಯು ನ್ಯೂನತೆಯಾಗಿರುತ್ತದೆ ಅಥವಾ ನ್ಯೂನತೆಗಳ ಸಂಯೋಜನೆಯಾಗಿರುತ್ತದೆ, ಅವುಗಳು ಯಾವ ರೀತಿಯದಾಗಿರುತ್ತವೆ ಎಂದರೆ ಕಂಪನಿಯ ವಾರ್ಷಿಕ ಅಥವಾ ತಾತ್ಕಾಲಿಕ ಹಣಕಾಸು ತ:ಖ್ತೆಗಳಲ್ಲಿನ ಅಂತಹ ವಿಷಾಯಕ ತಪ್ಪು ಹೇಳಿಕೆಗಳನ್ನು ತಡೆಯಲು ಸಾಧ್ಯವಾಗುವುದಿಲ್ಲ ಅಥವಾ ಸಮಯೋಚಿತವಾಗಿ ಪತ್ತೆಹಚ್ಚಲು ಸಾಧ್ಯವಾಗುವುದಿಲ್ಲ.

ನಮ್ಮ ಅಭಿಪ್ರಾಯದಲ್ಲಿ, ನಿಯಂತ್ರಣಗಳ ಮಾನದಂಡಗಳ ಉದ್ದೇಶಗಳನ್ನು ಸಾಧಿಸುವುದರ ಬಗ್ಗೆ ಮೇಲೆ ತಿಳಿಸಲಾದಂತಹ ವಿಷಾಯಕ ದುರ್ಬಲತೆಗಳ ಪರಿಣಾಮಗಳು / ಸಂಭಾವ್ಯ ಪರಿಣಾಮಗಳ ಹೊರತಾಗಿ, ಕಂಪನಿಯು ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ (IFCoFR) ಎಲ್ಲಾ ವಿಷಾಯಕ ಅಂಶಗಳನ್ನು / ವಿವರಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದು, ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವಂತಹ ಮಾರ್ಗಸೂಚಿಯಲ್ಲಿ ತಿಳಿಸಲಾಗಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ಕಂಪನಿಯು ಸ್ಥಾಪಿಸಿರುವಂತಹ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ (IFCoFR) ಆಧಾರದ ಮೇರೆಗೆ ಅಂತಹ

ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳು IFCoFR) ಮಾರ್ಚ್ 31, 2018ರಿಂದ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಲ್ಲಿರುವವು.

ಕಂಪನಿಯ 31 ಮಾರ್ಚ್ 2018ಕ್ಕೆ ಅಂತ್ಯಗೊಂಡಂತಹ ಸಾಲಿನ ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ಅನ್ವಯಗೊಳಿಸಲಾದಂತಹ ಲೆಕ್ಕಪರಿಶೋಧನಾ ಪರಿಶೀಲನೆಗಳು, ಸ್ವರೂಪ, ಸಮಯಗಳನ್ನು ನಿರ್ಧಾರಣೆ ಮಾಡುವಲ್ಲಿ, ಗುರುತಿಸಲಾದಂತಹ ಮತ್ತು ಮೇಲೆ ತಿಳಿಸಲಾದಂತಹ ವಿಷಾಯಕ ದುರ್ಬಲತೆಗಳನ್ನು ನಾವು ಪರಿಗಣಿಸಿರುವೆವು, ಕಂಪನಿಯ ಹಣಕಾಸು ತ:ಖ್ತೆಗಳ ಮೇಲೆ ನಮ್ಮ ಅಭಿಪ್ರಾಯದ ಮೇಲೆ ಎಲ್ಲೆಲ್ಲಿ ಈ ವಿಷಾಯಕೆ ದುರ್ಬಲತೆಗಳು ಪರಿಣಾಮವನ್ನು ಭೀರಿರುವವೋ ಅಂತಹ ಕಡೆಗಳಲ್ಲಿ ನಾವು ಹಣಕಾಸು ತ:ಖ್ತೆಗಳ ಮೇಲೆ ಷರತ್ತುಬದ್ಧ ಅಭಿಪ್ರಾಯವನ್ನು ನೀಡಿರುವೆವು.

ಕೆ. ಚನ್ನಬಸಪ್ಪ ಅಂಡ್ ಕಂಪನಿ ಪರವಾಗಿ

ಚಾರ್ಟರ್ಡ್ ಅಕೌಂಟೆಂಟ್‌ಗಳು

ಸಂಸ್ಥೆಯ ನೋಂದಣಿ ಸಂಖ್ಯೆ 000597ಎಸ್

ಸಹಿ/-

ಕೆ. ಚನ್ನಬಸಪ್ಪ

ಮಾಲೀಕರು

(ಎಂ ಸಂಖ್ಯೆ 018335)

ಸ್ಥಳ : ಬೆಂಗಳೂರು

ದಿನಾಂಕ : 27–08–2018

31ನೇ ಮಾರ್ಚ್ 2018ರ ಅವಧಿಗೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಲೆಕ್ಕ ಪತ್ರಗಳ ಮೇಲೆ ಕಂಪನಿ ಕಾಯ್ದೆ, 2013ರ ಪರಿಚ್ಛೇದ 143(6) (ಬಿ) ಅಡಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಟೀಕೆಗಳು.

ಕಂಪನಿ ಕಾಯ್ದೆ 2013ರ ಅಡಿ ನಿಗದಿಪಡಿಲಾದ ಆರ್ಥಿಕ ವರದಿಗಾರಿಕೆ ಚೌಕಟ್ಟಿನ ಅನುಸಾರ **31ನೇ ಮಾರ್ಚ್ 2018 ರ ಅಂತ್ಯಕ್ಕೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು** ಸಂಸ್ಥೆಯ ಹಣಕಾಸು ವಿವರಣಾ ಪಟ್ಟಿಗಳ ಸಿದ್ಧಪಡಿಸುವಿಕೆ ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಾಯ್ದೆಯ ಪರಿಚ್ಛೇದ 139(5)ರ ಅಡಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರು ನೇಮಿಸಿರುವ ಶಾಸನಬದ್ಧ ಲೆಕ್ಕರಿಶೋಧಕರು ಕಾಯ್ದೆಯ ಪರಿಚ್ಛೇದ 143(10)ರ ಅಡಿಯಲ್ಲಿ ನಿಗದಿಪಡಿಸಿರುವ ಲೆಕ್ಕಪರಿಶೋಧನಾ ಪ್ರಮಾಣಗಳ ಅನುಸಾರ ನಡೆಸಿದ ಸ್ವತಂತ್ರ ಲೆಕ್ಕಪರಿಶೋಧನೆಯ ಬೆಳಕಿನಲ್ಲಿ ಈ ಹಣಕಾಸು ತಃಖ್ತೆಗಳ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ಕಾಯ್ದೆಯ ಪರಿಚ್ಛೇದ 143ರ ಅಡಿ ಹೊಂದಿರುತ್ತಾರೆ. ಶಾಸನಬದ್ಧ ಲೆಕ್ಕಪರಿಶೋಧಕರು ತಮ್ಮ ದಿನಾಂಕ 27ನೇ ಆಗಸ್ಟ್ 2018ರ ಲೆಕ್ಕಪರಿಶೋಧನಾವರದಿಯಲ್ಲಿ ತಾವು ವರದಿಯಲ್ಲಿ ತಿಳಿಸಿರುವಂತೆ ಮಾಡಿರುವುದಾಗಿ ವರದಿ ಮಾಡಿರುತ್ತಾರೆ.

ಕಾಯ್ದೆಯ ಪರಿಚ್ಛೇದ 143(6)(ಎ) ಅನ್ವಯ, ನಾನು ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಪರವಾಗಿ **31ನೇ ಮಾರ್ಚ್ 2018 ರಂದು ಅಂತ್ಯಗೊಂಡು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು** ಸಂಸ್ಥೆಯ ಹಣಕಾಸು ವಿವರಣಾ ತಃಖ್ತೆಗಳ ಪೂರಕ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತೇನೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಸ್ವತಂತ್ರವಾಗಿ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರು ಕೆಲಸ ಮಾಡಿದ ಕಾಗದ ಪತ್ರಗಳಿಂದ ದೂರವಾಗಿ ಕೈಗೊಳ್ಳಲಾಗಿದ್ದು ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪನಿ ಸಿಬ್ಬಂದಿಯ ವಿಚಾರಣೆಗೆ ಮತ್ತು ಕೆಲವು ಲೆಕ್ಕದಾಖಲೆಗಳ ಆಯ್ದ ಪರಿಶೀಲನೆಗೆ ಇದು ಮೂಲತಃ ಸೀಮಿತವಾಗಿದೆ.

ನನ್ನ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಪರಿಚ್ಛೇದ 143(6)(ಬಿ)ಕಾಯ್ದೆ ಅನ್ವಯ ಹೇಳುವುದಾದರೆ, ನನ್ನ ತಿಳುವಳಿಕೆಗೆ ಬಂದಂತೆ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಮೇಲಿನ ಟೀಕೆಗಳಿಗಾಗಲೀ ಪೂರಕಾಂಶಗಳಿಗಾಗಲೀ ಆಸ್ಪದ ಕೊಡುವಂತಹ ಯಾವುದೇ ಮಹತ್ವದ ಅಂಶವೂ ಇರುವುದಿಲ್ಲ

ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪರವಾಗಿ

ಸಹಿ/–

(ಬಿಜಿತ್ ಕುಮಾರ್ ಮುಖರ್ಜಿ)

ಪ್ರಧಾನ ಮಹಾಲೇಖಪಾಲರು

(ಆರ್ಥಿಕ ಮತ್ತು ಆದಾಯ ಕ್ಷೇತ್ರ ಲೆಕ್ಕಪರಿಶೋಧಕರು)

ಕರ್ನಾಟಕ, ಬೆಂಗಳೂರು

ಸ್ಥಳ : ಬೆಂಗಳೂರು

ದಿನಾಂಕ : 25–09–2018

ಸಿಐಎನ್: ಯು41000ಕೆಎ2016ಎಸ್‌ಜಿಸಿ097260

31 ಮಾರ್ಚ್ 2018ರಲ್ಲಿದ್ದಂತೆ ಸಂತುಲನ ಪಟ್ಟಿ

ವಿವರಗಳು	ಟಿಪ್ಪಣಿ	31 ಮಾರ್ಚ್ 2018 ರಲ್ಲಿದ್ದಂತೆ	31 ಮಾರ್ಚ್ 2017 ರಲ್ಲಿದ್ದಂತೆ
ಆಸ್ತಿಗಳು		₹	₹
1. ಚಾಲ್ತಿಯೇತರ ಆಸ್ತಿಗಳು			
(ಎ) ಸ್ವತ್ತು, ಸ್ಥಾವರಗಳು ಮತ್ತು ಉಪಕರಣಗಳು	4	**53,86,37,986**	3,78,15,850
(ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	5	**18,99,32,75,453**	7,72,07,52,204
(ಸಿ) ಹಣಕಾಸು ಸಂಬಂಧಿತ ಆಸ್ತಿಗಳು			
ಸಾಲಗಳು ಮತ್ತು ಮುಂಗಡಗಳು	6	**2,43,49,88,651**	5,50,01,875
(ಡಿ) ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳು (ನಿವ್ವಳ)	7	**1,39,03,596**	97,08,681
		21,98,08,05,686	7,82,32,78,610
2.ಚಾಲ್ತಿ ಆಸ್ತಿಗಳು			
(ಎ) ಹಣಕಾಸು ಸಂಬಂಧಿತ ಆಸ್ತಿಗಳು			
(i) ನಗದು ಮತ್ತು ನಗದಿಗೆ ಸಮಾನವಾದವುಗಳು	8	**2,53,83.79,321**	1,94,89,71,265
(ii) ವ್ಯಾಪಾರ ಸ್ವೀಕೃತಿಗಳು	9	**73,000**	–
(iii) ಸಾಲಗಳು ಮತ್ತು ಮುಂಗಡಗಳು	6	**3,42,50,04,575**	87,06,55,873
(iv) ಇತರೆ ಹಣಕಾಸು ಸಂಬಂಧಿತ ಆಸ್ತಿಗಳು	10	**3,84,94,258**	14,89,900
(ಬಿ) ಇತರೆ ಚಾಲ್ತಿ ಆಸ್ತಿಗಳು	11	**27,75,93,065**	36,91,638
		6,27,95,44,219	2,82,48,08,676
ಒಟ್ಟು		**28,26,03,49,905**	10,64,80,87,286
ಈಕ್ವಿಟಿ ಮತ್ತು ಹೊಣೆಗಳು			
ಈಕ್ವಿಟಿ			
(ಎ) ಈಕ್ವಿಟಿ ಷೇರು ಬಂಡವಾಳ	12	**12,55,86,87,000**	1,00,00,00,000
(ಬಿ) ಇತರೆ ಈಕ್ವಿಟಿ	13	**2,46,75,93,324**	1,76,53,07,156
		15,02,62,80,324	2,76,53,07,156
ಹೊಣೆಗಳು			
1. ಚಾಲ್ತಿಯಲ್ಲದ ಹೊಣೆಗಳು			
(ಎ) ಹಣಕಾಸು ಸಂಬಂಧಿತ ಹೊಣೆಗಳು			
i. ಸಾಲಗಳು	14	**3,48,57,14,857**	2,57,14,00,000
ii. ಇತರೆ ಹಣಕಾಸು ಸಂಬಂಧಿತ ಹೊಣೆಗಳು	15	**4,95,66,04,673**	3,58,23,75,112
(ಬಿ) ಅನುವುಗಳು	16	**1,73,204**	13,695
		8,44,24,92,734	6,15,37,88,807
2. ಚಾಲ್ತಿ ಹೊಣೆಗಳು			
(ಎ) ಹಣಕಾಸು ಸಂಬಂದಿತ ಹೊಣೆಗಳು			
(i) ಸಾಲಗಳು	14	**1,48,57,13,714**	42,86,00,000
(ii) ವ್ಯಾಪಾರ ಸಂದಾಯಗಳು	17	**9,54,42,243**	964,07,620
(iii) ಇತರೆ ಹಣಕಾಸು ಸಂಬಂಧಿತ ಹೊಣೆಗಳು	15	**3,19,27,14,684**	1,28,56,79,109
(ಬಿ) ಅನುವುಗಳು	16	**1,77,06,206**	83,04,594
		4,79,15,76,847	1,72,89,91,323
ಒಟ್ಟು		**28,26,03,49,905**	**10,64,80,85,959**
ಕಂಪನಿಯ ಹಿನ್ನೆಲೆ ಮತ್ತು ಅದರ ಕಾರ್ಯಚಟುವಟಿಕೆಗಳು	1		
ಹಣಕಾಸು ತ:ಖ್ತೆಗಳ ತಯಾರಿಕೆಗೆ ಆಧಾರ	2		
ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು	3		
ಹಣಕಾಸು ತ:ಖ್ತೆಗಳಿಗೆ ಹೆಚ್ಚುವರಿ ಮಾಹಿತಿ	24–26		
ಈ ಲೆಕ್ಕಪತ್ರಗಳಿಗೆ ಲಗತ್ತಿಸಲಾಗಿರುವಂತಹ ಟಿಪ್ಪಣಿ ಸಂಖ್ಯೆಗಳು 4ರಿಂದ 29 ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗಗಳಾಗಿರುತ್ತವೆ.			

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಸಹಿ/–
ಕೆ. ಜೈಪ್ರಕಾಶ್
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 05119822

ಸಹಿ/–
ಜಿ.ಎಸ್. ಪ್ರಕಾಶ್
ಕಂಪನಿ ಕಾರ್ಯದರ್ಶಿ

ಸಹಿ/–
ನಾಗವೀಣಾ ಎ.ವಿ
ಸಹಾಯಕ ಪ್ರಧಾನ ವ್ಯವಸ್ಥಾಪಕರು

ಸಹಿ/–
ಡಿ.ಎನ್. ದೇಸಾಯಿ
ನಿರ್ದೇಶಕರು
00229518

ಸ್ಥಳ : ಬೆಂಗಳೂರು
ದಿನಾಂಕ : 27–08–2018

ಲಗತ್ತಿಸಲಾಗಿರುವ ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ಕೆ. ಚನ್ನಬಸಪ್ಪ ಅಂಡ್ ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ 000597ಎಸ್
ಸಹಿ/–
ಕೆ. ಚನ್ನಬಸಪ್ಪ
ಮಾಲೀಕರು (ಎಂ ಸಂಖ್ಯೆ. 18335)

ಸಿಐಎನ್: ಯು41000ಕೆಎ2016ಎಸ್‌ಜಿಸಿ097260
31 ಮಾರ್ಚ್ 2018ಕ್ಕೆ ವರ್ಷಾಂತ್ಯದ ಲಾಭ ಮತ್ತು ನಷ್ಟಗಳ ತ:ಖ್ತೆ

ವಿವರಗಳು	ಟಿಪ್ಪಣಿ	31 ಮಾರ್ಚ್ 2018 ರ ವರ್ಷಾಂತ್ಯಕ್ಕೆ	31 ಮಾರ್ಚ್ 2017 ವರ್ಷಾಂತ್ಯಕ್ಕೆ (20–10–2016 ರಿಂದ 31–3–2017)
		₹	₹
1. ವರಮಾನ			
ಕಾರ್ಯಾಚರಣೆಗಳಿಂದ ವರಮಾನ	18	**73,000**	–
ಇತರೆ ವರಮಾನ	19	**1,84,75,54,068**	17,21,45,683
ಒಟ್ಟು ವರಮಾನ		**1,84,76,27,068**	17,21,45,683
2.ವೆಚ್ಚಗಳು			
ಸಿಬ್ಬಂದಿಯ ವೇತನ ಮತ್ತು ಸೌಲಭ್ಯಗಳು	20	**8,12,15,766**	2,21,25,741
ಹಣಕಾಸು ವೆಚ್ಚಗಳು	21	**28,09,89,232**	37,77,844
ಸವಕಳಿ	4	**1,25,13,014**	2,51,768
ಕರ್ನಾಟಕ ಸರ್ಕಾರದ ಯೋಜನೆಗಳ ಮೇಲಿನ ವೆಚ್ಚಗಳು	22	**1,31,55,38,281**	46,06,02,883
ಇತರೆ ವೆಚ್ಚಗಳು	23	**42,11,98,170**	19,97,90,300
ಒಟ್ಟು ವೆಚ್ಚಗಳು		**2,11,14,54,463**	**68,65,48,536**
3. ಅಸಾಧಾರಣ ಮತ್ತು ವಿಶೇಷ ಬಾಬ್ತುಗಳು ಹಾಗೂ ತೆರಿಗೆಗೆ ಮುಂಚಿನ ಲಾಭ		**(26,38,27,395)**	**(51,44,02,852)**
4. ಅಸಾಧಾರಣ ಮತ್ತು ವಿಶೇಷ ಬಾಬ್ತುಗಳು		–	–
5. ತೆರಿಗೆಗೆ ಮುಂಚಿನ ಲಾಭ/(ನಷ್ಟ)		**(26,38,27,395)**	**(51,44,02,852)**
ಕಳೆಯುವುದು: ತೆರಿಗೆ ವೆಚ್ಚಗಳು			
– ಚಾಲ್ತಿ ತೆರಿಗೆ		–	–
– ಮುಂದೂಡಲ್ಪಟ್ಟಿರುವ ತೆರಿಗೆ		**41,94,915**	97,08,681
6. ಪ್ರಸಕ್ತ ಸಾಲಿನ ಲಾಭ/(ನಷ್ಟ)		**(25,96,32,480)**	**(50,46,94,172)**
7. ಇತರೆ ಸಮಗ್ರ ವರಮಾನ		**6,976**	–
8. ಒಟ್ಟು ಸಮಗ್ರ ವರಮಾನ		**(25,96,25,504)**	**(50,46,94,172)**
ತೂಗಲ್ಪಟ್ಟಿರುವ ಸರಾಸರಿ ಷೇರುಗಳು ಬಾಕಿಯಿರುವುದು – ಮೂಲ		**47,40,976**	6,575
ತೂಗಲ್ಪಟ್ಟಿರುವ ಸರಾಸರಿ ಷೇರುಗಳು ಬಾಕಿಯಿರುವುದು – ದುರ್ಬಲಗೊಳಿಸಲಾದ		**52,52,562**	93,644
ಷೇರು ಒಂದಕ್ಕೆ ಮೂಲ ಗಳಿಕೆಗಳು			
– ಮೂಲ		**(55)**	(76,756)
– ದುರ್ಬಲಗೊಳಿಸಲ್ಪಟ್ಟ		**(49)**	(5,390)
(ಪ್ರತಿ ಷೇರಿಗೆ ಮುಖ ಬೆಲೆ ರೂ.1000/–)			
ಕಂಪನಿಯ ಹಿನ್ನೆಲೆ ಮತ್ತು ಅದರ ಕಾರ್ಯಚಟುವಟಿಕೆಗಳು ಹಣಕಾಸು ತ:ಖ್ತೆಗಳ ತಯಾರಿಕೆಗೆ ಆಧಾರ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು ಹಣಕಾಸು ತ:ಖ್ತೆಗಳಿಗೆ ಹೆಚ್ಚುವರಿ ಮಾಹಿತಿ ಈ ಲೆಕ್ಕಪತ್ರಗಳಿಗೆ ಲಗತ್ತಿಸಲಾಗಿರುವಂತಹ ಟಿಪ್ಪಣಿ ಸಂಖ್ಯೆಗಳು 4ರಿಂದ 29 ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗಗಳಾಗಿರುತ್ತವೆ.	1 2 3 24–26		

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಸಹಿ/–
ಕೆ. ಜೈಪ್ರಕಾಶ್
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 05119822

ಸಹಿ/–
ಜಿ.ಎಸ್. ಪ್ರಕಾಶ್
ಕಂಪನಿ ಕಾರ್ಯದರ್ಶಿ

ಸಹಿ/–
ನಾಗವೀಣಾ ಎ.ವಿ
ಸಹಾಯಕ ಪ್ರಧಾನ ವ್ಯವಸ್ಥಪಕರು

ಸಹಿ/–
ಡಿ.ಎನ್. ದೇಸಾಯಿ
ನಿರ್ದೇಶಕರು
00229518

ಸ್ಥಳ : ಬೆಂಗಳೂರು
ದಿನಾಂಕ : 27–08–2018

ಲಗತ್ತಿಸಲಾಗಿರುವ ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ಕೆ. ಚನ್ನಬಸಪ್ಪ ಅಂಡ್ ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ 000597ಎಸ್
ಸಹಿ/–
ಕೆ. ಚನ್ನಬಸಪ್ಪ
ಮಾಲೀಕರು (ಎಂ ಸಂಖ್ಯೆ. 18335)

ಸಿಐಎನ್: ಯು41000ಕೆಎ2016ಎಸ್‌ಜಿಸಿ097260

31 ಮಾರ್ಚ್ 2018ಕ್ಕೆ ವರ್ಷಾಂತ್ಯಕ್ಕೆ ಹಣಕಾಸು ಹರಿವಿನ ತ:ಖ್ತೆ

ವಿವರಗಳು	31 ಮಾರ್ಚ್ 2018 ರ ವರ್ಷಾಂತ್ಯಕ್ಕೆ	31 ಮಾರ್ಚ್ 2017ರ ಅವಧಿಗೆ ಅಂತ್ಯಗೊಂಡ
	₹	₹
1.ಕಾರ್ಯಾಚರಣೆ ಚಟುವಟಿಕೆಗಳಿಂದ ಹಣಕಾಸಿನ ಹರಿವು		
ತೆರಿಗೆಗೆ ಮುಂಚಿನ ನಿವ್ವಳ ನಷ್ಟ	**(26,38,27,395)**	(51,44,02,853)
ಇತರೆ ಸಮಗ್ರ ವರಮಾನ	**6,976**	–
ಈ ಕೆಳಗಿನವುಗಳಿಗಾಗಿ ಹೊಂದಾಣಿಕೆ:		
ಹಣಕಾಸು ವೆಚ್ಚಗಳು	**28,09,89,232**	46,39,708
ಹಣಕಾಸು ವೆಚ್ಚಗಳಿಗಾಗಿ ಸ್ವೀಕರಿಸಲಾದ ಅನುದಾನಗಳು	**(28,07,17,137)**	35,48,973
ಬಡ್ಡಿಯಿಂದ ವರಮಾನ	**(22,80,07,232)**	(5,20,74,967)
ಸವಕಳಿ	**1,25,13,014**	2,51,768
ವೈದ್ಯಕೀಯ ವೆಚ್ಚಗಳ ಮರುತುಂಬಿಕೊಡುವಿಕೆ	–	12,080
ಕಾರ್ಯೋಪಯುಕ್ತ ಬಂಡವಾಳದಲ್ಲಿನ ಬದಲಾವಣೆಗಳಿಗೆ ಮುಂಚಿನ ಕಾರ್ಯಾಚರಣೆಗಳಿಂದ ಲಾಭ	**(47,90,42,542)**	(55,80,25,291)
ಕಾರ್ಯೋಪಯುಕ್ತ ಬಂಡವಾಳದಲ್ಲಿನ ಬದಲಾವಣೆಗಳು	–	
ವ್ಯಾಪಾರ ಸ್ವೀಕೃತಿಗಳಲ್ಲಿ ಇಳಿಕೆ / (ಹೆಚ್ಚಳ)	**(73,000)**	–
ಸಾಲಗಳು ಮತ್ತು ಮುಂಗಡಗಳಲ್ಲಿ ಇಳಿಕೆ / (ಹೆಚ್ಚಳ)	**(4,93,43,35,478)**	(92,56,57,748)
ಇತರೆ ಚಾಲ್ತಿ ಮತ್ತು ಚಾಲ್ತಿಯದಲ್ಲದ ಆಸ್ತಿಗಳಲ್ಲಿ ಇಳಿಕೆ / (ಹೆಚ್ಚಳ)	**(27,52,64,490)**	(36,91,638)
ದೀರ್ಘಾವಧಿ ಹೊಣೆಗಳು , ಚಾಲ್ತಿ ಹೊಣೆಗಳು ಮತ್ತು ವ್ಯಾಪಾರ ಸಂದಾಯಗಳಲ್ಲಿ ಪಾವತಿಸಬೇಕಾದವುಗಳು ಹೆಚ್ಚಳ / (ಇಳಿಕೆ)	**3,36,65,08,876**	5,29,81,74,063
ಅನುವುಗಳಲ್ಲಿನ ಹೆಚ್ಚಳ / (ಇಳಿಕೆ)	**95,61,121**	99,91,443
ಕಾರ್ಯಾಚರಣೆ ಚಟುವಟಿಕೆಗಳಲ್ಲಿ (ಬಳಸಲಾದ) ನಿವ್ವಳ ಹಣಕಾಸಿನ ಹರಿವು	**(2,31,26,45,512)**	3,82,07,90,829
ಹೂಡಿಕೆ ಚಟುವಟಿಕೆಗಳಿಂದ ನಗದಿನ ಹರಿವು:		
ಸ್ಥಿರಾಸ್ತಿಗಳ ಖರೀದಿ ಹಾಗೂ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿನ ಬದಲಾವಣೆ*	**(11,78,58,59,728)**	(7,75,88,18,495
ಸ್ವೀಕರಿಸಲಾಗಿರುವ ಬಡ್ಡಿ	**19,10,02,874**	5,05,85,067
ಹೂಡಿಕೆ ಚಟುವಟಿಕೆಗಳಿಂದ ನಿವ್ವಳ ಹಣಕಾಸಿನ ಹರಿವು (ಬಳಸಲಾದ)	**(11,59,48,56,854)**	(7,70,82,33,428)
ಹಣಕಾಸು ಚಟುವಟಿಕೆಗಳಿಂದ ಹಣಕಾಸಿನ ಹರಿವು		
ನೀಡಲಾಗಿರುವ ಷೇರು ಬಂಡವಾಳ	**11,55,86,87,000**	1,00,00,00,000
ಹಂಚಿಕೆ ಮಾಡಲು ಬಾಕಿಯಿರುವ ಷೇರು ಅರ್ಜಿಯ ಹಣ (ನಿವ್ವಳ)	**96,19,13,000**	2,27,00,00,000
ದೀರ್ಘಾವಧಿ ಸಾಲಗಳಿಂದ ಸ್ವೀಕೃತಿಗಳು	**2,40,00,000**	2,57,14,28,571
ದೀರ್ಘಾವಧಿ ಸಾಲಗಳ ಮರುಪಾವತಿ	**(42,85,71.429)**	–
ಹಣಕಾಸು/ ವೆಚ್ಚಗಳು	**(27,89,28,149)**	(6,03,871)
ಹಣಕಾಸು ವೆಚ್ಚಗಳನ್ನು ಭರಿಸುವುದಕ್ಕಾಗಿ ಸ್ವೀಕರಿಸಲಾದ ಅನುದಾನಗಳು	**28,38,10,000**	(35,48,973)
ಬಂಡವಾಳೀಕರಿಸಲಾದ ಹಣಕಾಸು ವೆಚ್ಚಗಳು	–	(8,61,864)
ಹಣಕಾಸಿನ ಚಟುವಟಿಕೆಗಳಿಂದ ನಿವ್ವಳ ಹಣಕಾಸಿನ ಹರಿವು (ಬಳಸಲಾದ)	**14,49,69,10,422**	**5,83,64,13,863**

ಸಿಐಎನ್: ಯು41000ಕೆಎ2016ಎಸ್‌ಜಿಸಿ097260
31 ಮಾರ್ಚ್ 2018ರ ವರ್ಷಾಂತ್ಯಕ್ಕೆ ಹಣಕಾಸಿನ ಹರಿವಿನ ತ:ಖ್ತೆ

ವಿವರಗಳು	31 ಮಾರ್ಚ್ 2018 ರ ವರ್ಷಂತ್ಯಕ್ಕೆ	31 ಮಾರ್ಚ್ 2017ರ ಅವದಿಗೆ ಅಂತ್ಯಗೊಂಡ
	₹	₹
ನಗದು ಮತ್ತು ನಗದಿಗೆ ಸಮನಾದವುಗಳಲ್ಲಿ ನಿವ್ವಳ ಹೆಚ್ಚಳ/ (ಇಳಿಕೆ)	**58,94,08,057**	1,94,89,71,264
ವರ್ಷದ ಪ್ರಾರಂಭದಲ್ಲಿನ ನಗದು ಮತ್ತು ನಗದಿಗೆ ಸಮನಾದವುಗಳು	**1,94,89,71,264**	–
ವರ್ಷದ ಅಂತ್ಯದಲ್ಲಿ ನಗದು ಮತ್ತು ನಗದಿಗೆ ಸಮನಾದವುಗಳು	**2,53,83,79,321**	**1,94,89,71,264**

ಟಿಪ್ಪಣಿ:

1. ಮೇಲಿನ ಹಣಕಾಸು ಹರಿವಿನ ತ:ಖ್ತೆಯನ್ನು ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು) 2015ರ ಹಣಕಾಸು ಹರಿವಿನ ತ:ಖ್ತೆಗಳ ಮೇಲಿನ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ IndAS ಮಾನದಂಡ – 7ರಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ "ಪರೋಕ್ಷ ಪದ್ಧತಿ"ಯಲ್ಲಿ ತಯಾರಿಸಲಾಗಿದೆ.

2. ಹಿಂದಿನ ಸಾಲಿನ ಅಂಕಿಸಂಖ್ಯೆಗಳನ್ನು ಅಗತ್ಯವಿರುವ ಕಡೆಗಳಲ್ಲಿ ಪುನರ್–ಹೊಂದಾಣಿಕೆ ಮಾಡಲಾಗಿದೆ/ಪುನರ್–ಗುಂಪು ಮಾಡಲಾಗಿದೆ.

3. ನಗದು ಮತ್ತು ನಗದಿಗೆ ಸಮನಾದವುಗಳು ಖಜಾನೆಯಲ್ಲಿರುವ ಠೇವಣಿಗಳ ಶಿಲ್ಕನ್ನೂ ಒಳಗೊಂಡಂತೆ ನಗದು ಮತ್ತು ಬ್ಯಾಂಕ್ ಶಿಲ್ಕುಗಳನ್ನು ಪ್ರತಿನಿಧಿಸುತ್ತವೆ.

4. ನಗದು ಮತ್ತು ನಗದಿಗೆ ಸಮಾನವಾದವುಗಳ ಸಮನ್ವಯಗೊಳಿಸಿರುವಿಕೆಯು ಟಿಪ್ಪಣಿ 8ರ ಪ್ರಕಾರ ಆಗಿರುತ್ತದೆ.

5. *ಹೂಡಿಕೆ ಚಟುವಟಿಕೆಗಳಿಂದ ನಗದಿನ ಹರಿವು ಹಂಚಿಕೆ ಮಾಡಲಾಗಿರುವ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಸಹಿ/–
ಕೆ. ಜೈಪ್ರಕಾಶ್
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 05119822

ಸಹಿ/–
ಜಿ.ಎಸ್. ಪ್ರಕಾಶ್
ಕಂಪನಿ ಕಾರ್ಯದರ್ಶಿ

ಸಹಿ/–
ನಾಗವೀಣಾ ಎ.ವಿ
ಸಹಾಯಕ ಪ್ರಧಾನ ವ್ಯವಸ್ಥಪಕರು

ಸಹಿ/–
ಡಿ.ಎನ್. ದೇಸಾಯಿ
ನಿರ್ದೇಶಕರು
00229518

ಲಗತ್ತಿಸಲಾಗಿರುವ ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ

ಕೆ. ಚನ್ನಬಸಪ್ಪ ಅಂಡ್ ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿಸಂಖ್ಯೆ 000597ಎಸ್
ಸಹಿ/–
ಕೆ. ಚನ್ನಬಸಪ್ಪ
ಮಾಲೀಕರು
(ಎಂ ಸಂಖ್ಯೆ. 18335)

ಸ್ಥಳ : ಬೆಂಗಳೂರು

ದಿನಾಂಕ : 27–08–2018

31 ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿಗೆ ಈಕ್ವಿಟಿಯಲ್ಲಿನ ಬದಲಾವಣೆಗಳ ತ:ಖ್ತೆ

ವಿವರಗಳು	ಇತರೆ ಈಕ್ವಿಟಿ			
	ಮೀಸಲಿರಿಸಿರುವಿಕೆಗಳು ಮತ್ತು ಹೆಚ್ಚುವರಿ	ಇತರೆ ಮೀಸಲಿರಿಸಿರುವಿಕೆ	ಇತರವುಗಳು	ಒಟ್ಟು ಇತರೆ ಈಕ್ವಿಟಿ
	ಉಳಿಸಿಕೊಳ್ಳಲ್ಪಟ್ಟಿರುವ ಗಳಿಕೆಗಳು	ಇತರೆ ಸಮಗ್ರ ಆದಾಯದ ಮೂಲಕ ಗ್ರಾಚ್ಯೂಟಿಹೊಣೆ	ಹಂಚಿಕೆ ಮಾಡಲು ಬಾಕಿಯಿರುವ ಷೇರು ಅರ್ಜಿಗಳ ಶುಲ್ಕ	
31 ಮಾರ್ಚ್ 2017ರಲ್ಲಿದ್ದಂತೆ ಶಿಲ್ಕು	(50,46,94,172)	–	–	(50,46,94,172)
ಪ್ರಸಕ್ತ ಸಾಲಿನ ಲಾಭ	(25,96,32,480)	–	–	(25,96,32,480)
ಹಂಚಿಕೆ ಮಾಡಲು ಬಾಕಿಯಿರುವ ಷೇರು ಅರ್ಜಿಗಳ ಶುಲ್ಕ	–	–	3,23,19,13,000	3,23,19,13,000
ಪ್ರಸಕ್ತ ಸಾಲಿಗೆ ಇತರೆ ಸಮಗ್ರ ಆದಾಯ	–	6,976	–	6,976
31 ಮಾರ್ಚ್ 2018ರಲ್ಲಿದ್ದಂತೆ ಶಿಲ್ಕು	**(76,43,26,652)**	**6,976**	**3,23,19,13,000**	**2,46,75,93,324**

ಮೀಸಲಿರಿಸುವಿಕೆ ಮತ್ತು ಹೆಚ್ಚುವರಿಗಳ ಸ್ವರೂಪ ಮತ್ತು ಚಲನೆಗಳನ್ನು ಟಿಪ್ಪಣಿ –13ರಲ್ಲಿ ಉಲ್ಲೇಖಿಸಲಾಗಿದೆ.

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಸಹಿ/–
ಕೆ. ಜೈಪ್ರಕಾಶ್
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 05119822

ಸಹಿ/–
ಜಿ.ಎಸ್. ಪ್ರಕಾಶ್
ಕಂಪನಿ ಕಾರ್ಯದರ್ಶಿ

ಸಹಿ/–
ನಾಗವೀಣಾ ಎ.ವಿ
ಸಹಾಯಕ ಪ್ರಧಾನ ವ್ಯವಸ್ಥಾಪಕರು

ಸ್ಥಳ : ಬೆಂಗಳೂರು

ದಿನಾಂಕ : 27–08–2018

ಲಗತ್ತಿಸಲಾಗಿರುವ ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ

ಸಹಿ/–
ಡಿ.ಎನ್. ದೇಸಾಯಿ
ನಿರ್ದೇಶಕರು
00229518

ಕೆ. ಚನ್ನಬಸಪ್ಪ ಅಂಡ್ ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿಸಂಖ್ಯೆ 000597ಎಸ್
ಸಹಿ/–
ಕೆ. ಚನ್ನಬಸಪ್ಪ
ಮಾಲೀಕರು
(ಎಂ ಸಂಖ್ಯೆ. 18335)

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

1. ಕಂಪನಿಯ ಹಿನ್ನೆಲೆ ಹಾಗೂ ಅದರ ಕಾರ್ಯಚಟುವಟಿಕೆಗಳು

(ಎ) ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತವನ್ನು ಸರ್ಕಾರಿ ಆದೇಶ ಸಂಖ್ಯೆ ಜಸಂಇ 35 ವಿಬ್ಯಾಇ 2016 ದಿನಾಂಕ 20.08.2016ರ ಅನ್ವಯ ಕಂಪನಿಗಳ ಅಧಿನಿಯಮ 2013ರ ಅನುವುಗಳ ಅಡಿಯಲ್ಲಿ ಕರ್ನಾಟಕ ಸರ್ಕಾರವು ಸಂಪೂರ್ಣವಾಗಿ ಮಾಲೀಕತ್ವವನ್ನು ಹೊಂದಿರುವ ಕಂಪನಿಯಾಗಿ ದಿನಾಂಕ 20.10.2016ರಂದು ನೋಂದಣಿ ಮಾಡಿಸಲಾಯಿತು.

(ಬಿ) ಕಂಪನಿಯ ಪ್ರಮುಖ ಉದ್ದೇಶಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ:

(i) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಅನುಕೂಲತೆಗಳನ್ನು ರೂಪಿಸುವುದಕ್ಕಾಗಿ ತಜ್ಞರುಗಳ ಸಮಿತಿಯು ಸಲ್ಲಿಸುವ ಅಧ್ಯಯನ ವರದಿಯನ್ನು ಆಧಾರಿಸಿದಂತೆ ಪ್ರಸ್ತಾಪಿಸಲಾಗುವ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಮತ್ತು ಕಾರ್ಯಗತಗೊಳಿಸುವುದು ಹಾಗೂ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಮತ್ತು ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಗಳನ್ನು ಮತ್ತು ಈ ಯೋಜನೆಗಳಿಗೆ ಸಂಬಂಧಿಸಿದ ಯೋಜನೆಗಳು ಕರ್ನಾಟಕ ನೀರಾವರಿ ನಿಗಮದಿಂದ ಈ ಕಂಪನಿಗೆ ವರ್ಗಾಯಿಸಲಾಗಿದೆ ಹಾಗೂ ಕರ್ನಾಟಕದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳ ಬರ ಪೀಡಿತ ಪ್ರದೇಶಗಳ ನೀರಿನ ಅಗತ್ಯತೆಯನ್ನು ಪೂರೈಸುವ ಸಲುವಾಗಿ ಕರ್ನಾಟಕ ಸರ್ಕಾರವು ಕಾಲಾನುಕಾಲಕ್ಕೆ ಈ ಕಂಪನಿಗೆ ವಹಿಸಬಹುದಾದ ಇತರೆ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಮತ್ತು ಕಾರ್ಯಗತಗೊಳಿಸುವುದು.

(ii) ಅಣೆಕಟ್ಟುಗಳು, ಜಲಾಶಯಗಳು, ಬ್ಯಾರೇಜುಗಳು, ಸಣ್ಣ ನಾಲೆಗಳು, ಏತ ನೀರಾವರಿ ಯೋಜನೆಗಳು, ಸೌರ ನೀರಾವರಿ ಯೋಜನೆಗಳು, ಕೊಳವೆ ಮಾರ್ಗಗಳು, ರಸ್ತೆ ಕಾಮಗಾರಿಗಳು, ವಿದ್ಯುತ್ ಉತ್ಪಾದನೆ ಹಾಗೂ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ (ಕಾಡಾ) ಕಾಮಗಾರಿಗಳನ್ನು ಒಳಗೊಂಡಂತೆ ಇತರೆ ಉದ್ದೇಶಗಳನ್ನು ಒಳಗೊಂಡಿರುವ ಎಲ್ಲಾ ರೀತಿಯ ಮೂಲಸೌಕರ್ಯಗಳ ಪೂರ್ವಭಾವಿ ಯೋಜನೆ, ಪರಿಶೀಲನೆ, ಮೌಲ್ಯಮಾಪನ ಮಾಡುವಿಕೆ, ನಿರ್ಮಾಣ, ಕಾರ್ಯಾಚರಣೆ ಹಾಗೂ ನಿರ್ವಹಣೆ ಮಾಡುವುದು.

(iii) ನೀರಿನ ಪರಿಣಾಮಕಾರಿತ್ವದಿಂದ ಕೂಡಿದ ಬಳಕೆಗಾಗಿ ಅತ್ಯಾಧುನಿಕ ನೀರಾವರಿ ಯೋಜನೆಗಳು/ ತುಂತುರು, ಹನಿ ನೀರಾವರಿ, ಸೌರ ಜಲ ಪಂಪುಗಳು ಮತ್ತಿತರೆ ಪದ್ಧತಿಗಳು ಅಥವಾ ವ್ಯವಸ್ಥೆಗಳನ್ನು ಪ್ರೋತ್ಸಾಹಿಸುವುದು, ಅಳವಡಿಸಿಕೊಳ್ಳುವುದು ಹಾಗೂ ನೀರು ಬಳಕೆ ಯೋಜನೆಗಳ ನಿರ್ಮಾಣದಿಂದ ತೊಂದರೆಗೆ ಒಳಗಾದ ಜನತೆ ಮತ್ತು ಸ್ಥಳಗಳಿಗೆ ಪುನರ್ವಸತಿ ಕಲ್ಪಿಸುವುದನ್ನೂ ಒಳಗೊಂಡಂತೆ ಕರ್ನಾಟಕ ಸರ್ಕಾರವು ವಹಿಸಿಕೊಡುವ ನೀರಾವರಿ ಯೋಜನೆಗಳನ್ನು ನಿರ್ಮಿಸುವುದು ಕಾರ್ಯಾಚರಣೆ ಗೊಳಿಸುವುದು, ನಿರ್ವಹಿಸುವುದು ಹಾಗೂ ಅರಣ್ಯೀಕರಣಕ್ಕಾಗಿ ಸೂಕ್ತ ಯೋಜನೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಸೂಕ್ತ ಮಾರ್ಗೋಪಾಯಗಳು, ಮಾನದಂಡಗಳು ಕಂಡುಕೊಳ್ಳುವ ಮೂಲಕ ಪ್ರವಾಹಗಳನ್ನು ತಡೆಯುವುದು ಹಾಗೂ ಅಲ್ಲದೆಯೇ ನದಿಗಳಲ್ಲಿ/ಕೆರೆಗಳಲ್ಲಿ ನ್ಯಾವಿಗೇಶನ್, ಲೀಷರ್/ಮನೋರಂಜನೆ ಚಟುವಟಿಕೆಗಳು, ಮೀನುಗಾರಿಕೆ, ಇತ್ಯಾದಿಗಳನ್ನು ಒದಗಿಸುವುದು.

(ಸಿ) ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಜಸಂಇ 35 ವಿಬ್ಯಾಇ 2016 ದಿನಾಂಕ 20.08.2016ರ ಮೂಲಕ ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಈ ಯೋಜನೆಗಳಿಗೆ ಸಂಬಂಧಿತ ಯೋಜನೆಗಳನ್ನು ಹಾಗೂ ಕರ್ನಾಟಕದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳಿಗೆ ಬರ ಪೀಡಿತ ಪ್ರದೇಶಗಳ ನೀರಿನ ಅಗತ್ಯತೆಯನ್ನು ಪೂರೈಸುವ ಯೋಜನೆಗಳು ಮತ್ತು ಮುಂದುವರೆದುಕೊಂಡು ಹೋಗುತ್ತಿರುವ ಇತರೆ ಯಾವುದಾದರೂ ಯೋಜನೆಗಳು ಇದ್ದಲ್ಲಿ, ಅವುಗಳನ್ನು ಈ ಕಂಪನಿಗೆ ವರ್ಗಾಯಿಸಿತು. ಸರ್ಕಾರಿ ಆದೇಶ ಸಂಖ್ಯೆ ಜಸಂಇ 130 ವಿಬ್ಯಾಇ 2016 ದಿನಾಂಕ 18.11.2016ರ ಪ್ರಕಾರ ಕರ್ನಾಟಕ ಸರ್ಕಾರವು ತಾತ್ವಿಕವಾಗಿ ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನಹೊಳೆ ಯೋಜನೆ, ವಾಣಿವಿಲಾಸ ಸಾಗರ, ಗಾಯಿತ್ರಿ ಜಲಾಶಯದ ಮುಂದುವರೆದುಕೊಂಡು ಹೋಗುತ್ತಿರುವ ಕಾಮಗಾರಿಗಳ ಆಸ್ತಿಗಳನ್ನು ಮತ್ತು ಜವಾಬ್ದಾರಿಗಳನ್ನು ಈ ಕಂಪನಿಗೆ ವರ್ಗಾಯಿಸಿರುವುದು, ಮೇಲೆ ತಿಳಿಸಲಾದ ಯೋಜನೆಗಳ ಆಸ್ತಿಗಳು ಮತ್ತು ಜವಾಬ್ದಾರಿಗಳ ಅಂತಿಮ ವರ್ಗಾವಣೆಯು ಬಾಕಿಯಿರುವುದು. ಮುಂದುವರೆದು, ಮೇಲೆ ತಿಳಿಸಲಾದ ಯೋಜನೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿಗಳನ್ನು ಮತ್ತು ಈ ಕಛೇರಿಗೆ ಹೊಂದಿಕೊಂಡಿರುವ ಹುದ್ದೆಗಳನ್ನು ಮತ್ತು ಸದರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬಂದ್ದಿಗಳನ್ನು ಕರ್ನಾಟಕ ಸರ್ಕಾರವು ಈ ಕಂಪನಿಗೆ ವರ್ಗಾವಣೆ ಮಾಡುತ್ತಿದೆ.

(ಡಿ) ಸರ್ಕಾರವು, ವಿಶೇಷ ಘಟಕ ಯೋಜನೆ (ಎಸ್‌ಸಿಪಿ)/ ಬುಡಕಟ್ಟು ಜನಾಂಗದ ಉಪ–ಯೋಜನೆ (ಟಿಎಸ್‌ಪಿ) ಯೋಜನೆಗಳನ್ನು ಸಮಾಜದ ಹಿಂದುಳಿದ ವರ್ಗಗಳಿಗಾಗಿ ನೀರಾವರಿ ಮತ್ತು ಇತರೆ ಅನುಕೂಲತೆಗಳ ಕಾಮಗಾರಿಗಳನ್ನೂ ಹಾಗೂ ಇತರೆ ಸರ್ಕಾರಿ ಯೋಜನೆಯಾದ ನಬಾರ್ಡ್ ಕಾಮಗಾರಿಗಳನ್ನು ಈ ಕಂಪನಿಗೆ ವಹಿಸಿಕೊಟ್ಟಿದೆ.

2. ಹಣಕಾಸು ತ:ಖ್ತೆಗಳ ತಯಾರಿಕೆಗೆ ಆಧಾರ

ಸೇವೆಯಿಂದ ನಿವೃತ್ತಿಹೊಂದುವ ಉದ್ಯೋಗಿಗಳಿಗೆ ಗ್ರಾಚ್ಯೂಟಿ ಪಾವತಿ, ಯೋಜನೆಯು ವರ್ಗಾವಣೆಗೊಂಡಾಗ ಕಾಮಗಾರಿಗಳ ಬಾಕಿಬಿಲ್ಲುಗಳ ಪಾವತಿ, ದರ ಹೆಚ್ಚಳಗೊಂಡಾಗ ಬರುವ ಹೆಚ್ಚುವರಿ ಪಾವತಿಗಾಗಿ ಬರುವ ಕೋರಿಕೆಗಳು, ಹೆಚ್ಚುವರಿ ಹಣಕಾಸು ಪಾವತಿ ಬಾಧ್ಯತೆಗಳು ಹಾಗೂ ಬೆಳೆ ಪರಿಹಾರ ಪಾವತಿ, ಮುಂತಾದ ಹಣಕಾಸು ವ್ಯವಹಾರಗಳನ್ನು ಕಂಪನಿಯು ಸ್ವೀಕೃತಿ/ನಗದು ಆಧಾರದ ಮೇರೆಗೆ ಲೆಕ್ಕವನ್ನಿಡುವಿಕೆಯನ್ನು ಹೊರತುಪಡಿಸಿದಂತೆ, ಹಣಕಾಸು ತ:ಖ್ತೆಗಳನ್ನು ಚಾರಿತ್ರಿಕ ವೆಚ್ಚ ಸಂಪ್ರದಾಯದ ಅಡಿಯಲ್ಲಿ ಮುಂದುವರೆಯುವ ಸಂಸ್ಥೆ ಹಾಗೂ ಪ್ರಾಪ್ತತೆಯ ಆಧಾರದ ಮೇಲೆ ತಯಾರಿಸಲಾಗಿರುತ್ತದೆ ಹಾಗೂ ಇವುಗಳನ್ನು ಹೊರತುಪಡಿಸಿ (ಎ) ನ್ಯಾಯಸಮ್ಮತ ಮೌಲ್ಯಗಳಲ್ಲಿ ಲೆಕ್ಕಹಾಕಲಾಗುವ ಕೆಲವು ಹಣಕಾಸು ಸಾಧನಗಳು ಹಾಗೂ (ಬಿ) ನಿವ್ವಳ ವಿವರಿಸಲ್ಪಟ್ಟಿರುವ ಪ್ರಯೋಜನಗಳು (ಆಸ್ತಿ)/ ಜವಾಬ್ದಾರಿಗಳನ್ನು ಹೊರತುಪಡಿಸಿದಂತೆ ತನ್ನ ವ್ಯವಹಾರಗಳನ್ನು ನಡೆಸಿಕೊಂಡುಹೋಗುತ್ತಿರುವ ಕಂಪನಿಯಾಗಿ ಹಾಗೂ ಸಂಚಿತ ಆಧಾರದ ಮೇರೆಗೆ ಸಾಂಪ್ರದಾಯಿಕ ಮೂಲ ಬೆಲೆ ಆಧಾರದ ಮೇರೆಗೆ ತಯಾರಿಸಲಾಗಿದೆ ಹಾಗೂ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 133ರ ಅಡಿಯಲ್ಲಿ ಅಧಿಸೂಚನೆಗೊಂಡಿರುವ ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು) ನಿಯಮಗಳು, 2015ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಕಡ್ಡಾಯವಾಗಿ ಪಾಲಿಸಬೇಕಾದ ಭಾರತದ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ವಿಷಾಯಕ ಅಂಶಗಳನ್ನು ಅನುಸರಿಸಿರುತ್ತದೆ.

3. ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು

ಕಂಪನಿಯು ಕರ್ನಾಟಕ ಸರ್ಕಾರದ ಉದ್ದಿಮೆಯಾಗಿದ್ದು ಕೆಲವು ಕುಡಿಯುವ ನೀರು ಮತ್ತು ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವ ನಿರ್ದಿಷ್ಟ ಗುರಿಯೊಂದಿಗೆ ಸ್ಥಾಪಿಸಲಾಗಿರುವುದು. ಕಂಪನಿಯ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳನ್ನು ಸಾಧ್ಯವಾದಷ್ಟು ಮಟ್ಟಿನ ಕಾರ್ಯಸಾಧ್ಯತೆಯೊಂದಿಗೆ ನೀರು ಸರಬರಾಜಿಗಾಗಿ ನೀರಿದ ದರಗಳ ವಸೂಲಾತಿ ಮಾಡುವುದರೊಂದಿಗೆ ಹಾಗೂ ಉಳಿದ ಭಾಗವನ್ನು ಈ ಕಂಪನಿಯ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗುವ ಹಣಕಾಸಿನ ಸಹಾಯದಿಂದ ಭರಿಸಲಾಗುವುದು. ಆದ್ದರಿಂದ ಹಣಕಾಸು ತ:ಖ್ತೆಗಳನ್ನು ಮುಂದುವರೆಯುತ್ತಿರುವ ಕಂಪನಿ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ.

3.1 ಮೌಲ್ಯಮಾಪನಗಳ ಬಳಕೆ

ಹಣಕಾಸು ತ:ಖ್ತೆಗಳ ತಯಾರಿಕೆಯು ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ (ಜಿ.ಎ.ಎ.ಪಿ) ಅನುಸಾರವೇ ಆಗಿರುತ್ತದೆ ಹಾಗೂ ಆಡಳಿತ ಮಂಡಳಿಯು ಹಣಕಾಸು ತ:ಖ್ತೆಗಳ ದಿನಾಂಕದಂದು ಆಸ್ತಿಗಳು ಮತ್ತು ಜವಾಬ್ದಾರಿಗಳು ಮತ್ತು ಆಕಸ್ಮಿಕ ಜವಾಬ್ದಾರಿಗಳ ವರದಿ ಮಾಡಲಾಗಿರುವ ಮೊತ್ತಗಳ ಮೇಲೆ ಪ್ರಭಾವ ಭೀರಬಹುದಾದವುಗಳ ಮೌಲ್ಯಮಾಪನಗಳು ಮತ್ತು ಕಲ್ಪನೆಗಳು ಮಾಡುವ ಅಗತ್ಯತೆಯಿರುತ್ತದೆ. ಈ ವರದಿಯ ಜೊತೆಯಲ್ಲಿರುವ ಹಣಕಾಸು ತ:ಖ್ತೆಗಳಲ್ಲಿ ಬಳಸಲಾಗಿರುವ ಮೌಲ್ಯಮಾಪನಗಳು ಮತ್ತು ಕಲ್ಪನೆಗಳು ಆಡಳಿತ ಮಂಡಳಿಯ ಸಂಬಂಧಿತ ವಾಸ್ತವಾಂಶಗಳು ಹಾಗೂ ಸಂದರ್ಭಗಳ ಮೌಲ್ಯಮಾಪನದ ಆಧಾರದ ಮೇರೆಗೆ ಆಗಿರುತ್ತದೆ. ವಾಸ್ತವಿಕ ಫಲಿತಾಂಶಗಳು ಅಂತಹ ಮೌಲ್ಯಮಾಪನಗಳಿಗಿಂತ ಭಿನ್ನವಾಗಿರಬಹುದು. ಲೆಕ್ಕವನ್ನಿಡುವಿಕೆಯ ಮೌಲ್ಯಮಾಪನಗಳಿಗೆ ಮಾಡಲಾಗುವ ಯಾವುದೇ ಪರಿಷ್ಕರಣೆಯನ್ನು ಚಾಲ್ತಿ ಮತ್ತು ಮುಂದಿನ ಅವಧಿಗಳಲ್ಲಿ ಮುಂದಾಲೋಚನೆಯಿಂದ ಗುರುತಿಸಲಾಗುವುದು ಪರಿವರ್ತನೆಯ ಪರಿಣಾಮದ ಸಮನ್ವಯಗೊಳಿಸುವಿಕೆಗಳು ಹಾಗೂ ವಿವರಣೆಗಳನ್ನು ಟಿಪ್ಪಣಿ 2ರಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

3.2 ಖಂಡಾವಾರು ವರದಿ ಮಾಡುವಿಕೆ:

ಕಂಪನಿಯು ಕೇವಲ ನಿರ್ದಿಷ್ಟ ಭೌಗೋಳಿಕ ಕ್ಷೇತ್ರದಲ್ಲಿ ಕಾರ್ಯಾಚರಣೆ ನಡೆಸುತ್ತಿದೆ ಹಾಗೂ ಅದು ನೀರಾವರಿ ಮೂಲಸೌಕರ್ಯಗಳನ್ನು ಸೃಷ್ಟಿಸುವುದು ಹಾಗೂ ಅವುಗಳ ಕಾರ್ಯಾಚರಣೆಗಳನ್ನು ನಡೆಸುವುದು, ಆದ್ದರಿಂದ ಕಂಪನಿಗೆ ಯಾವುದೇ ವರದಿ ಮಾಡುವಂತಹ ಯಾವುದೇ ಸೆಗ್‌ಮೆಂಟ್‌ಗಳು ಇರುವುದಿಲ್ಲ.

3.3 ವರಮಾನದ ಗುರುತಿಸುವಿಕೆ:

ನೀರಾವರಿಗಾಗಿ ನೀರನ್ನು ಹರಿಸುವುದರಿಂದ ಬರುವ ವರಮಾನವನ್ನು ಕರ್ನಾಟಕ ನೀರಾವರಿ ಅಧಿನಿಯಮ ಹಾಗೂ ಅದರ ಅಡಿಯಲ್ಲಿನ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ಪ್ರಾಪ್ತತೆಯ ಆಧಾರದ ಮೇರೆಗೆ ಗುರುತಿಸಲಾಗುವುದು.

ಸಣ್ಣ ಕಲ್ಲುಗಳ ಮಾರಟ, ಗಟ್ಟಿ ಕಲ್ಲು, ಮಣ್ಣು, ಟೆಂಡರು ನಮೂನೆಗಳು, ಇವುಗಳ ಮಾರಾಟ, ಭೂಮಿ ಮತ್ತು ಕಟ್ಟಡದ ಬಳಕೆಗಾಗಿ ಬರುವ ಬಾಡಿಗೆ/ ಕ್ರಯ ವರಮಾನ, ಕಾಮಗಾರಿಯ ಪ್ರಗತಿಯಲ್ಲಿನ

ವಿಳಂಬಕ್ಕೆ ದಂಡ, ಗುತ್ತಿಗೆದಾರರುಗಳಿಗೆ ಹೆಚ್ಚುವರಿ ಪಾವತಿ ಮೇಲಿನ ವರಮಾನ, ಬಡ್ಡಿ ವಿವಿಧ ಆದಾಯ, ಸಾಮಾನ್ಯ ವ್ಯವಹಾರದಲ್ಲಿ ಆಗಿರದ ಇತರೆ ವರಮಾನ/ಸ್ವೀಕೃತಿಗಳನ್ನು, ಅವುಗಳು ಅಂತಿಮವಾಗಿ ಸ್ವೀಕೃತಿಗೊಳ್ಳುವುದರಲ್ಲಿ ಅನಿಶ್ಚಿತತೆ ಇರುತ್ತದೆಯಾದ್ದರಿಂದ ವಾಸ್ತವಿಕವಾಗಿ ವಸೂಲಾತಿಯಾದನಂತರ ಗುರುತಿಸಲಾಗುವುದು. ಮೂರು ವರ್ಷಗಳಿಗೂ ಮೀರಿದಂತೆ ಬಾಕಿಯಿರುವ ಹಳೆಯ ಚೆಕ್ಕುಗಳನ್ನು ವರಮಾನವನ್ನಾಗಿ ಗುರುತಿಸಲಾಗುವುದು.

3.4 ಸರಕು ಸಾಮಗ್ರಿಗಳು

ಉತ್ಪನದ ಸಂದರ್ಭಗಳಲ್ಲಿ ಹೊರತೆಗೆದ ಅವಶೇಷ ಹಾಗೂ ಮತ್ತಿತರೆ ಸಾಮಗ್ರಿಗಳಿಗೆ ಯಾವುದೇ ಮೌಲ್ಯವನ್ನೂ ನಿಗದಿಪಡಿಸಿರುವುದಿಲ್ಲ. ಆದಾಗ್ಯೂ, ಗುತ್ತಿಗೆದಾರರುಗಳಿಗೆ ನೀಡುವ ರಬ್ಬಲ್ ಹಾಗೂ ಇತರೆ ಸಾಮಗ್ರಿಗಳಿಗೆ ಗುತ್ತಿಗೆ ಒಡಂಬಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ವಸೂಲಾತಿ ಮಾಡಲಾಗುವುದು ಹಾಗೂ ಸರ್ಕಾರಕ್ಕೆ ಪಾವತಿಸಬೇಕಾದ ರಾಜಧನವನ್ನು ಕಳೆದು ನಿವ್ವಳ ಮೊತ್ತವನ್ನು ಲಾಭ ಮತ್ತು ನಷ್ಟ ತ:ಖ್ತೆಗೆ ಜಮೆ ಮಾಡಲಾಗುವುದು.

3.5 ನಗದು ಮತ್ತು ನಗದಿಗೆ ಸಮಾನವಾದವುಗಳು (ಹಣಕಾಸಿನ ಹರಿವಿನ ತ:ಖ್ತೆಯ ಉದ್ದೇಶಕ್ಕಾಗಿ)

ನಗದು, ಕಛೇರಿ (ಗಳಲ್ಲಿ) ಇರುವಂತಹ ನಗದು ಹಾಗೂ ಬ್ಯಾಂಕ್‌ಗಳಲ್ಲಿರುವ ಬೇಡಿಕೆ ಠೇವಣಿಗಳನ್ನು ಒಳಗೊಂಡಿರುತ್ತದೆ. ನಗದಿಗೆ ಸಮಾನವಾದವುಗಳು ಅಲ್ಪಾವಧಿ ಶಿಲ್ಕುಗಳಾಗಿರತಕ್ಕದ್ದು, (ಪಡೆದುಕೊಂಡ ದಿನಾಂಕದಿಂದ ಮೂಲ ಮುಕ್ತಾಯದ ಅವಧಿಯು ಮೂರು ತಿಂಗಳುಗಳ ಒಳಗೆ ಇರತಕ್ಕದ್ದು) ನಗದಿನ ಅರಿತಿರುವ ಮೊತ್ತಕ್ಕೆ ತತ್‌ಕ್ಷಣವೇ ಪರಿವರ್ತಿಸಬಹುದಾದ ರೀತಿಯಲ್ಲಿ ಅಧಿಕ ಪ್ರಮಾಣದಲ್ಲಿ ಹಣಕಾಸಿಗೆ ಪರಿವರ್ತಿತಗೊಳ್ಳಬಲ್ಲ ಹೂಡಿಕೆಗಳಾಗಿರತಕ್ಕದ್ದು ಹಾಗೂ ಅವು ಮೌಲ್ಯದಲ್ಲಿನ ಬದಲಾವಣೆಗಳ ಗಮನಾರ್ಹವಲ್ಲದ ಸಂಭಾವ್ಯ ಅಪಾಯಗಳ ಷರತ್ತಿಗೆ ಒಳಪಟ್ಟಿರತಕ್ಕದ್ದು.

ಹಣಕಾಸು ಹರಿವಿನ ತ:ಖ್ತೆ

ಹಣಕಾಸು/ ನಗದಿನ ಹರಿವನ್ನು ಪರೋಕ್ಷ ಪದ್ಧತಿಯನ್ನು ಬಳಸಿಕೊಂಡು ವರದಿ ಮಾಡಲಾಗುವುದು, ಅದರಿಂದಾಗಿ ತೆರಿಗೆ ಪಾವತಿಗೆ ಮುಂಚಿನ ಲಾಭ/(ನಷ್ಟ)ವನ್ನು ನಗದೇತರ ಸ್ವರೂಪದ ವ್ಯವಹಾರಗಳ ಪ್ರಭಾವಗಳಿಗೆ ಹಾಗೂ ಹಿಂದಿನ ಅಥವಾ ಭವಿಷ್ಯದ/ಮುಂದಿನ ನಗದು ಸ್ವೀಕೃತಿಗಳು ಅಥವಾ ಪಾವತಿಗಳ ಮುಂದೂಡಿಕೆಗಳು ಅಥವಾ ಸಂಚಿತಗೊಂಡಿರುವಿಕೆಗಳ ಕಡೆಗೆ ಹೊಂದಾಣಿಕೆ ಮಾಡಲಾಗುವುದು. ಕಂಪನಿಯ ಕಾರ್ಯಾಚರಣೆಗಳು ಹೂಡಿಕೆಗಳು ಹಾಗೂ ಹಣಕಾಸು ನೀಡುವಿಕೆ (ಫೈನಾನ್ಸಿಂಗ್) ಚಟುವಟಿಕೆಗಳನ್ನು ಲಭ್ಯವಿರುವ ಮಾಹಿತಿಯ ಆಧಾರದ ಮೇರೆಗೆ ವಿಂಗಡನೆ ಮಾಡತಕ್ಕದ್ದು.

3.6 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು

(ಎ) ಕಂಪನಿಯು ಕಾರ್ಯಗತಗೊಳಿಸುತ್ತಿರುವ ಯೋಜನೆಗಳು ಅಣೆಕಟ್ಟೆಗಳು, ಜಲಾಶಯಗಳು, ಅಡ್ಡಗಟ್ಟೆಗಳು, ಸೇತುವೆಗಳು, ನಾಲೆಗಳು, ನಾಲಾ ವ್ಯವಸ್ಥೆಗಳು, ಏತ ನೀರಾವರಿ ಯೋಜನೆಗಳು, ಕೆರೆಗಳನ್ನು ತುಂಬಿಸುವಿಕೆ, ಇತ್ಯಾದಿಗಳನ್ನು ಒಳಗೊಂಡಿರುತ್ತವೆ. ಆಸ್ತಿಯು ಉದ್ದೇಶಿತ ಬಳಕೆಗೆ ಸಿದ್ದಗೊಂಡ ಸಂದರ್ಭದಲ್ಲಿ, ಅದರ ನಿರ್ಮಾಣದ ವೆಚ್ಚವನ್ನು ಸೂಕ್ತ ಕಟ್ಟಡಗಳು, ಅಣೆಕಟ್ಟೆಗಳು, ನಾಲೆಗಳು, ಏತ ನೀರಾವರಿ ಯೋಜನೆಗಳು, ಇತ್ಯಾದಿಗಳಿಗೆ ವರ್ಗಾಯಿಸಲಾಗುವುದು ಹಾಗೂ ಅವುಗಳ ಮೇಲೆ ಸವಕಳಿಯನ್ನು ಅನುವು ಮಾಡಲಾಗುವುದು. ಅಂತಹ ಹಂತವು ಪೂರ್ಣಗೊಳ್ಳುವವರೆವಿಗೂ, ನಿರ್ಮಾಣದ ವೆಚ್ಚವನ್ನು (ಅದು ಕೆಲವು ಪ್ರಕರಣಗಳಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಅಂತಿಮ ಪಾವತಿಗಾಗಿ ಸಕ್ಷಮ ಅಧಿಕಾರಿಗಳ ಅನುಮತಿಯು ಬಾಕಿಯಿರುವ ಪ್ರಕರಣಗಳಲ್ಲಿ ಭಾಗಶ: ಮಾಡಲಾಗಿರುವ ಪಾವತಿಗಳನ್ನು ಒಳಗೊಂಡಿರುತ್ತದೆ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಅಡಿಯಲ್ಲಿ ವರ್ಗೀಕರಿಸಲಾಗುವುದು ಹಾಗೂ ಮೂಲ ಬೆಲೆಯಲ್ಲಿ ತಿಳಿಸಲಾಗುವುದು. ನಿರ್ಮಾಣದ ಅಡಿಯಲ್ಲಿರುವ ಆಸ್ತಿಗೆ ನೇರವಾಗಿ ಕಾರಣವಾಗಿರುವಂತಹ ನಿರ್ಮಾಣದ ವೇಳೆಯಲ್ಲಿನ ವೆಚ್ಚವನ್ನು ಹಾಗೂ ಬಂಡವಾಳೀಕರಿಸಲು ಅರ್ಹಗೊಳ್ಳುವ ಅದಕ್ಕಾಗಿ ಪಡೆಯಲಾಗುವ ಸಾಲಗಳ ಮೇಲಿನ ವೆಚ್ಚವನ್ನೂ ಸಹ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಅಡಿಯಲ್ಲಿ ಬಂಡವಾಳೀಕರಿಸಲಾಗುವುದು.

(ಬಿ) ಸರಬರಾಜು ಹಾಗೂ ಸ್ಥಾಪನೆ/ಸ್ಥಿರಗೊಳಿಸುವಿಕೆ ಗುತ್ತಿಗೆಗೆ ಸಂಬಂಧಿಸಿದಂತೆ, ಸ್ವೀಕರಿಸಲಾದ ಹಾಗೂ ಒಪ್ಪಿಕೊಳ್ಳಲಾದ ಸರಬರಾಜುಗಳನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಎಂಬುದಾಗಿ ಪರಿಗಣಿಸಲಾಗುವುದು.

3.7 ವೆಚ್ಚಗಳ ಹಂಚಿಕೆ (ನಿರ್ಮಾಣದ ವೇಳೆಯಲ್ಲಿ)

(i) ಉದ್ದೇಶಿತ ಬಳಕೆಗೆ ಸಿದ್ಧವಿಲ್ಲದ ಆಸ್ತಿಗಳು ಸಂಬಂಧಿಸಿರುವ ಯೋಜನೆಗಳು ಹಾಗೂ ಇತರೆ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ನೇರ ವೆಚ್ಚ, ಸಂಬಂಧಿತ ಆಕಸ್ಮಿಕ ವೆಚ್ಚಗಳು ಹಾಗೂ ಆ ಕಾಮಗಾರಿಯ ಕಾರಣದಿಂದ ತೆಗೆದುಕೊಳ್ಳಲಾಗಿರುವ ಸಾಲದ ಮೇಲಿನ ಬಡ್ಡಿ ಇವುಗಳನ್ನು ಒಳಗೊಂಡಂತೆ ಮೂಲ ಬೆಲೆಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ನೇರ ವೆಚ್ಚಗಳೆಂದರೆ ಕಾರ್ಯಪಾಲಕ ಇಂಜಿನಿಯರ್‌ರವರುಗಳ ಕಛೇರಿ ಗಳಲ್ಲಿ ಭರಿಸಲಾಗಿರುವ ವರಮಾನ ವೆಚ್ಚಗಳನ್ನು (ಅಣೆಕಟ್ಟೆಗಳು, ಅಡ್ಡಗಟ್ಟೆಗಳು, ನಾಲೆಗಳು, ಉಪ–ನಾಲೆಗಳು, ವಿತರಣಾ ನಾಲೆಗಳು, ಏತ ನೀರಾವರಿ ಯೋಜನೆಗಳು, ಇವುಗಳ

ದುರಸ್ತಿ ಮತ್ತು ನಿರ್ವಹಣಾ ವೆಚ್ಚಗಳನ್ನು ಸಂದೇಹಾಸ್ಪದ ಸಾಲಗಳ ಹವಣಿಕೆ ಆಸ್ತಿಗಳ ಮೇಲೆ ಸವಕಳಿ ಇತ್ಯಾದಿಗಳನ್ನು ಹೊರತುಪಡಿಸಿದಂತೆ) ಗುರುತಿಸಲಾಗುವುದು ಹಾಗೂ ವ್ಯವಸ್ಥಿತ ಆಧಾರದ ಮೇರೆಗೆ ಸಂಬಂಧಿತ ಕಾರ್ಯಪಾಲಕ ಇಂಜಿನಿಯರ್‌ರವರ ಪ್ರಗತಿಯಲ್ಲಿರುವ ಕಾಮಗಾರಿಗಳ ಅಡಿಯಲ್ಲಿ ಆಸ್ತಿಗಳಿಗೆ ಹಂಚಿಕೆ ಮಾಡಲಾಗುವುದು. ಪೂರ್ಣಗೊಂಡಿರುವ ಆಸ್ತಿಗಳಿಗೆ ಹಂಚಿಕೆ ಮಾಡಲಾಗುವ ವರಮಾನ ವೆಚ್ಚವನ್ನು ಲಾಭ ಮತ್ತು ನಷ್ಟ ತ:ಖ್ತೆಗೆ ಹಾಕಲಾಗುವುದು

(ii) ಯಾವುದೇ ಅಪರೋಕ್ಷ ವೆಚ್ಚಗಳನ್ನು ಬಳಸಲು ಸಿದ್ಧವಾಗಿರುವ, ಆದರೆ ಪೂರ್ಣಗೊಂಡಿರುವ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಮೂಲಕ ಹಾದು ಹೋಗುವ ಆಸ್ತಿಗೆ ವಿಧಿಸಲಾಗುವುದಿಲ್ಲ ಹಾಗೂ ತತ್‌ಕ್ಷಣವೇ ಸ್ಥಿರಾಸ್ತಿಗಳಿಗೆ ವರ್ಗಾವಣೆ ಮಾಡಲಾಗುವುದು.

(iii) ಮುಖ್ಯ ಇಂಜಿನಿಯರ್‌ರವರ ಕಛೇರಿ, ಅಧೀಕ್ಷಕ ಇಂಜಿನಿಯರ್‌ರವರ ಕಛೇರಿಗಳು, ನೊಂದಾಯಿತ ಕಛೇರಿ, ಕೇಂದ್ರ ಕಛೇರಿಯ ಸ್ಥಿರಾಸ್ತಿಗಳ ನಿರ್ಮಾಣಕ್ಕೆ ನೇರವಾಗಿ ಸಂಬಂಧಿಸಿರುವ ಆಡಳಿತ ಮತ್ತು ಇತರೆ ಸಾಮಾನ್ಯ ವೆಚ್ಚಗಳನ್ನು ಗುರುತಿಸಲಾಗುವುದು ಹಾಗೂ ಪ್ರಧಾನ ಆಸ್ತಿಗಳಿಗೆ ವ್ಯವಸ್ಥಿತ ಆಧಾರದ ಮೇರೆಗೆ ಹಂಚಿಕೆ ಮಾಡಲಾಗುವುದು.

(iv) ವಿಶೇಷ ಭೂಸ್ವಾಧೀನ ಅಧಿಕಾರಿಯವರ ಕಛೇರಿಗಳು ಭರಿಸಿರುವ ವರಮಾನ ವೆಚ್ಚಗಳನ್ನು (ಆಸ್ತಿಗಳ ಮೇಲಿನ ಸವಕಳಿಯನ್ನು ಹೊರತುಪಡಿಸಿ) ಭೂಮಿ ಎಂಬುದಾಗಿ ಬಂಡವಾಳೀಕರಿಸಲಾಗುವುದು

3.8 ಆಸ್ತಿಗಳು, ಸ್ಥಾವರ ಮತ್ತು ಉಪಕರಣಗಳು

(i) ಕರ್ನಾಟಕ ಸರ್ಕಾರದಿಂದ ಹಂಚಿಕೆ ಮಾಡಲಾಗಿರುವ ಮೌಲ್ಯ ಎಂಬುದಾಗಿ ಕರ್ನಾಟಕ ಸರ್ಕಾರವು ವರ್ಗಾವಣೆ ಮಾಡಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಕಂಪನಿಯ ಲೆಕ್ಕಪತ್ರಗಳ ಪುಸ್ತಕಗಳಲ್ಲಿನ ಮೌಲ್ಯ ಎಂಬುದಾಗಿ ಪರಿಗಣಿಸಲಾಗಿದೆ.

(ii) ಇತರೆ ಎಲ್ಲಾ ಸ್ಥಿರಾಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವಿಕೆ, ಬಂಡವಾಳೀಕರಿಸಿಕೊಳ್ಳಲಾಗಿದೆ ಎಂಬುದಾಗಿ ಭಾವಿಸಲಾಗಿರುವ ದಿನಾಂಕದವರೆಗೆ ನಿರ್ಮಾಣದ ಅವಧಿಯಲ್ಲಿ ಹಂಚಿಕೆ ಮಾಡಲಾಗಿರುವ ವೆಚ್ಚಗಳು ಸೇರಿದಂತೆ ಮೂಲ ಬೆಲೆಯಲ್ಲಿ ತಿಳಿಸಲಾಗಿದೆ.

(iii) ರಸ್ತೆಗಳು ಉಪಾಂಗಗಳಾದ ಸೇತುವೆಗಳನ್ನು ಹಾಗೂ ಸುರಂಗಗಳೂ ಒಳಗೊಂಡಿರುತ್ತವೆ.

(iv) ಭೂಮಿಯ ವೆಚ್ಚವು ಸ್ವಾಧೀನ ವೆಚ್ಚ, ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದವರೆಗೆ ಪಾವತಿಸಲಾಗಿರುವ ಬಡ್ಡಿ, ಹೆಚ್ಚಿಸಲಾಗಿರುವ ಪರಿಹಾರದ ಮೊತ್ತ, ನ್ಯಾಯಾಲಯಗಳು ತಮ್ಮ ಆದೇಶದಲ್ಲಿ ನೀಡಿರುವ ಬಡ್ಡಿ, ಪುನರ್ವಸತಿಯ ಮೇಲಿನ ವೆಚ್ಚ, ನಿರ್ಮಾಣಗಳು, ಬಗರ್‌ಹುಕುಂ ಪಾವತಿಗಳು, ಬೆಳೆ ಪರಿಹಾರ, ವಿಶೇಷ ಭೂಸ್ವಾಧೀನ ಅಧಿಕಾರಿಗಳ ಕಛೇರಿಗಳು ಭರಿಸಿರುವ ವರಮಾನ ವೆಚ್ಚಗಳು ಯೋಜನೆಯಿಂದ ತೊಂದರೆಗೆ ಈಡಾದ ಜನತೆಗೆ/ಕುಟುಂಬಗಳಿಗೆ ಸಾಮಾಜಿಕ ಅರಣ್ಯ, ಇವುಗಳನ್ನು ಒಳಗೊಂಡಿರುತ್ತದೆ.

(v) ಅಡ್ಡಗಟ್ಟೆಗಳು, ಜಲಾಶಯಗಳು, ವಿಯರ್‌ಗಳು, ಏತ ನೀರಾವರಿ ನಿರ್ಮಾಣಗಳು ಹಾಗೂ ಅಣೆಕಟ್ಟೆಗಳ ಸಿವಿಲ್ ಕಾಮಗಾರಿಗಳು ಉಪಾಂಗ ದ್ವಾರಗಳು ಮತ್ತು ಇತರೆ ಅಂತರ್ಗತ ಭಾಗಗಳನ್ನು ಒಳಗೊಂಡಿರುತ್ತದೆ.

(vi) ಸಂಸ್ಥೆಗೆ / ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದ್ದ ಕಾಮಗಾರಿಯು ಟೆಂಡರ್ ಷರತ್ತುಗಳ ಪ್ರಕಾರ ಸಂಪೂರ್ಣ ರೀತಿಯಲ್ಲಿ ಪೂರ್ಣಗೊಂಡಿರುತ್ತದೆ ಎಂಬುದಾಗಿ ಮುಖ್ಯ ಇಂಜಿನಿಯರ್‌ರವರು / ಅಧೀಕ್ಷಕ ಇಂಜಿನಿಯರ್‌ರವರು /ಕಾರ್ಯಪಾಲಕ ಇಂಜಿನಿಯರ್‌ರವರು ನೀಡಿರುವ ಕಾಮಗಾರಿಗಳು ಪೂರ್ಣಗೊಂಡಿರುವಿಕೆ ಪ್ರಮಾಣಪತ್ರಗಳು ಅಥವಾ ವಿಭಾಗೀಯ ಮಟ್ಟದಲ್ಲಿ ತಯಾರಿಸಲಾಗಿರುವ ಅಂತಿಮ ಬಿಲ್ಲುಗಳ ಫೋಷ್ಯಾರೆಯು ನಾಲೆಗಳು ಮತ್ತಿತರೆ ನೀರಾವರಿ ವ್ಯವಸ್ಥೆಗಳು ಮುಂತಾದ ನೀರಾವರಿ ನಿರ್ಮಾಣಗಳು ಮುಂತಾದ ಉದ್ದೇಶಿತ ಬಳಕೆಗೆ ಸಿದ್ಧಗೊಂಡಿರುವ ಆಸ್ತಿಗಳನ್ನು ಬಂಡವಾಳೀಕರಿಸಲು ಆಧಾರವಾಗಿರುವುದು.

(vii) ಖರೀದಿಸಲಾದ ಆಸ್ತಿಗಳಿಗೆ ಸಂಬಂಧಿಸಿದಂತೆ, ಅವುಗಳ ಪ್ರಸ್ತುತ ಸ್ಥಳಕ್ಕೆ ತರುವಲ್ಲಿ, ಅದರ ಉದ್ದೇಶಿತ ಬಳಕೆಗೆ ಸಿದ್ಧಗೊಳ್ಳುವವರೆವಿಗೂ ಭರಿಸಲಾಗುವ ಆಕಸ್ಮಿಕ ವೆಚ್ಚಗಳು ಯಾವುದಾದರೂ ಇದ್ದಲ್ಲಿ, ಅವುಗಳೂ ಸೇರಿದಂತೆ ಬಂಡವಾಳೀಕರಿಸಲಾಗುವುದು.

(viii) ಬೃಹತ್ ಪ್ರಮಾಣದ ನವೀಕರಣಕ್ಕೆ ಸಂಬಂಧಿಸಿದಂತೆ, ಕೈಗೊಳ್ಳಲಾದ ಅಂತಹ ಚಟುವಟಿಕೆಗಳು ಆಸ್ತಿಯಿಂದ ಉತ್ಪತ್ತಿಯಾಗುವ ಆರ್ಥಿಕ ವರಮಾನವು ಹೆಚ್ಚಳಗೊಳ್ಳುವ ನಿರೀಕ್ಷೆಯಿಂದ ಮಾಡಲಾಗುವ ವೆಚ್ಚಗಳನ್ನು ಬಂಡವಾಳೀಕರಿಸಲಾಗುವುದು.

3.9 ಸವಕಳಿ

ಸವಕಳಿಯನ್ನು ಈ ಕೆಳಗಿನವುಗಳನ್ನು ಹೊರತುಪಡಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಅನುಸೂಚಿ–IIರಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ ನೇರ ಮಾರ್ಗ ಆಧಾರದ ಮೇರೆಗೆ ಅನುವು ಮಾಡಲಾಗುವುದು:

(i) ಎಲ್ಲಾ ಆಸ್ತಿಗಳಿಗೂ ಶೇಷಾತ್ಮಕ ಮೌಲ್ಯವು ಯಾವುದೂ ಇರುವುದಿಲ್ಲ ಎಂಬುದಾಗಿ ಪರಿಗಣಿಸಲಾಗುವುದು.

(ii) ಖರೀದಿಸಲಾದ ತಂತ್ರಾಂಶಗಳ ಮೌಲ್ಯವನ್ನು ಖರೀದಿಸಲಾದ ಸಾಲಿನಲ್ಲಿಯೇ ಲೆಕ್ಕಪುಸ್ತಕಗಳ ದಾಖಲೆಗಳಿಂದ ತೆಗೆದುಹಾಕಲಾಗುವುದು (ರೈಟ್– ಆಫ್).

(iii) ಚಲಿಸುವ ಆಸ್ತಿಗಳನ್ನು ಹೊರತುಪಡಿಸಿದಂತೆ, ಪ್ರಸಕ್ತ ಇರುವಂತಹ ಆಸ್ತಿಗಳಿಗೆ ಮಾಡಲಾದ ಸೇರ್ಪಡೆಗಳ ಮೇಲೆ ಸವಕಳಿಯ ಉದ್ದೇಶಕ್ಕಾಗಿ ಆಸ್ತಿಗಳ ಬಾಳಿಕೆ ಅವಧಿಯನ್ನು ಮೂಲ ಆಸ್ತಿಗಳ ಶೇಷಾತ್ಮಕ ಬಾಳಿಕೆ ಅವಧಿಗೆ ಸೀಮಿತಗೊಳಿಸಲಾಗುವುದು.

(iv) ಕಂಪನಿಗಳ ಅಧಿನಿಯಮ 2013ರ ಅನುಸೂಚಿ–IIರಲ್ಲಿ ಯಾವುದೇ ಬಳಸಬಹುದಾದ ಅವಧಿಯನ್ನು ಪ್ರತ್ಯೇಕವಾಗಿ ನಿರ್ದಿಷ್ಟಪಡಿಸಿರದ ಈ ಕೆಳಗಿನ ಆಸ್ತಿಗಳ ಪ್ರವರ್ಗಗಳಿಗೆ ತಾಂತ್ರಿಕ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗುವುದು ಹಾಗೂ ಆ ರೀತಿ ದರಗಳನ್ನು ಸ್ವೀಕರಿಸಿದನಂತರ ಕಾರ್ಯನೀತಿಯಲ್ಲಿ ನಿರೂಪಿಸಲಾಗುವುದು;

ಕ್ರಮ ಸಂಖ್ಯೆ	ವಿವರಣೆ
1	ಅಣೆಕಟ್ಟೆಗಳು ಮತ್ತು ಅಡ್ಡಗಟ್ಟೆಗಳು
	(ಎ) ಅಣೆಕಟ್ಟು, ವಿಯರ್‌ಗಳು, ಜಲಾಶಯಗಳು ಮತ್ತು ಅಡ್ಡಗಟ್ಟೆಗಳು (ಬಿ) ಅಣೆಕಟ್ಟೆಗಳು, ಜಲಾಶಯಗಳು ವಿಯರ್ ಹಾಗೂ ಅಡ್ಡಗಟ್ಟೆಗಳ ಗೇಟುಗಳು (ಯಾಂತ್ರಿಕ ಹಾಗೂ ಜೋಡಿಸಲಾಗಿರುವ ಭಾಗಗಳು)
2	ನಾಲೆಗಳು, ಶಾಖಾ ನಾಲೆಗಳು ಹಾಗೂ ವಿತರಣಾ ನಾಲೆಗಳು (ಮುಕ್ತ ನಾಲೆಗಳು ಮತ್ತು ಕೊಳವೆ ಮಾರ್ಗಗಳು)
3	ಏತ ನೀರಾವರಿ ವ್ಯವಸ್ಥೆಗಳ ಸಿವಿಲ್ ಭಾಗಗಳು/ ಕಾಮಗಾರಿಗಳು
4	(ಎ)ವಿದ್ಯುತ್–ಯಾಂತ್ರಿಕ ಕಾಮಗಾರಿಗಳು ಮತ್ತು ಉಪ ಸ್ಟೇಷನ್ನುಗಳು ಹಾಗೂ ನೀರಾವರಿ ವ್ಯವಸ್ಥೆಗೆ ಪ್ರಸರಣ ಮಾರ್ಗಗಳು ಒಳಗೊಂಡಂತೆ ಪಂಪು ಮಾಡುವ ವ್ಯವಸ್ಥೆ
	(ಬಿ) ನೀರಾವರಿ ವ್ಯವಸ್ಥೆಗಳ ನೀರೆತ್ತುವ ಕೊಳವೆ ಮಾರ್ಗಗಳು
5	ಅಕ್ವೆಡಕ್ಟ್‌ಗಳು
6	ಟ್ಯಾಂಕುಗಳು (ಕೆರೆಗಳು)

3.10 ಹಣಕಾಸಿನ ಸಾಧನಗಳು

ಕಂಪನಿಯು ಹಣಕಾಸಿನ ಸಾಧನಗಳನ್ನು ಪ್ರತಿಯೊಂದು ಸಂತುಲನ ಪಟ್ಟಿಯ ದಿನಾಂಕದಂದು ಇರುವಂತಹ ನ್ಯಾಯಸಮ್ಮತ ಮೌಲ್ಯದಲ್ಲಿ ಮೌಲ್ಯಮಾಪನ ಮಾಡುತ್ತದೆ. ನ್ಯಾಯಸಮ್ಮತ ಮೌಲ್ಯವೆಂದರೆ ಆಸ್ತಿಯನ್ನು ಮಾರಾಟ ಮಾಡಿದಲ್ಲಿ ಪಡೆಯಬಹುದಾದ ಅಥವಾ ಮೌಲ್ಯಮಾಪನ ಮಾಡುವ ದಿನಾಂಕದಂದು ಮಾರುಕಟ್ಟೆಯಲ್ಲಿ ಭಾಗವಹಿಸುವವರ ನಡುವೆ ವ್ಯವಸ್ಥಿತ ವ್ಯವಹಾರದಲ್ಲಿ ಹೊಣೆಗಾರಿಕೆಯ ವರ್ಗಾವಣೆ ಮಾಡಲು ಪಾವತಿಸಲಾಗುವ ಮೊತ್ತ. ನ್ಯಾಯಸಮ್ಮತ ಮೌಲ್ಯವು ಆಸ್ತಿಯನ್ನು ಮಾರಾಟ ಮಾಡಲು ಅಥವಾ ಹೊಣೆಯನ್ನು ವರ್ಗಾವಣೆ ಮಾಡಲು

(i) ಆಸ್ತಿ ಅಥವಾ ಹೊಣೆಗಾರಿಕೆಗಾಗಿನ ಪ್ರಧಾನ ಮಾರುಕಟ್ಟೆಯಲ್ಲಿ

ಅಥವಾ

(ii) ಪ್ರಧಾನ ಮಾರುಕಟ್ಟೆಯ ಅನುಪಸ್ಥಿತಿಯಲ್ಲಿ, ಆಸ್ತಿ ಅಥವಾ ಹೊಣೆಗಾರಿಕೆಯ ಅತ್ಯುತ್ತಮ ಅನುಕೂಲಕರವಾದ ಮಾರುಕಟ್ಟೆಯಲ್ಲಿ ನಡೆಯುತ್ತದೆ ಎಂಬ ಪರಿಕಲ್ಪನೆಯ ಆಧಾರದ ಮೇರೆಗೆ ಆಗಿರುತ್ತದೆ.

ಪ್ರಾರಂಭಿಕ ಗುರುತಿಸುವಿಕೆ:

ಹಣಕಾಸಿನ ಆಸ್ತಿಗಳು ಮತ್ತು ಹಣಕಾಸು ಜವಾಬ್ದಾರಿಗಳನ್ನು ಪ್ರಾರಂಭಿಕವಾಗಿ ನ್ಯಾಯಸಮ್ಮತ ಮೌಲ್ಯದಲ್ಲಿ ಅಳೆಯಲಾಗುವುದು. ಹಣಕಾಸು ಆಸ್ತಿಗಳು ಮತ್ತು ಹಣಕಾಸು ಜವಾಬ್ದಾರಿಗಳನ್ನು ಖರೀದಿಸುವ ಸಲುವಾಗಿ ಅಥವಾ ನೀಡಿಕೆಗೆ (ಲಾಭ ಅಥವಾ ನಷ್ಟದ ಮೂಲಕ ನ್ಯಾಯಯುತ ಮೌಲ್ಯದಲ್ಲಿನ ಹಣಕಾಸು ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಹೊರತುಪಡಿಸಿ) ಕಾರಣವಾಗಿರುವ ವ್ಯವಹಾರ ವೆಚ್ಚಗಳನ್ನು ಹಣಕಾಸು ಆಸ್ತಿಗಳಿಗೆ ಅಥವಾ ಹಣಕಾಸು ಜವಾಬ್ದಾರಿಗಳಿಗೆ ಪ್ರಾರಂಭಿಕ ಗುರುತಿಸುವಿಕೆಯ ಮೇಲೆ ಅನ್ವಯಗೊಳ್ಳುವ ರೀತಿಯಲ್ಲಿ ಸೇರಿಸಲಾಗುವುದು ಅಥವಾ ಕಳೆಯಲಾಗುವುದು.

ಹಣಕಾಸು ಆಸ್ತಿಗಳು ಅಥವಾ ಹಣಕಾಸು ಜವಾಬ್ದಾರಿಗಳನ್ನು ಲಾಭ ಅಥವಾ ನಷ್ಟದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಖರೀದಿಸಲಾಗಿರುವ ಹಣಕಾಸು ಆಸ್ತಿಗಳು ಅಥವಾ ಜವಾಬ್ದಾರಿಗಳನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ತತ್‌ಕ್ಷಣವೇ ಗುರುತಿಸಲಾಗುವುದು. ಲಾಭ ಅಥವಾ ನಷ್ಟದ ಮೂಲಕ ನ್ಯಾಯಯುತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳನ್ನು ಅಥವಾ ಹಣಕಾಸಿನ ಹೊಣೆಗಾರಿಕೆಗಳನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ನೇರವಾಗಿ ವ್ಯವಹಾರ ವೆಚ್ಚವು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲ್ಪಟ್ಟಿದೆ.

ತದನಂತರದಲ್ಲಿ ಗುರುತಿಸುವಿಕೆ

ಹಣಕಾಸು ಆಸ್ತಿಗಳು

ಎ) ಕ್ರಮೇಣ ಕಳೆದುಹಾಕಲಾದಂತಹ ಮೌಲ್ಯಗಳಲ್ಲಿ ಹಣಕಾಸು ಆಸ್ತಿಗಳು:

ಹಣಕಾಸು ಆಸ್ತಿಗಳನ್ನು ಗುತ್ತಿಗೆಯ ನಗದು ಹರಿವುಗಳನ್ನು ಸಂಗ್ರಹಿಸುವ ಉದ್ದೇಶದಿಂದ ಈ ಆಸ್ತಿಗಳನ್ನು ಹೊಂದುವ

ವ್ಯವಹಾರದ ಉದ್ದೇಶದೊಂದಿಗೆ ಈ ಹಣಕಾಸು ಆಸ್ತಿಗಳನ್ನು ವ್ಯವಹಾರದ ಒಳಗೆ ಹೊಂದಿದ್ದಲ್ಲಿ ಹಾಗೂ ಹಣಕಾಸು ಆಸ್ತಿಯ ಗುತ್ತಿಗೆ ಷರತ್ತುಗಳು ಬಾಕಿಯಿರುವ ಅಸಲು ಮೊತ್ತದ ಮೇಲೆ ಅಸಲು ಮತ್ತು ಬಡ್ಡಿಯು ಮಾತ್ರ ಆಗಿರುವಂತಹ ನಗದಿಗೆ ನಿರ್ದಿಷ್ಟ ದಿನಾಂಕಗಳಂದು ಹಣಕಾಸು ಆಸ್ತಿಯು ಕಾರಣವಾದಲ್ಲಿ ಪರಿಣಾಮಕಾರಿತ್ವದಿಂದ ಕೂಡಿದ ಬಡ್ಡಿಯನ್ನು ಬಳಸಿಕೊಂಡು ತದನಂತರದಲ್ಲಿ ಕ್ರಮೇಣ ಕಳೆದುಹಾಕಿದ/ತಗ್ಗಿಸಿದ ಮೌಲ್ಯದಲ್ಲಿ ಅಳೆಯಲಾಗುವುದು.

ವ್ಯಾಪಾರ ಸ್ವೀಕೃತಿಗಳು, ಸಾಲಗಳು ಮತ್ತು ಮುಂಗಡಗಳು, ಠೇವಣಿಗಳು, ಸ್ವೀಕರಿಸಬೇಕಾಗಿರುವ ಬಡ್ಡಿ, ಸ್ವೀಕರಿಸಬೇಕಾಗಿರುವ ಬಾಡಿಗೆ ಮತ್ತು ನಗದು ಅಥವಾ ವಸ್ತುವಿನ ರೂಪದಲ್ಲಿ ವಸೂಲಾತಿ ಮಾಡಬೇಕಾದ ಇತರೆ ಮುಂಗಡಗಳು, ಇತ್ಯಾದಿ ಹಣಕಾಸು ಆಸ್ತಿಗಳನ್ನು ಕ್ರಮೇಣ ಕಳೆದುಹಾಕಿದ ಮೌಲ್ಯದಲ್ಲಿ ಗುರುತಿಸಲಾಗುವುದು.

ಬಿ) ಇತರೆ ಸಮಗ್ರ ವರಮಾನದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಹಣಕಾಸು ಆಸ್ತಿಗಳು

ಹಣಕಾಸು ಆಸ್ತಿಗಳನ್ನು ಗುತ್ತಿಗೆಯ ನಗದು ಹರಿವುಗಳನ್ನು ಸಂಗ್ರಹಿಸುವ ಉದ್ದೇಶದಿಂದ ಈ ಆಸ್ತಿಗಳನ್ನು ಹೊಂದುವ ವ್ಯವಹಾರದ ಉದ್ದೇಶದೊಂದಿಗೆ ಈ ಹಣಕಾಸು ಆಸ್ತಿಗಳನ್ನು ವ್ಯವಹಾರದ ಒಳಗೆ ಹೊಂದಿದ್ದಲ್ಲಿ ಹಾಗೂ ಹಣಕಾಸು ಆಸ್ತಿಯ ಗುತ್ತಿಗೆ ಷರತ್ತುಗಳು ಬಾಕಿಯಿರುವ ಅಸಲು ಮೊತ್ತದ ಮೇಲೆ ಅಸಲು ಮತ್ತು ಬಡ್ಡಿಯು ಮಾತ್ರ ಆಗಿರುವಂತಹ ನಗದಿಗೆ ನಿರ್ದಿಷ್ಟ ದಿನಾಂಕಗಳಂದು ಹಣಕಾಸು ಆಸ್ತಿಯು ಕಾರಣವಾದಲ್ಲಿ ಇತರೆ ಸಮಗ್ರ ವರಮಾನದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಹಣಕಾಸು ಆಸ್ತಿಗಳನ್ನು ಅಳೆಯಲಾಗುವುದು.

ಪ್ರಸ್ತುತ ಕಂಪನಿಯು ಅಂತಹ ಯಾವುದೇ ಹಣಕಾಸು ಆಸ್ತಿಗಳನ್ನು ಹೊಂದಿರುವುದಿಲ್ಲ.

ಸಿ) ಲಾಭ ಅಥವಾ ನಷ್ಟದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಹಣಕಾಸು ಆಸ್ತಿಗಳು

ಹಣಕಾಸು ಆಸ್ತಿಗಳನ್ನು ಕ್ರಮೇಣ ತಗ್ಗಿಸಿದ ಮೌಲ್ಯಗಳಲ್ಲಿ ಅಳೆಯದ ಹೊರತು ಅಥವಾ ಪ್ರಾರಂಭಿಕ ಗುರುತಿಸುವಿಕೆಯ ಮೇಲೆ ಇತರೆ ಸಮಗ್ರ ವರಮಾನದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಅಳೆಯದ ಹೊರತು ಲಾಭ ಅಥವಾ ನಷ್ಟದ ಮೂಲಕ ಅಳೆಯಲಾಗುವುದು.

ವ್ಯಾಪಾರವ್ಯವಹಾರ ಮತ್ತು ಇತರೆ ಸ್ವೀಕೃತಿಗಳು ಸಂತುಲ ಪಟ್ಟಿಯ ದಿನಾಂಕದಿಂದ ವರ್ಷದ ಒಳಗೆ ಅವಧಿ ಮುಕ್ತಾಯಗೊಂಡು ಸ್ವೀಕರಿಸಬೇಕಾದವುಗಳು ಹೊಂದಿರುವ ಮೊತ್ತಗಳು ಅಲ್ಪಾವಧಿಯ ಅವಧಿ ಮುಕ್ತಾಯ /ಈ ಸಾಧನಗಳ ವಸೂಲಾತಿ ಮಾಡುವಿಕೆಗಳ ಕಾರಣ ನ್ಯಾಯಸಮ್ಮತ ಮೌಲ್ಯವು ಬಹುಮಟ್ಟಿಗೆ ಸದೃಶವಾಗಿರುತ್ತದೆ.

ಹಣಕಾಸು ಜವಾಬ್ದಾರಿಗಳು:

ಹಣಕಾಸು ಜವಾಬ್ದಾರಿಗಳನ್ನು ಪರಿಣಾಮಕಾರಿತ್ವದಿಂದ ಕೂಡಿದ ಬಡ್ಡಿ ಪದ್ಧತಿಯನ್ನು ಬಳಸಿಕೊಂಡು ಕ್ರಮೇಣ ತಗ್ಗಿಸಿದ ಮೌಲ್ಯದಲ್ಲಿ ಲೆಕ್ಕಹಾಕಲಾಗುವುದು.

ಸಾಲಗಳು, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದವುಗಳು, ಸಂಚಿತಗೊಂಡಿರುವ ಬಡ್ಡಿ ಭದ್ರತಾ ಠೇವಣಿಗಳು ಹಾಗೂ ಉಳಿಸಿಕೊಂಡಿರುವ ಹಣಕಾಸುಗಳು, ಇತ್ಯಾದಿ ಇತರೆ ಹಣಕಾಸು ಜವಾಬ್ದಾರಿಗಳನ್ನು ಕ್ರಮೇಣ ತಗ್ಗಿಸಿದ ಮೌಲ್ಯಗಳಲ್ಲಿ ಲೆಕ್ಕಹಾಕಲಾಗುವುದು.

ವ್ಯಾಪಾರವ್ಯವಹಾರ ಮತ್ತು ಇತರೆ ಸ್ವೀಕೃತಿಗಳು ಸಂತುಲನ ಪಟ್ಟಿಯ ದಿನಾಂಕದಿಂದ ವರ್ಷದ ಒಳಗೆ ಅವಧಿ ಮುಕ್ತಾಯಗೊಂಡು ಸ್ವೀಕರಿಸಬೇಕಾದವುಗಳು ಹೊಂದಿರುವ ಮೊತ್ತಗಳು ಅಲ್ಪಾವಧಿಯ ಅವಧಿ ಮುಕ್ತಾಯ/ಈ ಸಾಧನಗಳ ವಸೂಲಾತಿ ಮಾಡುವಿಕೆಗಳ ಕಾರಣ ನ್ಯಾಯಸಮ್ಮತ ಮೌಲ್ಯವು ಬಹುಮಟ್ಟಿಗೆ ಸದೃಶವಾಗಿರುತ್ತದೆ.

ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಿಕೆ

ಎ) ಹಣಕಾಸು ಆಸ್ತಿಗಳ / ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಿಕೆ ಆಸ್ತಿಯಿಂದ ನಗದು ಹರಿವಿಗೆ ಗುತ್ತಿಗೆ ಹಕ್ಕುಗಳು ಮುಕ್ತಾಯಗೊಂಡಾಗ, ಅಥವಾ ಅದು ಹಣಕಾಸು ಆಸ್ತಿಯನ್ನು ಹಾಗೂ ಅಂತಹ ಆಸ್ತಿಯ ಗಮನಾರ್ಹವಾದಂತಹ ಎಲ್ಲಾ ಸಂಭಾವ್ಯ ಅಪಾಯಗಳು ಮತ್ತು ಮಾಲೀಕತ್ವದ ಪ್ರತಿಫಲವನ್ನು ಮತ್ತೊಂದು ತಂಡಕ್ಕೆ ವರ್ಗಾಯಿಸಿದ ಸಂದರ್ಭದಲ್ಲಿ ಕಂಪನಿಯು ಹಣಕಾಸು ಆಸ್ತಿಯ ಮನ್ನಣೆಯನ್ನು ಹಿಂಪಡೆಯುತ್ತದೆ. ಆಸ್ತಿಯ ಮನ್ನಣೆಯನ್ನು ಸಂಪೂರ್ಣವಾಗಿ ಹಿಂಪಡೆದನಂತರ, ಅಂತಹ ಆಸ್ತಿಯು ಹೊಂದಿದ್ದ ಮೌಲ್ಯ ಹಾಗೂ ಅದರ ವರ್ಗಾವಣೆಯ ಮೇಲೆ ಸ್ವೀಕರಿಸಲಾದ ಅಥವಾ ಸ್ವೀಕರಿಸಬೇಕಾದ ಪ್ರತಿಫಲದ ಮೊತ್ತದ ವ್ಯತ್ಯಾಸದ ಮೊತ್ತವನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಗುರುತಿಸಲಾಗುವುದು.

ಬಿ) ಕಂಪನಿಯು ತನ್ನ ಹಣಕಾಸು ಜವಾಬ್ದಾರಿಗಳನ್ನು, ಅವುಗಳಿಗೆ ಸಂಬಂಧಿಸಿದಂತೆ ತನ್ನ ನಿರ್ಬಂಧ/ ಕಟ್ಟುಪಾಡುಗಳಿಂದ ಬಿಡುಗಡೆಹೊಂದಿದಾಗ/ರದ್ದುಗೊಳಿಸಿದಾಗ ಅಥವಾ ಅದರ ಅವಧಿಯು ಮುಕ್ತಾಯಗೊಂಡಾಗ ಮಾತ್ರ ಮನ್ನಣೆಯನ್ನು ಹಿಂಪಡೆಯುತ್ತದೆ. ಮನ್ನಣೆಯನ್ನು ಹಿಂಪಡೆಯಲಾದ ಹಣಕಾಸು ಜವಾಬ್ದಾರಿಯ ಪ್ರತಿಫಲ/ಮೊತ್ತ ಹಾಗೂ

ಪಾವತಿಸಬೇಕಾದ ಅಥವಾ ಪಾವತಿಸಲಾಗಿರುವ ಪ್ರತಿಫಲ/ ಮೊತ್ತಗಳ ನಡುವಿನ ವ್ಯತ್ಯಾಸದ ಮೊತ್ತವನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಗುರುತಿಸಲಾಗುವುದು.

3.11 ಆಸ್ತಿಗಳು ದುರ್ಬಲಗೊಳ್ಳುವಿಕೆ

ಹಣಕಾಸು ಆಸ್ತಿಗಳು ದುರ್ಬಲಗೊಳ್ಳುವಿಕೆ

1. ಮಾರುಕಟ್ಟೆ ಮೌಲ್ಯವನ್ನು ಹೊಂದಿರದ ಹಾಗೂ ನ್ಯಾಯಸಮ್ಮತ ಮೌಲ್ಯವನ್ನು ವಿಶ್ವಸನೀಯವಾಗಿ ಲೆಕ್ಕಹಾಕಲು ಸಾಧ್ಯವಿಲ್ಲದ ದರಗಳನ್ನು ಸೂಚಿಸಿರದ ಈಕ್ವಿಟಿ ಸಾಧನಗಳ ಮೇಲಿನ ಹೂಡಿಕೆಗಳನ್ನು ಮೂಲ ಬೆಲೆಯಲ್ಲಿ ಲೆಕ್ಕಹಾಕಲಾಗುವುದು.

2. ವ್ಯಾಪಾರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು: ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ, 3 ವರ್ಷಗಳಿಗೂ ಮೀರಿದಂತೆ ವಸೂಲಾತಿಯಾಗಲು ಬಾಕಿಯಿರುವಂತಹ ನೀರಿನ ದರಗಳ ಪಾವತಿಗಾಗಿನ ತಗಾದೆಗಳಿಗೆ ಸಂಬಂಧಿಸಿದಂತೆ, ವಿವೇಚನೆಯಿಂದ ಕೂಡಿದ ಪದ್ಧತಿಯಂತೆ ಕರ್ನಾಟಕ ನೀರಾವರಿ ಅಧಿನಿಯಮ, 1965ರ ಪ್ರಕಾರ ಅಂತಹ ಸ್ವೀಕರಿಸಬೇಕಾದವುಗಳನ್ನು ಭೂಕಂದಾಯ ಬಾಕಿಗಳು ಎಂಬ ರೀತಿಯಲ್ಲಿ ವಸೂಲಾತಿ ಮಾಡಬೇಕಾದರೂ ಸಹ ಸ್ವೀಕರಿಸಬೇಕಾದವುಗಳ ದುರ್ಬಲಗೊಳ್ಳುವಿಕೆಯನ್ನು ಲೆಕ್ಕಪತ್ರಗಳ ಪುಸ್ತಕಗಳಲ್ಲಿ ದಾಖಲಿಸಲಾಗುವುದು.

ಇತರೆ ಆಸ್ತಿಗಳು ದುರ್ಬಲಗೊಳ್ಳುವಿಕೆ

ನೀರಾವರಿ ಮೂಲಸೌಕರ್ಯವಾಗಿದ್ದು, ಕಂಪನಿಯ ಹಣಕಾಸು ಗಳಿಕೆಯ ಆಸ್ತಿಗಳು ಅಣೆಕಟ್ಟೆಗಳು, ನಾಲಾ ವ್ಯವಸ್ಥೆಗಳು, ಏತ ನೀರಾವರಿ ಯೋಜನೆಗಳು, ಅಡ್ಡಗಟ್ಟೆಗಳು ಹಾಗೂ ಸೇತುವೆಗಳು, ಇತ್ಯಾದಿಗಳನ್ನು ಒಳಗೊಂಡಿರುತ್ತವೆ. ಅಂತಹ ಆಸ್ತಿಗಳನ್ನು ಕೈಚಾಚುವ ದೂರದಲ್ಲಿನ ವ್ಯವಹಾರಗಳಲ್ಲಿ ಮಾರುಕಟ್ಟೆ ಮಾಡಬಹುದಾದ ಪೂರ್ವನಿದರ್ಶನಗಳು ಇರುವುದಿಲ್ಲ, ಮುಂದುವರೆದು, ನಾಲಾ ವ್ಯವಸ್ಥೆಗಳ ಹಾಗೂ ಇತರೆ ವರ್ಗಗಳ ಆಸ್ತಿಗಳ ಬಾಳಿಕೆ ಅವಧಿಯು 100 ವರ್ಷಗಳು ಎಂಬುದಾಗಿ ಖಚಿತಪಡಿಸಿಕೊಳ್ಳಲಾಗಿದೆ, ನ್ಯಾಯಸಮ್ಮತ ಯಥಾರ್ಥತೆಯೊಂದಿಗೆ ಈ ಆಸ್ತಿಗಳ ಉಳಿಕೆ ಬಾಳಿಕೆ ಅವಧಿಯಲ್ಲಿ ಮೌಲ್ಯಮಾಪನ ಮಾಡಲ್ಪಟ್ಟ ಮುಂದಿನ/ಭವಿಷ್ಯದ ನಗದು ಹರಿವನ್ನು ಪ್ರಕ್ಷೇಪಿಸಲು ಸಾಧ್ಯವಿರುವುದಿಲ್ಲ. ಈ ವಾಸ್ತವಾಂಶದ ಕಾರಣ ಬಳಕೆಯಲ್ಲಿನ ಮೌಲ್ಯಮಾಪನ ಮಾಡಲ್ಪಟ್ಟ ಮುಂದಿನ/ ಭವಿಷ್ಯದ ನಗದು ಹರಿವುಗಳು ಮತ್ತು ಮೌಲ್ಯದ ಅಂದಾಜಿಗೆ ಬರಲು ಸಾಧ್ಯವಿರುವುದಿಲ್ಲ, ಆದ್ದರಿಂದ ದುರ್ಬಲಗೊಳ್ಳುವಿಕೆಯಿಂದ ನಷ್ಟಗಳು ಸಂಭವಿಸಿರುವವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಕಂಪನಿಗೆ ಸಾಧ್ಯವಿಲ್ಲ.

3.12 ಸೇವೆಯಿಂದ ನಿವೃತ್ತಿ ಹಾಗೂ ಇತರೆ ಪ್ರಯೋಜನಗಳು

ಎ) ಉದ್ಯೋಗಿಗಳ ಅಲ್ಪಾವಧಿಯ ಪ್ರಯೋಜನಗಳು

ಉದ್ಯೋಗಿಗಳು ನೀಡಿರುವ ಸೇವೆಗಳಿಗೆ ಬದಲಾಗಿ ಪಾವತಿಸಲು ನಿರೀಕ್ಷಿಸಲಾಗುವ ಉದ್ಯೋಗಿಗಳ ಅಲ್ಪಾವಧಿ ನಿರೀಕ್ಷಿತ ಪ್ರಯೋಜನಗಳ ರಿಯಾಯಿತಿಯನ್ನು ನೀಡಿರದ ಮೊತ್ತವನ್ನು ಉದ್ಯೋಗಿಗಳು ಸೇವೆಯನ್ನು ನೀಡಿರುವ ವರ್ಷದಲ್ಲಿ ಗುರುತಿಸಲಾಗುವುದು. ಈ ಪ್ರಯೋಜನಗಳು, ಕಾರ್ಯನಿರ್ವಹಣಾ ಪ್ರೋತ್ಸಾಹ ಧನ ಹಾಗೂ ರಜೆ ದಿನಗಳಲ್ಲಿ ಕೆಲಸ ಮಾಡಿದ್ದಕ್ಕೆ ಪರಿಹಾರದ ಹಣ, ಇವುಗಳನ್ನು ಒಳಗೊಂಡಿರುತ್ತದೆ ಹಾಗೂ ಇವುಗಳನ್ನು ವಾರ್ಷಿಕ ವರದಿ ಅವಧಿಯು ಮುಕ್ತಾಯಗೊಳ್ಳುವುದಕ್ಕೆ ಹನ್ನೆರಡು ತಿಂಗಳುಗಳಿಗೆ ಮುಂಚಿತವಾಗಿ ಇತ್ಯರ್ಥಗೊಳಿಸುವುದನ್ನು ನಿರೀಕ್ಷಿಸಲಾಗುತ್ತದೆ.

ಬಿ) ನಿವೃತ್ತಿ ಮತ್ತು ರಜೆ ಸಂಬಳ

ಅದಕ್ಕಾಗಿ ಹೊಣೆಗಳನ್ನು ಈ ಕೆಳಗಿನಂತೆ ಗುರುತಿಸಲಾಗುವುದು

ನೌಕರರ ವರ್ಗ	ರಜೆ ವೇತನ	ಗ್ರಾಚ್ಯುಟಿ	ಪಿಂಚಣಿ/ಪಿಂಚಣಿ ನಿಧಿಗೆ ವಂತಿಕೆ	ಭವಿಷ್ಯ ನಿಧಿ / ಉದ್ಯೋಗಿಗಳ ರಾಜ್ಯ ವಿಮೆ
ಸರ್ಕಾರದಿಂದ ನಿಯೋಜನೆಗೊಂಡ ನೌಕರರು	ಎ) ಕಂಪನಿಯಿಂದ ಯಾವುದೇ ವಂತಿಕೆ ಇರುವುದಿಲ್ಲ ಬಿ) ಆದಗ್ಯೂ, ಕಂಪನಿಯ ಸೇವೆಯ ಅವಧಿಯಲ್ಲಿ ಅವರು ಬಳಸಿಕೊಂಡ ರಜೆ ನಗದೀಕರಣವನ್ನು ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಪ್ರಕಾರ ನಿಯಂತ್ರಿಸಲಾಗುವುದು	ಕಂಪನಿಯಿಂದ ಯಾವುದೇ ವಂತಿಕೆ ಇರುವುದಿಲ್ಲ	ಕಂಪನಿಯಿಂದ ಯಾವುದೇ ವಂತಿಕೆ ಇರುವುದಿಲ್ಲ	ಕಂಪನಿಯಿಂದ ಯಾವುದೇ ವಂತಿಕೆ ಇರುವುದಿಲ್ಲ
ಸಾರ್ವಜನಿಕ ವಲಯದ ಉದ್ದಿಮೆ/ ನಿಗಮದಿಂದ ನಿಯೋಜನೆ	ಅನ್ವಯಗೊಳ್ಳುವ ರಜೆ ಸಂಬಳದ ವಂತಿಕೆಯನ್ನು ನಿಯೋಜನೆಯ ಷರತ್ತುಗಳ ಪ್ರಕಾರ ವಾಸ್ತವಿಕ ಆಧಾರದ ಮೇರೆಗೆ ಅನುವು ಮಾಡಲಾಗುವುದು/ ಪಾವತಿಸಲಾಗುವುದು	ನಿಯೋಜನೆಯ ಷರತ್ತುಗಳ ಪ್ರಕಾರ ವಾಸ್ತವಿಕ ಆಧಾರದ ಮೇರೆಗೆ ಅನ್ವಯಗೊಳ್ಳುವ ವಂತಿಕೆಯನ್ನು ಅನುವು ಮಾಡಲಾಗುವುದು/ ಪಾವತಿಸಲಾಗುವುದು.	ನಿಯೋಜನೆಯ ಷರತ್ತುಗಳ ಪ್ರಕಾರ ವಾಸ್ತವಿಕ ಆಧಾರದ ಮೇರೆಗೆ ಅನ್ವಯಗೊಳ್ಳುವ ವಂತಿಕೆಯನ್ನು ಅನುವು ಮಾಡಲಾಗುವುದು/ ಪಾವತಿಸಲಾಗುವುದು.	ನಿಯೋಜನೆಯ ಷರತ್ತುಗಳ ಪ್ರಕಾರ ವಾಸ್ತವಿಕ ಆಧಾರದ ಮೇರೆಗೆ ಅನ್ವಯಗೊಳ್ಳುವ ವಂತಿಕೆಯನ್ನು ಅನುವು ಮಾಡಲಾಗುವುದು/ ಪಾವತಿಸಲಾಗುವುದು.
ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಪದವೃಂದದ ನೌಕರರು	ಕಂಪನಿಯು ಸ್ವತಂತ್ರ ವಿಮಾಗಣಕರಿಂದ ಪ್ರತಿ ಸಂತುಲನ ಪಟ್ಟಿಯ ದಿನಾಂಕದಂದು ಮಾಡಿಸಲಾಗುವ ಮೌಲ್ಯಮಾಪನದ ಆಧಾರದ ಮೇರೆಗೆ ರಜೆ ವೇತನ ಮತ್ತು ಕಂತನ್ನು ಅನುವು ಮಾಡುತ್ತದೆ	ಕಂಪನಿಯ ಗ್ರಾಚ್ಯುಟಿ ಪರಿಹಾರಗಳ ರೂಪದಲ್ಲಿ ನಿವೃತ್ತಿ ಸೌಲಭ್ಯಗಳನ್ನು ಪ್ರತಿ ಸಂತುಲನ ಪಟ್ಟಿಯ ದಿನಾಂಕದಂದು ಸ್ವತಂತ್ರ ವಿಮಾಗಣಕರಿಂದ ಲೆಕ್ಕ ಹಾಕಿಸುತ್ತದೆ.	ಉದ್ಯೋಗಿಗಳು ಇಪಿಎಫ್ ಅಧಿನಿಯಮದಡಿಯಲ್ಲಿ ವಿವರಿಸಲಾಗಿರುವ ಪಿಂಚಣಿಗೆ ಅರ್ಹರಾಗಿರುತ್ತಾರೆ.	ಭವಿಷ್ಯ ನಿಧಿ ಅಧಿನಿಯಮದ ಪ್ರಕಾರ ಅನ್ವಯಗೊಳ್ಳುವ ವಂತಿಕೆಯನ್ನು ಅನುವು ಮಾಡಲಾಗುವುದು / ಪಾವತಿಸಲಾಗುವುದು
ಹೆಚ್ಚುವರಿ ಕೆಲಸಕ್ಕಾಗಿ ನೇಮಕ ಮಾಡಲಾದ ಉದ್ಯೋಗಿಗಳು	ರಜೆ ಸಂಬಳವು, ಯಾವುದಾದರೂ ಇದ್ದಲ್ಲಿ, ಅದನ್ನು ಗುರುತಿಸಲಾಗುವುದು ಹಾಗೂ ಪಾವತಿಯ ಆಧಾರದ ಮೇರೆಗೆ ಲೆಕ್ಕಪತ್ರಗಳಲ್ಲಿ ತೋರಿಸಲಾಗುವುದು	ಗ್ರಾಚ್ಯುಟಿ ಯಾವುದಾದರೂ ಇದ್ದಲ್ಲಿ, ಅದನ್ನು ಗುರುತಿಸಲಾಗುವುದು ಹಾಗೂ ಪಾವತಿಯ ಆಧಾರದ ಮೇರೆಗೆ ಲೆಕ್ಕಪತ್ರಗಳಲ್ಲಿ ತೋರಿಸಲಾಗುವುದು	ಪಿಂಚಣಿ ಪ್ರಯೋಜನಗಳು ಯಾವುದಾದರೂ ಇದ್ದಲ್ಲಿ, ಅದನ್ನು ಗುರುತಿಸಲಾಗುವುದು ಹಾಗೂ ಪಾವತಿಯ ಆಧಾರದ ಮೇರೆಗೆ ಲೆಕ್ಕಪತ್ರಗಳಲ್ಲಿ ತೋರಿಸಲಾಗುವುದು	ಭವಿಷ್ಯ ನಿಧಿ ಮತ್ತು ನೌಕರರ ರಾಜ್ಯ ವಿಮಾ ಪ್ರಯೋಜನಗಳನ್ನು ನೀಡಲಾಗುವುದಿಲ್ಲ.

ನೌಕರರುಗಳಿಗೆ ನೀಡಬೇಕಾದ ಪ್ರಯೋಜನಗಳನ್ನು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ Ind AS ಮಾನದಂಡ 19 ನೌಕರರುಗಳಿಗೆ ನೀಡಬೇಕಾದ ಪ್ರಯೋಜನಗಳು – ಇದರ ಅಡಿಯಲ್ಲಿ ಲೆಕ್ಕವನ್ನಿಡಲಾಗುವುದು

ಪ್ರಸಕ್ತ ಸಾಲಿನ ವಿಮಾಗಣಿತದ ಲೆಕ್ಕಾಚಾರದ ಪ್ರಕಾರ ಗಳಿಕೆಗಳು ಮತ್ತು ನಷ್ಟಗಳನ್ನು ಮತ್ತೊಂದು ಸಮಗ್ರ ವರಮಾನದಲ್ಲಿ ಗುರುತಿಸಲಾಗುವುದು ಹಾಗೂ ಅವುಗಳನ್ನು ವರಮಾನ ತ:ಖ್ತೆಯಲ್ಲಿ ಮನ್ನಣೆ ನೀಡಲಾಗುವುದಿಲ್ಲ. ಪ್ರಸಕ್ತ ಸೇವಾ ವೆಚ್ಚ ಮತ್ತು ಹಿಂದಿನ ಸಾಲಿನ ಸೇವಾ ವೆಚ್ಚಗಳನ್ನು ಉದ್ಯೋಗಿಗಳಿಗೆ ನೀಡಲಾಗುವ ಪ್ರಯೋಜನಗಳ ಅಡಿಯಲ್ಲಿ ಮನ್ನಣೆ ನೀಡಲಾಗುವುದು ಹಾಗೂ ನಿವ್ವಳ ಬಡ್ಡಿ ವೆಚ್ಚ ಅಥವಾ ವರಮಾನವನ್ನು ಹಣಕಾಸು ವೆಚ್ಚಗಳ ಅಡಿಯಲ್ಲಿ ಮನ್ನಣೆ ನೀಡಲಾಗುವುದು. ನಿರ್ದಿಷ್ಟವಾಗಿ ವಿವರಿಸಲ್ಪಟ್ಟಿರುವ ಕಾಣಿಕೆ ಯೋಜನೆಗಳಿಗಾಗಿ, ಪಿಂಚಣಿ ವೆಚ್ಚಗಳು ಹಾಗೂ ನಿವೃತ್ತಿಯ ನಂತರದ ಪ್ರಯೋಜನಗಳಿಗೆ ಸಂಬಂಧಿಸಿದಂತೆ ವರಮಾನ ತ:ಖ್ತೆಗೆ ಖರ್ಚನ್ನು ಹಾಕಿರುವ ಮೊತ್ತವು ಪ್ರಸಕ್ತ ಸಾಲಿನಲ್ಲಿ ಪಾವತಿಸಬೇಕಾದ ನಿವೃತ್ತಿಯ ನಂತರದ ಪ್ರಯೋಜನಗಳಾಗಿರುತ್ತವೆ.

3.13 ಸಾಲಗಳ ವೆಚ್ಚಗಳು

(i) ಸಾಲಗಳ ವೆಚ್ಚಗಳು ಬಡ್ಡಿ ಹಾಗೂ ಬದ್ಧತೆಯ ವೆಚ್ಚಗಳು, ಖಾತರಿ ಶುಲ್ಕ, ವ್ಯವಸ್ಥೆ ಮಾಡುವವರ ಶುಲ್ಕಗಳು, ದರ ನಿಗದಿ ಮತ್ತು ನಿಗಾವಣೆ ಶುಲ್ಕಗಳು, ಬಡ್ಡಿ ವೆಚ್ಚಗಳಿಗೆ ಹೊಂದಾಣಿಕೆ ಎಂಬುದಾಗಿ ಪರಿಗಣಿಸುವಷ್ಟರ ಮಟ್ಟಿಗೆ ವಿದೇಶಿ ಹಣಕಾಸಿನ ಚಲಾವಣೆಯಲ್ಲಿ ಪಡೆದುಕೊಂಡ ಸಾಲಗಳು ಹಾಗೂ ಅದರಲ್ಲಿ ಸ್ವೀಕರಿಸಲಾದ ಅಥವಾ ಸ್ವೀಕರಿಸಬೇಕಾಗಿರುವ ಅನುದಾನಗಳನ್ನು ವಿನಿಮಯ ದರ ವ್ಯತ್ಯಯಗಳು ಒಳಗೊಂಡಿರುತ್ತವೆ. ಬಡ್ಡಿ ವೆಚ್ಚವನ್ನು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ Ind AS 109ರಲ್ಲಿ ನಿರ್ದಿಷ್ಟಪಡಿಸಿರುವಂತೆ ಜಾರಿಯಲ್ಲಿರುವ ಬಡ್ಡಿ ದರ ಪದ್ಧತಿಯ ಆಧಾರದ ಮೇರೆಗೆ ಲೆಕ್ಕಹಾಕಲಾಗುವುದು. ಸ್ಥಿರಾಸ್ತಿಗಳ ನಿರ್ಮಾಣವು ಪೂರ್ಣಗೊಳ್ಳುವವರೆಗಿನ ಅಥವಾ ಸ್ವಾಧೀನ ಅವಧಿಗೆ ಸಾಲಗಳನ್ನು ಪಡೆದಿದ್ದಕ್ಕೆ ಸಂಬಂಧಿತ ವೆಚ್ಚವನ್ನು ಅವುಗಳು ಯಾವುದಕ್ಕೆ ಸಂಬಂಧಿಸಿರುವವೋ ಅಂತಹ ಆಸ್ತಿಯ ಜೊತೆ ಬಂಡವಾಳೀಕರಿಸತಕ್ಕದ್ದು. ಸಾಲಗಳ ವೆಚ್ಚಗಳು ಮಾಲೀಕರ ಈಕ್ವಿಟಿಯ ವಾಸ್ತವಿಕ ಅಥವಾ ಅಂತರ್ಗತಗೊಂಡಿರುವ ವೆಚ್ಚಗಳನ್ನು ಒಳಗೊಂಡಿರುವುದಿಲ್ಲ. ಆಸ್ತಿಯ ವೆಚ್ಚದ ಭಾಗವಾಗಿ ಸಾಲಗಳನ್ನು ಪಡೆದಿದ್ದಕ್ಕೆ ಸಂಬಂಧಿತ ವೆಚ್ಚಗಳನ್ನು ಬಂಡವಾಳೀಕರಿಸುವುದನ್ನು ಈ ಕೆಳಗಿನ ಷರತ್ತುಗಳು ಪೂರೈಕೆಗೊಂಡಾಗ ಪ್ರಾರಂಭಿಸತಕ್ಕದ್ದು.

ಎ) ಆಸ್ತಿಯ ಸ್ವಾಧೀನ ಅಥವಾ ನಿರ್ಮಾಣಕ್ಕಾಗಿ ಮಾಡಲಾದ ವೆಚ್ಚವನ್ನು ಭರಿಸಲಾಗಿದ್ದಲ್ಲಿ;

ಬಿ) ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳನ್ನು ಭರಿಸಲಾಗಿದ್ದಲ್ಲಿ; ಹಾಗೂ

ಸಿ) ಆಸ್ತಿಯನ್ನು ಅದರ ಉದ್ದೇಶಿತ ಬಳಕೆಗೆ ಸಿದ್ಧತೆಗೊಳಿಸುವ ಸಲುವಾಗಿನ ಚಟುವಟಿಕೆಗಳು ಪ್ರಗತಿಯಲ್ಲಿದ್ದಲ್ಲಿ.

ii) ಆಸ್ತಿಯ ಮೇಲಿನ ವೆಚ್ಚವು ನಗದು ಪಾವತಿಗಳಲ್ಲಿ, ಇತರೆ ಆಸ್ತಿಗಳ ವರ್ಗಾವಣೆಯಲ್ಲಿ ಅಥವಾ ಬಡ್ಡಿ ಪಾವತಿಯ ಬಾಧ್ಯತೆಯನ್ನು ಹೊಂದಿರುವ ಜವಾಬ್ದಾರಿಗಳಲ್ಲಿ ಪರಿಣಮಿಸುವಂತಹ ವೆಚ್ಚಗಳನ್ನು ಮಾತ್ರ ಒಳಗೊಂಡಿರುತ್ತದೆ. ಸಾಲಗಳ ವೆಚ್ಚಗಳ ಬಂಡವಾಳೀಕರಣವು, ಆಸ್ತಿಯನ್ನು ಸಿದ್ಧಗೊಳಿಸಲು ಅಗತ್ಯವಿರುವ ಎಲ್ಲಾ ಚಟುವಟಿಕೆಗಳು ಪೂರ್ಣಗೊಂಡನಂತರ ಮುಕ್ತಾಯಗೊಳ್ಳುತ್ತದೆ. ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳ ಬಂಡವಾಳೀಕರಣವನ್ನು ಅದರ ಉದ್ದೇಶಿತ ಬಳಕೆಗಾಗಿ ಆಸ್ತಿಗಳನ್ನು ಸಿದ್ಧಗೊಳಿಸಲು ಅಗತ್ಯವಿರುವ ಕಾರ್ಯಚಟುವಟಿಕೆಗಳ ಮುಂದುವರಿದ ಅವಧಿಗಳಲ್ಲಿ ಅಸಾಮಾನ್ಯ ಕಾರಣಗಳಿಂದ ಅಡಚಣೆಗಳಿಗೆ ಒಳಗಾದಲ್ಲಿ ಅಮಾನತ್ತಿನಲ್ಲಿಡತಕ್ಕದ್ದು. ಆದಾಗ್ಯೂ, ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಅಭಿವೃದ್ಧಿ ಇಲ್ಲದಿದ್ದರೂ ಗಮನಾರ್ಹ ತಾಂತ್ರಿಕ ಮತ್ತು ಆಡಳಿತಾತ್ಮಕ ಕಾರ್ಯವನ್ನು ಮುಂದುವರೆಸಿಕೊಂಡು ಹೋಗಿದ್ದಲ್ಲಿ ಅಥವಾ ತಾತ್ಕಾಲಿಕವಾಗಿ ವಿಳಂಬಗೊಳಿಸುವುದು ಆಸ್ತಿಯನ್ನು ಅದರ ಉದ್ದೇಶಿತ ಬಳಕೆಗಾಗಿ ಸಿದ್ಧಗೊಳಿಸಲು ಅಗತ್ಯ ಭಾಗವಾಗಿದ್ದಲ್ಲಿ, ಈ ಅವಧಿಗಳಿಗೆ ಸಂಬಂಧಿಸಿದಂತೆ ಸಾಲಗಳ ವೆಚ್ಚಗಳನ್ನು ಬಂಡವಾಳೀಕರಿಸತಕ್ಕದ್ದು.

(iii) ಅರ್ಹತೆಯನ್ನು ಪಡೆಯುವ ಆಸ್ತಿಯನ್ನು ಭಾಗಗಳಲ್ಲಿ ನಿರ್ಮಾಣ ಮಾಡಿದಾಗ ಹಾಗೂ ಇತರ ಭಾಗಗಳ ನಿರ್ಮಾಣವು ಮುಂದುವರೆದಿದ್ದಾಗಲೂ ಪೂರ್ಣಗೊಂಡಂತಹ ಭಾಗವು ಬಳಸಲು ಸಾಧ್ಯವಾದಲ್ಲಿ ಭಾಗಕ್ಕೆ ಸಂಬಂಧಿಸಿದಂತೆ ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳನ್ನು ಬಂಡವಾಳೀಕರಿಸುವುದು ಅಂತ್ಯಗೊಳ್ಳುತ್ತದೆ. ಆಸ್ತಿಯನ್ನು ಅದರ ಉದ್ದೇಶಿತ ಬಳಕೆಗಾಗಿ ಅಂದರೆ, ವಾಣಿಜ್ಯ ಉತ್ಪಾದನೆಯನ್ನು ಪ್ರಾರಂಭಿಸಲು ಸಿದ್ಧಗೊಂಡಿದ್ದಲ್ಲಿ ಸಾಲಗಳ ವೆಚ್ಚಗಳನ್ನು ಬಂಡವಾಳೀಕರಿಸತಕ್ಕದ್ದು ಹಾಗೂ ತದನಂತರ ಸಾಲಗಳ ಎಲ್ಲಾ ವೆಚ್ಚಗಳನ್ನು ವರಮಾನದ ಖರ್ಚಿಗೆ ಹಾಕತಕ್ಕದ್ದು. ವಾಣಿಜ್ಯ ಉತ್ಪಾದನೆಯು ವಾಸ್ತವಿಕವಾಗಿ ಪ್ರಾರಂಭಗೊಳ್ಳುವಲ್ಲಿ ವಿಳಂಬಗೊಂಡಿದ್ದಲ್ಲಿ ಸಾಲಗಳ ವೆಚ್ಚಗಳನ್ನು ಕ್ರಮೇಣ ತಗ್ಗಿಸತಕ್ಕದ್ದಲ್ಲ ಅಥವಾ ಮುಂದಿನ ಅವಧಿಗೆ ಮುಂದೂಡತಕ್ಕದ್ದಲ್ಲ.

3.14 ಗುತ್ತಿಗೆಗಳಿಗಾಗಿ ಲೆಕ್ಕವನ್ನಿಡುವಿಕೆ

ಗುತ್ತಿಗೆಗಳನ್ನು ನೀಡುವವರು ಮಾಲಿಕತ್ವದ ಸಂಭಾವ್ಯ ಅಪಾಯಗಳನ್ನು ಮತ್ತು ಪ್ರತಿಫಲಗಳ ಗಮನಾರ್ಹ ಸ್ಥಿತಿಗತಿಯನ್ನು ಉಳಿಸಿಕೊಂಡಲ್ಲಿ ಅಂತಹ ಆಸ್ತಿಯನ್ನು ಕಾರ್ಯಾಚರಣೆಗೊಂಡಿರುವ ಗುತ್ತಿಗೆ ಎಂಬುದಾಗಿ ವರ್ಗೀಕರಿಸಲಾಗುವುದು. ಕಾರ್ಯಾಚರಣೆಗೊಂಡಿರುವ ಗುತ್ತಿಗೆಯ ಬಾಡಿಗೆಗಳನ್ನು ಗುತ್ತಿಗೆಯ ಅವಧಿಯಲ್ಲಿ ಗುತ್ತಿಗೆಗಳನ್ನು ನೀಡುವವರ ನಿರೀಕ್ಷಿತ ಹಣದುಬ್ಬರ ವೆಚ್ಚಗಳ ಹೆಚ್ಚಳಗಳಿಗೆ ಪರಿಹಾರ ನೀಡುವುದಕ್ಕಾಗಿ ನಿರೀಕ್ಷಿತ ಸಾಮಾನ್ಯ ಹಣದುಬ್ಬರದೊಂದಿಗೆ ಆಗಿರದ ಹೊರತು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ನೇರ ಮಾರ್ಗ ಪದ್ಧತಿಯ ಅಡಿಯಲ್ಲಿ ಮನ್ನಣೆ ನೀಡಲಾಗುವುದು. ಸ್ವೀಕರಿಸಲಾದ ಗುತ್ತಿಗೆ ಪ್ರೋತ್ಸಾಹಕಗಳನ್ನು ಗುತ್ತಿಗೆ ಅವಧಿಯ ಒಟ್ಟಾರೆ ಗುತ್ತಿಗೆ ವೆಚ್ಚಗಳ ಅಂತರ್ಗತ ಭಾಗವನ್ನಾಗಿ ಮನ್ನಣೆ ನೀಡಲಾಗುವುದು.

3.15 ವರಮಾನದ ಮೇಲಿನ ತೆರಿಗೆ

(i) ಪ್ರಸಕ್ತ ಸಾಲಿಗೆ ತೆರಿಗೆ ವೆಚ್ಚಗಳು ಪ್ರಸಕ್ತ ಸಾಲಿನ ತೆರಿಗೆ ಹಾಗೂ ಮುಂದೂಡಲ್ಪಟ್ಟ ತೆರಿಗೆ ಎರಡನ್ನೂ ಒಳಗೊಂಡಿರುತ್ತದೆ. ತೆರಿಗೆ ವೆಚ್ಚಗಳನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಮನ್ನಣೆ ನೀಡಲಾಗಿರುವ ಬಾಬ್ತುಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಮಾತ್ರ ತೆರಿಗೆ ವೆಚ್ಚಗಳನ್ನು ಪರಿಗಣಿಸಲಾಗುವುದು. ಇತರೆ ಸಮಗ್ರ ವರಮಾನದಲ್ಲಿ ಮನ್ನಣೆ ನೀಡಲಾಗಿರುವ ಬಾಬ್ತುಗಳು ಮೇಲಿನ ತೆರಿಗೆಗಳು ಹಾಗೂ ಈಕ್ವಿಟಿಗೆ ನೇರವಾಗಿ ಸಂಬಂಧಿಸಿರುವ ಬಾಬ್ತುಗಳು ಮೇಲಿನ ತೆರಿಗೆಗಳನ್ನೂ ಸಹ ಇತರೆ ಸಮಗ್ರ ವರಮಾನ ಹಾಗೂ ಈಕ್ವಿಟಿಗೆ ನೇರವಾಗಿ ಸಂಬಂಧಿಸಿರುವ ಬಾಬ್ತುಗಳನಾಗಿ ಪರಿಗಣಿಸಲಾಗುವುದು. ಪ್ರಸಕ್ತ ಸಾಲಿನ ತೆರಿಗೆಯು ಆದಾಯ ತೆರಿಗೆ ಅಧಿನಿಯಮ, 1961ರ ಅನುವುಗಳ ಅನುಸಾರ ಪ್ರಸಕ್ತ ಸಾಲಿಗೆ ನಿರ್ಧಾರಣೆ ಮಾಡಲಾದ ತೆರಿಗೆಯನ್ನು ವಿಧಿಸಬೇಕಾದ ಮೊತ್ತದ ಮೇಲೆ ಪಾವತಿಸಬೇಕಾದ ತೆರಿಗೆಯ ಮೊತ್ತ. ತೆರಿಗೆ ನಿಯಮಗಳ ಅನುಸಾರ ಪಾವತಿಸಲಾದ ಕನಿಷ್ಠ ಬದಲಿ ತೆರಿಗೆ (ಮಿನಿಮಮ್ ಆಲ್ಟರ್‌ನೇಟ್ ಟ್ಯಾಕ್ಸ್), ಭವಿಷ್ಯದಲ್ಲಿ ಆದಾಯ ತೆರಿಗೆಯ ಪ್ರತಿಯಾಗಿ ಹೊಂದಾಣಿಕೆಯ ರೂಪದಲ್ಲಿ ಭವಿಷ್ಯದ ಆರ್ಥಿಕ ಪ್ರಯೋಜನಗಳನ್ನು ನೀಡುತ್ತದೆ, ಕಂಪನಿಯು ಸಾಮಾನ್ಯ ಆದಾಯ ತೆರಿಗೆಯನ್ನು ಪಾವತಿಸುತ್ತದೆ ಎಂಬುದನ್ನು ದೃಢಪಡಿಸುವ ಸಾಕ್ಷಾಧಾರಗಳು ಇದ್ದಲ್ಲಿ ಇದನ್ನು ಆಸ್ತಿಯನ್ನಾಗಿ ಪರಿಗಣಿಸಲಾಗುವುದು. ಅದರಂತೆಯೇ, ಅದರ ಜೊತೆಯಲ್ಲಿರುವ ಭವಿಷ್ಯದ ಆರ್ಥಿಕ ಪ್ರಯೋಜನಗಳು ಕಂಪನಿಗೆ ಬರುತ್ತವೆ ಎಂಬ ಸಾಧ್ಯತೆಯಿದ್ದಲ್ಲಿ ಕನಿಷ್ಠ ಬದಲಿ ತೆರಿಗೆಯನ್ನು (ಮಿನಿಮಮ್ ಆಲ್ಟರ್‌ನೇಟ್ ಟ್ಯಾಕ್ಸ್), ಸಂತುಲನ ಪಟ್ಟಿಯಲ್ಲಿ ಆಸ್ತಿಯಾಗಿ ಪರಿಗಣಿಸಲಾಗುವುದು.

(ii) ಆಸ್ತಿಗಳು ಮತ್ತು ಜವಾಬ್ದಾರಿಗಳು ಮತ್ತು ಕಂಪನಿಯ ಹಣಕಾಸು ತ:ಖ್ತೆಗಳಲ್ಲಿ ಅವುಗಳು ಹೊಂದಿರುವ ಮೊತ್ತಗಳ ನಡುವೆ ಉದ್ಭವಿಸುವ ತಾತ್ಕಾಲಿಕ ವ್ಯತ್ಯಾಸಗಳ ಮೇಲಿನ ಮುಂದೂಡಲ್ಪಟ್ಟ ತೆರಿಗೆಯನ್ನು ಪರಿಗಣಿಸಲಾಗುವುದು. ತೆರಿಗೆ ದರಗಳನ್ನು ಮತ್ತು ವಿಧಿಸಲಾಗಿರುವ ತೆರಿಗೆ ನಿಯಮಗಳನ್ನು ಅಥವಾ ವರದಿಯ ದಿನಾಂಕದಂದು ಗಮನಾರ್ಹವಾಗಿ ವಿಧಿಸಲಾಗಿರುವ ನಿಯಮಗಳ ಅನುಸಾರ ಮುಂದೂಡಲ್ಪಟ್ಟ ತೆರಿಗೆಯನ್ನು ಲೆಕ್ಕಹಾಕಲಾಗುವುದು. ಮುಂದೂಡಲ್ಪಟ್ಟ ತೆರಿಗೆ ಜವಾಬ್ದಾರಿಗಳನ್ನು ಎಲ್ಲಾ ತೆರಿಗೆಯನ್ನು ವಿಧಿಸಬೇಕಾದ ತಾತ್ಕಾಲಿಕ ವ್ಯತ್ಯಾಸಗಳನ್ನು ಪರಿಗಣಿಸಲಾಗುವುದು / ಮುಂದಿನ ತೆರಿಗೆ ಅವಧಿಗೆ ಮುಂದಕ್ಕೆ ತೆಗೆದುಕೊಂಡು ಹೋಗಲಾಗಿರುವಂತಹ ಬಳಸಿಕೊಳ್ಳದಿರುವ ನಷ್ಟಗಳು ಮತ್ತು ತೆರಿಗೆ ಜಮೆಗಳನ್ನು ಭವಿಷ್ಯದ ತೆರಿಗೆಯನ್ನು ವಿಧಿಸಬೇಕಾದ ಲಾಭವು ಲಭ್ಯವಿರುವುದು, ಅದಕ್ಕೆ ಪ್ರತಿಯಾಗಿ ತಾತ್ಕಾಲಿಕ ವ್ಯತ್ಯಾಸಗಳನ್ನು ಬಳಸಿಕೊಳ್ಳಬಹುದು ಎಂಬ ಸಾಧ್ಯತೆಯು ಇರುವಷ್ಟರ ಮಟ್ಟಿಗೆ ಮಾತ್ರ ಪರಿಗಣಿಸಲಾಗುವುದು. ಕಂಪನಿಯು ತೆರಿಗೆ ನಷ್ಟದ ಇತಿಹಾಸವನ್ನು ಹೊಂದಿದ್ದಲ್ಲಿ, ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳನ್ನು ಕಂಪನಿಯು ಸಮರ್ಪಕ ತಾತ್ಕಾಲಿಕ ವ್ಯತ್ಯಾಸಗಳನ್ನು ಹೊಂದಿರುವುದು ಅಥವಾ ದೃಢಪಡಿಸಬಹುದಾದ ರೀತಿಯಲ್ಲಿ ಸಮರ್ಪಕ ತೆರಿಗೆಯನ್ನು ವಿಧಿಸಬಹುದಾದ ಲಾಭವು ಲಭ್ಯವಿದ್ದಲ್ಲಿ ಮುಂದೂಡಲ್ಪಟ್ಟ ತೆರಿಗೆ ಆಸ್ತಿಗೆ ಮನ್ನಣೆ ನೀಡಲಾಗುವುದು.

(iii) ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳು ಮತ್ತು ಜವಾಬ್ದಾರಿಗಳು, ಅಂತಹ ಬಾಬ್ತುಗಳು ಅದೇ ನಿರ್ವಹಣಾ ತೆರಿಗೆ ನಿಯಮಗಳು ವಿಧಿಸುವ ಆದಾಯದ ಮೇಲಿನ ತೆರಿಗೆಗೆ ಸಂಬಂಧಿಸಿದ್ದಲ್ಲಿ ಅವುಗಳು ಸರಿದೂಗುತ್ತವೆ ಹಾಗೂ ಕಂಪನಿಯು ಅಂತಹ ಸರಿದೂಗಿಸುವಿಕೆಗಳಿಗೆ ಒತ್ತಾಯಪಡಿಸಬಹುದಾದ ಹಕ್ಕನ್ನು ಹೊಂದಿರುತ್ತದೆ. ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳನ್ನು ಅವುಗಳ ವಸೂಲಾತಿಗಾಗಿ ಪ್ರತಿಯೊಂದು ದಿನಾಂಕದಂದು ಸಮೀಕ್ಷಿಸಲಾಗುವುದು.

3.16 ಅನುವುಗಳು, ಆಕಸ್ಮಿಕ ಜವಾಬ್ದಾರಿಗಳು ಮತ್ತು ಆಕಸ್ಮಿಕ ಆಸ್ತಿಗಳು

ಹಿಂದಿನ ಘಟನೆಯ ಪರಿಣಾಮವಾಗಿ ಪ್ರಸಕ್ತ ಕಾನೂನಾತ್ಮಕ ಅಥವಾ ರಚನಾತ್ಮಕ ಬದ್ಧತೆಯಿದ್ದಲ್ಲಿ ಹಾಗೂ ಕಂಪನಿಯು ಅಂತಹ ಬದ್ಧತೆಯನ್ನು ಇತ್ಯರ್ಥಗೊಳಿಸಬೇಕಾದ ಸಾಧ್ಯತೆಯಿದ್ದಲ್ಲಿ ಅಂತಹ ಅನುವುಗಳಿಗೆ ಮನ್ನಣೆ ನೀಡಲಾಗುವುದು. ಸಂತುಲನಪಟ್ಟಿಯ

ದಿನಾಂಕದಂದು ಬದ್ಧತೆಯನ್ನು ಇತ್ಯರ್ಥಗೊಳಿಸುವ ಸಲುವಾಗಿ ಅಗತ್ಯವಿರುವುದನ್ನು ಆಡಳಿತ ಮಂಡಳಿಯು ಅತ್ಯುತ್ತಮ ರೀತಿಯಲ್ಲಿ ಮೌಲ್ಯಮಾಪನ ಮಾಡಿದ ರೀತಿಯಲ್ಲಿ ಅನುವುಗಳನ್ನು ಲೆಕ್ಕಹಾಕಲಾಗುವುದು ಹಾಗೂ ಪರಿಣಾಮವು ವಸ್ತುವಾಗಿರುವ ರೀತಿಯಲ್ಲಿ ಪ್ರಸಕ್ತ ಮೌಲ್ಯಕ್ಕೆ ರಿಯಾಯಿತಿಯನ್ನು ನೀಡಲಾಗುವುದು. ಆಕಸ್ಮಿಕ ಜವಾಬ್ದಾರಿಗಳನ್ನು ಮನ್ನಣೆ ಮಾಡಲಾಗುವುದಿಲ್ಲ, ಆದರೆ ಇವುಗಳ ಬಗ್ಗೆ ಟಿಪ್ಪಣಿಗಳಲ್ಲಿ ತಿಳಿಸಲಾಗುವುದು. ಆಕಸ್ಮಿಕ ಆಸ್ತಿಗಳನ್ನು ಮನ್ನಣೆ ಮಾಡುವುದಿಲ್ಲ, ಆದರೆ ಎಲ್ಲಿ ಆರ್ಥಿಕ ಪ್ರಯೋಜನಗಳ ಸಂಭಾವ್ಯತೆಯಿರುತ್ತದೆಯೋ ಹಾಗೂ ಎಲ್ಲಿ ಅದು ಕಾರ್ಯಸಾಧ್ಯವೋ, ಅವುಗಳ ಹಣಕಾಸು ಪ್ರಭಾವವನ್ನು ಲೆಕ್ಕಹಾಕಬಹುದೋ ಅಂತಹ ಸಂದರ್ಭಗಳಲ್ಲಿ ಹಣಕಾಸು ತ:ಖ್ತೆಗಳಲ್ಲಿ ತೋರಿಸಲಾಗುವುದು.

3.17 ಷೇರು ಒಂದರ ಗಳಿಕೆಗಳು

ಷೇರು ಒಂದಕ್ಕೆ ಮೂಲ ಗಳಿಕೆಯನ್ನು ಪ್ರಸಕ್ತ ಅವಧಿಯಲ್ಲಿ ಬಾಕಿಯಿರುವಂತಹ ಈಕ್ವಿಟಿ ಷೇರುಗಳ ತೂಗಲ್ಪಟ್ಟ ಸರಾಸರಿ ಸಂಖ್ಯೆಯಿಂದ ಈಕ್ವಿಟಿ ಷೇರುದಾರರುಗಳ ಕಾರಣ ಪಾವತಿಸಬೇಕಾದ ತೆರಿಗೆಯನ್ನು ಪಾವತಿಸಿದನಂತರ ನಿವ್ವಳ ಲಾಭ/ನಿವ್ವಳ ನಷ್ಟವನ್ನು ವಿಭಜಿಸುವ ಮೂಲಕ ಲೆಕ್ಕಹಾಕಲಾಗುವುದು. ಷೇರು ಒಂದಕ್ಕೆ ಮೂಲ ಗಳಿಕೆಗಳನ್ನು ಕಂಡುಕೊಳ್ಳುವ ಸಲುವಾಗಿ ತೂಗಲ್ಪಟ್ಟ ಸರಾಸರಿ ಸಂಖ್ಯೆಯ ಈಕ್ವಿಟಿ ಷೇರುಗಳು ಹಾಗೂ ಅಲ್ಲದೆಯೇ ದುರ್ಬಲಗೊಳ್ಳಬಲ್ಲ ಸಂಭಾವ್ಯ ಈಕ್ವಿಟಿ ಷೇರುಗಳ ಪರಿವರ್ತನೆಯ ನಂತರ ನೀಡಬಹುದಾಗಿದ್ದ ತೂಗಲ್ಪಟ್ಟ ಸರಾಸರಿ ಸಂಖ್ಯೆಯ ಈಕ್ವಿಟಿ ಷೇರುಗಳ ಈಕ್ವಿಟಿ ಷೇರುದಾರರಿಗೆ ಸಂಬಂಧಿತ ತೆರಿಗೆಯನ್ನು ಕಳೆದನಂತರ (ದುರ್ಬಲಗೊಳಿಸಲ್ಪಟ್ಟ ಗಳಿಕೆಗಳನ್ನು ಹೊಂದಾಣಿಕೆ ಮಾಡಿಕೊಂಡನಂತರ) ಲಾಭ/ನಷ್ಟದಿಂದ ವಿಭಜಿಸುವ ಮೂಲಕ ಷೇರು ಒಂದಕ್ಕೆ ದುರ್ಬಲಗೊಳಿಸಲ್ಪಟ್ಟ ಗಳಿಕೆಗಳನ್ನು ಲೆಕ್ಕಹಾಕಲಾಗುವುದು.

3.18 ಸರ್ಕಾರಿ ಅನುದಾನಗಳು

(i) ಸರ್ಕಾರದ ಅನುದಾನಗಳನ್ನು ಈ ಕೆಳಗಿನ ಸಂದರ್ಭಗಳಲ್ಲಿ ಅನುದಾನ ಎಂಬುದಾಗಿ ಮನ್ನಣೆ ನೀಡಬೇಕಾಗುವುದು.

ಎ) ಅಂತಹ ಅನುದಾನಗಳಿಗೆ ಹೊಂದಿಕೊಂಡಂತಿರುವ ಷರತ್ತುಗಳನ್ನು ಕಂಪನಿಯು ಅನುಸರಿಸುವುದು ಎಂಬ ನ್ಯಾಯಸಮ್ಮತ ಭರವಸೆಯು ಇದ್ದಲ್ಲಿ; ಮತ್ತು

ಬಿ) ಅಂತಿಮ ವಸೂಲಾತಿಯನ್ನು ಮಾಡಲಾಗುವುದು ಎಂಬುದಾಗಿ ನ್ಯಾಯಸಮ್ಮತ ಭರವಸೆಯಿದ್ದಲ್ಲಿ,

ಸಿ) ಅನುದಾನದ ಮೊತ್ತದ ಯಾವುದೇ ಭಾಗವನ್ನು ಮರುಪಾವತಿಸಬೇಕಿರುವುದಿಲ್ಲ ಅಥವಾ ಮರುಪಾವತಿಸ ಬೇಕಾಗಬಹುದಾದ ಸಾಧ್ಯತೆಗಳು ಉದ್ಭವಿಸುವುದಿಲ್ಲ. ಮತ್ತು

(ii) ಸರ್ಕಾರದ ಅನುದಾನಗಳನ್ನು ಮುಂದೂಡಲ್ಪಟ್ಟಿರುವ ವರಮಾನ ಎಂಬುದಾಗಿ ಪರಿಗಣಿಸತಕ್ಕದ್ದು ಹಾಗೂ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಪರಿಗಣಿಸತಕ್ಕದ್ದು ಹಾಗೂ ಸಂಬಂಧಿತ ಆಸ್ತಿಗಳ ಮೇಲೆ ಸವಕಳಿಯನ್ನು ಯಾವ ಪ್ರಮಾಣಾನುಗುಣದಲ್ಲಿ ಅನುವು ಮಾಡಲಾಗುವುದೋ ಅದೇ ಪ್ರಮಾಣಾನುಗುಣದಲ್ಲಿ ಸವಕಳಿಯನ್ನು ಅನುವು ಮಾಡದಂತಹ ಆಸ್ತಿಗಳಿಗೆ ಸಂಬಂಧಿತ ಅನುದಾನಗಳನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಅದರ ಅವಧಿಯ ಪೂರ್ತಿ ಅನುದಾನಕ್ಕೆ ಹೊಂದಿಕೊಂಡಂತಿರುವ ಬದ್ಧತೆಗಳನ್ನು ಪೂರೈಸುವಿಕೆಯ ಮೌಲ್ಯವನ್ನು ಭರಿಸುವ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಅದರ ಅವಧಿಯ ಪೂರ್ತಿ ಮನ್ನಣೆ ನೀಡತಕ್ಕದ್ದು. ಒಂದು ವೇಳೆ ಆಸ್ತಿಯನ್ನು ಅನುದಾನವನ್ನಾಗಿ ಕಂಪನಿಗೆ ನೀಡಿದ್ದಲ್ಲಿ ಅಂತಹ ಆಸ್ತಿಯನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ನ್ಯಾಯಸಮ್ಮತ ಮೌಲ್ಯದಲ್ಲಿ ವ್ಯವಸ್ಥಿತ ಆಧಾರದ ಮೇರೆಗೆ ಆಸ್ತಿಯ ಬಳಸಬಹುದಾದ ಅವಧಿಯ ಪೂರ್ತಿ ನೀಡಲಾಗುವ ಸವಕಳಿಯ ಪ್ರಮಾಣಾನುಗುಣವಾಗಿ ಮನ್ನಣೆ ನೀಡತಕ್ಕದ್ದು.

(iii) ವಿಶೇಷ ಘಟಕ ಯೋಜನೆ (ಎಸ್‌ಸಿಪಿ), ಬುಡಕಟ್ಟು ಉಪ–ಯೋಜನೆ (ಟಿಎಸ್‌ಪಿ) ನಬಾರ್ಡ್ ಕಾಮಗಾರಿಗಳು ಹಾಗೂ ಪಡೆದುಕೊಳ್ಳಲಾಗಿರುವ ಸಾಲಗಳ ಮೇಲೆ ಬಡ್ಡಿ ಮತ್ತು ಖಾತರಿ ಕಮಿಷನ್ನು, ಇತ್ಯಾದಿಗಳಿಗೆ ಸಂಬಂಧಿತ ಅನುದಾನಗಳನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಅನುದಾನಕ್ಕೆ ಹೊಂದಿಕೊಂಡಂತಿರುವ ಬದ್ಧತೆಗಳನ್ನು ಪೂರೈಸುವುದಕ್ಕಾಗಿನ ವೆಚ್ಚಗಳನ್ನು ಭರಿಸುವ ಅವಧಿಯ ಪೂರ್ತಿ ಮನ್ನಣೆ ನೀಡತಕ್ಕದ್ದು.

3.19 ಕಾಮಗಾರಿ ಬಿಲ್ಲುಗಳು ಮತ್ತು ವೆಚ್ಚಗಳು

(i) ವರ್ಷದ ಅಂತ್ಯದಲ್ಲಿದ್ದಂತೆ ಕಾಮಗಾರಿ ಬಿಲ್ಲುಗಳಿಗಾಗಿನ ಹೊಣೆಗಳನ್ನು (ಬಂಡವಾಳ ಮತ್ತು ವರಮಾನ ಲೆಕ್ಕಗಳೆರಡಕ್ಕೂ ಸಂಬಂಧಿಸಿದಂತೆ) ಪ್ರತಿ ಹಣಕಾಸು ಸಾಲಿನ 31 ಮಾರ್ಚ್ ರಂದು ಅಥವಾ ಅದಕ್ಕೂ ಮುಂಚಿತವಾಗಿ ಕಾರ್ಯಗತಗೊಳಿಸಲಾದ ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮನ್ನಣೆ ನೀಡಲಾಗುವುದು.

(ii) ಹೆಚ್ಚುವರಿ ಪರಿಮಾಣಗಳ ಮತ್ತು ಹೆಚ್ಚುವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಹಣಕಾಸು ಬಾಧ್ಯತೆಗಳನ್ನು ಸಕ್ಷಮ ಅಧಿಕಾರಿಗಳು ಅನುಮೋದನೆ ನೀಡಿದನಂತರ ಮನ್ನಣೆ ನೀಡಲಾಗುವುದು/ಸಂಚಿತಗೊಳ್ಳುವುದು.

(iii) ದರ ಹೆಚ್ಚಳಕ್ಕಾಗಿ ಜವಾಬ್ದಾರಿಯನ್ನು ಗುತ್ತಿಗೆದಾರರುಗಳು ಅಂತಹ ಪಾವತಿಗಾಗಿ ಕೋರಿಕೆಗಳನ್ನು ಸಲ್ಲಿಸಿದಾಗ ಹಾಗೂ ಕಂಪನಿಯು ಅವುಗಳನ್ನು ಒಪ್ಪಿಕೊಂಡಾಗ ಮನ್ನಣೆ ನೀಡಲಾಗುವುದು

3.20 ಸರ್ಕಾರಿ ಯೋಜನೆಗಳ ಮೇಲಿನ ವೆಚ್ಚಗಳು

ವಿಶೇಷ ಘಟಕ ಯೋಜನೆ (ಎಸ್‌ಸಿಪಿ)/ ಬುಡಕಟ್ಟು ಉಪ–ಯೋಜನೆ (ಟಿಎಸ್‌ಪಿ), ಅಚ್ಚುಕಟ್ಟು ಪ್ರಾದೇಶಾಭಿವೃದ್ಧಿ ಪ್ರಾಧಿಕಾರದ ಕಾಮಗಾರಿಗಳು, ಇವೇ ಮುಂತಾದ ಸರ್ಕಾರಿ ಯೋಜನೆಗಳ ಮೇಲಿನ ವೆಚ್ಚಗಳನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ, ಅಂತಹ ತ:ಖ್ತೆಯ ಅವಧಿಯ ವೆಚ್ಚಗಳು ಎಂಬುದಾಗಿ ಖರ್ಚಿಗೆ ಹಾಕಲಾಗುವುದು.

3.21 ಪೂರ್ವಾವಧಿ ವೆಚ್ಚಗಳು

ಕಂಪನಿಯು ಈ ಕೆಳಗಿನವುಗಳ ಮೂಲಕ ಪೂರ್ವಾವಧಿಯ ತಪ್ಪುಗಳನ್ನು ವಿಷಾಯಕಗಳನ್ನು ತಿದ್ದುಪಡಿ ಮಾಡುವುದು:

i) ತಪ್ಪುಗಳು ಸಂಭವಿಸಿರುವ ಇತ್ತೀಚಿನ ಪೂರ್ವಾವಧಿಗೆ (ಗಳಿಗೆ) ತುಲನಾತ್ಮಕ ಮೊತ್ತಗಳನ್ನು ಪುನರ್ ತಿಳಿಸುವುದು

ii) ತಪ್ಪು ಇತ್ತೀಚಿನ ಪೂರ್ವಾವಧಿಗಳ ಮುಂಚಿತವಾಗಿ ಸಂಭವಿಸಿದ್ದಲ್ಲಿ, ಆಸ್ತಿಗಳು, ಜವಾಬ್ದಾರಿಗಳು ಮತ್ತು ಈಕ್ವಿಟಿಗಳ ಪ್ರಾರಂಭಿಕ ಶಿಲ್ಕನ್ನು ಪ್ರಸ್ತುತಪಡಿಸಲಾಗಿರುವ ಇತ್ತೀಚಿನ ಪೂರ್ವಾವಧಿ ಅವಧಿಗೆ ಪುನರ್ ತಿಳಿಸುವುದು.

4) ಸ್ವತ್ತು, ಸ್ಥಾವರಗಳು ಮತ್ತು ಯಂತ್ರೋಪಕರಣಗಳು

ವಿವರಗಳು	ಮಾಲಿಕತ್ವದಲ್ಲಿರುವ ಆಸ್ತಿಗಳು								
	ಕಟ್ಟಡಗಳು ಮತ್ತು ವಸಾಹತುಗಳು	ಗಣಕ ಯಂತ್ರಗಳು	ಪೀಠೋಪ ಕರಣಗಳು ಮತ್ತು ಜೋಡಣೆಗಳು	ಭೂಮಿ	ವಾಹನಗಳು	ಯಂತ್ರೋಪಕರಣ ಹಾಗೂ ಸಲಕರಣೆಗಳು	ಕಚೇರಿ ಸಲಕರಣೆಗಳು	ವಿದ್ಯುತ್ ಜೋಡಣೆಗೆ	ಒಟ್ಟು
	₹	₹	₹	₹	₹	₹	₹	₹	₹
ಏಪ್ರಿಲ್ 1 2017ರಲ್ಲಿದ್ದಂತೆ ಮೌಲ್ಯ	50,38,005	6,91,865	28,27,849	2,48,72,705	9,29,000	9,91,568	23,06,389	4,10,237	3,80,67,618
ಸೇರ್ಪಡೆಗಳು	6,76,77,701	61,61,814	6,21,74,092	30,60,91,387	2,71,95,460	–	3,23,26,896	1,17,07,800	51,33,35,150
ವಿಲೇವಾರಿ	–	–	–	–	–	–	–	–	–
ಮಾರ್ಚ್31 2018ರಲ್ಲಿದ್ದಂತೆ ಮೌಲ್ಯ	**7,27,15,706**	**68,53,679**	**6,50,01,941**	**33,09,64,092**	**2,81,24,460**	**9,91,568**	**3,46,33,285**	**1,21,18,037**	**55,14,02,768**
ಕ್ರೋಡೀಕೃತ ಸವಕಳಿ ಏಪಿಲ್ 1, 2017ರಲ್ಲಿದ್ದಂತೆ	76,026	50,671	65,463	–	1,273	1,449	50,704	6,182	2,51,768
ಪ್ರಸಕ್ತ ಸಾಲಿಗೆ ಸವಕಳಿ	8,06,515	8,20,865	32,34,207	–	19,10,217	66,105	54,82,730	1,92,375	1,25,13,014
ವಿಲೇವಾರಿ	–	–	–	–	–	–	–	–	–
ಕ್ರೋಡೀಕೃತ ಸವಕಳಿ ಮಾರ್ಚ್31, 2018ರಲ್ಲಿದ್ದಂತೆ	8,82,541	8,71,536	32,99,670	–	19,11,490	67,554	55,33,434	1,98,557	1,27,64,782
ಮಾರ್ಚ್ 31, 2018ರಲ್ಲಿದ್ದಂತೆ ಸ್ಥಿರಾಸ್ತಿಗಳು ಹೊಂದಿರುವ ನಿವ್ವಳ ಮೌಲ್ಯ	**7,18,33,165**	**59,82,143**	**6,17,02,271**	**33,09,64,092**	**2,62,12,970**	**9,24,014**	**2,90,99,851**	**1,19,19,480**	**53,86,37,986**
ಮಾರ್ಚ್ 31, 2017ರಲ್ಲಿದ್ದಂತೆ ಸ್ಥಿರಾಸ್ತಿಗಳು ಹೊಂದಿರುವ ನಿವ್ವಳ ಮೌಲ್ಯ	49,61,979	6,41,194	27,62,386	2,48,72,705	9,27,727	9,90,119	22,55,685	4,04,055	3,78,15,850

ಎ) ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಜಸಂಇ 35 ವಿಬ್ಯಾಇ 2016 ದಿನಾಂಕ 20.08.2016ರ ಮೂಲಕ ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಈ ಯೋಜನೆಗಳಿಗೆ ಸಂಬಂಧಿತ ಯೋಜನೆಗಳನ್ನು ಹಾಗೂ ಕರ್ನಾಟಕದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳಿಗೆ ಬರ ಪೀಡಿತ ಪ್ರದೇಶಗಳ ನೀರಿನ ಅಗತ್ಯತೆಯನ್ನು ಪೂರೈಸುವ ಯೋಜನೆಗಳು ಮತ್ತು ಮುಂದುವರೆದುಕೊಂಡು ಹೋಗುತ್ತಿರುವ ಇತರೆ ಯಾವುದಾದರೂ ಯೋಜನೆಗಳು ಇದ್ದಲ್ಲಿ, ಅವುಗಳನ್ನು ಈ ಕಂಪನಿಗೆ ವರ್ಗಾಯಿಸಿತು. ಸರ್ಕಾರಿ ಆದೇಶ ಸಂಖ್ಯೆ ಜಸಂಇ 130 ವಿಬ್ಯಾಇ 2016 ದಿನಾಂಕ 18.11.2016ರ ಪ್ರಕಾರ ಕರ್ನಾಟಕ ಸರ್ಕಾರವು ತಾತ್ವಿಕವಾಗಿ ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನಹೊಳೆ ಯೋಜನೆ, ವಾಣಿವಿಲಾಸ ಸಾಗರ, ಗಾಯಿತ್ರಿ ಜಲಾಶಯದ ಮುಂದುವರೆದುಕೊಂಡು ಹೋಗುತ್ತಿರುವ ಕಾಮಗಾರಿಗಳ ಆಸ್ತಿಗಳನ್ನು ಮತ್ತು ಜವಾಬ್ದಾರಿಗಳನ್ನು ಈ ಕಂಪನಿಗೆ ತಾತ್ವಿಕವಾಗಿ ವರ್ಗಾಯಿಸಿರುವುದು, ಈ ಯೋಜನೆಗಳಿಗೆ ಸಂಬಂಧಿಸಿದಂತೆ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಕರ್ನಾಟಕ ಸರ್ಕಾರವು ಕಂಪನಿಗೆ ವರ್ಗಾಯಿಸಿದ ಕೂಡಲೆಯೇ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ಬಿ) ಕಂಪನಿಯು ಹೊಂದಿರುವ ಸ್ಥಿರಾಸ್ತಿಗಳು ಕಂಪನಿಯಲ್ಲಿ ಭೌತಿಕವಾಗಿ ಲಭ್ಯವಿರುವ ಆದರೆ ಕರ್ನಾಟಕ ಸರ್ಕಾರದಿಂದ ಇನ್ನೂ ವರ್ಗಾವಣೆಗೊಳ್ಳಬೇಕಿರುವ ಆಸ್ತಿಗಳನ್ನು ಒಳಗೊಂಡಿರುವುದಿಲ್ಲ,

ಸಿ) ಸ್ಥಿರಾಸ್ತಿಗಳಿಗೆ ಮೇಲೆ ತಿಳಿಸಲಾದ ಸೇರ್ಪಡೆಗಳು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಕಟ್ಟಡಗಳು ಮತ್ತು ಕಾಲೋನಿಗಳಿಂದ ರೂ. 17,19,52,319 ಕಟ್ಟಡಗಳು ಮತ್ತು ಕಾಲೋನಿಗಳಿಗೆ ರೂ.6,76,77,701 (ಹಿಂದಿನ ಸಾಲಿನಲ್ಲಿ ರೂ.50,38,005) ಪೀಠೋಪಕರಣಗಳು ಮತ್ತು ನೆಲೆವಸ್ತುಗಳು ರೂ.6,15,42,159, ಕಛೇರಿ ಉಪಕರಣಗಳು ರೂ.3,10,17,704 ಹಾಗೂ ವಿದ್ಯುತ್ ಉಪಕರಣಗಳು ರೂ.1,16,95,380ಇವುಗಳನ್ನು ಬಂಡವಾಳೀಕರಿಸಲಾಗಿರುವುದನ್ನು ಒಳಗೊಂಡಿರುತ್ತದೆ.

ಡಿ) ಪ್ರಸಕ್ತ ಸಾಲಿನಲ್ಲಿ ಕಂಪನಿಯು ರೂ.30,60,91,387/–ರಷ್ಟು (ಹಿಂದಿನ ಸಾಲಿನಲ್ಲಿ ರೂ.2,48,72,705/–) ಒಟ್ಟಾರೆ ಮೌಲ್ಯದ ಭೂಮಿಯನ್ನು ಈ ಕೆಳಗೆ ವಿವರಿಸಿರುವಂತೆ ಬಂಡವಾಳೀಕರಿಸಿರುವುದು :

ವಿವರಗಳು	2017–18	2016–17
1) ವಿಶೇಷ ಭೂ ಸ್ವಾಧೀನ ಅಧಿಕಾರಿಯವರ ಕಛೇರಿಯ ನಿರ್ಮಾಣ ಅವಧಿಯ ವೆಚ್ಚಗಳು	**1,41,91,670**	22,44,289
2) ಸರ್ಕಾರಿ ಆದೇಶ ಸಂಖ್ಯೆ ಜಸಂಇ 95 ವಿಬ್ಯಾಇ 2016 ದಿನಾಂಕ 18–11–2016 ಮೂಲಕ ಮಾಡಲಾದ ಸಚಿವ ಸಂಪುಟದ ಅನುಮೋದನೆಯಂತೆ ಮಾಡಲಾದಂತಹ ಭೂಮಿಯ ನೇರ ಖರೀದಿ	**17,43,17,819**	–
3) ವಿಶೇಷ ಭೂ ಸ್ವಾಧೀನ ಅಧಿಕಾರಿಯವರು/ಸಹಾಯಕ ಆಯುಕ್ತರಿಂದ ಸ್ವೀಕರಿಸಲಾದಂತಹ ಬಳಕೆ ಪ್ರಮಾಣಪತ್ರದ ಆಧಾರದ ಮೇರೆಗೆ ಭೂ ಸ್ವಾಧೀನ ಪ್ರಕ್ರಿಯೆ ಪ್ರಕಾರ ಸ್ವಾಧೀನಪಡಿಸಿಕೊಳ್ಳಲಾದಂತಹ ಭೂಮಿ	**10,28,50,058**	42,00,000
4) ಪರಿಹಾರಕ ಅರಣ್ಯೀಕರಣ ಶುಲ್ಕಗಳು	**1,47,31,840**	1,84,28,416
	30,60,91,387	**2,48,72,705**

ಇ) ಕಂಪನಿಯು ನೇರ ಖರೀದಿಯ ಮೂಲಕ ಒಟ್ಟಾರೆ 40 ಎಕರೆಗಳು 35.50 ಗುಂಟೆಗಳಷ್ಟು (ಹಿಂದಿನ ವರ್ಷ – ಯಾವುದು ಇರುವುದಿಲ್ಲ) ಮತ್ತು 65 ಎಕರೆಗಳು 0.07 ಗುಂಟೆಗಳಷ್ಟು (ರೂ.42 ಲಕ್ಷ ಮೊತ್ತವು ಬಗರ್‌ಹುಕುಂ ಪಾವತಿಗಳನ್ನು ಪ್ರತಿನಿಧಿಸುವುದರಿಂದ ಹಿಂದಿನ ಸಾಲಿನಲ್ಲಿ – ಯಾವುದೂ ಇರುವುದಿಲ್ಲ) ಭೂಮಿಯನ್ನು ಭೂ ಸ್ವಾಧೀನ ಅಧಿನಿಯಮದ ಅಡಿಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆಗಳ ಮೂಲಕ ಸ್ವಾಧೀನಪಡಿಸಿಕೊಂಡಿರುವುದು.

ಎಫ್) ಭೂಮಿಯ ಮೌಲ್ಯವು ಭೂ ಸ್ವಾಧೀನಕ್ಕೆ ಸಂಬಂಧಿತ ತೀರ್ಪುಗಳು, ಒಪ್ಪಿಗೆ ತೀರ್ಪುಗಳು ಹಾಗೂ ಬಡ್ಡಿ, ಯಾವುದಾದರೂ ಇದ್ದಲ್ಲಿ ಇತ್ಯಾದಿಗಳನ್ನು ಒಳಗೊಂಡಂತೆ ವಿವಿಧ ಕಾರ್ಯವಿಧಾನಗಳ ಷರತ್ತಿಗೆ ಒಳಪಟ್ಟಿರುತ್ತದೆ.

ಜಿ) ಮೇಲೆ ತಿಳಿಸಲಾದ ಭೂಮಿಯ ಮೌಲ್ಯವು ನೀರಾವರಿ ನಿರ್ಮಾಣಗಳನ್ನು ಮಾಡಲಾಗುತ್ತಿರುವ ಸರ್ಕಾರಿ ಭೂಮಿಯ ಮೌಲ್ಯವನ್ನು ಒಳಗೊಂಡಿರುವುದಿಲ್ಲ

ಹೆಚ್) ಯೋಜನೆಗಳ ಕಾರಣದಿಂದ ಮುಖ್ಯ ಇಂಜಿನಿಯರ್‌ಗಳು, ಇಂಜಿನಿಯರ್‌ಗಳ ಅಧೀಕ್ಷಕ ಇಂಜಿನಿಯರ್‌ಗಳ ಕಛೇರಿಗಳಲ್ಲಿ ಭರಿಸಲಾಗಿರುವ ಸಿಬ್ಬಂದಿ / ಆಡಳಿತ ವೆಚ್ಚಗಳನ್ನು ಅವರುಗಳ ಆಡಳಿತ ವ್ಯಾಪ್ತಿಯಲ್ಲಿ ಬರುವ ವಿಭಾಗಗಳಿಗೆ ಸೂಕ್ತವಾಗಿ ಹಂಚಿಕೆ ಮಾಡಲಾಗುವುದು.

ಐ) ಯೋಜನೆಗಳ ಕಾರಣ ವ್ಯವಸ್ಥಾಪಕ ನಿರ್ದೇಶಕರ ಸಂಬಳ–ಸಂಭಾವನೆ, ತಾಂತ್ರಿಕ ಸಿಬ್ಬಂದಿಯ ಸಂಭಾವನೆ ಹಾಗೂ ಕಾನೂನು ಸೇವೆಗಳ ಸಂಭಾವನೆಗೆ ಸಂಬಂಧಿಸಿದಂತೆ ಬೆಂಗಳೂರಿನ ನೊಂದಾಯಿತ ಕಛೇರಿಯಲ್ಲಿ ಭರಿಸಲಾಗಿರುವ ವೆಚ್ಚಗಳನ್ನು ಕಾರ್ಯಪಾಲಕ ಇಂಜಿನಿಯರ್‌ಗಳ ಕಛೇರಿಗಳಿಗೆ ಸೂಕ್ತವಾಗಿ ಹಂಚಿಕೆ ಮಾಡಲಾಗುವುದು.

ಜೆ) ಚಿತ್ರದುರ್ಗದಲ್ಲಿರುವ ಕೇಂದ್ರ ಕಛೇರಿಯು ಪ್ರಾಥಮಿಕವಾಗಿ ಆಡಳಿತ ಕಛೇರಿಯಾಗಿರುತ್ತದೆ. ಆದ್ದರಿಂದ, ಈ ಕಛೇರಿಗೆ ಸಂಬಂಧಿತ ವೆಚ್ಚಗಳನ್ನು ಹಂಚಿಕೆ ಮಾಡಲು ಪರಿಗಣಿಸಿರುವುದಿಲ್ಲ.

ಕೆ) ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿಗಳಲ್ಲಿ ಭರಿಸಲಾಗಿರುವಂತಹ ವೆಚ್ಚಗಳನ್ನು ಅವರುಗಳ ಕಛೇರಿಗಳಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಿಗೆ ಸೂಕ್ತವಾಗಿ ಹಂಚಿಕೆ ಮಾಡಲಾಗುವುದು.

5) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು

ವಿವರಗಳು	01.04.17 ರಲ್ಲಿದ್ದಂತೆ	ಪ್ರಸಕ್ತ ಸಾಲಿನ ಸೇರ್ಪಡೆ	ಪ್ರಸಕ್ತ ಸಾಲಿನ ಹೊಂದಾಣಿಕೆಗಳು/ ಬಂಡವಾಳೀಕರಣ	31.03.18 ರಲ್ಲಿದ್ದಂತೆ
	₹	₹	₹	₹
ಕಟ್ಟಡಗಳು ಮತ್ತು ವಸಾಹತುಗಳು	2,67,97,207	14,51,55,112	17,19,52,319	–
ಅಡ್ಡಗಟ್ಟೆಗಳು	1,29,82,976	9,34,85,658	–	10,64,68,634
ಏತ ನೀರಾವರಿ ಯೋಜನೆಗಳು	7,16,75,46,053	8,86,57,30,520	–	16,03,32,76,573
ನಾಲೆಗಳು ಮತ್ತು ಶಾಖೆಗಳು	49,58,20,111	2,28,00,37,558	–	2,77,58,57,669
ಕೆರೆಗಳು	48,15,037	4,91,62,563	–	5,39,77,600
ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳು (ಬಂಡವಾಳೀಕರಿಸುವುದು ಬಾಕಿಯಿರುವ)	1,27,90,820	1,09,04,157	–	2,36,94,977
ಒಟ್ಟು	**7,72,07,52,204**	**11,44,44,75,568**	**17,19,52,319**	**18,99,32,75,453**
ಹಿಂದಿನ ಸಾಲು	–	7,72,57,88,882	50,38,005	7,72,07,204

ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು

ಎ) ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಜಸಂಇ 35 ವಿಬ್ಯಾಇ 2016 ದಿನಾಂಕ 20.08.2016ರ ಮೂಲಕ ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಈ ಯೋಜನೆಗಳಿಗೆ ಸಂಬಂಧಿತ ಯೋಜನೆಗಳನ್ನು ಹಾಗೂ ಕರ್ನಾಟಕದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳಿಗೆ ಬರ ಪೀಡಿತ ಪ್ರದೇಶಗಳ ನೀರಿನ ಅಗತ್ಯತೆಯನ್ನು ಪೂರೈಸುವ ಯೋಜನೆಗಳು ಮತ್ತು ಮುಂದುವರೆದುಕೊಂಡು ಹೋಗುತ್ತಿರುವ ಇತರೆ ಯಾವುದಾದರೂ ಯೋಜನೆಗಳು ಇದ್ದಲ್ಲಿ, ಅವುಗಳನ್ನು ಈ ಕಂಪನಿಗೆ ವರ್ಗಾಯಿಸಿತು. ಸರ್ಕಾರಿ ಆದೇಶ ಸಂಖ್ಯೆ ಜಸಂಇ 130 ವಿಬ್ಯಾಇ 2016 ದಿನಾಂಕ 18.11.2016ರ ಪ್ರಕಾರ ಕರ್ನಾಟಕ ಸರ್ಕಾರವು ತಾತ್ವಿಕವಾಗಿ ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನಹೊಳೆ ಯೋಜನೆ, ವಾಣಿವಿಲಾಸ ಸಾಗರ, ಗಾಯಿತ್ರಿ ಜಲಾಶಯದ ಮುಂದುವರೆದುಕೊಂಡು ಹೋಗುತ್ತಿರುವ ಕಾಮಗಾರಿಗಳ ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ಈ ಕಂಪನಿಗೆ ತಾತ್ವಿಕವಾಗಿ ವರ್ಗಾಯಿಸಿರುವುದು, ಈ ಸ್ಥಿರಾಸ್ತಿಗಳನ್ನು ಈ ಕಂಪನಿಗೆ ವಾಸ್ತವಿಕವಾಗಿ ವರ್ಗಾಯಿಸುವುದು ಇನ್ನೂ ಬಾಕಿಯಿರುವುದು. ಕರ್ನಾಟಕ ಸರ್ಕಾರವು ಈ ಯೋಜನೆಗಳನ್ನು ಕಂಪನಿಗೆ ವರ್ಗಾಯಿಸಿದ ಕೂಡಲೇ ಕಂಪನಿಯ ಲೆಕ್ಕಪುಸ್ತಕಗಳಲ್ಲಿ ದಾಖಲಿಸಲಾಗುವುದು.

ಬಿ) ಕಂಪನಿಯು ಹೊಂದಿರುವಂತಹ ಮೇಲೆ ತಿಳಿಸಿರುವ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ ಸರ್ಕಾರವು ಇನ್ನು ವರ್ಗಾಹಿಸಬೇಕಾಗಿರುವ ಆಸ್ತಿಗಳು ಸೇರಿರುವುದಿಲ್ಲ, ಆದರೆ ಭೌತಿಕಾವಾಗಿ ಕಂಪನಿಯೊಂದಿಗೆ ಇರುತ್ತದೆ.

ಸಿ) ಭದ್ರಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿನ ಯೋಜನೆಗಳ ಭಾಗಗಳು/ಯೋಜನೆಗಳನ್ನು ಕರ್ನಾಟಕ ಸರ್ಕಾರದ ತಾತ್ವಿಕ ಒಪ್ಪಿಗೆಯ ಆಧಾರದ ಮೇರೆಗೆ ಕೈಗೆತ್ತಿಕೊಳ್ಳಲಾಗುವುದು, ಭಾರತ ಸರ್ಕಾರದ (ಕೇಂದ್ರ ಸರ್ಕಾರ) ಕೆಡಬ್ಲ್ಯೂಡಿಟಿ IIರ ಅಧಿಸೂಚನೆಯನ್ನು ನಿರೀಕ್ಷಿಸಲಾಗುತ್ತಿದೆ.

ಡಿ) ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಯೋಜನೆಯ ಕಾರ್ಯಗತಗೊಳಿಸುವಿಕೆಯನ್ನು ಪರಿಸರೀಯ ಅಂಶಗಳ ಮೇಲೆ ನವದೆಹಲಿಯಲ್ಲಿರುವ ರಾಷ್ಟ್ರೀಯ ಹಸಿರು ನ್ಯಾಯಿಕ ಪ್ರಾಧಿಕಾರದಲ್ಲಿ ಪ್ರಶ್ನಿಸಲಾಗಿದೆ. 13.93 ಹೆಕ್ಟೇರುಗಳಷ್ಟು ಅರಣ್ಯ ಭೂಮಿಯನ್ನು ಮಾರ್ಗಾಂತರಣ ಮಾಡಿ ಸರ್ಕಾರವು ನೀಡಿದ್ದ ಅರಣ್ಯ ಇಲಾಖೆಯ ಅನುಮತಿಯನ್ನು ಪ್ರಶ್ನಿಸಲಾಗಿದ್ದಿತು, ಅದನ್ನು ರಾಷ್ಟ್ರೀಯ ಹಸಿರು ನ್ಯಾಯಿಕ ಪ್ರಾಧಿಕಾರದ ಪ್ರಧಾನ ಬೆಂಚಿನಿಂದ 5 ಅಕ್ಟೋಬರ್ 2017ರಂದು ವಿಲೇವಾರಿ ಮಾಡಲಾಗಿದೆ. ತನ್ನ ತೀರ್ಪಿನ ಕಾರ್ಯಾಚರಣೆಗೊಳಿಸಬೇಕಾದ ಭಾಗದಲ್ಲಿ, ಆದಾಗ್ಯೂ, ಕರ್ನಾಟಕ ಸರ್ಕಾರವು ಚಿಂತಿಸಿದ್ದಂತೆ ಯೋಜನಾ ಚಟುವಟಿಕೆಗಳಿಗೆ ಅನುಮತಿಯನ್ನು ನೀಡುವ ವೇಳೆಯಲ್ಲಿ, ಎತ್ತಿನಹೊಳೆ ಹಂತ–1ರ ಯೋಜನೆಯ

ನಿರ್ಮಾಣವನ್ನು ಕಾನೂನಿನ ಪ್ರಕಾರ ತದನಂತರದಲ್ಲಿ ಬರುವಂತಹ ಸವಿವರ ತೀರ್ಪಿನಲ್ಲಿರುವ ವಿವಿಧ ಷರತ್ತುಗಳು ಮತ್ತು ನಿರ್ದೇಶನಗಳ ಅನುಸಾರ ಮುಂದುವರೆಸಲು ಬಳಕೆದಾರ ಸಂಸ್ಥೆಗೆ ನಾವು ನಿರ್ದೇಶನವನ್ನು ನೀಡುತ್ತಿದ್ದೇವೆ ಎಂಬುದಾಗಿ ನ್ಯಾಯಿಕ ಪ್ರಾಧಿಕಾರವು ಗಮನಿಸಿದೆ. ಇನ್ನೂ ಎರಡು ಮೂಲ ಅರ್ಜಿಗಳು ಇರುತ್ತವೆ, ಅವುಗಳಲ್ಲಿ ಮೇಲೆ ತಿಳಿಸಲಾದ ಮನವಿ ಸಂಖ್ಯೆ 54/2016ರಲ್ಲಿ ಗಮನಿಸಲಾಗಿರುವ ಅಂಶಗಳು ಇದ್ದು, ಅವುಗಳು ವಿಲೇವಾರಿಗಾಗಿ ಬಾಕಿಯಿರುತ್ತವೆ.

ಇ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ರೂ.26.49 ಕೋಟಿ ಮೊತ್ತದಷ್ಟು ಅನುವು ಮಾಡಲಾಗಿರುವಂತಹ ಐದು ಪ್ಯಾಕೇಜುಗಳ ದರ ಹೆಚ್ಚಳದ ಕಾರಣ ಹೆಚ್ಚುವರಿ ಪಾವತಿಗಾಗಿನ ಕೋರಿಕೆಗಳನ್ನು ಒಳಗೊಂಡಿರುತ್ತವೆ.

6 ಸಾಲಗಳು ಮತ್ತು ಮುಂಗಡಗಳು

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
ಚಾಲ್ತಿಯೇತರ	₹	₹
(ಎ) ಬಂಡವಾಳ ಮುಂಗಡಗಳು		
i) ಗುತ್ತಿಗೆದಾರರುಗಳಿಗೆ ಸಜ್ಜುಗೊಳ್ಳುವುದಕ್ಕಾಗಿ ನೀಡಲಾಗಿರುವ ಮುಂಗಡಗಳು – ಭದ್ರತೆಯಿಂದ ಕೂಡಿದ, ವಸೂಲಾತಿ ಮಾಡಲು ಉತ್ತಮ ಸ್ಥಿತಿಯಲ್ಲಿದೆ ಎಂಬುದಾಗಿ ಪರಿಗಣಿಸಲಾಗಿರುವ	**2,41,14,27,826**	–
ii) ಭೂ ಸ್ವಾಧೀನಪಡಿಸಿಕೊಳ್ಳುವಿಕೆಗಳಿಗಾಗಿ ಮುಂಗಡ	**1,03,20,13**	5,33,55,000
(ಬಿ) ಇತರವುಗಳು ಮೂಲದಲ್ಲಿಯೇ ಕಡಿದುಕೊಳ್ಳಲಾಗಿರುವ ತೆರಿಗೆ (ಟಿಡಿಎಸ್) /ಮೂಲದಲ್ಲಿ ಸಂಗ್ರಹಿಸಿದ ತೆರಿಗೆ (ಟಿಸಿಎಸ್) (ಆದಾಯ ತೆರಿಗೆ ಅಧಿನಿಯಮದ ಅಡಿಯಲ್ಲಿ)	**1,15,93,837**	16,46,875
ಆದಾಯ ತೆರಿಗೆ ಇಲಾಖೆಯಿಂದ ಬಾಕಿಯಿರುವಂತಹ ಮರುಪಾವತಿ	**16,46,875**	–
ಒಟ್ಟು	**2,43,49,88,651**	**5,50,01,875**
ಚಾಲ್ತಿ		
ಭದ್ರತೆಯಿಂದ ಕೂಡಿರದ – ವಸೂಲಾತಿ ಮಾಡಲು ಉತ್ತಮ ಸ್ಥಿತಿಯಲ್ಲಿದೆ ಎಂಬುದಾಗಿ ಪರಿಗಣಿಸಲಾಗಿರುವ		
ಎ)ಸರಬರರಾಜುದಾರರುಗಳು/ಸೇವೆಗಳಿಗೆ ಮುಂಗಡಗಳು	**3,41,60,86,164**	86,90,22,371
ಬಿ) ಸಿಬ್ಬಂದಿಗೆ ಮುಂಗಡಗಳು	**96,600**	98,000
ಸಿ) ಉದ್ಯೋಗಿಗಳಿಂದ ಬರಬಾಕಿರುವ ಬಾಕಿ ಮೊತ್ತಗಳು ಎನ್‌ಪಿಎಸ್	**87,40,897**	15,35,502
ಡಿ) ಪೂರ್ವಭಾವಿಯಾಗಿ ಪಾವತಿಸಲಾಗಿರುವ ವೆಚ್ಚಗಳು	**80,914**	–
ಒಟ್ಟು	**3,42,50,04,575**	**87,06,55,873**

ಎ) ಗುತ್ತಿಗೆದಾರರುಗಳಿಗೆ ಸಜ್ಜುಗೊಳ್ಳುವುದಕ್ಕಾಗಿ ನೀಡಲಾಗಿರುವ ಮುಂಗಡಗಳು ಚಾಲ್ತಿ ಖಾತೆ ಬಿಲ್ಲುಗಳಲ್ಲಿನ ವಸೂಲಾತಿಗಳ ನಿವ್ವಳ ಮೊತ್ತವಾಗಿರುತ್ತದೆ (ಕರ್ನಾಟಕ ನೀರಾವರಿ ನಿಗಮವು ದಿನಾಂಕ 01–01–2017ಕ್ಕೆ ಮುಂಚಿನ ಅವಧಿಯಲ್ಲಿ ನೀಡಿರುವ ಮುಂಗಡಗಳ ಭಾಗವನ್ನೂ ಒಳಗೊಂಡಿರುತ್ತದೆ.) ಬಾಕಿಯಿರುವಂತಹ ಬಿಲ್ಲುಗಳು ಮತ್ತು ಕಾರ್ಯಗತಗೊಳಿಸಬೇಕಿದ್ದ ಉಳಿಕೆ ಕಾಮಗಾರಿಗಳನ್ನು ಕಂಪನಿಗೆ ವರ್ಗಾಯಿಸಿದ್ದರಿಂದ ಹಾಗೂ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಕರ್ನಾಟಕ ಸರ್ಕಾರವು ಇನ್ನೂ ವರ್ಗಾಯಿಸಬೇಕಿರುವುದರಿಂದ, ಕರ್ನಾಟಕ ಸರ್ಕಾರ/ಕರ್ನಾಟಕ ನೀರಾವರಿ ನಿಗಮ ನಿಯಮಿತವು ಕರ್ನಾಟಕ ಸರ್ಕಾರವು ವರ್ಗಾವಣೆ ಮಾಡಿದನಂತರ ಗುತ್ತಿಗೆದಾರರುಗಳಿಗೆ ಸಜ್ಜುಗೊಳ್ಳುವುದಕ್ಕಾಗಿ ಕರ್ನಾಟಕ ನೀರಾವರಿ ನಿಗಮವು ಪಾವತಿಸಿರುವ ಮುಂಗಡಗಳ ಮೊತ್ತವನ್ನು ಲೆಕ್ಕಪತ್ರಗಳಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ಬಿ) ಭೂ ಸ್ವಾಧೀನಪಡಿಸಿಕೊಳ್ಳುವಿಕೆಗಳಿಗೆ ಸಂಬಂಧಿತ ಮುಂಗಡ – 1,03,20,113 (ಹಿಂದಿನ ಸಾಲಿನಲ್ಲಿ – 5,33,55,000/–) ಎಸ್‌ಐಎ ವರದಿಗಾಗಿ ಮುಂಗಡದ ಕಡೆಗೆ ರೂ.98,76,489ರಷ್ಟು ಮೊತ್ತವನ್ನು ಒಳಗೊಂಡಿರುತ್ತದೆ ಹಾಗೂ ಉಳಿಕೆ ರೂ.4,43,624 ಭೂ ಸ್ವಾಧೀನಕ್ಕಾಗಿ ವೆಚ್ಚಗಳನ್ನು ಪ್ರತಿನಿಧಿಸುತ್ತದೆ. ಭೂ ಸ್ವಾಧೀನ ಪ್ರಕ್ರಿಯೆಗಳ ಪೂರ್ಣಗೊಂಡನಂತರ ಸೂಕ್ತ ಸಮಯದಲ್ಲಿ ಈ ಮೊತ್ತಗಳನ್ನು ಬಂಡವಾಳೀಕರಿಸಲಾಗುವುದು.

ಸಿ) ಸರಬರಾಜುದಾರರುಗಳಿಗೆ/ ಸೇವೆಗಳಿಗೆ ನೀಡಲಾಗಿರುವ ಮುಂಗಡಗಳು ವಿಶೇಷ ಘಟಕ ಯೋಜನೆ (ಎಸ್‌ಸಿಪಿ)/ ಬುಡಕಟ್ಟು ಜನಾಂಗಗಳ ಉಪ–ಯೋಜನೆ (ಟಿಎಸ್‌ಪಿ)

ಕಾಮಗಾರಿಗಳ ಕಡೆಗೆ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ ಮತ್ತು ನಿರ್ಮಿತಿ ಕೇಂದ್ರಕ್ಕೆ ನೀಡಲಾಗಿರುವ ಮುಂಗಡವನ್ನು ರೂ.274,51,70,000ರಷ್ಟು (ಹಿಂದಿನ ಸಾಲಿನಲ್ಲಿ ರೂ.81,61,50,000) ಒಳಗೊಂಡಿರುತ್ತದೆ.

ಡಿ) ವಸೂಲಾತಿ ಮಾಡಬೇಕಾದ ಸಾಲಗಳು

ಕಂಪನಿಯ ನಿರ್ದೇಶಕರುಗಳು ಅಥವಾ ಇತರೆ ಅಧಿಕಾರಿಗಳಿಂದ – ಯಾವುದೂ ಇರುವುದಿಲ್ಲ.

ಕಂಪನಿಯ ಯಾವುದಾದರೂ ನಿರ್ದೇಶಕರುಗಳು ಓರ್ವ ಪಾಲುದಾರರಾಗಿರುವಂತಹ ಸಂಸ್ಥೆಗಳಿಂದ ವಸೂಲಾತಿಯಾಗಬೇಕಾಗಿರುವ ಮೊತ್ತಗಳು –ಯಾವುದೂ ಇರುವುದಿಲ್ಲ.

ಕಂಪನಿಯ ಯಾವುದಾದರೂ ನಿರ್ದೇಶಕರುಗಳು ಓರ್ವ ನಿರ್ದೇಶಕರಾಗಿರುವ/ಸದಸ್ಯರಾಗಿರುವ ಖಾಸಗಿ ಕಂಪನಿಗಳಿಂದ ವಸೂಲಾತಿಯಾಗಬೇಕಾಗಿರುವ ಮೊತ್ತಗಳು –ಯಾವುದೂ ಇರುವುದಿಲ್ಲ.

ಇ) ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿನ ಶಿಲ್ಕುಗಳ ಖಚಿತಪಡಿಸಿಕೊಳ್ಳುವಿಕೆ ಹಾಗೂ ಸಮನ್ವಯಗೊಳಸುವಿಕೆಯ ಷರತ್ತುಗಳಿಗೆ ಒಳಪಟ್ಟಿರುತ್ತವೆ.

7. ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳು (ನಿವ್ವಳ)

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
	₹	₹
(ಎ) ಮುಂದೂಡಲ್ಪಟ್ಟಿರುವ ತೆರಿಗೆ ಬಾಧ್ಯತೆ (ಸ್ಥಿರಾಸ್ತಿಗಳಿಗೆ ಸಂಬಂಧಿಸಿರುವ)	**25,32,395**	1,73,247
(ಬಿ) ಈ ಕೆಳಗಿನವುಗಳ ಕಾರಣ ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿ:		
ಒಳಸೇರ್ಪಡೆಗೊಳ್ಳದ ಸವಕಳಿ/ವ್ಯವಹಾರಗಳಿಗೆ ಸಂಬಂಧಿತ ನಷ್ಟ	**25,32,395**	1,73,247
ಪೂರ್ವಭಾವಿ ವೆಚ್ಚಗಳು	**55,91,662**	74,31,499
ಗ್ರಾಚ್ಯುಟಿಗಾಗಿ ಅನುವು	**24.591**	–
ಪರಿಚ್ಛೇದ 43ಬಿ ಅಡಿಯಲ್ಲಿ ತಿರಸ್ಕರಿಸಿರುವವುಗಳು	**82,87,343**	22,77,182
ಒಟ್ಟು (ಬಿ)	**1,64,35,991**	**98,81,928**
ಸಿ. ನಿವ್ವಳ ಮುಂದೂಡಲ್ಪಟ್ಟಿರುವ ತೆರಿಗೆ ಜವಾಬ್ದಾರಿ/(ಆಸ್ತಿ) (ಎ – ಬಿ)	**(1,39,03,596)**	**(97,08,681)**

8. ನಗದು ಮತ್ತು ನಗದಿಗೆ ಸಮಾನವಾದವುಗಳು

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
	₹	₹
ಬ್ಯಾಂಕ್‌ಗಳಲ್ಲಿರುವ ಶಿಲ್ಕುಗಳು		
ಉಳಿತಾಯ ಖಾತೆಗಳಲ್ಲಿ *	**1,35,19,85,735**	(2,37,88,53,749)
ಚಾಲ್ತಿ ಖಾತೆಗಳಲ್ಲಿ	**61,72,85,407**	3,05,02,58,943
ಠೇವಣಿ ಖಾತೆಗಳಲ್ಲಿ* *	**55,12,58,179**	1,27,75,66,071
ಜಿಲ್ಲಾ ಖಜಾನೆ ಖಾತೆಗಳಲ್ಲಿ	**1,78,50,000**	–
ಒಟ್ಟು	**2,53,83,79,321**	**1,94,89,71,265**

ಎ) * ಕಂಪನಿಯ ಹೆಸರಿನಲ್ಲಿರುವ ಟ್ರಸ್ಟಿನಲ್ಲಿ ಹೊಂದಿರುವ ಮೊತ್ತಗಳಿಗೆ ಸಂಬಂಧಿಸಿರುವುದು.

ಬಿ) ಠೇವಣಿ ಖಾತೆಗಳಲ್ಲಿರುವ ಶಿಲ್ಕುಗಳು ಫ್ಲೆಕ್ಸಿ ಮತ್ತು 12 ತಿಂಗಳುಗಳ ಒಳಗೆ ಅವಧಿ ಮುಕ್ತಾಯಗೊಳ್ಳುವಂತಹ ನಿಶ್ಚಿತ ಅವಧಿ ಠೇವಣಿಗಳನ್ನು ಪ್ರತಿನಿಧಿಸುತ್ತವೆ ಮತ್ತು ಆದ್ದರಿಂದ ಇಐಆರ್ ಅನ್ನು ಲೆಕ್ಕಹಾಕಿಲ್ಲ.

ಸಿ) ಉಳಿತಾಯ ಖಾತೆಗಳಲ್ಲಿನ ಶಿಲ್ಕುಗಳು ಭೂಸ್ವಾಧೀನಪಡಿಸಿಕೊಳ್ಳುವ ಸಲುವಾಗಿ /ಪರಿಹಾರದ ಮೊತ್ತಗಳು, ಇತ್ಯಾದಿಗಳಿಗಾಗಿ ವಿಶೇಷ ಭೂಸ್ವಾಧೀನ ಅಧಿಕಾರಿಗಳಿಗೆ ಬಿಡುಗಡೆ ಮಾಡಿರುವ ಪಾವತಿಗಳ ಕಡೆಗೆ ಸಂಬಂಧಿತ ವಿಶೇಷ ಭೂಸ್ವಾಧೀನ ಅಧಿಕಾರಿಗಳು

ವಿಶೇಷವಾಗಿ ನಿರ್ವಹಿಸುತ್ತಿರುವ 3 ಬ್ಯಾಂಕ್ ಖಾತೆಗಳನ್ನೂ ಒಳಗೊಂಡಿರುತ್ತದೆ. ಮೊತ್ತಗಳನ್ನು ಭೂ ಪರಿಹಾರದ ಅವಾರ್ಡುಗಳ ಹಾಗೂ ಇತರೆ ಸಂಬಂಧಿತ ವೆಚ್ಚಗಳ ಆಧಾರದ ಮೇರೆಗೆ ಈ ಖಾತೆಗಳಿಗೆ ಕಂಪನಿಯು ಸಂಬಂಧಿತ ವಿಶೇಷ ಭೂಸ್ವಾಧೀನ ಅಧಿಕಾರಿಗಳ ಕೋರಿಕೆಯ ಆಧಾರದ ಮೇರೆಗೆ ಕಂಪನಿಯು ಬಿಡುಗಡೆಗೊಳಿಸುತ್ತದೆ. ವಿಶೇಷ ಭೂಸ್ವಾಧೀನ ಅಧಿಕಾರಿಗಳು ಆ ಮೊತ್ತಗಳನ್ನು ತದನಂತರದ ಅವಧಿಗಳಲ್ಲಿ ಉಪಯೋಗಿಸಿಕೊಳ್ಳುವರು, ಅಲ್ಲಿಯವರೆವಿಗೂ ಹೆಚ್ಚುವರಿ ಮೊತ್ತಗಳನ್ನು ಫ್ಲೆಕ್ಸಿ ಠೇವಣಿ ಯೋಜನೆಗಳಲ್ಲಿ ಇಟ್ಟಿರಲಾಗುವುದು.

ಡಿ) ** ಈ ಕೆಳಗೆ ವಿವರಿಸಿರುವಂತೆ, 3 ತಿಂಗಳುಗಳನ್ನು ಮೀರಿದಂತೆ, ಆದರೆ 12 ತಿಂಗಳುಗಳಿಗೂ ಕಡಿಮೆ ಅವಧಿಯ ಮೂಲ ಮುಕ್ತಾಯ ಅವಧಿಯೊಂದಿಗಿನ ಠೇವಣಿಗಳನ್ನು ಒಳಗೊಂಡಿರುತ್ತದೆ.

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
	₹	₹
ಠೇವಣಿ ಖಾತೆಗಳಲ್ಲಿ		
ನಿಶ್ಚಿತ	–	57,98,00,000
ಫ್ಲೆಕ್ಸಿ	**54,30,15,125**	79,60,420
ಒಟ್ಟು	**54,30,15,125**	**58,77,60,420**

9. ವ್ಯಾಪಾರ ಸ್ವೀಕೃತಿಗಳು

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
	₹	₹
ಆರು ತಿಂಗಳುಗಳಿಗೂ ಕಡಿಮೆ ಅವಧಿಗೆ ಬಾಕಿಯಿರುವಂತಹ ಸಾಲಗಳು ಭದ್ರತೆಯಿಂದ ಕೂಡಿರದ, ಆದರೆ ವಸೂಲಾತಿಯಾಗುವಲ್ಲಿ ಉತ್ತಮ ಸ್ಥಿತಿಯಲ್ಲಿದೆ ಎಂಬುದಾಗಿ ಪರಿಗಣಿಸಲಾಗಿರುವ	73,000	–
ಒಟ್ಟು	**73,000**	–

ವ್ಯಾಪರ ಸ್ವೀಕೃತಿಗಳ ಅಡಿಯಲ್ಲಿನ ಬಾಕಿಗಳು ಖಚಿತಪಡಿಸಿಕೊಳ್ಳುವಿಕೆಯ ಷರತ್ತುಗಳಿಗೆ ಒಳಪಟ್ಟಿರುತ್ತವೆ.

10. ಇತರೆ ಹಣಕಾಸು ಸಂಬಂಧಿತ ಆಸ್ತಿಗಳು

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
	₹	₹
(ಎ) ಗುತ್ತಿಗೆದಾರರುಗಳಿಗೆ ಸಜ್ಜುಗೊಳ್ಳುವುದಕ್ಕಾಗಿ ನೀಡಲಾಗಿರುವ ಮುಂಗಡಗಳ ಮೇಲೆ ಸಂಚಿತಗೊಂಡಿರುವ ಬಡ್ಡಿ	**2,46,64,707**	–
(ಬಿ) ಬ್ಯಾಂಕ್ ಠೇವಣಿಗಳ ಮೇಲೆ ಸಂಚಿತಗೊಂಡಿರುವ ಆದರೆ ಪಡೆಯಲು ಬಾಕಿಯಿರದ ಬಡ್ಡಿ	**80,24,978**	9,33,542
(ಸಿ) ಬ್ಯಾಂಕ್ ಠೇವಣಿಗಳ ಮೇಲೆ ಸ್ವೀಕರಿಸಬೇಕಿರುವ ಬಡ್ಡಿ	**58,04,573**	5,56,358
ಒಟ್ಟು	**3,84,94,258**	**14,89,900**

11. ಇತರೆ ಚಾಲ್ತಿ ಆಸ್ತಿಗಳು

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
	₹	₹
ಕೆಬಿಜೆಎನ್ಎಲ್ ಮತ್ತು ಸಿಎನ್ಎನ್ಎಲ್ ರಿಂದ ಬಾಕಿ	**2,59,17,223**	–
ಕರ್ನಾಟಕ ಸರ್ಕಾರದಿಂದ ಬರಬೇಕಿರುವ ಬಾಕಿಗಳು	**2,81,665**	1,42,665
ಕರ್ನಾಟಕ ಸರ್ಕಾರದಿಂದ ಬರಬೇಕಿರುವ ಅನುದಾನಗಳು	**25,13,94,177**	35,48,973
ಒಟ್ಟು	**27,75,93,065**	**36,91,638**

ಎ) ಕರ್ನಾಟಕ ಸರ್ಕಾರದಿಂದ ಬರಬೇಕಿರುವ ಬಾಕಿಗಳು ಕರ್ನಾಟಕ ಸರ್ಕಾರದ ತಹಸೀಲ್ದಾರರುಗಳಿಂದ ಬರಬೇಕಿರುವ ನಿರ್ವಹಣಾ ಶುಲ್ಕಗಳನ್ನು ಪ್ರತಿನಿಧಿಸುತ್ತವೆ.

ಬಿ) ಕರ್ನಾಟಕ ಸರ್ಕಾರವು ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಜನಾಂಗದ ಉಪ–ಯೋಜನೆಗೆ ಸಂಬಂಧಿತ ಅನುದಾನಗಳನ್ನು ಕಂಪನಿಗೆ ಈಕ್ವಿಟಿಯ ರೂಪದಲ್ಲಿ ಬಿಡುಗಡೆಗೊಳಿಸುತ್ತದೆ. ಪ್ರಸಕ್ತ ಸಾಲಿನಲ್ಲಿ ಕಂಪನಿಯು ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಜನಾಂಗದ ಉಪ–ಯೋಜನೆಯ ಕಡೆಗೆ ರೂ.128,07,08,267 ರಷ್ಟು ವೆಚ್ಚವನ್ನು ಭರಿಸಿದ್ದಿತು. ಆದಾಗ್ಯೂ, ಕಂಪನಿಯು ಜೂನ್ 2018ರಲ್ಲಿ ಸಲ್ಲಿಸಿದ ಪೂರ್ವಭಾವಿ ಅಂದಾಜಿನ ಆಧಾರದ ಮೇರೆಗೆ, ಕರ್ನಾಟಕ ಸರ್ಕಾರವು ರೂ.103,15,00,000ರಷ್ಟು ಮೊತ್ತವನ್ನು ಮೇಲೆ ತಿಳಿಸಲಾದಂತಹ ಈಕ್ವಿಟಿಯ ಪ್ರತಿಯಾಗಿ ಹೊಂದಾಣಿಕೆ ಮಾಡಿಕೊಳ್ಳಲು ಅನುಮೋದನೆಯನ್ನು ನೀಡಿತು. ಅದರಂತೆಯೇ, ಇನ್ನೂ ಹೆಚ್ಚಿನ ಮೊತ್ತದ ಹೊಂದಾಣಿಕೆಗಾಗಿ ಕರ್ನಾಟಕ ಸರ್ಕಾರದ ಆದೇಶವು ಬಾಕಿ ಇರುವಂತೆ, ಉಳಿಕೆ ಮೊತ್ತ ರೂ.24,92,08,267ರಷ್ಟನ್ನು ಕರ್ನಾಟಕ ಸರ್ಕಾರದಿಂದ ಸ್ವೀಕರಿಸಬೇಕಿರುವ ಅನುದಾನ ಎಂಬುದಾಗಿ ತೋರಿಸಲಾಗಿದೆ.

12. ಈಕ್ವಿಟಿ ಷೇರು ಬಂಡವಾಳ

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ		31 ಮಾರ್ಚ್ 2017ರಲ್ಲಿದ್ದಂತೆ	
	ಷೇರುಗಳ ಸಂಖ್ಯೆ	ಮೊತ್ತ	ಷೇರುಗಳ ಸಂಖ್ಯೆ	ಮೊತ್ತ
		₹		₹
ಅಧಿಕೃತ ಬಂಡವಾಳ				
ಈಕ್ವಿಟಿ ಷೇರುಗಳು ಪ್ರತಿಯೊಂದಕ್ಕೂ ರೂ.1,000/–ದಂತೆ	5,00,00,000	50,00,00,00,000	5,00,00,000	50,00,00,00,000
ನೀಡಲ್ಪಟ್ಟಿರುವ ಬಂಡವಾಳ:				
ಈಕ್ವಿಟಿ ಷೇರುಗಳು ಪ್ರತಿಯೊಂದಕ್ಕೂ ರೂ.1,000/–ದಂತೆ	**1,25,58,687**	**12,55,86,87,000**	10,00,000	1,00,00,00,000
ಖರೀದಿಸಲು ಒಪ್ಪಿಕೊಂಡಿರುವ ಹಾಗೂ ಪಾವತಿಸಲಾಗಿರುವ ಬಂಡವಾಳ				
ಷೇರುಗಳು ಪ್ರತಿಯೊಂದಕ್ಕೂ ರೂ.1,000/–ದಂತೆ ಸಂಪೂರ್ಣವಾದ ಮೊತ್ತವನ್ನು ಪಾವತಿಸಲಾಗಿರುವ ಈಕ್ವಿಟಿ ಷೇರುಗಳು	**1,25,58,687**	**12,55,86,87,000**	10,00,000	1,00,00,00,000
ಒಟ್ಟು	**1,25,58,687**	**12,55,86,87,000**	**10,00,000**	**1,00,00,00,000**

ಷೇರುಗಳ ಸಂಖ್ಯೆ ಹಾಗೂ ವರದಿಯ ಸಂಬಂಧಿಸಿರುವ ಸಾಲಿನ ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿ, ಇವುಗಳ ನಡುವೆ ಸಮನ್ವಯಗೊಳಿಸುವಿಕೆ

ವಿವರಗಳು	ಈಕ್ವಿಟಿ ಷೇರುಗಳು 31 ಮಾರ್ಚ್ 2018 ರಲ್ಲಿದ್ದಂತೆ		ಈಕ್ವಿಟಿ ಷೇರುಗಳು 31 ಮಾರ್ಚ್ 2017 ರಲ್ಲಿದ್ದಂತೆ	
	ಸಂಖ್ಯೆ	ಮೊತ್ತ ₹	ಸಂಖ್ಯೆ	ಮೊತ್ತ ₹
ವರ್ಷದ ಪ್ರಾರಂಭದಲ್ಲಿ ಷೇರುಗಳು	**10,00,000**	**1,00,00,00,000**	–	–
ಕೂಡುವುದು: ಪ್ರಸಕ್ತ ಸಾಲಿನಲ್ಲಿ ನೀಡಲಾದ ಷೇರುಗಳು	**1,15,58,687**	**11,55,86,87,000**	10,00,000	1,00,00,00,000
ವರ್ಷದ ಅಂತ್ಯದಲ್ಲಿ ಷೇರುಗಳು	**1,25,58,687**	**12,55,86,87,000**	**10,00,000**	**1,00,00,00,000**

ಕಂಪನಿಯು ಷೇರು ಒಂದಕ್ಕೆ ರೂ.1,000/– ಮುಖ ಬೆಲೆಯನ್ನು ಹೊಂದಿರುವಂತಹ ಕೇವಲ ವರ್ಗದ ಷೇರನ್ನು ಮಾತ್ರ ನೀಡಿರುವುದು. ಈಕ್ವಿಟಿ ಷೇರನ್ನು ಹೊಂದಿರುವ ಪ್ರತಿಯೋರ್ವ ಷೇರುದಾರರು ಒಂದು ಷೇರಿಗೆ ಒಂದು ಮತವನ್ನು ಚಲಾಯಿಸುವ ಅರ್ಹತೆಯನ್ನು ಹೊಂದಿರುತ್ತಾರೆ. ಕಂಪನಿಯನ್ನು ಸಮಾಪನಗೊಳಿಸುವ ಸಂದರ್ಭದಲ್ಲಿ, ಆಧ್ಯತೆಯ ಬಾಕಿಗಳು ಮತ್ತು ಕಂಪನಿಗೆ ಸಾಲಗಳನ್ನು ನೀಡಿರುವ ಇತರೆ ಸಂಸ್ಥೆಗಳ ಬಾಕಿಗಳನ್ನು ಇತ್ಯರ್ಥಗೊಳಿಸಿದನಂತರ ಈಕ್ವಿಟಿ ಷೇರುದಾರರು ಕಂಪನಿಯ ಆಸ್ತಿಗಳನ್ನು ಸ್ವೀಕರಿಸಲು ಅರ್ಹರಾಗಿರುತ್ತಾರೆ.

ಈಕ್ವಿಟಿ ಷೇರುಗಳಿಗೆ ಯಾವುದೇ ಷರತ್ತುಗಳು ಮತ್ತು ನಿಬಂಧನೆಗಳನ್ನು ಸೇರಿಸಿರುವುದಿಲ್ಲ.

ಕಂಪನಿಯ ಒಟ್ಟಾರೆ ಷೇರುಗಳ ಪೈಕಿ ಶೇಕಡಾ 5ಕ್ಕಿಂತ ಅಧಿಕ ಷೇರುಗಳನ್ನು ಹೊಂದಿರುವ ಪ್ರತಿಯೋರ್ವ ಷೇರುದಾರರ ವಿವರಗಳು

ಷೇರುದಾರರ ಹೆಸರು	ಈಕ್ವಿಟಿ ಷೇರುಗಳು 31 ಮಾರ್ಚ್ 2018ರಲ್ಲಿದ್ದಂತೆ		ಈಕ್ವಿಟಿ ಷೇರುಗಳು 31 ಮಾರ್ಚ್ 2017ರಲ್ಲಿದ್ದಂತೆ	
	ಹೊಂದಿರುವ ಷೇರುಗಳ ಸಂಖ್ಯೆ	ಶೇಕಡಾವಾರು ಹೊಂದಿರುವಿಕೆ	ಹೊಂದಿರುವ ಷೇರುಗಳ ಸಂಖ್ಯೆ	ಶೇಕಡಾವಾರು ಹೊಂದಿರುವಿಕೆ
ಕರ್ನಾಟಕ ಸರ್ಕಾರ	**1,25,58,687**	**100**	**10,00,000**	**100**

13. ಇತರೆ ಈಕ್ವಿಟಿ

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ ₹	31 ಮಾರ್ಚ್ 2017ರಲ್ಲಿದ್ದಂತೆ ₹
ಉಳಿಸಿಕೊಳ್ಳಲ್ಪಟ್ಟಿರುವ ಗಳಿಕೆಗಳು	**(76,43,26,652)**	(50,46,94,172)
ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಪ್ರಭಾವ – ಪುನರ್–ತಿಳಿಸಿರುವುದು	–	1,328
ಇತರೆ ಸಮಗ್ರ ಆದಾಯದ ಮೂಲಕ ಗ್ರಾಚ್ಯೂಟಿಜವಾಬ್ದಾರಿಗಳು	**6,976**	–
ಹಂಚಿಕೆ ಮಾಡಲು ಬಾಕಿಯಿರುವ ಷೇರು ಅರ್ಜಿಗಳು	**3,23,19,13,000**	2,27,00,00,000
ಒಟ್ಟು	**2,46,75,93,324**	**1,76,53,07,156**

13.1. ಉಳಿಸಿಕೊಳ್ಳಲ್ಪಟ್ಟಿರುವ ಗಳಿಕೆಗಳು

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ ₹	31 ಮಾರ್ಚ್ 2017 ರಲ್ಲಿದ್ದಂತೆ ₹
ಲಾಭ ಮತ್ತು ನಷ್ಟ ತ:ಖ್ತೆಯಲ್ಲಿನ ಬಾಕಿ ಇರುವುದು		
ಪ್ರಾರಂಭಿಕ ಶಿಲ್ಕು	**(50,46,94,172)**	–
ಕೂಡುವುದು: ಪ್ರಸಕ್ತ ಸಾಲಿನ ಲಾಭ / (ನಷ್ಟ)	**(25,96,32,480)**	(50,46,94,172)
ಮುಕ್ತಾಯ ಶಿಲ್ಕು	**76,43,26,652)**	**(50,46,94,172)**

13.2 ಹಂಚಿಕೆ ಮಾಡಲು ಬಾಕಿಯಿರುವಂತಹ ಷೇರು ಅರ್ಜಿ ಹಣ

ವಿವರಗಳು	31 ಮಾರ್ಚ್ 2018 ರಲ್ಲಿದ್ದಂತೆ ₹	31 ಮಾರ್ಚ್ 2017ರಲ್ಲಿದ್ದಂತೆ ₹
ಹಂಚಿಕೆ ಮಾಡಲು ಬಾಕಿಯಿರುವಂತಹ ಷೇರು ಅರ್ಜಿ ಹಣ – ಈಕ್ವಿಟಿಯ ಕಡೆಗೆ ಮುಂಗಡ		
ಪ್ರಾರಂಭಿಕ ಶಿಲ್ಕು	**2,27,00,00,000**	–
ಕೂಡುವುದು: ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದ ಮೊತ್ತ	**13,55,21,00,000**	3,27,00,00,000
	15,82,21,00,000	3,27,00,00,000
ಕಳೆಯುವುದು: ಪ್ರಸಕ್ತ ಸಾಲಿನಲ್ಲಿ ಹಂಚಿಕೆ ಮಾಡಲಾದ ಷೇರುಗಳು	**11,55,86,87,000**	1,00,00,00,000
	4,26,34,13,000	2,27,00,00,000
ಕಳೆಯುವುದು: ವಿಶೇಷ ಘಟಕ ಯೋಜನೆ/ಬುಡಕಟ್ಟು ಜನಾಂಗಗಳ ಉಪ–ಯೋಜನೆ ಕಾಮಗಾರಿಗಳಿಗಾಗಿ ವರ್ಗಾವಣೆ	**1,03,15,00,000**	–
ಮುಕ್ತಾಯ ಶಿಲ್ಕು	**3,23,19,13,000**	**2,27,00,00,000**

ಎ) ಮಂಡಳಿಯು ದಿನಾಂಕ 28–10–17, 29–12–17 ಮತ್ತು 27–01–18 ರಂದು ನಡೆದಂತಹ ತನ್ನ 4, 5 ಮತ್ತು 6ನೇ ಸಭೆಗಳಲ್ಲಿ ಕರ್ನಾಟಕ ಸರ್ಕಾರಕ್ಕೆ ಈಕ್ವಿಟಿ ಷೇರು ಒಂದಕ್ಕೆ ರೂ.1,000/–ದಂತೆ ಒಟ್ಟು 1,15,58,687 ಈಕ್ವಿಟಿ ಷೇರುಗಳನ್ನು ಹಂಚಿಕೆ ಮಾಡಿತು.

ಬಿ) ಕಂಪನಿಯು ಷೇರುಗಳಿಗಾಗಿ ಅರ್ಜಿಗಳ ಆಹ್ವಾನಕ್ಕಾಗಿ ಯಾವುದೇ ದಾಖಲೆಗಳನ್ನೂ ನೀಡಿರುವುದಿಲ್ಲ. ಈಕ್ವಿಟಿಯ ಕಡೆಗೆ ಸಂಪೂರ್ಣ ಮೊತ್ತವನ್ನು ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗಿದೆ.

ಸಿ) ಯಾವ ಅವಧಿಗೆ ಮುಂಚಿತವಾಗಿ ಷೇರುಗಳ ಹಂಚಿಕೆಯನ್ನು ಮಾಡಲಾಗುವುದು ಎಂಬುದರ ಬಗ್ಗೆ ನಿರ್ಧಾರಣೆ ಮಾಡಿರುವುದಿಲ್ಲ.

ಡಿ) ಕಂಪನಿಯು ಷೇರುಗಳನ್ನು ಕೇವಲ ಮುಖ ಬೆಲೆಯಲ್ಲಿ ನೀಡುವ ಪ್ರಸ್ತಾವನೆಯನ್ನು ಮಾಡಿರುವುದು.

ಇ) ರೂ.103,15,00,000/–ರಷ್ಟು ಮೊತ್ತವನ್ನು ಈಕ್ವಿಟಿಯ ಕಡೆಗೆ ಮುಂಗಡದ ಬದಲಾಗಿ ಅನುದಾನವನ್ನಾಗಿ ಪರಿಗಣಿಸುವ ಸಲುಗಾಗಿ ಸರ್ಕಾರಿ ಆದೇಶ ಸಂಖ್ಯೆ ಪಿಡಬ್ಲ್ಯೂಡಿ/403–ಎಫ್‌ಸಿ 1/2018 ದಿನಾಂಕ 18.8.18ರ ಮೂಲಕ ಸರ್ಕಾರವು ನೀಡಿರುವ ಆದೇಶದ ಪ್ರಕಾರ ವಿಶೇಷ ಘಟಕ ಯೋಜನೆ/ಬುಡಕಟ್ಟು ಜನಾಂಗದ ಉಪ–ಯೋಜನೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೊಂದಾಣಿಕೆ ಮಾಡಿರುವ ಮೊತ್ತವನ್ನು ಒಳಗೊಂಡಿರುತ್ತದೆ. ಅದರ ಯೋಜನೆಗಳಿಗಾಗಿ ಹಣಕಾಸನ್ನು ಒದಗಿಸುವ ಸಲುವಾಗಿ ಕರ್ನಾಟಕ ಸರ್ಕಾರದಿಂದ ಮುಂಗಡ ಹಣಕಾಸನ್ನು ಸ್ವೀಕರಿಸಲಾಗಿರುವುದು.

14. ಸಾಲಗಳು

ವಿವರಗಳು	31 ಮಾರ್ಚ್ 2018 ರಲ್ಲಿದ್ದಂತೆ	31 ಮಾರ್ಚ್ 2017 ರಲ್ಲಿದ್ದಂತೆ
	₹	₹
ಚಾಲ್ತಿಯೇತರ:		
ಭದ್ರತೆಯಿಂದ ಕೂಡಿರುವ ಸಾಲಗಳು		
ಈ ಕೆಳಗಿನ ಬ್ಯಾಂಕ್‌ಗಳಿಂದ ಅವಧಿ ಸಾಲಗಳು:		
– ಭಾರತೀಯ ಸ್ಟೇಟ್ ಬ್ಯಾಂಕ್	**2,14,28,28,571**	2,57,14,00,000
– ಎಕ್ಸಿಸ್ ಬ್ಯಾಂಕ್	**53,57,14,286**	
– ಐಸಿಐಸಿಐ ಬ್ಯಾಂಕ್ ನಿಯಮಿತ	**17,71,72,000**	
– ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್	**63,00,00,000**	
ಒಟ್ಟು	**3,48,57,14,857**	2,57,14,00,000
ಚಾಲ್ತಿ		
ಭದ್ರತೆಯಿಂದ ಕೂಡಿರುವ ಸಾಲಗಳು		
ಈ ಕೆಳಗಿನ ಬ್ಯಾಂಕ್‌ಗಳಿಂದ ಅವಧಿ ಸಾಲಗಳು:		
– ಭಾರತೀಯ ಸ್ಟೇಟ್ ಬ್ಯಾಂಕ್	**42,86,00,000**	42,86,00,000
– ಎಕ್ಸಿಸ್ ಬ್ಯಾಂಕ್	**71,42,85,714**	
– ಐಸಿಐಸಿಐ ಬ್ಯಾಂಕ್ ನಿಯಮಿತ	**7,28,28,000**	
– ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್	**27,00,00,000**	
ಒಟ್ಟು	**1,48,57,13,714**	**42,86,00,000**

ಅವಧಿ ಸಾಲಗಳು – ಭಾರತೀಯ ಸ್ಟೇಟ್ ಬ್ಯಾಂಕ್

i) ಭಾರತೀಯ ಸ್ಟೇಟ್ ಬ್ಯಾಂಕ್, ಎಸ್‌ಎಮ್‌ಇ, ಅಶೋಕ ನಗರ, ತುಮಕೂರು 2016–17 ಹಣಕಾಸು ಸಾಲಿನಲ್ಲಿ ರೂ. 300 ಕೋಟಿ ಮೊತ್ತದಷ್ಟು ಸಾಲಗಳನ್ನು ಮಂಜೂರು ಮಾಡಿದ್ದಿತು, ಅದರ ಪೈಕಿ ಕಂಪನಿಯು 31 ಮಾರ್ಚ್ 2017ರಲ್ಲಿದ್ದಂತೆ ಸಂಪೂರ್ಣ ಮೊತ್ತವನ್ನು ಬಳಸಿಕೊಂಡಿರುವುದು.

ii) ಸಾಲವು 1.00 ರಷ್ಟರ ಮಟ್ಟಿಗೆ ಕಂಪನಿಯ ಆಸ್ತಿಗಳ ಮೇಲೆ ಪರಿಪಾಸು ವೆಚ್ಚಗಳಿಂದ ಭದ್ರತೆಯನ್ನು ಹೊಂದಿದೆ ಹಾಗೂ ಕರ್ನಾಟಕ ಸರ್ಕಾರದ ಖಾತರಿಯನ್ನು ಪಡೆದಿದೆ. ಸಾಲದ ದಾಖಲೆಗಳನ್ನು 30.03.2017 ರಂದು ಕಾರ್ಯಗತಗೊಳಿಸಲಾಯಿತು ಅದರಂತೆಯೇ ಹೊಣೆಗಾರಿಕೆಯನ್ನು ಸೃಷ್ಟಿಸಲಾಗಿದೆ. ಅಡಮಾನದ ಪತ್ರವನ್ನು ಇನ್ನು ಕಾರ್ಯಗತಗೊಳಿಸಬೇಕಾಗಿದೆ.

iii) ಅವಧಿ ಸಾಲವನ್ನು ಏಳು ವರ್ಷಗಳ ಅವಧಿಗೆ ಮಾರ್ಚ್ 2017ರಲ್ಲಿ ಪಡೆದುಕೊಳ್ಳಲಾಯಿತು, ಅದನ್ನು ಪ್ರತಿಯೊಂದು – 4286 ಲಕ್ಷ ಮೊತ್ತದ 6 ವಾರ್ಷಿಕ ಕಂತುಗಳಲ್ಲಿ ಹಾಗೂ – 4284 ಲಕ್ಷ ಮೊತ್ತದ ಕಡೆಯ 1 ಕಂತಿನಲ್ಲಿ ಮರುಪಾವತಿಸಬೇಕು. ಮಂಜೂರಾತಿ ಪತ್ರದ ಪ್ರಕಾರ ಶೇಕಡಾ 8.20 ದರದಲ್ಲಿ (ವ್ಯತ್ಯಯಗೊಳ್ಳಬಲ್ಲ) ಬಡ್ಡಿಯನ್ನು ಪಾವತಿಸಬೇಕು.

iv) ಅವಧಿ ಸಾಲಗಳ ಕಂತುಗಳನ್ನು ಮರುಪಾವತಿಸುವಲ್ಲಿ ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕ ದಂದು ತಪ್ಪಿತಸ್ತಗೊಂಡಿರಲಿಲ್ಲ/ ಅವಿರತವಾಗಿ ತಪ್ಪಿತಸ್ತಗೊಂಡಿರಲಿಲ್ಲ.

v) ಬಡ್ಡಿಯ ದರವು ವ್ಯತ್ಯಯಗೊಳ್ಳಬಲ್ಲದ್ದು ಆಗಿರುವುದರಿಂದ ಹಾಗೂ ಬ್ಯಾಂಕಿನ ವರ್ಷದ ಎಂಸಿಎಲ್‌ಆರ್ ಆಧಾರದ ಮೇರೆಗೆ ಆಗಿರುವುದರಿಂದ ಹಾಗೂ ಸಾಲದ ಸಂಪೂರ್ಣ ಅವಧಿಗೆ ಕಂಪನಿಯು ಬಡ್ಡಿಯ ಮೊತ್ತವನ್ನು ನಿರೀಕ್ಷಿಸಲು ಸಾಧ್ಯವಿಲ್ಲವದ್ದರಿಂದ ಅವಧಿ ಸಾಲಗಳಿಗೆ ಇಐಆರ್ ಅನ್ನು ಲೆಕ್ಕ ಹಾಕಿರುವುದಿಲ್ಲ.

ಅವಧಿ ಸಾಲ – ಎಕ್ಸ್‌ಸ್ ಬ್ಯಾಂಕ್ ನಿಯಮಿತ

i) ಎಕ್ಸ್‌ಸ್ ಬ್ಯಾಂಕ್. ಬೇಗಂ ಪೇಟೆ, ಹೈದರಾಬಾದ್, 2017–18 ಹಣಕಾಸು ಸಾಲಿನಲ್ಲಿ ರೂ.500.00 ಕೋಟಿ ಮೊತ್ತದಷ್ಟು ಸಾಲವನ್ನು ಮಂಜೂರು ಮಾಡಿತು, ಅದರ

ಪೈಕಿ ಕಂಪನಿಯು 31 ಮಾರ್ಚ್ 2018ರಲ್ಲಿದ್ದಂತೆ ರೂ.125 ಕೋಟಿಯಷ್ಟು ಸಾಲವನ್ನು ಉಪಯೋಗಿಸಿಕೊಂಡಿತು.

ii) ಅವಧಿ ಸಾಲವು ಕಂಪನಿಯ ಆಸ್ತಿಗಳ 1.00 ಪಟ್ಟು ಪರಿಪಾಸು ಶುಲ್ಕಗಳ ಭದ್ರತೆ ಹಾಗೂ ಕರ್ನಾಟಕ ಸರ್ಕಾರದ ಖಾತರಿಯನ್ನು ಹೊಂದಿರುತ್ತದೆ. ಸಾಲದ ದಾಖಲೆ ಪತ್ರಗಳಿಗೆ 30.03.2018ರಂದು ಸಹಿ ಹಾಕಲಾಯಿತು. ಕಂಪನಿಯು ಕಾರ್ಯಗತಗೊಳಿಸಿದ ಯೋಜನೆಗಳಿಗೆ ಸಂಬಂಧಿತ ಆಸ್ತಿಗಳು ಕರ್ನಾಟಕ ಸರ್ಕಾರದ ವರ್ಗಾವಣೆಗಾಗಿ ಬಾಕಿಯಿರುತ್ತವೆಯಾದ್ದರಿಂದ ಅಡಮಾನ ಪತ್ರಗಳನ್ನು ಮಾಡಿಕೊಂಡಿರುವುದಿಲ್ಲ.

iii) ಸಾಲವನ್ನು ಮಾರ್ಚ್ 2018ರಲ್ಲಿ ಏಳು ವರ್ಷಗಳಿಗಾಗಿ ಉಪಯೋಗಿಸಿಕೊಳ್ಳಲಾಯಿತು, ಪ್ರತಿಯೊಂದು ಕಂತು ರೂ.71.4285 ಕೋಟಿಯಂತೆ 7 ವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕು. ಸಾಲ ಮಂಜೂರಾತಿ ಪತ್ರದ ಪ್ರಕಾರ, ವರ್ಷದ ಎಂಸಿಎಲ್‌ಆರ್‌ಯಂತೆ ಬಡ್ಡಿಯನ್ನು ಶೇಕಡಾ 8.45ರ (ವ್ಯತ್ಯಯಗೊಳ್ಳಬಹುದಾದ) ದರದಲ್ಲಿ ಪಾವತಿಸಬೇಕು.

iv) ಸಾಲದ ಅಸಲು ಮರುಪಾವತಿ ಅಥವಾ ಬಡ್ಡಿ ಪಾವತಿಯಲ್ಲಿ ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಕಂಪನಿಯು ತಪ್ಪಿತಸ್ತಗೊಂಡಿರಲಿಲ್ಲ ಅಥವಾ ಅವಿರತವಾಗಿ ತಪ್ಪಿತಸ್ತಗೊಂಡಿರಲಿಲ್ಲ.

v) ಬಡ್ಡಿಯ ದರವು ವ್ಯತ್ಯಯಗೊಳ್ಳುವುದಾಗಿರುವುದರಿಂದ ಹಾಗೂ ಬ್ಯಾಂಕಿನ ವರ್ಷದ ಎಂಸಿಎಲ್‌ಆರ್ ಆಧಾರವಾಗಿರುವುದರಿಂದ, ಅವಧಿ ಸಾಲಕ್ಕೆ ಸಂಬಂಧಿಸಿದಂತೆ ಇಐಆರ್ ಅನ್ನು ಇನ್ನೂ ಲೆಕ್ಕಹಾಕಿರುವುದಿಲ್ಲ ಹಾಗೂ ಕಂಪನಿಯು ಸಾಲದ ಸಂಪೂರ್ಣ ಅವಧಿಗೆ ಇದರ ಬಗ್ಗೆ ಮುಂಚಿತವಾಗಿ ಲೆಕ್ಕ ಹಾಕಲು ಸಾಧ್ಯವಾಗುವುದಿಲ್ಲ.

ಅವಧಿ ಸಾಲ – ಐಸಿಐಸಿಐ ಬ್ಯಾಂಕ್ ನಿಯಮಿತ

i) ಐಸಿಐಸಿಐ ಬ್ಯಾಂಕ್, ಕಮ್ಮಸರಿಯತ್ ಶಾಖೆ, ಬೆಂಗಳೂರು 2017–18 ಹಣಕಾಸು ಸಾಲಿನಲ್ಲಿ ರೂ.51 ಕೋಟಿ ಮೊತ್ತದಷ್ಟು ಸಾಲವನ್ನು ಮಂಜೂರು ಮಾಡಿತು, ಅದರ ಪೈಕಿ ಕಂಪನಿಯು 31 ಮಾರ್ಚ್ 2018ರಲ್ಲಿದ್ದಂತೆ ರೂ.25 ಕೋಟಿ ಮೊತ್ತದಷ್ಟು ಸಾಲವನ್ನು ಉಪಯೋಗಿಸಿಕೊಂಡಿತು.

ii) ಅವಧಿ ಸಾಲವು ಕಂಪನಿಯ ಆಸ್ತಿಗಳ 1.00 ಪಟ್ಟು ಪರಿಪಾಸು ಶುಲ್ಕಗಳ ಭದ್ರತೆ ಹಾಗೂ ಕರ್ನಾಟಕ ಸರ್ಕಾರದ ಖಾತರಿಯನ್ನು ಹೊಂದಿರುತ್ತದೆ. ಸಾಲದ ದಾಖಲೆ ಪತ್ರಗಳಿಗೆ 30.03.2018ರಂದು ಸಹಿ ಹಾಕಲಾಯಿತು. ಕಂಪನಿಯು ಕಾರ್ಯಗತಗೊಳಿಸಿದ ಯೋಜನೆಗಳಿಗೆ ಸಂಬಂಧಿತ ಆಸ್ತಿಗಳು ಕರ್ನಾಟಕ ಸರ್ಕಾರದ ವರ್ಗಾವಣೆಗಾಗಿ ಬಾಕಿಯಿರುತ್ತವೆಯಾದ್ದರಿಂದ ಅಡಮಾನ ಪತ್ರಗಳನ್ನು ಮಾಡಿಕೊಂಡಿರುವುದಿಲ್ಲ.

iii) ಸಾಲವನ್ನು ಮಾರ್ಚ್ 2018 ರಲ್ಲಿ ಏಳು ವರ್ಷಗಳಿಗಾಗಿ ಉಪಯೋಗಿಸಿಕೊಳ್ಳಲಾಯಿತು, ಪ್ರತಿಯೊಂದು ಕಂತು ರೂ.7.2828 ಕೋಟಿಯಂತೆ 6 ವಾರ್ಷಿಕ ಕಂತುಗಳಲ್ಲಿ ಮತ್ತು ಕಡೆಯ ಕಂತಿನ ರೂ. 7,3032 ಕೋಟಿಗಳಷ್ಟು ಮರುಪಾವತಿಸಬೇಕು. ಸಾಲ ಮಂಜೂರಾತಿ ಪತ್ರದ ಪ್ರಕಾರ, ವರ್ಷದ ಎಂಸಿಎಲ್‌ಆರ್‌ಯಂತೆ ಬಡ್ಡಿಯನ್ನು ಶೇಕಡಾ 8.85ರ (ವ್ಯತ್ಯಯಗೊಳ್ಳಬಹುದಾದ) ದರದಲ್ಲಿ ಪಾವತಿಸಬೇಕು.

iv) ಸಾಲದ ಅಸಲು ಮರುಪಾವತಿ ಅಥವಾ ಬಡ್ಡಿ ಪಾವತಿಯಲ್ಲಿ ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಕಂಪನಿಯು ತಪ್ಪಿತಸ್ತಗೊಂಡಿರಲಿಲ್ಲ ಅಥವಾ ಅವಿರತವಾಗಿ ತಪ್ಪಿತಸ್ತಗೊಂಡಿರಲಿಲ್ಲ.

v) ಬಡ್ಡಿಯ ದರವು ವ್ಯತ್ಯಯಗೊಳ್ಳುವುದಾಗಿರುವುದರಿಂದ ಹಾಗೂ ಬ್ಯಾಂಕಿನ ವರ್ಷದ ಎಂಸಿಎಲ್‌ಆರ್ ಆಧಾರವಾಗಿರುವುದರಿಂದ, ಅವಧಿ ಸಾಲಕ್ಕೆ ಸಂಬಂಧಿಸಿದಂತೆ ಇಐಆರ್ ಅನ್ನು ಇನ್ನೂ ಲೆಕ್ಕಹಾಕಿರುವುದಿಲ್ಲ ಹಾಗೂ ಕಂಪನಿಯು ಸಾಲದ ಸಂಪೂರ್ಣ ಅವಧಿಗೆ ಇದರ ಬಗ್ಗೆ ಮುಂಚಿತವಾಗಿ ಲೆಕ್ಕ ಹಾಕಲು ಸಾಧ್ಯವಾಗುವುದಿಲ್ಲ.

ಅವಧಿ ಸಾಲ – ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್

i) ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್, ಬಳ್ಳಾರಿ ಶಾಖೆಯು 2017–18 ಹಣಕಾಸು ಸಾಲಿನಲ್ಲಿ ರೂ.184 ಕೋಟಿ ಮೊತ್ತದಷ್ಟು ಸಾಲವನ್ನು ಮಂಜೂರು ಮಾಡಿತು, ಅದರ ಪೈಕಿ ಕಂಪನಿಯು 31 ಮಾರ್ಚ್ 2018ರಲ್ಲಿದ್ದಂತೆ ರೂ.90 ಕೋಟಿ ಮೊತ್ತದಷ್ಟು ಸಾಲವನ್ನು ಉಪಯೋಗಿಸಿಕೊಂಡಿತು.

ii) ಅವಧಿ ಸಾಲವು ಕಂಪನಿಯ ಆಸ್ತಿಗಳ 1.00 ಪಟ್ಟು ಪರಿಪಾಸು ಶುಲ್ಕಗಳ ಭದ್ರತೆ ಹಾಗೂ ಕರ್ನಾಟಕ ಸರ್ಕಾರದ ಖಾತರಿಯನ್ನು ಹೊಂದಿರುತ್ತದೆ. ಸಾಲದ ದಾಖಲೆ ಪತ್ರಗಳಿಗೆ 30.03.2018ರಂದು ಸಹಿ ಹಾಕಲಾಯಿತು. ಕಂಪನಿಯು ಕಾರ್ಯಗತಗೊಳಿಸಿದ ಯೋಜನೆಗಳಿಗೆ ಸಂಬಂಧಿತ ಆಸ್ತಿಗಳು ಕರ್ನಾಟಕ ಸರ್ಕಾರದ ವರ್ಗಾವಣೆಗಾಗಿ ಬಾಕಿಯಿರುತ್ತವೆಯಾದ್ದರಿಂದ ಅಡಮಾನ ಪತ್ರಗಳನ್ನು ಮಾಡಿಕೊಂಡಿರುವುದಿಲ್ಲ.

iii) ಸಾಲವನ್ನು ಮಾರ್ಚ್ 2018 ರಲ್ಲಿ ಏಳು ವರ್ಷಗಳಿಗಾಗಿ ಉಪಯೋಗಿಸಿಕೊಳ್ಳಲಾಯಿತು, ಪ್ರತಿಯೊಂದು ಕಂತು ರೂ.27

ಕೋಟಿಯಂತೆ 6 ವಾರ್ಷಿಕ ಕಂತುಗಳಲ್ಲಿ ಹಾಗೂ ಕಡೆಯ ಕಂತು 22 ಕೋಟಿಯಂತೆ ಮರುಪಾವತಿಸಬೇಕು. ಸಾಲ ಮಂಜೂರಾತಿ ಪತ್ರದ ಪ್ರಕಾರ, ವರ್ಷದ ಎಂಸಿಎಲ್‌ಆರ್‌ಯಂತೆ ಬಡ್ಡಿಯನ್ನು ಶೇಕಡಾ 8.09ರ ದರದಲ್ಲಿ ಪಾವತಿಸಬೇಕು.

iv) ಸಾಲದ ಅಸಲು ಮರುಪಾವತಿ ಅಥವಾ ಬಡ್ಡಿ ಪಾವತಿಯಲ್ಲಿ ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಕಂಪನಿಯು ತಪ್ಪಿತಸ್ತಗೊಂಡಿರಲಿಲ್ಲ ಅಥವಾ ಅವಿರತವಾಗಿ ತಪ್ಪಿತಸ್ತಗೊಂಡಿರಲಿಲ್ಲ.

v) ಬಡ್ಡಿಯ ದರವು ವ್ಯತ್ಯಯಗೊಳ್ಳುವುದಾಗಿರುವುದರಿಂದ ಅವಧಿ ಸಾಲಕ್ಕೆ ಸಂಬಂಧಿಸಿದಂತೆ ಇಐಆರ್ ಅನ್ನು ಇನ್ನೂ ಲೆಕ್ಕಹಾಕಿರುವುದಿಲ್ಲ ಹಾಗೂ ಕಂಪನಿಯು ಸಾಲದ ಸಂಪೂರ್ಣ ಅವಧಿಗೆ ಇದರ ಬಗ್ಗೆ ಮುಂಚಿತವಾಗಿ ಲೆಕ್ಕ ಹಾಕಲು ಸಾಧ್ಯವಾಗುವುದಿಲ್ಲ.

15. ಇತರೆ ಹಣಕಾಸು ಹೊಣೆಗಳು

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
	₹	₹
ಚಾಲ್ತಿಯೇತರ		
ಗುತ್ತಿಗೆ ಪಾವತಿಗಳಿಗಾಗಿ – ಉಳಿಸಿಕೊಳ್ಳಲಾದ ಹಣಕಾಸು	**4,95,66,04,673**	3,58,23,75,112
ಒಟ್ಟು	**4,95,66,04,673**	3,58,23,75,112
ಚಾಲ್ತಿ:		
(ಎ) ಭದ್ರತಾ ಠೇವಣಿಗಳು	**1,00,67,34,691**	15,23,24,264
(ಬಿ) ಗುತ್ತಿಗೆದಾರರುಗಳಿಗೆ ಬಾಕಿಗಳು – ಕಾಮಗಾರಿಗಳಿಗೆ	**1,28,06,79,602**	16,75,65,662
(ಸಿ) ಅವಧಿ ಸಾಲದ ಮೇಲೆ ಸಂಚಿತಗೊಂಡಿರುವ ಹಾಗೂ ಪಾವತಿಸಲು ಬಾಕಿಯಿರುವ ಬಡ್ಡಿ	**7,35,056**	6,73,973
ಡಿ) ಆಸ್ತಿ/ಹೊಣೆ ಬಾಕಿಯಿರುವ ವರ್ಗಾವಣೆಯ ಪ್ರತಿಯಾಗಿ ಹೊಂದಾಣಿಕೆ	**44,41,39,789**	15,90,25,899
(ಇ) **ಇತರೆ ಪಾವತಿಸಬೇಕಾಗಿರುವವುಗಳು**		
i) ಶಾಸನಬದ್ಧ ಹೊಣೆಗಳು	**15,25,90,103**	26,87,54,478
ii) ಇತರರಿಗೆ ಪಾವತಿಸಬೇಕಾಗಿರುವವುಗಳು	**1,17,349**	2,38,301
iii) ಕರ್ನಾಟಕ ನೀರಾವರಿ ನಿಗಮಕ್ಕೆ ಪಾವತಿಸಬೇಕಾಗಿರುವುದು	**2,43,20,556**	53,06,09,356
iv) ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗಿರುವ ಮುಂಗಡ ಅನುದಾನಗಳು	**27,23,37,447**	–
v) ಕರ್ನಾಟಕ ಸರ್ಕಾರಕ್ಕೆ ಪಾವತಿಸಬೇಕಿರುವ ಖಾತರಿ ಕಮಿಷನ್ನು	**45,00,000**	25,00,000
vi) ಅವಧಿ ಮುಗಿದಿರುವ ಚೆಕ್ಕುಗಳು	**49,958**	7,60,720
ಎಫ್) ಉದ್ಯೋಗಿಗಳಿಗೆ ಸಂಬಂಧಿತ ಹೊಣೆಗಾರಿಕೆಗಳು		
(i) ಪಾವತಿಸಬೇಕಿರುವ ವೇತನ	**60,60,389**	31,94,137
(ii) ಪಾವತಿಸಬೇಕಿರುವ ವೈದ್ಯಕೀಯ ವೆಚ್ಚಗಳ ಮರುಪಾವತಿ	**4,18,309**	12,080
(iii) ಪಾವತಿಸಬೇಕಿರುವ ಇಪಿಎಫ್ – ಉದ್ಯೋಗದಾತರ ವಂತಿಕೆ	**31,435**	20,239
ಒಟ್ಟು	**3,19,27,14,684**	**1,28,56,79,109**

ಎ) ಗುತ್ತಿಗೆದಾರರುಗಳಿಗೆ ಸಂಬಂಧಿಸಿದಂತೆ ಉಳಿಸಿಕೊಳ್ಳಲಾಗಿರುವ ಹಣಕಾಸು ಗುತ್ತಿಗೆ ಷರತ್ತುಗಳ ಆಧಾರದ ಮೇರೆಗೆ ಆಡಳಿತ ಮಂಡಳಿಯು ನಿರ್ಧಾರಣೆ ಮಾಡಿದಂತೆ ಹಾಗೂ ಲೆಕ್ಕ ಹಾಕಲಾದಂತೆ ಆಗಿರುತ್ತದೆ ಹಾಗೂ ಚಾಲ್ತಿಯೇತರ ಜವಾಬ್ದಾರಿ ಎಂಬುದಾಗಿ ವರ್ಗೀಕರಿಸಲಾಗಿರುತ್ತದೆ. ಆದಾಗ್ಯೂ, ನ್ಯಾಯಸಮ್ಮತ ಮೌಲ್ಯಮಾಪನವನ್ನು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 109

"ಹಣಕಾಸು ಸಾಧನಗಳು/ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 113 "ನ್ಯಾಯಸಮ್ಮತ ಮೌಲ್ಯ ನಿರ್ಧಾರಣೆ" ಅನುಸಾರ ಮಾಡಿರುವುದಿಲ್ಲ.

ಬಿ) ಮುನ್ನೆಚ್ಚರಿಕೆ ಹಣ ಠೇವಣಿ (ಇಎಂಡಿ) ಮತ್ತು ಹೆಚ್ಚುವರಿ ಭದ್ರತಾ ಠೇವಣಿ (ಎಫ್‌ಎಸ್‌ಡಿ) ಗಳನ್ನು ಒಳಗೊಂಡಿರುವಂತಹ ಭದ್ರತಾ ಠೇವಣಿಗಳನ್ನು ಗುತ್ತಿಗೆ ಷರತ್ತುಗಳ ಆಧಾರದ ಮೇರೆಗೆ ಗುತ್ತಿಗೆದಾರರುಗಳಿಂದ ವಸೂಲಾತಿ ಮಾಡಲ್ಪಟ್ಟವುಗಳು. ಹೆಚ್ಚುವರಿ ಭದ್ರತಾ ಠೇವಣಿಗಳನ್ನು ಗುತ್ತಿಗೆದಾರರುಗಳು ಷರತ್ತುರಹಿತ ಮತ್ತು ಮಾರ್ಪಡಿಸಲಾಗದ ಬ್ಯಾಂಕ್ ಖಾತರಿಗಳನ್ನು ಒದಗಿಸುವ ಷರತ್ತಿನೊಂದಿಗೆ ಅವರಿಗೆ ಮರುಪಾವತಿಸಬಹುದು. ಮುನ್ನೆಚ್ಚರಿಕೆ ಹಣ ಠೇವಣಿ (ಇಎಂಡಿ) ಮತ್ತು ಹೆಚ್ಚುವರಿ ಭದ್ರತಾ ಠೇವಣಿ (ಎಫ್‌ಎಸ್‌ಡಿ) ಗಳನ್ನು ಅವುಗಳ ಮೇಲಿನ ಹಕ್ಕನ್ನು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತವು ಹೊಂದಿರುವುದರೊಂದಿಗೆ ಬಡ್ಡಿಯನ್ನು ಹೊಂದಿರುವ ಭದ್ರತೆಗಳನ್ನಾಗಿಯೂ ಪರಿವರ್ತಿಸಬಹುದು. ಆದ್ದರಿಂದ, ಅವುಗಳನ್ನು ಚಾಲ್ತಿ ಹಣಕಾಸು ಹೊಣೆಗಾರಿಕೆಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ. ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಕಂಪನಿಗೆ ಇನ್ನೂ ವರ್ಗಾಯಿಸುವುದು ಬಾಕಿಯಿರುವುದರಿಂದ ಪ್ರಾರಂಭಿಕ ಶಿಲ್ಕುಗಳನ್ನು ಹೊರತುಪಡಿಸಿದಂತೆ, 2017–18ನೇ ಹಣಕಾಸು ಸಾಲಿಗೆ ಮುನ್ನೆಚ್ಚರಿಕೆ ಹಣ ಠೇವಣಿ (ಇಎಂಡಿ) ಮತ್ತು ಹೆಚ್ಚುವರಿ ಭದ್ರತಾ ಠೇವಣಿ (ಎಫ್‌ಎಸ್‌ಡಿ) ಗಳನ್ನು ಲೆಕ್ಕಪತ್ರ ಪುಸ್ತಕಗಳೊಂದಿಗೆ ಸಮನ್ವಯಗೊಳಿಸುವಿಕೆಯ ಕಾರ್ಯವು ಪೂರ್ಣಗೊಂಡಿರುತ್ತದೆ.

ಸಿ) ಭದ್ರತಾ ಠೇವಣಿಗಳು ದಿನಾಂಕ 31.03.2018ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಇ–ಸಾರ್ವಜನಿಕ ಸಂಗ್ರಹಣಾ ಇಲಾಖೆಯಲ್ಲಿ ಇರುವಂತಹ ರೂ.31,50,03,281/–ರಷ್ಟು ಮೊತ್ತದ ಮುನ್ನೆಚ್ಚರಿಕೆ ಭದ್ರತಾ ಠೇವಣಿ ಮೊತ್ತವನ್ನೂ ಒಳಗೊಂಡಿರುತ್ತವೆ.

ಡಿ) ಗುತ್ತಿಗೆದಾರರುಗಳು ಕಾರ್ಯಗತಗೊಳಿಸಿರುವಂತಹ ಹೆಚ್ಚುವರಿ ಪರಿಮಾಣಗಳ ಕಡೆಗೆ (ಸಕ್ಷಮ ಅಧಿಕಾರಿಗಳು ಅನುಮೋದಿಸಿದ್ದ ಪರಿಮಾಣಗಳನ್ನು ಮೀರಿದಂತೆ) ದರಗಳು ಹಾಗೂ ಅಲ್ಲದೆಯೇ ಪಾವತಿಗಳನ್ನು ಮಾಡುವ ಅಗತ್ಯತೆಯಿರುವ ಹೆಚ್ಚುವರಿ ಪರಿಮಾಣಗಳಿಗೆ ಸಂಬಂಧಿಸಿದಂತೆ ಸಕ್ಷಮ ಅಧಿಕಾರಿಗಳ ಅನುಮೋದನೆಯ ಅಗತ್ಯತೆಯಿರುವುದರಿಂದ ಯಾವುದೇ ಅನುವನ್ನೂ ಮಾಡಿರುವುದಿಲ್ಲ. ಅವುಗಳನ್ನು ಅಂತಹ ಮೊತ್ತಗಳನ್ನು ವಾಸ್ತವಿಕವಾಗಿ ಪಾವತಿಸಲಾಗುವ ಸಾಲಿನಲ್ಲಿ ಪರಿಗಣಿಸಲಾಗುವುದು. ಆದಾಗ್ಯೂ, ಆಡಳಿತ ಮಂಡಳಿಯ ದೃಷ್ಟಿಯಲ್ಲಿ ಅಂತಹ ಮೊತ್ತಕ್ಕೆ ಅನುವು ಮಾಡದಿರುವುದು ವಿಷಾಯಕ ಅಂಶವಾಗಿ ನಿರೀಕ್ಷಿಸಬಾರದು.

ಇ) ವರ್ಗಾವಣೆಯು ಬಾಕಿಯಿರುಂತೆ ಆಸ್ತಿ / ಹೊಣೆಗಾರಿಕೆಗಳ ಪ್ರತಿಯಾಗಿ ಹೊಂದಾಣಿಕೆ: ಇದು ಕರ್ನಾಟಕ ನೀರಾವರಿ ನಿಗಮ ನಿಯಮಿತವು ಸಂಗ್ರಹಿಸಿದ್ದಂತಹ ಮೊತ್ತದ ಪ್ರತಿಯಾಗಿ ಕಂಪನಿಯು ಮರುಪಾವತಿಸಿದ ನಿವ್ವಳ ಮುನ್ನೆಚ್ಚರಿಕೆ ಭದ್ರತಾ ಠೇವಣಿಯನ್ನು, ಯೋಜನೆಗಳನ್ನು ಕಂಪನಿಗೆ ವರ್ಗಾಯಿಸುವ ಮುಂಚಿನ ಅವಧಿಯಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತವು ಪಾವತಿಸಿದ್ದ ಹಾಗೂ ಸರ್ಕಾರಿ ಆದೇಶದ ಅನುಸಾರ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವರ್ಗಾವಣೆ ಮಾಡಿದನಂತರ ಹೊಂದಾಣಿಕೆ ಮಾಡಿಕೊಳ್ಳಬೇಕಿರುವ ಸಜ್ಜುಗೊಳ್ಳುವಿಕೆಗಾಗಿನ ಮುಂಗಡಗಳು/ ವಸೂಲಾತಿಗಳನ್ನು / ಭೂ ಸ್ವಾಧೀನಗಳಿಗಾಗಿ ಮುಂಗಡಗಳನ್ನು ಪ್ರತಿನಿಧಿಸುತ್ತದೆ.

ಎಫ್) ಕಂಪನಿಯು, ಗುತ್ತಿಗೆಗಳನ್ನು ನೀಡುವ ವೇಳೆಯಲ್ಲಿ ಗುತ್ತಿಗೆದಾರರುಗಳು ಭವಿಷ್ಯ ನಿಧಿ ಮತ್ತು ಉದ್ಯೋಗಿಗಳ ರಾಜ್ಯ ವಿಮಾ ಪ್ರಾಧಿಕಾರಗಳಲ್ಲಿ ನೋಂದಣಿ ಮಾಡಿಸಿಕೊಂಡಿರುವರು ಎಂಬುದನ್ನು ಖಚಿತಪಡಿಸಿಕೊಳ್ಳುತ್ತದೆ. ಭವಿಷ್ಯ ನಿಧಿ ಮತ್ತು ಉದ್ಯೋಗಿಗಳ ರಾಜ್ಯ ವಿಮಾ ಬಾಕಿಗಳನ್ನು ಪಾವತಿಸುವುದು ಗುತ್ತಿಗೆದಾರರುಗಳ ಜವಾಬ್ದಾರಿಯಾಗಿರುತ್ತದೆ ಹಾಗೂ ಗುತ್ತಿಗೆದಾರರುಗಳಿಗೆ ಪಾವತಿಗಳನ್ನು ಮಾಡುವ ವೇಳೆಯಲ್ಲಿ ಕಂಪನಿಯು ಈ ಬಗ್ಗೆ ಖಚಿತಪಡಿಸಿಕೊಳ್ಳುತ್ತದೆ.

ಜಿ) ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ (ಎಸ್‌ಪಿಎಲ್) 28 ಪಿಇಎನ್ 2009 ಬೆಂಗಳೂರು ದಿನಾಂಕ 19 ಜನವರಿ 2010ರ ಅನುಸಾರ ಸರ್ಕಾರಿ ಸೇವೆಗಳಿಗೆ ಹೊಸದಾಗಿ ಸೇರುವವರಿಗೆ ಹೊಸ ಪಿಂಚಣಿ ಯೋಜನೆಯನ್ನು ದಿನಾಂಕ 01.04.2006 ರಿಂದ ಜಾರಿಗೆ ಬರುವಂತೆ ಕಾರ್ಯಗತಗೊಳಿಸಲಾಯಿತು. ಕಂಪನಿಯು ಈ ನಿಟ್ಟಿನಲ್ಲಿ ಉದ್ಯೋಗದಾತರ ಕಾಣಿಕೆಯನ್ನು ಲೆಕ್ಕಪುಸ್ತಕಗಳಲ್ಲಿ ಅನುವು ಮಾಡಿರುವುದು. ಕಂಪನಿಯು ಇತರೆ ನಿಯಮಾನುಸರಣೆಗಳನ್ನು ಪೂರ್ಣಗೊಳಿಸುವುದು ಬಾಕಿಯಿರುವಂತೆ, ಉದ್ಯೋಗದಾತರ ಕಾಣಿಕೆಯನ್ನು ಅವರಿಂದ ವಸೂಲಾತಿ ಮಾಡಬೇಕಾಗಿರುವುದು ಎಂಬುದಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಎಚ್) ಭದ್ರತಾ ಠೇವಣಿಗಳು, ಗುತ್ತಿಗೆ ಪಾವತಿಗಳ ಅಡಿಯಲ್ಲಿನ ಶಿಲ್ಕುಗಳು ಖಚಿತಪಡಿಸಿಕೊಳ್ಳುವಿಕೆಯ ಷರತ್ತಿಗೆ ಒಳಪಟ್ಟಿರುತ್ತವೆ.

ಐ) ಕಂಪನಿಯು ಬೆಳೆದಿರುವಂತಹ ಗಿಡಮರಗಳನ್ನು ತೆಗೆದುಹಾಕಿರುವುದು, ಬೆಳೆಯಲಾಗಿದ್ದ ಬೆಳೆಗಳು ಹಾಳಾದುದು, ಇತ್ಯಾದಿಗಳ ಕಾರಣ ಮುಖ್ಯ ಇಂಜಿನಿಯರ್‌ರವರ ವರದಿ ಅಥವಾ ವಿಭಾಗೀಯ ಇಂಜಿನಿಯರ್‌ರವರ ವರದಿ ಹಾಗೂ ಸಂಬಂಧಿತ ಕರ್ನಾಟಕ ಸರ್ಕಾರದ ಇಲಾಖೆಗಳ ಜಂಟಿ ಪರೀಕ್ಷಣೆಯ ಆಧಾರದ ಮೇರೆಗೆ ರೈತರುಗಳಿಗೆ ಮತ್ತು ಭೂ ಮಾಲೀಕರುಗಳಿಗೆ, ಅವರುಗಳು ಭರಿಸುವ ನಷ್ಟದ ಕಾರಣ ಬೆಳೆ ಪರಿಹಾರವನ್ನು ಪಾವತಿಸುತ್ತದೆ. ಬೆಳೆ ಪರಿಹಾರವನ್ನು ಪಾವತಿಸುವ ವೇಳೆಯಲ್ಲಿ ಪರಿಗಣಿಸಲಾಗುವುದು ಹಾಗೂ ಅಂತಹ ಬೆಳೆ ಪರಿಹಾರಕ್ಕಾಗಿ ಯಾವುದೇ ಅನುವನ್ನು ಪರಿಗಣಿಸಿರುವುದಿಲ್ಲ.

ಜೆ) ಕಂಪನಿಯ ವಿಭಾಗಗಳು ಕರ್ನಾಟಕ ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮದ ಅಗತ್ಯತೆಯಂತೆ ಮಾಸಿಕ ಮತ್ತು ವಾರ್ಷಿಕ ವೃತ್ತಿಗಳ ಮೇಲಿನ ತೆರಿಗೆ ಸಲ್ಲಿಕೆಗಳನ್ನು ಇನ್ನೂ ಸಲ್ಲಿಸಬೇಕಿರುತ್ತದೆ.

16 ಅನುವುಗಳು:

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
	₹	₹
ಚಾಲ್ತಿಯೇತರ		
ಈ ಕೆಳಗಿನವುಗಳಿಗಾಗಿ ಅನುವು:		
–ರಜೆ ವೇತನ (ವಿಮಾಗಣಕರ ಮೌಲ್ಯಮಾಪನದ ಪ್ರಕಾರ)	**94,201**	13,695
–ಗ್ರಾಚ್ಯೂಟಿ(ವಿಮಾಗಣಕರ ಮೌಲ್ಯಮಾಪನದ ಪ್ರಕಾರ)	**79,003**	–
ಒಟ್ಟು	**1,73,204**	13,695
ಚಾಲ್ತಿ:		
ಈ ಕೆಳಗಿನವುಗಳಿಗಾಗಿ ಅನುವು:		
–ರಜೆ ನಗದೀಕರಣ	**89,46,441**	67,63,372
–ರಜೆ ವೇತನ (ವಿಮಾಗಣಕರ ಮೌಲ್ಯಮಾಪನದ ಪ್ರಕಾರ)	**10,056**	–
ಗ್ರಾಚ್ಯೂಟಿ(ವಿಮಾಗಣಕರ ಮೌಲ್ಯಮಾಪನದ ಪ್ರಕಾರ)	**322**	–
ಉದ್ಯೋಗದಾತರ ಕಾಣಿಕೆ– ಹೊಸ ಪಿಂಚಣಿ ಯೋಜನೆ ಎನ್‌ಪಿಎಸ್	**87,49,387**	15,41,222
ಒಟ್ಟು	**1,77,06,206**	**83,04,594**

ಎ) 15 ದಿನಗಳ ರಜೆ ನಗದೀಕರಣಕ್ಕೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು ಹಾಗೂ ಸರ್ಕಾರಿ ಆದೇಶ ಸಂಖ್ಯೆ ಹಇ 10/ಸೇನಿಸೆ 2016, ಬೆಂಗಳೂರು ದಿನಾಂಕ 12.12.2016ರ ಅನುಸಾರ ಅನುವನ್ನು ಮಾಡಲಾಗಿದೆ.

ಬಿ) ನಿಯೋಜನೆಯ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಸರ್ಕಾರದ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಕಂಪನಿಯು, ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 1957ರ ಅನುವುಗಳಲ್ಲಿನ ಕಾರ್ಯವಿಧಾನಗಳನ್ನು ಅನುಸರಿಸುತ್ತಿರುವುದು ಹಾಗೂ ಹೊಸದಾಗಿ ವಿವರಿಸಲ್ಪಟ್ಟಿರುವಂತಹ ವಂತಿಕೆ ಪಿಂಚಣಿ ನಿಧಿಯನ್ನು ದಿನಾಂಕ 01.04.2006ರಂದು ಅಥವಾ ತದನಂತರದಲ್ಲಿ ಸೇವೆಗೆ ಹೊಸದಾಗಿ ಸೇರಿರುವಂತಹ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಇನ್ನೂ ಅಳವಡಿಸಿಕೊಂಡಿರುವುದಿಲ್ಲ. ಕರ್ನಾಟಕ ಸರ್ಕಾರವು ಕರ್ನಾಟಕ ಸರ್ಕಾರದ ಸೇವೆಗಳಿಗಾಗಿ ಹೊಸದಾಗಿ ನೇಮಕಗೊಳ್ಳುವವರಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ (ಎಸ್‌ಪಿಎಲ್) 04 ಪಿ.ಇ.ಟಿ 2005 ಬೆಂಗಳೂರು, ದಿನಾಂಕ 31–03–2006ರ ಆಧಾರದ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ (ಎಸ್‌ಪಿಎಲ್) 28 ಪಿ.ಇ.ಎನ್ 2009 ದಿನಾಂಕ 19.01.2010ರ ಮೂಲಕ, ಸಾಮಾನ್ಯ ಭವಿಷ್ಯ ನಿಧಿಗೆ ಆಯ್ಕೆ ಮಾಡಿಕೊಳ್ಳುವ ಪದ್ಧತಿಯನ್ನು ಹಿಂಪಡೆದುಕೊಂಡಿತು ಹಾಗೂ ದಿನಾಂಕ 01.04.2016ರಂದು ಅಥವಾ ತದನಂತರದಲ್ಲಿ ರಾಜ್ಯ ಸರ್ಕಾರಕ್ಕೆ ಹೊಸದಾಗಿ ಉದ್ಯೋಗಕ್ಕೆ ನೇಮಕಗೊಳ್ಳುವವರಿಗೆ ವಿವರಿಸಲ್ಪಟ್ಟಂತಹ ವಂತಿಕೆ ಪಿಂಚಣಿ ಯೋಜನೆಯನ್ನು ಕಡ್ಡಾಯಗೊಳಿಸಿತು. ಕಂಪನಿಯು ಹೊಸದಾಗಿ ನೇಮಕಗೊಂಡವರಿಗೆ/ ಕರ್ನಾಟಕ ಸರ್ಕಾರದಿಂದ ನಿಯೋಜನೆಯ ಆಧಾರದ ಮೇರೆಗೆ ಕೆಲಸ ಮಾಡುತ್ತಿರುವವರಿಗೆ ಸಂಬಂಧಿಸಿದಂತೆ ಪಿಂಚಣಿ ಸಂಖ್ಯೆಯನ್ನು ಹಂಚಿಕೆ ಮಾಡುವಂತೆ ಅರ್ಜಿಯನ್ನು ಸಲ್ಲಿಸಿರುವುದು.

17. ವ್ಯಾಪಾರ ಸಂದಾಯಗಳು

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
	₹	₹
ವ್ಯಾಪಾರ ಸಂದಾಯಗಳು		
ವೆಚ್ಚಗಳಿಗಾಗಿ	**68,14,461**	12,06,711
ಸರಬರಾಜುಗಳು/ಸೇವೆಗಳಿಗಾಗಿ	**8,86,27,782**	52,00,909
ಒಟ್ಟು	**9,54,42,243**	**64,07,620**

ಎ) ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006ರ ಅಡಿಯಲ್ಲಿ ತಮ್ಮ ಸ್ಥಾನಮಾನದ ಬಗ್ಗೆ ವರ್ತಕರುಗಳಿಂದ ಕಂಪನಿಯು (i) ಯಾವುದೇ ಮಾಹಿತಿಯನ್ನು/ಖಚಿತಪಡಿಸಿಕೊಳ್ಳುವಿಕೆ ಪತ್ರಗಳನ್ನು ಸ್ವೀಕರಿಸಿರುವುದಿಲ್ಲ ಮತ್ತು ಆದ್ದರಿಂದ, ಲೆಕ್ಕಪತ್ರಗಳು ಸಂಬಂಧಿಸಿರುವ ಸಾಲಿನ ಅಂತ್ಯದಲ್ಲಿದ್ದಂತೆ ಸರಬರಾಜುದಾರರುಗಳಿಗೆ ಪಾವತಿಸಬೇಕಿರುವ ಮೊತ್ತ, (ii) ಪ್ರಸಕ್ತ ಸಾಲಿನಲ್ಲಿ ಪಾವತಿಸಲಾದ ಬಡ್ಡಿ, (iii) ಲೆಕ್ಕಪತ್ರಗಳು ಸಂಬಂಧಿಸಿರುವ ಸಾಲಿನ ಅಂತ್ಯದಲ್ಲಿದ್ದಂತೆ ಬಾಕಿಯಿರುವ ಮತ್ತು ಪಾವತಿಸಬೇಕಿರುವ ಬಡ್ಡಿ ಹಾಗೂ (iv) ಲೆಕ್ಕಪತ್ರಗಳು ಸಂಬಂಧಿಸಿರುವ ಸಾಲಿನ ಅಂತ್ಯದಲ್ಲಿದ್ದಂತೆ ಸಂಚಿತಗೊಂಡಿರುವ ಹಾಗೂ ಪಾವತಿಸದಿರುವ ಬಡ್ಡಿ, ಇವುಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ತಿಳಿಯಪಡಿಸಿರುವುದಿಲ್ಲ.

ಬಿ) ವ್ಯಾಪಾರ ಸಂದಾಯಗಳಅಡಿಯಲ್ಲಿನ ಶಿಲ್ಕುಗಳು ಖಚಿತಪಡಿಸಿಕೊಳ್ಳಬೇಕಾದ ಷರತ್ತಿಗೆ ಒಳಪಟ್ಟಿರುತ್ತದೆ.

18. ಕಾರ್ಯಾಚರಣೆಗಳಿಂದ ವರಮಾನ

ವಿವರಗಳು	31 ಮಾರ್ಚ್ 2018ರ ಅಂತ್ಯಗೊಂಡ ಅವಧಿಗೆ	20-10-2016ರಿಂದ 31-03-2017ರ ಅವಧಿಗೆ
	₹	₹
ನೀರಿನ ದರಗಳು		
ರೈತರುಗಳು ಮತ್ತು ನೀರು ಬಳಕೆದಾರರ ಸಹಕಾರಿ ಸಂಘಗಳ ಒಕ್ಕೂಟ	73,000	–
ಒಟ್ಟು	**73,000**	–

ಪ್ರಸಕ್ತ ಸಾಲಿನಲ್ಲಿ ಕಂಪನಿಯು ಗಾಯತ್ರಿ ಜಲಾಶಯ ಮತ್ತು ವಾಣಿ ವಿಲಾಸ ಸಾಗರ ಯೋಜನೆಗಳಿಂದ ನೀರಾವರಿಗಾಗಿ ನೀರನ್ನು ಹೊರಬಿಟ್ಟಿರುವುದಿಲ್ಲ. ಮಳೆಯ ಅಭಾವದ ಕಾರಣ, ಜಲಾಶಯಗಳಿಗೆ ಒಳಹರಿವು ಕಡಿಮೆ ಪ್ರಮಾಣದಲ್ಲಿದ್ದಿತು ಮತ್ತು ಆದ್ದರಿಂದ ನೀರಾವರಿ ಅಗತ್ಯತೆಗಳನ್ನು ಪೂರೈಸಲಾಗಲಿಲ್ಲ ಹಾಗೂ ನೀರಾವರಿಗೆ ಸಂಬಂಧಿಸಿದಂತೆ ನೀರಿನ ದರಗಳ ಪಾವತಿಗಾಗಿ ಯಾವುದೇ ತಗಾದೆಗಳನ್ನೂ ಸೃಷ್ಟಿಸಲಿಲ್ಲ. ಮೇಲೆ ತಿಳಿಸಲಾಗಿರುವ ಮೊತ್ತವು ಗಾಯತ್ರಿ ಜಲಾಶಯದಿಂದ ರೈತರುಗಳಿಗೆ ತೋಟಗಾರಿಕೆ ಉದ್ದೇಶಗಳಿಗಾಗಿ ಬಿಡಲಾಗಿದ್ದ ನೀರನ್ನು ಪ್ರತಿನಿಧಿಸುತ್ತದೆ.

19 ಇತರೆ ವರಮಾನ

ವಿವರಗಳು	31 ಮಾರ್ಚ್ 2018ರ ಅಂತ್ಯಗೊಂಡ ಅವಧಿಗೆ	20-10-2016ರಿಂದ 31-03-2017ರ ಅವಧಿಗೆ
	₹	₹
i. ಇತರೆ ವರಮಾನಗಳು		
ಬ್ಯಾಂಕಿನಲ್ಲಿರುವ ಠೇವಣಿಗಳ ಮೇಲಿನ ಬಡ್ಡಿ (ಮೂಲದಲ್ಲಿಯೇ ಕಡಿದುಕೊಳ್ಳಲಾದ ತೆರಿಗೆ ₹ 1,13,98,336) (ಹಿಂದಿನ ಸಾಲಿನಲ್ಲಿ ₹ 1,94,639)	**11,93,01,197**	29,46,586
ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಗಾಗಿ ಸಜ್ಜುಗೊಳ್ಳಲು ಗುತ್ತಿಗೆದಾರರುಗಳಿಗೆ ನೀಡಲಾದ ಮುಂಗಡಗಳ ಮೇಲಿನ ಬಡ್ಡಿ (ಮೂಲದಲ್ಲಿಯೇ ಕಡಿದುಕೊಳ್ಳಲಾದ ತೆರಿಗೆ ₹ 1,24,251) (ಹಿಂದಿನ ಸಾಲಿನಲ್ಲಿ ₹ 14,52,236)	**6,49,82,908**	4,82,35,001
ಬಡ್ಡಿ ವರಮಾನ – ಉಳಿತಾಯ ಖಾತೆ ಮತ್ತು ಇತರವುಗಳು	**4,37,23,127**	8,93,380
ಸ್ವೀಕರಿಸಲಾದ ಬಾಡಿಗೆ	**28,57,849**	5,16,499
ಕಲ್ಲುಮಣ್ಣು ಇತ್ಯಾದಿ (ರಬ್ಬಲ್)ಗಳ ಮಾರಾಟ	**1,04,45,785**	75,47,436
ವಸೂಲಾತಿ ಮಾಡಲಾದ ದಂಡಗಳು	**2,96,350**	83,277
ಮುಟ್ಟುಗೋಲು ಹಾಕಿಕೊಳ್ಳಲಾದ ಮುನ್ನೆಚ್ಚರಿಕೆ ಭದ್ರತಾ ಠೇವಣಿ/ಹೆಚ್ಚುವರಿ ಭದ್ರತಾ ಠೇವಣಿಗಳು	**1,24,66,949**	–
ಇತರೆ ವರಮಾನ	**17,29,478**	3,305
ಕಾರ್ಮಿಕರ ಕ್ಷೇಮಾಭಿವೃದ್ಧಿ ಕರದಿಂದ ಆಡಳಿತಾತ್ಮಕ ಶುಲ್ಕಗಳನ್ನು ವಸೂಲಾತಿ ಮಾಡಿದ್ದು	**9,32,668**	4,59,345
ಒಟ್ಟು	**25,67,36,311**	6,06,84,829
ii. ಕರ್ನಾಟಕ ಸರ್ಕಾರದಿಂದ ವರಮಾನ ಅನುದಾನಗಳು		
ನಿರ್ವಹಣೆಗಾಗಿ	**2,93,92,353**	10,79,11,881
ವಿಶೇಷ ಘಟಕ ಯೋಜನೆ/ಬುಡಕಟ್ಟು ಜನಾಂಗದ ಉಪ-ಯೋಜನೆ ಕಾಮಗಾರಿಗಳಿಗಾಗಿ	**1,28,07,08,267**	–
ಬಡ್ಡಿಗಳ ಸೇವೆಗಾಗಿ	**24,36,06,227**	6,73,973
ಖಾತರಿ ಶುಲ್ಕಕ್ಕಾಗಿ	**3,71,10,910**	28,75,000
	1,59,08,17,757	**11,14,60,854**
ಒಟ್ಟು	**1,84,75,54,068**	**17,21,45,683**

ಎ) **ಕಲ್ಲುಮಣ್ಣು ಇತ್ಯಾದಿ (ರಬ್ಬಲ್ಸ್)ಗಳ ಮಾರಾಟ:** ಕಂಪನಿಯು ಯೋಜನೆಗಳ ನಿರ್ಮಾಣದ ವೇಳೆಯಲ್ಲಿ ಕಂಡುಬಂದಂತಹ ಮತ್ತು ಗುತ್ತಿಗೆದಾರರುಗಳಿಗೆ ಮಾರಟ ಮಾಡಿರುವ ರಬ್ಬಲ್‌ಗಳ ಮೌಲ್ಯವನ್ನು ಗುತ್ತಿಗೆದಾರರುಗಳಿಗೆ ಮಾಡಲಾಗುವ ಪಾವತಿಗಳಿಂದ ವಸೂಲಾತಿ ಮಾಡುತ್ತಿದೆ. ಅಂತಹ ರಬ್ಬಲ್‌ಗಳ ಮಾರಾಟಗಳಿಂದ ಬರುವ ವರಮಾನವನ್ನು ಇತರೆ ವರಮಾನ ಎಂಬುದಾಗಿ ಪರಿಗಣಿಸಲಾಗುತ್ತದೆ.

ಬಿ) **ಕಾರ್ಮಿಕರ ಕ್ಷೇಮಾಭಿವೃದ್ಧಿ ಕರದಿಂದ ಆಡಳಿತಾತ್ಮಕ ವೆಚ್ಚಗಳ ವಸೂಲಾತಿ :** ತಿದ್ದುಪಡಿ ಸಂಖ್ಯೆ 300 ಎಲ್‌ಇಟಿ 2006ರ ಮೂಲಕ ಕರ್ನಾಟಕ ಸರ್ಕಾರವು ನೀಡಿರುವ ಅಧಿಸೂಚನೆಯ ಪ್ರಕಾರ ಗುತ್ತಿಗೆದಾರರುಗಳಿಂದ ಸಂಗ್ರಹಿಸಲಾಗುವ ಕಾರ್ಮಿಕರ ಕ್ಷೇಮಾಭಿವೃದ್ಧಿ ಕರದಿಂದ ಶೇಕಡಾ 1ರಷ್ಟನ್ನು ಆಡಳಿತಾತ್ಮಕ ವೆಚ್ಚಗಳ ಕಡೆಗೆ ಉಳಿಸಿಕೊಳ್ಳಲಾಗುವುದು ಹಾಗೂ ಉಳಿಕೆ ಶೇಕಡಾ 99ರಷ್ಟನ್ನು ಸಂಬಂಧಪಟ್ಟ ಇಲಾಖೆಗೆ ಪಾವತಿಸಲಾಗುವುದು.

20. ಸಿಬ್ಬಂದಿ ವೇತನ ಮತ್ತು ಇತರೆ ಸೌಲಭ್ಯಗಳು

ವಿವರಗಳು	31 ಮಾರ್ಚ್ 2018ರ ಅಂತ್ಯಗೊಂಡ ಅವಧಿಗೆ	20–10–2016ರಿಂದ 31–03–2017ರ ಅವಧಿಗೆ
	₹	₹
ವೇತನ	**27,58,77,248**	5,46.45,574
ರಜೆ ನಗದೀಕರಣ	**91,96,634**	70,40,521
ವೈದ್ಯಕೀಯ ವೆಚ್ಚಗಳ ಮರುಪಾವತಿ	**21,10,071**	1,37,809
ಹೊಸ ಪಿಂಚಣಿ ಯೋಜನೆಗೆ ಕಂಪನಿಯ ವಂತಿಕೆ	**72,08,165**	15,41,222
ಭವಿಷ್ಯ ನಿಧಿಗೆ ಕಂಪನಿಯ ವಂತಿಕೆ	**3,16,645**	20,239
ಗ್ರಾಚ್ಯೂಟಿ(ವಿಮಾಗಣಕರ ಮೌಲ್ಯಮಾಪನದ ಪ್ರಕಾರ)	**86,301**	–
ಸಿಬ್ಬಂದಿ ಕ್ಷೇಮಾಭಿವೃದ್ಧಿ ವೆಚ್ಚಗಳು	**15,70,690**	1,36,587
	29,63,65,754	6,35,21,952
ಕಳೆಯುವುದು: ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ವರ್ಗಾವಣೆ ಮಾಡಿದ್ದು	**21,51,49,988**	4,13,96,211
ಒಟ್ಟು	**8,12,15,766**	**2,21,25,741**

ವಿಷಾಯಕ ಪರಿಕಲ್ಪನೆಯ ಆಧಾರದ ಮೇರೆಗೆ ರೂ.79.60 ಲಕ್ಷ ಮೊತ್ತದಷ್ಟು ಪೂರ್ವಾವಧಿ ವೆಚ್ಚಗಳು ಸಂಬಳ (ರೂ.58.33 ಲಕ್ಷ), ಪ್ರವಾಸ ಭತ್ಯೆ (ರೂ.15.11 ಲಕ್ಷ) ಹಾಗೂ ಇತರೆ ವೆಚ್ಚಗಳನ್ನು (ರೂ.6.16 ಲಕ್ಷ) ಒಳಗೊಂಡಂತೆ ಪೂರ್ವಾವಧಿಗಳಿಗೆ ತುಲನಾತ್ಮಕ ಮೊತ್ತಗಳನ್ನು ಪುನರ್ ತಿಳಿಸುವ ಮೂಲಕ ಪೂರ್ವಾವಧಿಯಾಗಿ ತಿದ್ದುಪಡಿ ಮಾಡಿರುವುದಿಲ್ಲ.

ಸಂಬಂಧಿತ ತಂಡಗಳ ಬಗ್ಗೆ ಬಹಿರಂಗಪಡಿಸುವಿಕೆಗಳು:–

ವ್ಯವಸ್ಥಾಪನಾ ಅಧಿಕಾರಿಗಳ ಸಂಭಾವನೆ

ಹೆಸರು	ಹುದ್ದೆ	31 ಮಾರ್ಚ್ 2018ಕ್ಕೆ ಅಂತ್ಯಗೊಂಡ ಅವಧಿಗೆ	20.10.16ರಿಂದ 31.03.17 ರ ಅವಧಿಗೆ
		₹	₹
ಶ್ರೀ ಕೆ. ಜೈಪ್ರಕಾಶ್	ವ್ಯವಸ್ಥಾಪಕ ನಿರ್ದೇಶಕರು	10,09,971	**89,186**

ಎ) ಸ್ವತಂತ್ರ ವ್ಯವಸ್ಥಾಪಕ ನಿರ್ದೇಶಕರಲ್ಲದ ಇತರೆ ಪ್ರಮುಖ ವ್ಯವಸ್ಥಾಪನಾ/ಆಡಳಿತ ಮಂಡಳಿಯ ಸಿಬ್ಬಂದಿಗೆ ವ್ಯವಸ್ಥಾಪನಾ ಸಂಭಾವನೆಯಾಗಿ ಪಾವತಿಸಿರುವುದನ್ನು ವ್ಯವಸ್ಥಾಪನಾ ಸಂಭಾವನೆ ಎಂಬುದಾಗಿ ಬಹಿರಂಗಪಡಿಸಲಾಗಿದೆ.

21 ಹಣಕಾಸು ವೆಚ್ಚಗಳು

ವಿವರಗಳು	31 ಮಾರ್ಚ್ 2018ಕ್ಕೆ ಅಂತ್ಯಗೊಂಡ ಅವಧಿಗೆ	20–10–16 ರಿಂದ 31–3–17 ರ ಅವಧಿಗೆ
	₹	₹
ಅವಧಿ ಸಾಲಗಳ ಮೇಲಿನ ಬಡ್ಡಿ	**24,36,06,227**	6,73,973
ಖಾತರಿ ಶುಲ್ಕ	**3,71,10,910**	28,75,000
ಶ್ರೇಯಾಂಕ ಮತ್ತು ಕಣ್ಗಾವಲು ಶುಲ್ಕ, ಸಾಲಗಳ ದಾಖಲೆಗಳ ವೆಚ್ಚ	**2,72,095**	10,90,735
	28,09,89,232	46,39,708
ಕಳೆಯುವುದು: ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ವರ್ಗಾವಣೆ	–	8,61,864
ಒಟ್ಟು	**28,09,89,232**	**37,77,844**

ಎ) ಬಡ್ಡಿಯ ದರವು ವ್ಯತ್ಯಯಗೊಳ್ಳುತಿರುವುದರಿಂದ ಹಾಗೂ ಬ್ಯಾಂಕಿನ ವರ್ಷದ ಎಂಸಿಎಲ್‌ಆರ್ ಆಧಾರದ ಮೇರೆಗೆ ಆಗಿರುವುದರಿಂದ ಹಾಗೂ ಸಾಲದ ಸಂಪೂರ್ಣ ಅವಧಿಗೆ ಕಂಪನಿಯು ಬಡ್ಡಿಯನ್ನು ನಿರೀಕ್ಷಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ ಅವಧಿ ಸಾಲಗಳ ಮೇಲಿನ ಬಡ್ಡಿಗೆ ಇಐಆರ್ ಅನ್ನು ಲೆಕ್ಕಹಾಕಿರುವುದಿಲ್ಲ.

